## ಬುಧವಾರ, ೨೭ನೇ ಆಗಸ್ಟ್ ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷರಾದ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷರೆಯಲ್ಲಿ ಸಭೆ ಸೇರಿತು.

## ಅಲ್ಪಸಂಖ್ಯಾತರ ಹಕ್ಕುಗಳನ್ನು ಕುರಿತ ವರದಿ

**ಮಾನ್ಯ ಸಭಾಧ್ಯಕ್ಷರು :** ಸಭೆಯು ಈಗ ಅಲ್ಪಸಂಖ್ಯಾತರನ್ನು ಕುರಿತ ಸಲಹಾ ಸಮಿತಿಯ ವರದಿಯನ್ನು ಕೈಗೆತ್ತಿಕೊಳ್ಳಬೇಕೆಂದು ಪ್ರಸ್ತಾವಿಸುತ್ತಿದ್ದೇನೆ.

ಅನುಸರಿಸಬೇಕಾದ ಪ್ರಕ್ರಿಯೆ ಕುರಿತು ನಾನು ಪ್ರಸ್ತಾವಿಸುವುದೆಂದರೆ ಅದು ಹೀಗಿದೆ: ವರದಿಯನ್ನು ಪರಿಗಣಿಸಲು ಒಂದು ಪ್ರಸ್ತಾವವನ್ನು ಮಾಡಲಾಗುವುದು ಮತ್ತು ಈ ಸಂಬಂಧವಾಗಿ ತಿದ್ದುಪಡಿಗಳ ರೂಪದಲ್ಲಿ ಕೆಲವು ನಿರ್ಣಯಗಳನ್ನು ನಾನು ಕಂಡಿದ್ದೇನೆ. ಅವೆಂದರೆ, ಮುಂದಿನ ಅಧಿವೇಶನದವರೆಗೆ ಇಲ್ಲವೆ ಇನ್ನೊಂದು ವರದಿಯನ್ನು ಪರಿಗಣಿಸುವವರೆಗೆ ಈ ವರದಿ ಪರಿಶೀಲನೆಯನ್ನು ಮುಂದೂಡುವುದು. ಅಂದರೆ ಅವರು ಪರಿಗಣಿಸುತ್ತಿರುವ ಅಂಶಗಳು ಪೂರೈಸಲಾಗಿದೆ ಎನ್ನುವವರೆಗೆ. ವರದಿ ಪರಿಗಣಿಸಲು ನಾನು ಆ ತಿದ್ದುಪಡಿಗಳನ್ನು ಪ್ರಸ್ತಾವದ ಸಾಮಾನ್ಯ ಚರ್ಚೆಯೊಂದಿಗೆ ಎತ್ತಿಕೊಳ್ಳುತ್ತೇನೆ. ಅದು ಇತ್ಯರ್ಥವಾದಾಗ ನಾನು ಅನುಬಂಧದತ್ತ ಗಮನಹರಿಸಲು ಹಾಗೂ ಒಂದೊಂದಾಗಿ ಅಂಶಗಳನ್ನು ಆ ಅಂಶಗಳಿಗೆ ಸಂಬಂಧಿಸಿದ ತಿದ್ದುಪಡಿಗಳೊಂದಿಗೆ ಎತ್ತಿಕೊಳ್ಳಲು ಸೂಚಿಸುತ್ತೇನೆ. ಏಕೆಂದರೆ ಆಗ ಅದು ಅನುಬಂಧದಲ್ಲಿರುವ ಶಿಫಾರಸ್ಸುಗಳನ್ನು, ಸಂಕ್ಷೇಪ ಮಾಡುವ ವರದಿಯ ಪ್ರಧಾನ ವಿಷಯಕ್ಕೆ ಪ್ರಸ್ತುತವಾಗಿರುವ ಹಲವು ತಿದ್ದುಪಡಿಗಳನ್ನು ಇತ್ಯರ್ಥಗೊಳಿಸುತ್ತದೆ. ಇದು ವಿಷಯದೊಂದಿಗೆ ವ್ಯವಹರಿಸಲು ಸೂಕ್ತಕ್ರಮ ಮತ್ತು ತುಂಬ ಅನುಕೂಲವಾದ ಮಾರ್ಗ ಎಂದು ನಾನು ಭಾವಿಸಿದ್ದೇನೆ

**ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಧ್ವನಿವರ್ಧಕ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನಿಸಿದೆ. ಏಕೆಂದರೆ, ಮಾತನಾಡಿದ್ದು ಯಾವುದೂ ನಮಗೆ ಇಲ್ಲಿ ಕೇಳಿಸಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಹಾಗಿದ್ದಲ್ಲಿ ನಾನು ಮತ್ತೊಮ್ಮೆ ಹೇಳಬೇಕು. ನಾನು ಹೇಳಿದ್ದೇನೆಂದರೆ ಇಂದಿನ ಕಾರ್ಯಸೂಚಿಯೊಂದಿಗೆ ವ್ಯವಹರಿಸಲು ಅತ್ಯಂತ ಅನುಕೂಲವಾದ ಮಾರ್ಗ ಇದಾಗಿದೆ: ನಾನು ಅಲ್ಪಸಂಖ್ಯಾತರ ಕುರಿತಾದ ಸಲಹಾ ಸಮಿತಿಯ ವರದಿ ಪರಿಗಣಿಸುವುದಕ್ಕಾಗಿ ಕೈಗೆತ್ತಿಕೊಳ್ಳಲು ಪ್ರಸ್ತಾವಿಸುತ್ತೇನೆ. ಅದನ್ನು ಪರಿಗಣಿಸಲು ಒಂದು ಪ್ರಸ್ತಾವ ಮಾಡಲಾಗುತ್ತದೆ. ಈ ಸಂಬಂಧವಾಗಿ ಕೆಲವು ಇತರ ಪ್ರಸ್ತಾವಗಳೂ ಇವೆ ಎಂಬುದನ್ನು ಗಮನಿಸಿದ್ದೇನೆ. ಅದೆಂದರೆ ಮುಂದಿನ ಅಧಿವೇಶನದವರೆಗೆ ಅಥವಾ ನಿನ್ನೆ ದಿನ ಪರಿಗಣಿಸಲಾದ ಪಟ್ಟಿಯ ಮೇಲಿನ ಅಂಶಗಳನ್ನು ಇತ್ಯರ್ಥಗೊಳಿಸುವ ವರೆಗೆ ವರದಿಯ ಪರಿಶೀಲನೆಯನ್ನು ಮುಂದೂಡಬೇಕಾಗುತ್ತದೆ. ಇದರ ನಂತರ ನಾನು ವರದಿಯ ಅನುಬಂಧದತ್ತ ಗಮನ ಹರಿಸಲು ಸೂಚಿಸುತ್ತೇನೆ. ಆ ಅಂಶಗಳಿಗೆ ಸಂಬಂಧಿತ ತಿದ್ದುಪಡಿಗಳನ್ನು ಚರ್ಚಿಸಿ ಇತ್ಯರ್ಥ ಮಾಡಲಾಗುತ್ತದೆ. ಅನುಬಂಧ ಚರ್ಚಿಸಿದಂತೆ

ನಾವು ಅನುಬಂಧದಲ್ಲಿ ಒಳಗೊಂಡ ಒಂದು ಸಾರಾಂಶವಷ್ಟೇ ಆಗಿರುವ ವರದಿಯ ಪ್ರಧಾನ ವಿಷಯದತ್ತ ಗಮನಹರಿಸಬಹುದಾಗಿದೆ.

ಈಗ ನಾನು ಸರ್ದಾರ್ ವಲ್ಲಭಭಾಯಿ ಪಟೇಲ್‌ರನ್ನು ವರದಿಯ ಪರಿಗಣನೆಯನ್ನು ಮಂಡಿಸಲು ಕೇಳಿಕೊಳ್ಳುತ್ತೇನೆ.

**ಬಿ. ಪಾಕರ್ ಸಾಹಿಬ್ ಬಹಾದುರ್** (ಮದ್ರಾಸ್ : ಮುಸ್ಲಿಮ್) : ತಾವು ನಿಗದಿ ಪಡಿಸಿದ ಪ್ರಕ್ರಿಯೆ ಅನುಬಂಧದಲ್ಲಿನ ಎಲ್ಲ ವಿಷಯಗಳನ್ನು ಒಂದೊಂದಾಗಿ ಕೈಗೆತ್ತಿಕೊಳ್ಳಬೇಕು ಎಂದು ಇದೆ. ಆದರೆ ಅನುಬಂಧದಲ್ಲಿ ಪ್ರತಿ ಅಂಶಗಳಲ್ಲಿನ ತಿದ್ದುಪಡಿಗಳನ್ನು ಕುರಿತಂತೆ ಹಲವು ವಿಷಯಗಳಿವೆ ಹಾಗೂ ಆ ಪ್ರತಿಯೊಂದು ವಿಭಿನ್ನ ಲಕ್ಷಣವುಳ್ಳದ್ದಾಗಿದೆ ಎಂದು ನಾನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಆದುದರಿಂದ ಪ್ರತಿ ಅಂಶದ ಮೇಲಿನ ಒಂದೇ ಲಕ್ಷಣದ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಇತ್ಯರ್ಥಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಒಂದೇ ಅಂಶದ ಮೇಲಿನ ಎಲ್ಲ ತಿದ್ದುಪಡಿಗಳನ್ನು ಒಟ್ಟಿಗೆ ಕೈಗೆತ್ತಿಕೊಳ್ಳಬಹುದಾಗಿರುತ್ತದೆ ಮತ್ತು ಇತ್ಯರ್ಥಗೊಳಿಸಬಹುದು ಇಲ್ಲದಿದ್ದರೆ, ಎಲ್ಲವನ್ನು ಒಟ್ಟಿಗೆ ಕಲಸು ಮೇಲೋಗರ ಮಾಡಿದರೆ ಅದು ಗೊಂದಲಕ್ಕೆಡೆ ಮಾಡುತ್ತದೆ.

**ಮಾನ್ಯ ಸಭಾಧ್ಯಕ್ಷರು :** ನಾನು ಅದನ್ನು ಮಾಡಲೆ ಎಂದು ಆಲೋಚಿಸುತ್ತಿದ್ದೇನೆ ಅಂದರೆ ಅನುಬಂಧದಲ್ಲಿನ ಪ್ರತಿ ಅಂಶವನ್ನು ಮತ್ತು ಅದರ ಜೊತೆಗೆ ಎಲ್ಲ ಪ್ರಸ್ತುತ ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳಬೇಕು ಎಂದು.

**ಬಿ. ಪಾಕರ್ ಸಾಹಿಬ್ ಬಹಾದುರ್ :** ತಿದ್ದುಪಡಿಗಳನ್ನು ಇತ್ಯರ್ಥಗೊಳಿಸುವಾಗ ಅವುಗಳ ಸಾಮಾನ್ಯ ಲಕ್ಷಣಗಳನ್ನು ಪರಿಶೀಲಿಸಬಹುದು. ಪ್ರತಿಯೊಂದು ತಿದ್ದುಪಡಿಯಲ್ಲೂ ಬಾಬಿನಲ್ಲೂ ಇರಬಹುದಾದ, ಒಂದು ನಿರ್ದಿಷ್ಟ ಲಕ್ಷಣ ಇರುವ ತಿದ್ದುಪಡಿಯನ್ನು ಮೊದಲು ಇತ್ಯರ್ಥಗೊಳಿಸಬೇಕು. ಅನಂತರ ಇತರ ಲಕ್ಷಣವಿರುವ ಇತರ ತಿದ್ದುಪಡಿಯನ್ನು ಇತ್ಯಾರ್ಥಗೊಳಿಸಬೇಕು.

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಸದಸ್ಯರು ತಿದ್ದುಪಡಿಗಳ ಲಕ್ಷಣವೆಂದರೆ ಏನೆಂದು ಅರ್ಥಮಾಡಿಕೊಂಡಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಎಲ್ಲ ಪ್ರಸ್ತುತ ತಿದ್ದುಪಡಿಗಳನ್ನು ಪ್ರತಿ ಅಂಶದೊಂದಿಗಿನ ಸಂಬಂಧದಲ್ಲಿ ಪರಿಶೀಲನೆಗೆ ಎತ್ತಿಕೊಳ್ಳಲಾಗುವುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** (ಮುಂಬಯಿ : ಜನರಲ್) : ಮಾನ್ಯರೆ, ಸಲಹಾ ಸಮಿತಿಯ ಪರವಾಗಿ ಸದನದ ಮುಂದೆ ಅಲ್ಪಸಂಖ್ಯಾತರ ಹಕ್ಕುಗಳ ಮೇಲಿನ ಈ ವರದಿಯನ್ನು *ಮಂಡಿಸಲು ಕೇಳಿಕೊಳ್ಳುತ್ತೇನೆ. ಇದನ್ನು ಅಲ್ಪಸಂಖ್ಯಾತ ಸಮಿತಿಯ ವರದಿ ಅನುಮತಿ ಅನಂತರ ಮತ್ತು ಈ ದೇಶದಲ್ಲಿ ವಿವಿಧ ಅಲ್ಪಸಂಖ್ಯಾತದ ರಕ್ಷಣೆಗೆ ಸಂಬಂಧಪಟ್ಟಂತೆ ತಲೆದೋರಿದ ಎಲ್ಲ ಅಂಶಗಳನ್ನು ಪರಿಶೀಲಿಸಿದ ಅನಂತರ ಸಿದ್ಧಪಡಿಸಲಾಗಿದೆ. ಅಲ್ಪಸಂಖ್ಯಾತರ ರಕ್ಷಣೆಯ ಪ್ರಶ್ನೆಯನ್ನು ಹಲವು ಸಮಿತಿಗಳಲ್ಲಿ ಹಲವು ಬಾರಿ ಚರ್ಚಿಸಲಾಗಿದೆ ಮತ್ತು ಪರಿಶೀಲಿಸಲಾಗಿದೆ ಎಂಬುದನ್ನು ನೀವೆಲ್ಲ ಬಲ್ಲಿರಿ. ಹಾಗೂ ಚರ್ಚಿಸಲು ಹೊಸ ಅಂಶ ಯಾವುದೂ ಇಲ್ಲ. ಹಿಂದಿನ ಹಲವು ವರ್ಷಗಳ ಕಾಲ ಒಂದಲ್ಲ ಒಂದು ಸಮಿತಿಯಲ್ಲಿ ಈ ಪ್ರಶ್ನೆ ಕುರಿತಂತೆ ಕೆಲವೊಮ್ಮೆ ತುಂಬ ಸೂಕ್ಷ್ಮವಾಗಿ, ಕೆಲವೊಮ್ಮೆ ಸಾಧಾರಣವಾಗಿ ಚರ್ಚಿಸಲಾಗಿದೆ. ಕೆಲವೊಮ್ಮೆ ಇದರ ಕುರಿತಾದ ಚರ್ಚೆ ತೀವ್ರ ಸ್ವರೂಪ ಪಡೆದುಕೊಂಡರೆ ಕೆಲವೊಮ್ಮೆ ಕಹಿವಿವಾದಕ್ಕೆಡೆ ಮಾಡಿದೆ. ಆದರೆ ಈ ವರದಿ ಸ್ವತಃ ಅಲ್ಪಸಂಖ್ಯಾತರ ಮತ್ತು ಬಹುಸಂಖ್ಯಾತರ ನಡುವಿನ ಅಭಿಪ್ರಾಯದ ಒಂದು ಸಾಮಾನ್ಯ ಒಮ್ಮತದ ಫಲಿತಾಂಶವಾಗಿದೆ ಎಂದು ಹೇಳಲು ನಾನು ಹರ್ಷಿಸುತ್ತೇನೆ. ಆದುದರಿಂದ, ಎಲ್ಲರನ್ನೂ ತೃಪ್ತಿ ಪಡಿಸುವುದು ಸಾಧ್ಯವಿಲ್ಲವಾದರೂ ಈ ವರದಿ ಹಲವು ಅಂಶಗಳ ಮೇಲಿನ ಒಪ್ಪಂದದ ಫಲ ಎಂಬುದನ್ನು ನೀವು ಕಾಣುವಿರಿ; ಮತ್ತು ಎಲ್ಲೆಲ್ಲಿ ಭಿನ್ನಾಭಿಪ್ರಾಯವಿದ್ದಿತೊ ಅಲ್ಲಿ ಶಿಫಾರಸುಗಳನ್ನು ಒಂದು ಬಹುದೊಡ್ಡ ಬಹುಮತದಿಂದ ಒಯ್ಯಲಾಗಿ ಬಹುಶಃ ಒಂದು ವಿಷಯದ ಮೇಲಿನ ಹೊರತಾಗಿ ಈ ವರದಿಯು

ಪ್ರಾಯೋಗಿಕವಾಗಿ ಸರ್ವಾನುಮತ ಪಡೆದ ವರದಿಯಾಗಿದೆ. ಏನೆಂದರೆ, ಕೆಲವು ವಿಷಯಗಳನ್ನು ಕುರಿತಂತೆ ತೃಪ್ತರಾಗದ ಕೆಲವರು ಇದ್ದಾರೆ. ಆದರೆ ನಾವು ದೊಡ್ಡದೂ ಮತ್ತು ಸಣ್ಣದೂ ಆದ ಎಲ್ಲ ದೃಷ್ಟಿಕೋನಗಳು, ಸಂವೇದನೆಗಳು ಮತ್ತು ಮನೋಭಾವಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕು. ಎಲ್ಲ ಅಲ್ಪಸಂಖ್ಯಾತರ ಆಶಯಗಳ ಪೂರೈಕೆಗೆ ಪೂರೈಸಲು ಸಾಧ್ಯವಾದಷ್ಟೂ ನಾವು ಯತ್ನಿಸಿದ್ದೇವೆ. ಅಲ್ಪಸಂಖ್ಯಾತರು ತಮ್ಮ ನಡುವೆಯೇ, ಬೇರ್ಪಟ್ಟಿರುವರು ಕೂಡ; ಅವರ ನಡುವೆ ಭಿನ್ನಾಭಿಪ್ರಾಯ ಉಂಟುಮಾಡುವ ಹಿತಾಸಕ್ತಿಗಳಿವೆ. ಅಲ್ಪಸಂಖ್ಯಾತರ ನಡುವೆಯೆ ಇರುವಂಥ ಈ ಭೇದಗಳ ಅನುಕೂಲವನ್ನು ತೆಗೆದುಕೊಳ್ಳಲು ನಾವು ಯತ್ನಿಸಿಲ್ಲ; ನಾವು ಅಲ್ಪಸಂಖ್ಯಾತರೂ ಕೂಡ ತಮ್ಮ ನಡುವೆ ಭಿನ್ನಾಭಿಪ್ರಾಯ ಹೊಂದುವ ಬದಲಿಗೆ ತಮ್ಮ ಹಿತಾಸಕ್ತಿಗಳ ರಕ್ಷಣೆಯ ಸಲುವಾಗಿ ಒಂದು ಸಂಯುಕ್ತರಂಗ ಪ್ರಸ್ತುತ ಪಡಿಸುವುದನ್ನು ನೋಡಲು ಪ್ರಯತ್ನಿಸಿದ್ದೇವೆ. ಆದರೆ ಅಲ್ಪಸಂಖ್ಯಾತರು ಒಗ್ಗಟ್ಟಾಗಿರದಿರಲು ಕೆಲವು ವಿಷಯಗಳಿವೆ. ಏಕೆಂದರೆ, ಅಲ್ಪಸಂಖ್ಯಾತರೊಳಗೇ ಅಲ್ಪಸಂಖ್ಯಾತರಿದ್ದಾರೆ. ಆದುದರಿಂದ ಇದೊಂದು ಕಠಿಣ ಪ್ರತಿಪಾದನೆ. ಯಾವುದೇ ಕಹಿ ಭಾವನೆ ಅಥವಾ ವಿಘ್ನ ಸೃಷ್ಟಿಸುವ ಯಾವುದೇ ಅಹಿತಕರ ಪ್ರಸಂಗವಿಲ್ಲದೆ ಮತ್ತು ಯಾವುದೇ ವಿವಾದವಿಲ್ಲದೆ ಈ ಕಠಿಣ ಸಮಸ್ಯೆಯನ್ನು ಬಗೆಹರಿಸಲು ನಾವು ಯತ್ನಿಸಿದ್ದೇವೆ; ಮತ್ತು ಈ ಸದನ ಕೂಡಾ ಈ ಪ್ರಶ್ನೆಯನ್ನು ಒಂದು ಗೆಳೆತನದ ಭಾವದಲ್ಲಿ ಮತ್ತು ಸದ್ಭಾವನೆಯ ವಾತಾವರಣದಲ್ಲಿ ಇತ್ಯರ್ಥಗೊಳಿಸಬಲ್ಲದು ಎಂದು ಭರವಸೆ ನೀಡುತ್ತೇನೆ. ನಾವು ಪೂರ್ವಾರ್ಜಿತ ಕಹಿಯನ್ನು ಹಿಂದಕ್ಕಿಟ್ಟು, ಆದುದನ್ನು ಮರೆತು ಒಂದು ಶುದ್ಧ ಮನಃಸ್ಥಿತಿಯೊಂದಿಗೆ ಆರಂಭಿಸುತ್ತೇವೆ ಎಂಬ ಭರವಸೆ ತಾಳೋಣ. ನಮ್ಮ ಸುತ್ತ ಸಾಕಷ್ಟು ಪ್ರಸಂಗಗಳು ಸಂಭವಿಸುತ್ತಿದ್ದು ಅದು ನಮ್ಮ ವ್ಯವಹಾರಗಳು ಸಾಧ್ಯವಾದಷ್ಟೂ ಬೇಗ ಇತ್ಯರ್ಥವಾಗುವುದನ್ನು ನಿರೀಕ್ಷಿಸುತ್ತದೆ; ಈ ಸದನದಲ್ಲಿ ನಾವು ನಮ್ಮ ಕಷ್ಟಗಳಿಗೆ ಅಥವಾ ಸದ್ಯ ಅಪ್ರಿಯ ಕಲಹದಲ್ಲಿ ತೊಡಗಿರುವ ನಮ್ಮ ನೆರೆಯವರ ಕಷ್ಟಗಳಿಗೆ ಉರಿಹಾಕುವಂತಹುದನ್ನು ಮಾಡಬಾರದು. ಭಾರತದ ಅತ್ಯುತ್ತಮ ಪ್ರಾಂತ್ಯವೊಂದರ ಮೇಲೆ ಆದ ವಿದ್ರಾವಕ ಗಾಯಗಳನ್ನು ನೋಡಿ ನಮ್ಮ ಹೃದಯ ರಕ್ತ ಸುರಿಸುತ್ತಿದೆ. ಸದನದಲ್ಲಿ ಎಲ್ಲ ಅಲ್ಪಸಂಖ್ಯಾತರನ್ನು ಬಾಧಿಸುವ ಈ ಸಮಸ್ಯೆಯನ್ನು ಪರಿಶೀಲಿಸುವಲ್ಲಿ ನಾವು ಅಂತಹ ವಿವಾದಕ್ಕೆಡೆ ಕೊಡಬಹುದಾದ ಹಾಗೂ ಹೊರಗೆ, ದೂರಗಾಮಿ ಪರಿಣಾಮ ಬೀರುವಂಥ ಆವೇಶ ಅಥವಾ ವಾದವನ್ನು ಮಾಡುವುದಿಲ್ಲ ಎಂಬ ವಿಶ್ವಾಸವಿಡುತ್ತೇನೆ, ನಾವು ಈ ವಿಷಯವನ್ನು ಶೀಘ್ರ ಮತ್ತು ಗೆಳೆತನದ ಭಾವದಲ್ಲಿ ಇತ್ಯರ್ಥಗೊಳಿಸಬಲ್ಲೆವೆಂದು ನಂಬುತ್ತೇನೆ.

## *ಅನುಬಂಧ

ನಿಮಗೆ ನೆನಪಿರಬಹುದು ನಾವು ಸಲಹಾ ಸಮಿತಿ ಕಳುಹಿಸಿದ ಮೂಲಭೂತ ಹಕ್ಕುಗಳ ಸಮಿತಿಯ ವರದಿಯನ್ನು ಅಂಗೀಕರಿಸಿದ್ದೆವು; ಆ ಹಕ್ಕುಗಳ ಪ್ರಮುಖ ಭಾಗ ಇತ್ಯರ್ಥವಾಗಿ ಈ ಸಭೆಯಿಂದ ಸಮ್ಮತಿ ಪಡೆಯಿತು. ಅವು ಅಲ್ಪಸಂಖ್ಯಾತರಿಗೆ ಸಾಕಷ್ಟು ರಕ್ಷಣೆ ನೀಡುವಂಥ ಹಕ್ಕುಗಳ ಒಂದು ವಿಶಾಲ ವ್ಯಾಪ್ತಿಯನ್ನು ಒಳಗೊಂಡಿವೆ; ಆದರೂ ನಿರ್ದಿಷ್ಟವಾಗಿ ಪರಿಶೀಲಿಸಬೇಕಾದ ಕೆಲವು ರಾಜಕೀಯ ರಕ್ಷಣೆಗಳಿವೆ. ಈ ವರದಿಯಲ್ಲಿ ಆ ರಕ್ಷಣಾ ಕ್ರಮಗಳನ್ನು ಪಟ್ಟಿ ಮಾಡಲು ಒಂದು ಪ್ರಯತ್ನ ಮಾಡಲಾಗಿದೆ. ಅವು ಸಾಮಾನ್ಯ ಜ್ಞಾನದ ವಿಷಯಗಳು, ಏನೆಂದರೆ. ಜಂಟಿಮತದಾರರ ಸಮುದಾಯಗಳಿಗೆ ಪ್ರತಿಸ್ಪರ್ಧಿಯಾಗಿ ಪ್ರತ್ಯೇಕ ಮತದಾರರ ಸಮುದಾಯಗಳು ಕುರಿತಂತೆ ಶಾಸನಸಭೆಗಳಲ್ಲಿ ಮನವಿ ಇಂಥವು. ಈ ಪ್ರಶ್ನೆಯೇ ಬಹುಮಟ್ಟಿಗೆ ಒಂದು ದಶಕದಷ್ಟು ಕಾಲ ವಿವಾದ ಎಬ್ಬಿಸಿದೆ ಮತ್ತು ನಾವು ನೋವು ಅನುಭವಿಸಿದ್ದೇವೆ ಹಾಗೂ ಅದಕ್ಕಾಗಿ ಭಾರಿ ಬೆಲೆ ತೆತ್ತಿದ್ದೇವೆ. ಆದರೆ ಅದೃಷ್ಟವಶಾತ್, ನಾವು ಈ ಸಮಸ್ಯೆ ಬಗೆಹರಿಸಲು ಸಮರ್ಥರಿದ್ದೇವೆ–ಹೇಗೆಂದರೆ, ಇನ್ನು ಮುಂದೆ ಯಾವುದೇ ಪ್ರತ್ಯೇಕ ಮತದಾರರ ಸಮುದಾಯಗಳಿರಬಾರದು ಮತ್ತು ನಾವು ಜಂಟಿ

ಮತದಾರರ ಸಮುದಾಯಗಳನ್ನೆ ಇನ್ನು ಮುಂದೆ ಹೊಂದಿರಬೇಕು ಎಂಬ ಅಂಶಕ್ಕೆ ಒಮ್ಮತ ಮೂಡಿದೆ. ಆದುದರಿಂದ ಅದು ಒಂದು ಮಹತ್ತ್ವದ ಲಾಭ.

ಮತ್ತೆ ಪುನಃ ಹೆಚ್ಚಿನ ಮಾನ್ಯತೆ ಪ್ರಶ್ನೆ ಕುರಿತಂತೆ ಯಾವುದೇ ಹೆಚ್ಚಿನ ಸೌಲಭ್ಯವಿರಬಾರದೆಂಬುದಕ್ಕೆ ಹಾಗೂ ಜಂಟಿಮತದಾರರ ಜೊತೆ ಸಮುದಾಯಗಳನ್ನು ಅವರ ಜನಸಂಖ್ಯೆಯ ಅನುಪಾತದನುಸಾರ ಪ್ರತಿನಿಧಿಸಬೇಕು ಎಂಬುದಕ್ಕೆ ಒಪ್ಪಿದ್ದೇವೆ. ಬಳಿಕ ನಾವು ಅಲ್ಪಸಂಖ್ಯಾತರ ಜನಸಂಖ್ಯೆಗೆ ಅನುಪಾತದಂತೆ ಮೀಸಲಾತಿಗೆ ಬರುವುದು ಸೂಕ್ತ ಎಂದು ಆಲೋಚಿಸಿದ್ದೇವೆ. ಕೆಲವು ಅಲ್ಪಸಂಖ್ಯಾತರು ಸಂತೋಷದಿಂದ ಆ ಹಕ್ಕು ಬಿಟ್ಟುಕೊಟ್ಟಿದ್ದಾರೆ ಮತ್ತು ಅವರು ತಾವು ಯಾವುದೇ ಹೆಚ್ಚಿನ ಸೌಲಭ್ಯವನ್ನಾಗಲೀ ಅಥವಾ ಪ್ರತ್ಯೇಕ ಮತದಾರರ ಸಮುದಾಯವನ್ನಾಗಲೀ ಇಚ್ಛಿಸಿಲ್ಲ, ಆದರೆ ಜರುಗಬಹುದಾದ ಸಾಮಾನ್ಯ ಬದಲಾವಣೆಯಲ್ಲಿ ತಾವಾಗಿಯೇ ರಾಷ್ಟ್ರದಲ್ಲಿ ವಿಲೀನಗೊಂಡು ತಮ್ಮ ಕಾಲ ಮೇಲೆ ನಿಲ್ಲುವುದಾಗಿ ಹೇಳಿಕೊಂಡಿದ್ದಾರೆ. ನಾನು ಆ ನಿಲುವು ತೆಗೆದುಕೊಂಡವರನ್ನು ಅಭಿನಂದಿಸುತ್ತೇನೆ. ಆದರೆ ನಾವೆಲ್ಲ ರಾಷ್ಟ್ರದಿಂದ ನಿರೀಕ್ಷಿಸುವ ದರ್ಜೆಗೆ ಬರಲು ಯಾರು ನೆರವು ಬಯಸುತ್ತಾರೋ ಅವರಿಗೆ ಸಹಾನುಭೂತಿ ತೋರುತ್ತೇನೆ ಕೂಡ, ನಾವೀಗ ಸಾರ್ವಜನಿಕ ಸೇವೆಗಳಲ್ಲಿ ಕೆಲವು ಸಮುದಾಯಗಳಿಗೆ ಒಂದಷ್ಟು ಮೀಸಲಾತಿ ಆವಶ್ಯಕ ಎಂದು ಕೂಡ ನಿರ್ಧರಿಸಿದ್ದೇವೆ. ಅದರಲ್ಲೂ ಆಂಗ್ಲೋ ಇಂಡಿಯನ್ನರು ಹಾಗೂ ಪರಿಶಿಷ್ಟ ಜಾತಿಗಳು ಕೆಲವು ವಿಷಯಗಳಲ್ಲಿ ವಿಶೇಷ ರಿಯಾಯಿತಿಗೆ ಅರ್ಹರಿರುವರು. ಈ ವಿಷಯವಾಗಿ ನಾವು ಶಿಫಾರಸ್ಸುಗಳನ್ನು ಮಾಡಿರುತ್ತೇವೆ–ಈ ವಿಷಯದಲ್ಲಿ ನಮ್ಮ ಹಾಗೂ ಯಾರ ಹಿತಾಸಕ್ತಿಗಳು ಬಾಧಿತವಾಗಿವೆಯೊ ಆ ಸಮುದಾಯಗಳ ನಡುವೆ ಏಕಮತವಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇವೆ.

ಬಳಿಕ ನಾವು ಏನೆಲ್ಲ ರಕ್ಷಣೆಗಳನ್ನು ಒದಗಿಸಿದ್ದೇವೆಯೋ ಅವನ್ನು ಸಂಬಂಧಪಟ್ಟ ಸಮುದಾಯಗಳು, ಅವೆಲ್ಲ ಬರಿಯ ಕಾಗದದ ಮೇಲಿನವು ಎಂದು ಭಾವಿಸದಿರುವಂತೆ ಒಂದು ವಿಧದ ಆಡಳಿತ ವ್ಯವಸ್ಥೆಯನ್ನು ಕೂಡಾ ಒದಗಿಸಿದ್ದೇವೆ. ವಿವಿಧ ಪ್ರಾಂತ್ಯಗಳಲ್ಲಿ ಸರ್ಕಾರದ ಆಡಳಿತ ವ್ಯವಸ್ಥೆಯ ಕಾರ್ಯದಲ್ಲಿ ಒದಗಿಸಿರುವ ರಕ್ಷಣೆಗಳು ಕುರಿತಂತೆ ನಿರಂತರ ಜಾಗೃತಿ ಮತ್ತು ಕಾವಲು ಇರಬೇಕಾಗುತ್ತದೆ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳ ರಕ್ಷಣೆ ವಿಷಯದಲ್ಲಿ ದೋಷಗಳು ಅಥವಾ ನ್ಯೂನತೆಗಳು ಇದ್ದರೆ ಅವನ್ನು ಶಾಸನಸಭೆಗಳು ಅಥವಾ ಸರ್ಕಾರದ ಗಮನಕ್ಕೆ ತರುವುದು ಅಧಿಕಾರಿಯ ಅಥವಾ ಸಂಬಂಧ ಪಟ್ಟ ಸರ್ಕಾರದ ಆಡಳಿತ ವ್ಯವಸ್ಥೆಯ ಕರ್ತವ್ಯವಾಗಿರುತ್ತದೆ.

ನಾವು ಅಲ್ಪಸಂಖ್ಯಾತರನ್ನು ಅವರ ಬಲ ಅಥವಾ ಅವರ ಜನಸಂಖ್ಯೆಗನುಗುಣವಾಗಿ ವಿಭಜಿಸಿದ್ದೇವೆ. ಅನುಸೂಚಿಯಲ್ಲಿ ಮೂರು ಭಾಗಗಳನ್ನು ಪ್ರದರ್ಶಿಸಿ ಪ್ರತ್ಯೇಕವಾಗಿಯೇ ವ್ಯವಹರಿಸಲಾಗಿದೆ. ಏಕೆಂದರೆ, ಅವರು ತಮ್ಮ ಬಲದ ಅನುಪಾತದಲ್ಲಿ ಪ್ರತ್ಯೇಕ ಪರಿಗಣನೆ ಬಯಸುತ್ತಾರೆ.

ಆಂಗ್ಲೋ ಇಂಡಿಯನ್ನರು ವಿಶೇಷ ಹಕ್ಕುಗಳು ಅಥವಾ ವಿಶೇಷ ಸೌಲಭ್ಯಗಳು ಅಥವಾ ವಿಶೇಷ ರಿಯಾಯಿತಿಗಳನ್ನು ಹೊಂದಿರುವರು ಇಂಥವನ್ನೆಲ್ಲ ಅವರು ರೈಲ್ವೇ ಮತ್ತು ಒಂದು ಅಥವಾ ಎರಡು ಇತರ ಸೇವೆಗಳಲ್ಲಿ ಅನುಭವಿಸುತ್ತ ಇರುವರು. ಈಗ, ಇದ್ದಕ್ಕಿದ್ದಂತೆ ಈ ರಿಯಾಯಿತಿಗಳನ್ನು ಹಿಂತೆಗೆದುಕೊಂಡು ಅವರನ್ನು ಈ ಹಕ್ಕುಗಳು ಅಥವಾ ರಿಯಾಯಿತಿಗಳಿಂದ ವಂಚಿಸಿ ಸಾಮಾನ್ಯ ದರ್ಜೆಯೊಂದಿಗೆ ನಿಲ್ಲುವಂತೆ ಮಾಡಲು ಕೇಳಿಕೊಂಡರೆ ಬಹುಶಃ ಅವರನ್ನು ಒಂದು ಕಷ್ಟಕ್ಕೆ ಸಿಲುಕಿಸಿದಂತಾಗುತ್ತದೆ. ಅವರು ಸದ್ಯ ಇದಕ್ಕೆ ತಯಾರಿಲ್ಲದಿರಬಹುದು ಮತ್ತು ನಾವು ಅವರಿಗೆ ಹೊಂದಾಣಿಕೆಗೆ ಸಮಯ ಕೊಡುವುದು ಉತ್ತಮ. ಈ ಸ್ಥಿತಿಗೆ ತಾವಾಗಿಯೇ ಸಿದ್ಧರಿರಬೇಕೆಂದು ಈಗ ಅವರು ಬಲ್ಲರು. ಅವರು ವಿವರವಾದ ಸೂಚನೆ ಹೊಂದಿದ್ದು ಈ ಸೂಚನೆಗೆ ಬದ್ಧರಿರಲು ಅವರು ಒಪ್ಪಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇನೆ. ಈ ರಿಯಾಯಿತಿಗಳನ್ನು ಕ್ರಮೇಣ ಕಡಿಮೆ ಮಾಡುವುದಕ್ಕೆ ಅವರು ಸಮ್ಮತಿಸಿರುವರು. ಅಂಥದೇ ರಿಯಾಯಿತಿಗಳನ್ನು ಶಿಕ್ಷಣದ

ವಿಷಯದಲ್ಲಿಯೂ ಅವರಿಗೆ ಕೊಡಲಾಗಿದೆ. ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ಅವರು ವಿಶೇಷ ಅನುದಾನಗಳನ್ನು ಪಡೆಯುವರು. ಈ ಶೈಕ್ಷಣಿಕ ಸಂಸ್ಥೆಗಳನ್ನು ಇತರ ಸಮುದಾಯಗಳ ವಿದ್ಯಾರ್ಥಿಗಳಿಗೂ ತೆರೆಯಲಾಗಿದೆ. ಆದರೆ ಅವು ಸಾಮಾನ್ಯವಾಗಿ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಇರುವಂಥದಾಗಿವೆ ಮತ್ತು ಹಣಕಾಸು ನೆರವು ವಿಷಯದಲ್ಲಿ ಅವರು ಕೆಲವು ರಿಯಾಯಿತಿಗಳನ್ನು ಪಡೆಯುತ್ತಾರೆ. ಕೆಲಕಾಲ ಈ ನೆರವನ್ನು ಮುಂದುವರಿಸಲು ಮತ್ತು ಕ್ರಮೇಣ ಇಳಿಸುವ ಪ್ರಕ್ರಿಯೆಯಿಂದ ಅವರು ಇತರ ಸಮುದಾಯಗಳ ಸಾಮಾನ್ಯ ಮಟ್ಟಕ್ಕೆ ಬರಲು ಸಿದ್ಧರಾಗುವಂತಾಗಿ ಹಾಗೂ ಹಣಕಾಸು ಹೊರೆಗಳು, ಜವಾಬ್ದಾರಿಗಳು ಮತ್ತು ಕಷ್ಟಗಳನ್ನು ಹಂಚಿಕೊಳ್ಳುವಂತಾಗಿ ಒಂದು ಹಂತಕ್ಕೆ ಸಿದ್ಧರಾಗುವಂತೆ ಮಾಡಲು ಪ್ರಸ್ತಾವಿಸಲಾಗಿದೆ. ಆದುದರಿಂದ ಆ ವಿಷಯವಾಗಿ ಕೂಡ ನಾವು ಈ ಸಮಸ್ಯೆಯನ್ನು ಒಪ್ಪಂದದೊಂದಿಗೆ ಬಗೆಹರಿಸಿದ್ದೇವೆ.

ಅನಂತರ ಶಾಸನಸಭೆಗಳಲ್ಲಿ ಅವರ ಪ್ರಾತಿನಿಧ್ಯ ಅವರ ವಿಷಯದಲ್ಲಿ ಇದು ಕಠಿಣ, ಅದು ಒಂದು ಲಕ್ಷ ಜನ ಅಥವಾ ಹೆಚ್ಚು ಉಳ್ಳ ಒಂದು ಸಣ್ಣ ಸಮುದಾಯ. ತುಂಬ ಗಣನೀಯವಾಗಿ ಕಡಿಮೆ, ಭಾರತಾದ್ಯಂತ ಹರಡಿದೆ. ಒಂದು ನಿರ್ದಿಷ್ಟ ಪ್ರಾಂತ್ಯದಲ್ಲಿ ನೆಲೆಸಿಲ್ಲ. ಅವರಿಗೆ ಮಹಾಚುನಾವಣೆಯಲ್ಲಿ ಸ್ಥಾನ ಪಡೆಯಲು ಕಠಿಣವಾಗಿದೆ. ಆದುದರಿಂದ ಪ್ರಾತಿನಿಧ್ಯ ಪಡೆಯುವಲ್ಲಿ ಅವರು ಕೆಲವು ಪ್ರಾಂತ್ಯಗಳಲ್ಲಿ ಅಥವಾ ಕೇಂದ್ರದಲ್ಲಿ ಚುನಾವಣೆಯ ಸಹಜ ಪ್ರಕ್ರಿಯೆಯಿಂದ ವಿಫಲರಾದಲ್ಲಿ, ಅವರು ಸೂಕ್ತವಾಗಿ ಅಥವಾ ಅರ್ಹರೀತಿಯಲ್ಲಿ ಪ್ರತಿನಿಧಿಸದಿದ್ದಲ್ಲಿ ನಾಮಕರಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಾಮಕರಣಮಾಡುವ ಅಧಿಕಾರವನ್ನು ಸಂದರ್ಭಾನುಸಾರ ರಾಜ್ಯಪಾಲರಿಗೆ ಅಥವಾ ಗವರ್ನರ್ ಜನರಲ್‌ಗೆ ಕೊಡಲಾಗಿದೆ. ಬಳಿಕ ಇತರ ಸನ್ನಿವೇಶಗಳಲ್ಲಿ, ಪಾರಸಿಗಳ ವಿಷಯದಲ್ಲಿ ಅವರು ತಾವಾಗಿಯೇ ಸ್ವಯಂ ಪ್ರೇರಿತರಾಗಿ ತಮಗೆ ಕೊಡಬಹುದಾದ ಯಾವುದೇ ರಿಯಾಯಿತಿಗಳನ್ನು ವರ್ಜಿಸಿರುವರು ಮತ್ತು ವಿವೇಕದಿಂದ ಹಾಗೆ ಮಾಡಿರುವರು. ಅಲ್ಲದೆ, ಸಣ್ಣದಾದರೂ ಅದು ಒಂದು ತುಂಬ ಶಕ್ತಸಮುದಾಯ ಮತ್ತು ಬಹುಶಃ ತುಂಬ ಬುದ್ಧಿವಂತ ಸಮುದಾಯ ಎಂದು ಚೆನ್ನಾಗಿ ತಿಳಿದಿದೆ. ತಾವು ಪಡೆಯುವ ಯಾವುದೇ ರಿಯಾಯಿತಿಗಳು ತಮಗೆ ಯಾವುದೇ ಒಳ್ಳೆಯದು ಮಾಡುವುದಕ್ಕಿಂತ ಹೆಚ್ಚು ಹಾನಿ ಮಾಡುತ್ತದೆ ಎಂದು ಅವರು ಬಲ್ಲರು, ಏಕೆಂದರೆ. ಅವರು ಎಲ್ಲಿ ಬೇಕಾದರೂ ತಮ್ಮ ಜೀವನಮಾರ್ಗ ಕಲ್ಪಿಸಿಕೊಳ್ಳಬಲ್ಲರು, ಮತ್ತು ಹೇಗೆ ತಮ್ಮ ಮಾರ್ಗ ಕಲ್ಪಿಸಿಕೊಳ್ಳಬಲ್ಲರೆಂದರೆ, ಯಾವುದೇ ಮೀಸಲಾತಿಯಿಂದ ಅಥವಾ ಯಾವುದೇ ಚುನಾವಣೆಗಳ ಪ್ರತ್ಯೇಕ ಪ್ರಕ್ರಿಯೆಯಿಂದ ಪಡೆದುಕೊಳ್ಳುವುದಕ್ಕಿಂತ ಹೆಚ್ಚು ಪಡೆದುಕೊಳ್ಳಬಲ್ಲರು. ಶಾಸನಸಭೆಯಲ್ಲಿಯಾಗಲಿ ಇಲ್ಲವೆ ಸೇವೆಗಳಲ್ಲಿ ರಾಷ್ಟ್ರದ ಸಾಮಾನ್ಯ ದರ್ಜೆಯಲ್ಲಿ ಅವರು ಎಷ್ಟು ಎತ್ತರ ಇರಬಲ್ಲರೆಂದರೆ ಯಾವುದೇ ರಿಯಾಯಿತಿಗಳನ್ನು ನಿರೀಕ್ಷಿಸಿಲ್ಲ. ನಾನು ಅವರ ಈ ನಿರ್ಧಾರಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಅನಂತರ ಬರುವುದು ಕ್ರೈಸ್ತ ಸಮುದಾಯ. ಈ ಸಮುದಾಯ ಎರಡು ಅಥವಾ ಮೂರು ಪ್ರಾಂತ್ಯಗಳಲ್ಲಿ ಹೆಚ್ಚು ಜನರುಳ್ಳ ಸಮುದಾಯ; ಮತ್ತು ಇತರ ಪ್ರಾಂತ್ಯಗಳಲ್ಲಿ ಚುನಾವಣೆ ಪ್ರಕ್ರಿಯೆಯಿಂದ ಯಾವುದೇ ನೇರ ಪ್ರಾತಿನಿಧ್ಯ ಹೊಂದಿರಲು ನೆಲೆಸಿಲ್ಲ. ಆದರೂ ಅವರು ತಮ್ಮ ಜನಸಂಖ್ಯೆಗನುಗುಣವಾಗಿ ಮೀಸಲಾತಿ ಹೊಂದಲು ಮತ್ತು ಪ್ರತ್ಯೇಕ ಮತದಾರರ ಸಮುದಾಯದ ಹಕ್ಕು ವರ್ಜಿಸಲು ಸಮ್ಮತಿಸಿದ್ದಾರೆ; ಅವರು ಕೋರಿರುವ ಇನ್ನಾವುದೇ ರಕ್ಷಣೆ ಇರುವುದಿಲ್ಲ.

ನಾವು ಕ್ಯಾಬಿನೆಟ್ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ೧೯೩೫ರ ಅಧಿನಿಯಮದಲ್ಲಿ ಇಂದು ಇರುವ ಸೂತ್ರವನ್ನು ಅಳವಡಿಸಿಕೊಂಡಿದ್ದೇವೆ ಕೂಡ. ಇದು ಸಾಂವಿಧಾನಿಕವಾಗಿ ಸೂಕ್ತ  ಎಂದು ಪರಿಗಣಿಸಲಾಗಿದೆ ಮತ್ತು ಆದುದರಿಂದ ಸರ್ವಾನುಮತದಿಂದ ಇದು ಕೂಡ ಅಂಗೀಕೃತವಾಗಿದೆ. ಬಳಿಕ ಸೇವೆಗಳಲ್ಲಿ ಪ್ರಾತಿನಿಧ್ಯ ಪ್ರಸ್ತಾವವಾಗುತ್ತದೆ. ನಾವು ಒಪ್ಪಿಕೊಂಡಿರುವ ಸಾಮಾನ್ಯ ಮಟ್ಟ ಎಂದರೆ ಸಾಧಾರಣವಾಗಿ ಸ್ಪರ್ಧಾತ್ಮಕ ಹುದ್ದೆಗಳಿಗೆ ಅರ್ಹತೆಯೇ ಆಧಾರ ಎಂದು. ನಾವು ಇದರಿಂದ ದೂರವಾದಲ್ಲಿ ಸಾಮಾನ್ಯ ಆಡಳಿತ ಅತೀವವಾಗಿ

ಬಾಧೆಗೊಳಗಾಗುತ್ತದೆ. ಸೇವೆಗಳ ವಿಷಯದಲ್ಲಿ ಈ ಮಾರ್ಗಚ್ಯುತಿ ಅಳವಡಿಸಿದ್ದರಿಂದ ನಮ್ಮ ಆಡಳಿತ ಗಣನೀಯವಾಗಿ ಬಾಧೆಗೊಳಗಾಗಿದ್ದು ನಾವು ಚೆನ್ನಾಗಿ ಬಲ್ಲೆವು. ಈಗ ನಾವು ಹೊಸದಾಗಿ ಆರಂಭಿಸುವುದಾಗಲಿ ನಾವು ಎಲ್ಲೆಲ್ಲಿ ಉನ್ನತಮಟ್ಟದ ಕೆಲವು ಆಡಳಿತಾತ್ಮಕ ಹುದ್ದೆಗಳು ತುಂಬಬೇಕೋ, ಆ ಹುದ್ದೆಗಳನ್ನು ಸ್ಪರ್ಧೆಯಿಂದ ತುಂಬುವುದನ್ನು ನೋಡಬೇಕು. ಅಂದರೆ, ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪ್ರಯೋಗಗಳಿಂದ. ಕೆಲವು ಸಮುದಾಯಗಳ ವಿಷಯದಲ್ಲಿ ನಾವು ಕೆಲವು ರಿಯಾಯಿತಿಗಳನ್ನು ಮಾಡಿದ್ದೇವೆ, ಅವು ತುಸು ನೆರವು ಬಯಸುತ್ತವೆ.

ಒಟ್ಟಾರೆ, ವರದಿಯು ಎರಡೂ ಕಡೆ, ಜಾಗ್ರತೆಯಿಂದ ಸೂಕ್ಷ್ಮವಾಗಿ ಪರಿಶೀಲಿಸಿರುವುದರ ಫಲ.

ಒಂದು ವಿಷಯ ನಾನು ಹೇಳಬಯಸುವುದೆಂದರೆ, ಶಾಸನಸಭೆಯಲ್ಲಿ ಮೀಸಲಾತಿ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳ ಮೀಸಲಾತಿ ಹೊರತು ಪಡಿಸಿ, ಯಾವುದೇ ಸಾಮಾನ್ಯ ಸ್ಥಾನಕ್ಕೆ ಕೂಡ ಸ್ಪರ್ಧಿಸಲು ಅಲ್ಪಸಂಖ್ಯಾತರಿಗೂ ಅನುಮತಿಸಲು ಅವಕಾಶ ಮಾಡಿಕೊಡಲಾಗಿದೆ. ಇದರ ಬಗೆಗೆ, ಸಲಹಾ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿ ಎರಡರಲ್ಲೂ ಬಹಳಷ್ಟು ವಿವಾದವಿದ್ದಿತು; ಆದರೆ ಬಹುಮತವೊಂದರಿಂದ ಅಂಗೀಕಾರವಾಗಿದೆ. ವಿವಾದದ ವಿಷಯವಾಗಿ ಇನ್ನೂ ಒಂದು ಅಂಶ ಇದ್ದಿತು ಮತ್ತು ಅದು ಮುಸ್ಲಿಮ್ ಲೀಗ್ ಮತ್ತು ಅನುಸೂಚಿತ ಜಾತಿಗಳ ಒಂದು ಭಾಗದ ಪರವಾಗಿ ಇದ್ದಿತು. ಒಬ್ಬ ಯಶಸ್ವಿ ಅಭ್ಯರ್ಥಿಗಾಗಿ ಮತಗಳ ಒಂದು ಖಚಿತ ಶೇಕಡಾವನ್ನು ಪರಿಶೀಲಿಸುವುದು ಆವಶ್ಯಕ ಎಂಬ ಅಂಶ ಎತ್ತಲಾಯಿತು. ಇದು ಒಂದು ವಿವಾದಾತ್ಮಕ ವಿಷಯವಾಗಿತ್ತು. ಅನುಸೂಚಿತ ಜಾತಿಗಳ ನಡುವೆಯೇ ಒಂದು ಬಹುದೊಡ್ಡ ಸಂಖ್ಯೆಯವರು ತಾವೆಲ್ಲ ಇದರ ವಿರುದ್ಧ ಎಂದು ಹೇಳಿಕೊಂಡ ಒಂದು ಮನವಿಯನ್ನು ನಿನ್ನೆ ನನಗೆ ಕಳುಹಿಸಿದರು. ಆದರೆ ಸಲಹಾ ಸಮಿತಿಯಲ್ಲಿ ಇದನ್ನು ಚರ್ಚಿಸಲಾಯಿತು ಮತ್ತು ಅದು ಒಂದು ದೊಡ್ಡ ಬಹುಮತದಿಂದ ತಿರಸ್ಕೃತವಾಯಿತು.

ಇದು ವರದಿಯ ವಾಸ್ತವಾಂಶ. ಆದರೆ ನಾವು ಅನುಸೂಚಿಯನ್ನು ಒಂದೊಂದನ್ನಾಗಿ ಪರಿಶೀಲಿಸಲು ಕೈಗೆತ್ತಿಕೊಂಡಾಗ ಒಂದೊಂದು ಅಂಶವನ್ನೂ ಅಂಗೀಕರಿಸಿದಂತೆ ವರದಿಯನ್ನು ಮಾರ್ಪಡಿಸುವ ಆವಶ್ಯಕತೆ ಉಂಟಾಗಬಹುದು. ಆದುದರಿಂದ ಮಾನ್ಯ ಅಧ್ಯಕ್ಷರು ವಿನಂತಿಸಿರುವಂತೆ ನಾವು ಅನುಸೂಚಿಯನ್ನು ಒಂದು ವಿಷಯದ ಅನಂತರ ಒಂದರಂತೆ ತೆಗೆದುಕೊಳ್ಳಬಹುದು ಮತ್ತು ವಿಷಯಗಳು ಅಂಗೀಕೃತವಾದಂತೆ ಅಂತೆಯೇ ವರದಿಯನ್ನು ಮಾರ್ಪಡಿಸಬಹುದು.

**ಮಾನ್ಯ ಸಭಾಧ್ಯಕ್ಷರು :** ಎರಡು ಪ್ರಸ್ತಾವಗಳಿವೆ. ಆ ಪೈಕಿ ನಾನು ಗಮನಿಸಿರುವುದು ಈ ನಿರ್ಣಯದ ಚರ್ಚೆ ಮುಂದೂಡುವುದಾಗಿದೆ, ನಾನು ಗೌರವಾನ್ವಿತ ಸದಸ್ಯರನ್ನು ತಮ್ಮ ಪ್ರಸ್ತಾವವನ್ನು ಮಂಡಿಸಲು ಕೇಳುತ್ತೇನೆ.

**ಮಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಮಂಡಿಸುತ್ತಿಲ್ಲ

**ನಜಿರುದ್ದೀನ್ ಅಹ್ಮದ್ :** (ಪೂರ್ವ ಬಂಗಾಳ–ಮುಸ್ಲಿಮ್) : ನಾನೂ ಮಂಡಿಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬ ಸಾಮಾನ್ಯ ಪ್ರಸ್ತಾವ ಚರ್ಚೆಗೆ ಮುಕ್ತವಾಗಿದೆ.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ ಮತ್ತು ಬೇರಾರ್ : ಜನರಲ್) : ಮಾನ್ಯ ಸಭಾಧ್ಯಕ್ಷರೆ, ಅಲ್ಪಸಂಖ್ಯಾತರನ್ನು ಕುರಿತಾದ ಸಲಹಾ ಸಮಿತಿಯ ಗೌರವಾರ್ಹ ಮತ್ತು ಸಮರ್ಥ ಅಧ್ಯಕ್ಷರು ಮತ್ತು ಸದಸ್ಯರು ಭಾರತದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಪ್ರಾತಿನಿಧ್ಯ ಸಮಸ್ಯೆ ಕುರಿತಂತೆ ಅವರು ತಯಾರಿಸಿದ ತುಂಬ ತೃಪ್ತಿಕರ ವರದಿಗಾಗಿ ನಮ್ಮ ಹೃತ್ಪೂರ್ವಕ ವಂದನೆಗಳಿಗೆ ಭಾಜನರೆನಿಸಿರುವರು. ನನ್ನ ಅಭಿಪ್ರಾಯದಲ್ಲಿ, ಭಾರತೀಯ ರಾಜಕೀಯ ಇತಿಹಾಸದಲ್ಲಿ 'ಅಲ್ಪಸಂಖ್ಯಾತ' ಎಂಬ ಪದಕ್ಕಿಂತ ಇನ್ನೂ ಅಗಾಧ ರೂಪವಾದ

ಪದ ಇಲ್ಲ. ಭಾರತ ತನ್ನ ರಾಜಕೀಯ ಶೈಶವಾವಸ್ಥೆಯಿಂದ ಹೊರಹೊಮ್ಮಿದಾಗಿನಿಂದಲೂ ಅಲ್ಪಸಂಖ್ಯಾತರ ಹಿತಾಸಕ್ತಿಗಳ ಮತ್ತು ಅವರ ರಕ್ಷಣೆಯ ಭೂತ ನಮ್ಮ ಮುಂದೆ ನಿಂತಿದೆ ಮತ್ತು ದೇಶದ ಪ್ರಗತಿಗೆ ಅಡ್ಡಿ ಪಡಿಸುವಂತೆ ತೋರಿದೆ. ಇದೊಂದು ಇತಿಹಾಸದ ವಿಷಯ ಬ್ರಿಟಿಷರ ನೀತಿಯಿಂದ ಸೃಷ್ಟಿಯಾದುದಾಗಿದೆ. ಆದರೆ ಅದು ಎಷ್ಟು ಚೆನ್ನಾಗಿ ಕೈಗೂಡಿದೆ ಎಂದರೆ ನನ್ನ ದೃಷ್ಟಿಯಲ್ಲಿ ಒಂದು ಶತಮಾನದ ಕಾಲ ಸಂಘಟಿತವಾಗಿದ್ದ ನಮ್ಮ ಪ್ರೀತಿಪಾತ್ರ ದೇಶ ಒಂದಕ್ಕಿಂತ ಹೆಚ್ಚು ಭಾಗಗಳಾಗಿ ವಿಭಜಸಲ್ಪಟ್ಟಿದೆ. ಇದು ಅವಶ್ಯವಾಗಿ ಅಲ್ಪಸಂಖ್ಯಾತರ ಸೈತಾನನ ಕೆಲಸ. ಕಡೆಗೂ ಈ ಭೂತ ಅದರ ಭೀತಿಗಳು ಛಿದ್ರವಾಗಿರುವುದು ಗಮನಿಸಬೇಕಾದ ಒಂದು ಯೋಗ್ಯಸಾಧನೆ. ಮಾನ್ಯರೆ, ಈ ವಿಷಯವಾಗಿ ಸಲಹಾ ಸಮಿತಿಯ ಸದಸ್ಯರು ಅವರ ಗೌರವ ಹೆಚ್ಚಿಸುವಂಥ ಒಂದು ಮಹತ್ತ್ವದ ಸಾಧನೆ ಮಾಡಿರುತ್ತಾರೆ ಎಂದು ನಾನು ತಿಳಿಯುತ್ತೇನೆ. ಹಾಗಾಗಿ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಮೊದಲನೆಯದಾಗಿ ಮತ್ತು ಪ್ರಮುಖವಾಗಿ, ಅವರು ಪ್ರತ್ಯೇಕ ಮತದಾರರ ಸಮುದಾಯಗಳನ್ನು ಮುಂದುವರಿಸಿಲ್ಲ. ಎರಡನೆಯದಾಗಿ, ಯಾವುದೇ ಹೆಚ್ಚಿನ ಸೌಲಭ್ಯಗಳ ವ್ಯವಸ್ಥೆ ಕೈಬಿಡಲಾಗಿದೆ. ಕ್ಯಾಬಿನೆಟ್‌ಗಳ ರಚನೆ ಅಲ್ಪಸಂಖ್ಯಾತರ ಪ್ರತಿನಿಧಿಗಳನ್ನು ಕಾನೂನುಬದ್ಧವಾಗಿ ಮತ್ತು ಸಾಂವಿಧಾನಿಕ ಹಕ್ಕಾಗಿ ತೆಗೆದುಕೊಳ್ಳಬೇಕಾದ ಕಷ್ಟಗಳಿಂದ ಅಡೆತಡೆಗಳಿಗೊಳಗಾಗುವುದಿಲ್ಲ. ಇಲ್ಲವೆ ಶೇಕಡಾವಾರು ಎರಡನೇ ದಶಾಂಶದವರೆಗೆ ನೇಮಕಾತಿ ಮಾಡಬೇಕಿಲ್ಲ. ಇಲ್ಲದಿದ್ದರೆ ಈ ವಲಯಗಳಲ್ಲಿ ಕೂಡ ಮೀಸಲಾತಿಗೆ ಅಲ್ಪಸಂಖ್ಯಾತರ ಹಲವಾರು ಪ್ರತಿನಿಧಿಗಳು ಒತ್ತಾಯ ತರುವ ಸನ್ನಿವೇಶವಿರುತ್ತಿತ್ತು. ಈ ಅಲ್ಪಸಂಖ್ಯಾತರ ಪ್ರತಿನಿಧಿಗಳು ಇಡೀ ವಿಷಯದ ಸುದೀರ್ಘ ಮತ್ತು ರಾಷ್ಟ್ರೀಯತಾ ವಾದದ ದೃಷ್ಟಿಯನ್ನು ತಾಳಿದವರು ಮತ್ತು ಒಳ್ಳೆಯ ಪರಿಣಾಮವನ್ನು ಹಾಳುಮಾಡಲು ಏನೊಂದೂ ಮಾಡುವುದಿಲ್ಲ ಎಂಬ ನಿಲುವು ತಾಳಿದ್ದಾರೆ ಎಂದು ನಾನು ಹೇಳಿದಾಗ ಈ ಸದನದ ಬಹುಭಾಗದ ಭಾವನೆಯನ್ನು ಧ್ವನಿಸುತ್ತೇನೆ ಎಂದು ನಂಬುತ್ತೇನೆ. ಅವರು ತಾವು ಏನು ಒಪ್ಪಿಕೊಂಡಿರುವರೋ ಅದರಿಂದ ಅವರು ಪಶ್ಚಾತ್ತಾಪ ಪಡುವ ಯಾವುದೇ ಸಂದರ್ಭ ಉಂಟಾಗುವುದಿಲ್ಲ ಎಂದು ಅವರಿಗೆ ಭರವಸೆ ನಮ್ಮೆಲ್ಲರ ಪರವಾಗಿ ನೀಡಲು ಇಷ್ಟ ಪಡುತ್ತೇನೆ. ನಾವು ಹೆಚ್ಚು ಧರ್ಮಬುದ್ಧಿಯುಳ್ಳ ಮತ್ತು ಉದಾರಮನಸ್ಸಿನ ಜನ. ನಗ್ನಸತ್ಯವನ್ನು ನುಡಿಯುತ್ತಿದ್ದೇವೆ ಎಂಬುದನ್ನು ಯಾವಾಗಲೂ ನಂಬಬೇಕು. ಕೆಲವರು, ನಮ್ಮ ಮುಸ್ಲಿಮ್ ಗೆಳೆಯರು, ಬಹುಮಟ್ಟಿಗೆ ಬ್ರಿಟಿಷ್ ನೀತಿಯ ಫಲವಾಗಿ, ನಮ್ಮನ್ನು ಪ್ರಜಾಪೀಡಕರು ಎಂದು ಬಣ್ಣ ಹಚ್ಚಿದ್ದಾರೆ ಮತ್ತು ಬಹುಮಂದಿ ದಮನಕಾರಿಗಳು ಎಂದು ತಿಳಿದಿರುವರು. ಅಂತಹ ಆರೋಪ ನ್ಯಾಯಸಮ್ಮತ ಎಂದು ನಾನು ಕಂಡಿಲ್ಲ ಆದರೆ ಅಸಹ್ಯವೆನಿಸುವಷ್ಟು ನ್ಯಾಯಯುತವಲ್ಲದ ಮತ್ತು ನಿಜವಲ್ಲದ ಆರೋಪ ಮೇಲಿಂದ ಮೇಲೆ ಹೊರಿಸಲ್ಪಟ್ಟಿದೆ. ಕಳೆದ ಹಲವು ವರ್ಷಗಳಿಂದ ಹೇಗೋ ಸುಸ್ಥಿರವಾಗಿದೆ. ಇಂತಹ ಸುಳ್ಳುತಳಹದಿಗಳ ಮೇಲೆಯೇ ಪಾಕಿಸ್ತಾನದ ಬೇಡಿಕೆ ಇಡಲಾಯಿತು ಮತ್ತು ಅಂಗೀಕರಿಸಲಾಯಿತು. ಸತ್ಯಾಂಶಗಳನ್ನು ವಿಶ್ಲೇಷಿಸಲು ಎಲ್ಲೋ ಕೆಲವರು ತಾಳ್ಮೆ ತೋರಿದರು. ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸುವ ಬದಲು ನಿಜಾಂಶವೆಂದರೆ ಬಹುತೇಕ ಕಡೆಗಳಲ್ಲಿ ಅಲ್ಪಸಂಖ್ಯಾತರೇ ಬಹುಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸಿರುವರು. ಮುಸ್ಲಿಮರು ಎಲ್ಲೆಲ್ಲೂ ಉಚಿತ ಅಥವಾ ಮುಕ್ತ ಎಂದು ಕರೆಯಬಹುದಾದ ಸವಲತ್ತುಗಳನ್ನು ಹೆಚ್ಚಾಗಿಯೇ ಅನುಭವಿಸಿದ್ದಾರೆ. ನನ್ನ ಸ್ವಂತ ಕುತೂಹಲಕಾರಿ ಪ್ರಾಂತ್ಯದಲ್ಲೆ ಮುಸ್ಲಿಮರು ಇಂದಿಗೂ ಒಂದು ಸ್ಥಾನ ಪಡೆದು ಸಂಭ್ರಮಿಸುತ್ತಾರೆ ಅದು ಇಂದಿಗೂ ನಮ್ಮ ಸ್ವಂತ ಹಿಂದೂ ಆಡಳಿತಗಾರರಿಂದಲೇ ಶೇ. ೬೦ರಷ್ಟು ರೈತರಿಗೂ ಕಾರ್ಮಿಕರಿಗೂ ಆ ಸೌಲಭ್ಯವನ್ನು ನಿರಾಕರಿಸಲಾಗಿದೆ.

ಇದಕ್ಕಿಂತ ಹೆಚ್ಚಾಗಿ ಈ ವಿಷಯದಲ್ಲಿ ಮತ್ತಷ್ಟು ಬೆಳೆಸಲು ನಾನು ಇಷ್ಟ ಪಡುವ ಸಂದರ್ಭ ಅಲ್ಲ ಇದು. ಯಾವ ಅಲ್ಪಸಂಖ್ಯಾತರೂ ಯಾರಿಗೆ ನ್ಯಾಯಸಮ್ಮತವಾಗಿ ಸೇರಿದೆಯೋ ಅವುಗಳಲ್ಲಿ ಆ ಇತರರಿಂದ ಕಸಿದುಕೊಳ್ಳಲು ಇನ್ನಷ್ಟು ಪ್ರಯತ್ನಿಸುವುದಿಲ್ಲ ಎಂದು ನಾನು ತೃಪ್ತ. ಹಿಂದೆ ಬಹುಕಾಲ ಬಹುಸಂಖ್ಯಾತರೇ

ಪೀಡನೆಗೆ ಒಳಗಾಗಿದ್ದವರು. ದುರದೃಷ್ಟವಶಾತ್ ಬಹುಸಂಖ್ಯಾತರಾದವರು ಮೂಗರೂ ಕಿವುಡರು. ನಾವು ಬಹುಮಂದಿ ಅವರ ಹೆಸರಿನಲ್ಲಿ ಸದಾ ಮಾತನಾಡಲು ಯತ್ನಿಸಿದರೂ, ನಮ್ಮ ಮಾತುಗಳನ್ನು ಕ್ರಿಯೆಗೆ ಪರಿವರ್ತಿಸುವಲ್ಲಿ ಸಂಪೂರ್ಣ ವಿಫಲರಾದೆವು ಎಂದು ಹೇಳುವಲ್ಲಿ ನನಗೆ ಹಿಂಜರಿಕೆ ಇಲ್ಲ. ಲಕ್ಷಾಂತರ ಜಾಟರು ಲಕ್ಷಾಂತರ ಅಹಿರರು, ಗುಜಾರರು, ಕೂರ್ಮಿಗಳು, ಕುಣಬಿಗಳು ಮತ್ತು ಆದಿವಾಸಿಗಳು ಹಾಗೂ ಲಕ್ಷಾಂತರ ಇತರರಿಗೆ ಯಾವ ಸ್ಥಾನ ಕೊಡಲಾಗಿದೆ ಎಂದು ನಾನು ಕೇಳಲೇ. ನಾವು ಸ್ವಲ್ಪ ಮಟ್ಟಿಗೆ ನಮ್ಮ ಸ್ವಂತಕ್ಕಾಗಿ ಆಲೋಚಿಸಿ ಅದರಲ್ಲಿ ಮಗ್ನರಾಗಿದ್ದೆವಲ್ಲವೇ. ಪ್ರಸ್ತುತ ಸ್ವಾತಂತ್ರ್ಯವನ್ನು ನಮಗೆ ಕೊಡಲು ತಮ್ಮ ಜೀವಗಳನ್ನೆ ತ್ಯಾಗಮಾಡಿದ ಈ ಸಹಸ್ರಾರು ಬಡ ಜನರ ಬಗೆಗೆ ಆಲೋಚಿಸಿದ್ದು ಕಡಿಮೆ. ನಾವು ಅವರಿಗೆಂದು ಆಯ್ಕೆ ಮಾಡುವ ಯಾರೇ ಒಬ್ಬರಿಗೆ ವಿವೇಚನೆ ಇಲ್ಲದೆ, ವಿನೀತರಾಗಿ ಮತ್ತು ಧರ್ಮಶ್ರದ್ಧೆಯಿಂದ ಮತ ಹಾಕುವರೆಂಬುದನ್ನು ಕಲ್ಪಿಸಿಕೊಳ್ಳುವುದನ್ನು ಬಿಟ್ಟರೆ ಅವರಿಗೆ ನಾವು ಯಾವ ಸ್ಥಾನವನ್ನು ನಿಯೋಜಿಸಿದ್ದೇವೆ? ಈ ದೃಷ್ಟಿಯಿಂದ, ಸನ್ನಿವೇಶ ಇಂದಿಗೂ ಮಂಕು ಕವಿದಿದ್ದೆ ಆಗಿದೆ. ಕಾರ್ಯಪ್ರವೃತ್ತರಾಗಿ ನಾನು ಏನೆಲ್ಲ ಹೇಳಿದೆನೊ ಅದನ್ನು ಅರ್ಥಮಾಡಿಕೊಂಡು ಪರೀಕ್ಷಿಸಿ ಪರಿಗಣಿಸುವುದು ಪ್ರಸ್ತುತ ಆಡಳಿತಗಾರರಿಗೆ ಬಿಟ್ಟದ್ದು. ಇದು ಮಾಡುವಲ್ಲಿ ಅವರು ವಿಫಲರಾದರೆ ಮುಂದೆ ತೊಂದರೆ ಮತ್ತು ವಿನಾಶ ಇರುತ್ತದೆ. ಆದುದರಿಂದ ನಾನು ಕೋರುವುದೆಂದರೆ, ಕಡೇಪಕ್ಷ ಅಲ್ಪಸಂಖ್ಯಾತರು ಕ್ಯಾಬಿನೆಟ್‌ಗಳಲ್ಲಿ ಮತ್ತು ಸರಕಾರಿ ಸೇವೆಗಳಲ್ಲಿ ಸಮರ್ಥನೀಯ ಅನುಪಾತದಲ್ಲಿ ಅಧಿಕಾರದ ನ್ಯಾಯಯುತ ಪಾಲು ಹೊಂದುವಲ್ಲಿ ತೃಪ್ತರಾದಾಗ, ನಮ್ಮ ಆಡಳಿತಗಾರರು ಶೋಷಣೆಗಳಗಾದವರ ಮತ್ತು ಉಪೇಕ್ಷೆಗೊಳಗಾದ ಗ್ರಾಮೀಣ ಜನತೆಯತ್ತ ತುಸು ಗಮನ ಹರಿಸುವರು. ಕಾಂಗ್ರೆಸ್‌ನಂತಹ ಪವಿತ್ರ ಹೆಸರಿನಡಿ ಈ ವಿಷಯದಲ್ಲಿ ನೆರವಿಗಿಂತ ಹೆಚ್ಚು ತೊಂದರೆಯೇ ಆಗಿದೆ. ರಾಜಕೀಯ ಪರಿಗಣನೆಗಳ ಒತ್ತಾಯದಿಂದಾಗಿ, ಮಹತ್ತ್ವದ ಪ್ರಜಾಪ್ರಭುತ್ವವಾದಿಗಳು ಸೂಕ್ಷ್ಮಾವಲೋಕನದ ಅಲ್ಪಸಂಖ್ಯಾತರ ಆಸಕ್ತಿಗಳನ್ನು ಕುರಿತು ವಾದಿಸಿರುವರು. ಅವರು ತಿಲಾಂಶ ಹಕ್ಕಿಲ್ಲದಿದ್ದರೂ ಹುದ್ದೆಗಳು ಮತ್ತು ಸವಲತ್ತುಗಳನ್ನೂ ಅನುಭವಿಸಿದ್ದಾರೆ. ಯಾರೇ ಆಗಲಿ ತಮ್ಮ ಅರ್ಹತೆಗಿಂತಲೂ ಹೆಚ್ಚು ಅನುಭವಿಸಿದ್ದೇ ಆದರೆ, ಇನ್ನಾರೋ ಒಬ್ಬರ ಪಾಲನ್ನು ಕಸಿದಂತೆ ಎಂಬುದು ಸ್ಪಷ್ಟ. ಹಲವು ಹಿಂದೂ ಸಮುದಾಯಗಳ ನಡುವೆ ಅಧಿಕಾರ ಮತ್ತು ಹುದ್ದೆಗಳನ್ನು ವಿತರಿಸುವಲ್ಲಿ ಇದು ಗಮನದಲ್ಲಿರಬೇಕು ಹಾಗೂ ಕಡೇಪಕ್ಷ ಈಗಿನಿಂದಲಾದರೂ ಅನಿಷ್ಟಕ್ಕೆ ಹಿಂದಿನದನ್ನು ಒಪ್ಪಿಸುವ ನೀತಿ ನಿಲ್ಲಲಿ.

**ಶ್ರೀ ವಿ.ಐ. ಶ್ರೀ ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಜನರಲ್) : ಮಾನ್ಯ ಅಧ್ಯಕ್ಷರೆ, ಈ ದೊಡ್ಡ ನೆಲದ ಮೇಲೆ ವಾಸಿಸುವ ಅಲ್ಪಸಂಖ್ಯಾತ ಸಮುದಾಯಗಳ ಕಲ್ಯಾಣಕ್ಕೆ ಇದೊಂದು ಸ್ಮರಣೀಯವಾದ ದಿನ ಎಂದು ನಾನು ಭಾವಿಸುತ್ತೇನೆ. ನಾನು ಮುಂದುವರಿಯುವ ಮುನ್ನ, ಈ ಭೂಮಿಯ ಬಹುಸಂಖ್ಯಾತರ ಮತ್ತು ಅಲ್ಪಸಂಖ್ಯಾತರ ಸಮುದಾಯಗಳಿಗೆ ತೃಪ್ತಿಯಾಗುವಂತೆ ಒಂದು ವರದಿ ತರುವಲ್ಲಿನ ಈ ಮಹತ್ತ್ವದ ಔಚಿತ್ಯಜ್ಞಾನ ಮತ್ತು ಸಾಮರ್ಥ್ಯಕ್ಕಾಗಿ ಗೌರವಾನ್ವಿತ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರನ್ನು ಅಭಿನಂದಿಸಬೇಕು. ಸಲಹಾ ಸಮಿತಿಯು ಸಿದ್ಧ ಪಡಿಸಿದ ದಾಖಲೆಯನ್ನು ಈ ನೆಲದ ಹರಿಜನರ ಕಲ್ಯಾಣಕ್ಕಿರುವ ಮ್ಯಾಗ್ನಕಾರ್ಟ ಎಂದು ನಾನು ಪರಿಗಣಿಸುತ್ತೇನೆ. ಸ್ವಾಮಿ, ಈ ಹಿಂದೆ ನನ್ನ ಗೆಳೆಯರು ಹೇಳಿದಂತೆ, ಈ ದೇಶದಲ್ಲಿ ವಾಸಿಸುತ್ತಿರುವ ಮೂರನೆಯ ಮನುಷ್ಯನಿಂದಾಗಿ ಹಲವು ಅಲ್ಪಸಂಖ್ಯಾತ ಸಮುದಾಯಗಳು ಹೊರಹೊಮ್ಮಿದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಮಾನ್ಯರೆ, ಹಿಂದೂಗಳ ಒಂದು ಭಾಗದ ಅಸಮರ್ಥತೆಗಳನ್ನು ಕಂಡುಕೊಳ್ಳಲು, ಅಂದರೆ ಹಲವು ಹೆಸರುಗಳಿಂದ ಕರೆಯಲಾದ ದಲಿತ ವರ್ಗಗಳ ರಕ್ಷಣೆಗೆ ಬರಲು ಮತ್ತು ದೊಡ್ಡ ಯುಗಪ್ರವರ್ತಕ ಉಪವಾಸ ಕೈಗೊಳ್ಳಲು ಮಹಾತ್ಮ ಗಾಂಧಿ ದೊಡ್ಡ ಅವತಾರ ಎನ್ನಲಾಗಿ ಅದು ಭಾರತದ ಇಡೀ ಸಾಮ್ರಾಜ್ಯದಲ್ಲಿ ಎಲ್ಲ ಜಾತಿ ಹಿಂದೂಗಳನ್ನು 'ಅಸ್ಪೃಶ್ಯರು' ಎಂದರೇನು, 'ದಲಿತ ವರ್ಗಗಳು' ಎಂದರೇನು, 'ಅನುಸೂಚಿತ ಜಾತಿಗಳು' ಎಂದರೇನು ಮತ್ತು ಅವರಿಗೆ ಏನು ಮಾಡಬೇಕು ಎಂಬುದನ್ನು ಆಲೋಚಿಸಲು ಆಹ್ವಾನಿಸಿತು.

ಅದೇ ಪೂನಾ ಒಪ್ಪಂದ. ಅದು ನನ್ನನ್ನೊಳಗೊಂಡಂತೆ ಈ ದೇಶದಲ್ಲಿ ದೊಡ್ಡದೊಂದು ಜಾಗೃತಿ ಉಂಟುಮಾಡಿದ ಡಾ. ಅಂಬೇಡ್ಕರ್‌ರೊಂದಿಗೆ ನೀವೂ ಸಹಿ ಹಾಕಿದ ವ್ಯಕ್ತಿಯಾಗಿದ್ದಿರಿ. ಬಳಿಕ, ಮಾನ್ಯರೆ, ಪ್ರತಿಯೊಬ್ಬರ ಮನಸ್ಸಿನಲ್ಲಿ ಒಂದು ಪ್ರಶ್ನೆ ಇದೆ. ಅದೇಂದರೆ ಪೂನಾ ಒಪ್ಪಂದ ಈ ದೇಶದಲ್ಲಿ ಜಾತಿ ಹಿಂದೂಗಳಿಂದ ಒಂದು ಹೃತ್ಪರಿವರ್ತನೆಯ ಚಿಹ್ನೆಗಳನ್ನು ತೋರಿಸುತ್ತದೆಯೆ ಎಂದು. ಮಾನ್ಯರೆ, ಶೇಕಡಾ ನೂರು ಅಲ್ಲದಿದ್ದರೂ ಕಡೇಪಕ್ಷ ಶೇ. ೫೦ಕ್ಕಿಂತ ಹೆಚ್ಚು ಬದಲಾವಣೆ ತಂದಿದೆ ಎಂದು ನಾನು ಇಂದು ನಿಮಗೆ ಭರವಸೆ ಕೊಡಬಹುದು ಇಲ್ಲಿ ನಿಮಗೆ ನಿದರ್ಶಗಳನ್ನು ಕೊಡಬಹುದು. ಪ್ರಸಕ್ತ ರಾಷ್ಟ್ರದ ಕ್ಯಾಬಿನೆಟ್‌ನಲ್ಲಿ ಡಾ. ಅಂಬೇಡ್ಕರ್ ಅವರ ಸೇರ್ಪಡೆ ಹರಿಜನರನ್ನು ಇನ್ನು ಉಪೇಕ್ಷೆ ಮಾಡಬಾರದು ಎಂಬುದಕ್ಕೆ ಜಾತಿ ಹಿಂದೂಗಳ ಒಂದು ಹೃದಯ ಪರಿವರ್ತನೆ. ಮಾನ್ಯರೆ, ನನ್ನ ಸ್ವಂತ ಪ್ರಾಂತ್ಯದಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಪ್ರಕಾಶಂ ದಲಿತ ವರ್ಗಗಳ ಸ್ಥಿತಿ ಸುಧಾರಣೆಗೆ ಒಂದು ಕೋಟಿ ರೂಪಾಯಿಗಳಷ್ಟನ್ನು ಒದಗಿಸಿರುವರು ಮತ್ತು ಹಾಲಿ ಮುಖ್ಯಮಂತ್ರಿ ಶ್ರೀ ಒಮಂದೂರ್ ರಾಮಸ್ವಾಮಿ ರೆಡ್ಡಿಯಾರ್ ಅವರು ದಲಿತವರ್ಗಗಳ ಸ್ಥಿತಿ ಸುಧಾರಣೆಗೆ ಅನ್ವೇಷಣೆ ಕೈಗೊಂಡು ೫ ವರ್ಷ ಯೋಜನೆ ತರಲು ಒಂದು ದೊಡ್ಡ ಸಮಿತಿಯನ್ನು ಸಜ್ಜುಗೊಳಿಸಿದ್ದಾರೆ ಎಂದು ನಾನು ಹೇಳಬಹುದು. ಮಾನ್ಯರೆ, ಈಗ ವರದಿಯನ್ನು ಪರಿಗಣಿಸುವ ಮುಖ್ಯ ವ್ಯವಹಾರಕ್ಕೆ ಬಂದರೆ, ನಾನು ಈ ದೇಶದ ೩೦೦ ದಶಲಕ್ಷದಷ್ಟು ಜನರಿಗೆ ಮಾಡಲಾದ ಯಾವುದೇ ಸಂವಿಧಾನ ಸೂಕ್ತ ರಕ್ಷಣೆಗಳನ್ನು ಹೊಂದಿರಬೇಕು ಎಂದು ಹೇಳಬಹುದು. ಕೆಲವರು ತಮ್ಮ ಹೃದಯಗಳಲ್ಲಿ ತಾವು ಈ ಭೂಮಿಯ ಅಲ್ಪಸಂಖ್ಯಾತರಲ್ಲವೆ ಎಂದು ಆಲೋಚಿಸುತ್ತಿರಬಹುದು. ವಿಶೇಷವಾಗಿ, ಮಾನ್ಯರೆ, ಈ ಉಪಖಂಡದ ಜನಸಂಖ್ಯೆಯ ಆರನೆಯ ಒಂದರಷ್ಟು ಅಸ್ಪೃಶ್ಯರು ಒಂದು ಅಲ್ಪಸಂಖ್ಯಾತ ಸಮುದಾಯ. ಏಕೆಂದರೆ, ಅವರ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಪ್ರಗತಿ ತುಂಬ ಕೆಳಸ್ಥಿತಿಯಲ್ಲಿದೆ. ಮಾನ್ಯರೆ, ಪೂನಾ ಒಪ್ಪಂದದ ಅನಂತರ ನಾವು ಎರಡನೆಯ ಹಂತಕ್ಕೆ ಬರುತ್ತಿದ್ದೇವೆ, ವಾಸ್ತವವಾಗಿ ಇದು ಎರಡನೆಯ ಹಂತ. ಏಕೆಂದರೆ, ಈ ಸದನದಲ್ಲಿ ಮಂಡಿಸಲಾದ ವರದಿಗನುಗುಣವಾಗಿ ಅಸ್ಪೃಶ್ಯರಿಗೆ, ಅನುಸೂಚಿತ ಜಾತಿಗಳಿಗೆ ಕೆಲವು ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಮಾನ್ಯರೆ, ನಾನು ಈ ಸದನಕ್ಕೆ ಹೇಳಲು ಇಷ್ಟ ಪಡುವ ಒಂದು ಮಹತ್ತ್ವದ ಅಂಶ ಎಂದರೆ, ನಾವು ಪ್ರತ್ಯೇಕ ಮತದಾರರ ಸಮುದಾಯಗಳಿಂದ ಚುನಾವಣೆಯ ಹಾನಿಕರ ಕ್ರಮದಿಂದ ಪಾರಾಗಿರುವುದೇ ಆಗಿದೆ. ಅದನ್ನು ಏಳು ಆಳುದ್ದ ಆಳಕ್ಕೆ ಹೂಳಲಾಗಿದೆ. ನಮ್ಮ ದೇಶದಲ್ಲಿ ಅದು ಇನ್ನೆಂದೂ ಮೇಲೇಳುವುದಿಲ್ಲ. ಹಲವಾರು ಪ್ರಾಂತ್ಯಗಳಲ್ಲಿ ಪ್ರಚಲಿತವಿರುತ್ತಿದ್ದ ಸ್ಥಿತಿಗಳು ಪ್ರತ್ಯೇಕ ಮತದಾರರ ಸಮುದಾಯ ಪದ್ಧತಿಯನ್ನು ಪರಿಚಯಿಸಲು ವಾಸ್ತವ ಕಾರಣ. ಪೂನಾ ಒಪ್ಪಂದ ನಮಗೆ ಪ್ರತ್ಯೇಕ ಮತ್ತು ಜಂಟಿಮತದಾರರ ಸಮುದಾಯ ಎರಡೂ ಕೊಟ್ಟಿತು. ಆದರೆ ಈಗ ಇಲ್ಲಿ ಮಂಡಿಸಲಾದ ವರದಿಗನುಗುಣವಾಗಿ ನಾವು ದಲಿತ ವರ್ಗಗಳು ಜಂಟಿಮತದಾರರ ಸಮುದಾಯಗಳನ್ನು ಸಂಭ್ರಮಿಸಲು ಸಲಹೆ ಮಾಡಿದ್ದೇವೆ. ಮಾನ್ಯರೆ, ಬರುವ ವರ್ಷಗಳಲ್ಲಿ ಈ ದೇಶ ಒಂದು ದೊಡ್ಡ ಒಕ್ಕೂಟವಾಗಿ ರೂಪುಗೊಳ್ಳುವುದೆಂದು ಆಲೋಚಿಸುತ್ತಿರುವಲ್ಲಿ, ಜಂಟಿ ಮತದಾರರ ಸಮುದಾಯ ಜಾತಿ ಹಿಂದೂಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಒಟ್ಟಿಗೆ ಬರುವಲ್ಲಿ ಮತ್ತು ಒಟ್ಟಿಗೆ ಕೆಲಸ ಮಾಡಿ ಉತ್ತಮ ಭಾರತವನ್ನು ರೂಪಿಸುವಲ್ಲಿ ಸಮಾನಾವಕಾಶ ಕೊಡುವುದೆಂಬ ಭರವಸೆ ಕಂಡುಕೊಳ್ಳಲಾಗಿದೆ. ಮಾನ್ಯರೆ, ಈಗ ಜನಸಂಖ್ಯೆಗೆ ಆಧಾರವಾಗಿ ಸ್ಥಾನಗಳ ಮೀಸಲಾತಿ ಇದೆ. ಇದು ದಲಿತ ವರ್ಗಗಳ ನ್ಯಾಯಯುತ ಬೇಡಿಕೆ. ಇವರು ಮಣ್ಣು ಉಳುವವರು ಮತ್ತು ಮರಗಳು ಕಡಿಯುವವರೂ ಆಗಿ ಈ ನೆಲದ ಆಡಳಿತದಲ್ಲಿ ಸಮಾನ ಧ್ವನಿ ಉಳ್ಳವರಾಗಬೇಕು. ಅದೂ ಅಲ್ಲದೆ ಅವರ ಆರ್ಥಿಕ ಸ್ಥಿತಿಯ ಕಾರಣ ಅವರಿಗೆ ಕಾದಿರಿಸದ ಸ್ಥಾನಗಳಿಗಾಗಿ ಸ್ಪರ್ಧಿಸಲು ಸಾಧ್ಯವಿಲ್ಲ ಮತ್ತು ಇದು ಸಲಹಾ ಸಮಿತಿಯ ಪಾಲಿಗೆ ಮುಖ್ಯ ಶಿಫಾರಸಿನೊಂದಿಗೆ ಬರಲು ಶುಭಶಕುನವಾಗಿದೆ. ಅದೇಂದರೆ, ಎಲ್ಲ ಅಲ್ಪಸಂಖ್ಯಾತ ಸಮುದಾಯದವರೂ ಹಲವು ಪ್ರಾಂತೀಯ ಶಾಸನಸಭೆಗಳಲ್ಲಿ ತಮ್ಮ ಮೀಸಲಾತಿ ಹೊಂದಿರುವುದರ ಜತೆಗೆ,

ಕಾದಿರಿಸದ ಸ್ಥಾನಗಳಲ್ಲೂ ಸ್ಥಾನಗಳಿಗೆ ಸ್ಪರ್ಧಿಸಲು ಹಕ್ಕು ಹೊಂದಿರುವುದೇ ಆಗಿದೆ. ಇದು ಒಂದು ಶುಭಶಕುನ. ಇದರಂತೆ ಇನ್ನು ಮುಂದೆ ಜಾತಿ ಹಿಂದೂಗಳು ಮತ್ತು ಹರಿಜನರು ಅಂದರೆ ಅನುಸೂಚಿತ ಜಾತಿಗಳು ಪರಸ್ಪರ ಕೈ ಕೈ ಸೇರಿಸಿ ಒಂದಾಗಿ ಮುಂದುವರಿಯುವರು. ಈ ನೆಲಕ್ಕೆ ಯಾವುದೇ ಸುಧಾರಣೆಗಳು ಅಥವಾ ವಿಧಾಯಕ ಸಭೆಗಳಲ್ಲಿ ಮತ್ತು ದೇಶದ ಕಲ್ಯಾಣಕ್ಕೆ ತರಬಹುದಾದ ಕಾಯಿದೆಗಳಲ್ಲಿ ತರುವ ಸುಧಾರಣೆಗಳು ಎಲ್ಲ ಸಮುದಾಯಗಳು ಅಂಗೀಕರಿಸಿದವಾಗಿರುತ್ತವೆ. ಅದೂ ಅಲ್ಲದೆ ಕಾದಿರಿಸದ ಸ್ಥಾನಗಳಿಗೆ ಸ್ಪರ್ಧಿಸಲು ಅಲ್ಪಸಂಖ್ಯಾತರಿಗೆ ಅನುಮತಿಸಿರುವ ಈ ಖಂಡವು ಬಹುಸಂಖ್ಯಾತ ಸಮುದಾಯ ಅಲ್ಪಸಂಖ್ಯಾತ ಸಮುದಾಯದರ ಬಗೆಗೆ ಹೊಂದಿರುವ ಶುಭೇಚ್ಛೆಯನ್ನು ತೋರಿಸುತ್ತದೆ.

ಕ್ಯಾಬಿನೆಟ್‌ನಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ ಕುರಿತಂತೆ ಸಾಕಷ್ಟು ಹೇಳಲಾಗಿದೆ. ಮಾನ್ಯರೆ, ನಮ್ಮ ನೆಲದ ದುರ್ಬಲ ವರ್ಗಗಳ ಉನ್ನತಿಗಾಗಿ ರಾಜಕೀಯ ಅಧಿಕಾರದಲ್ಲಿ ನಂಬಿಕೆ ಇಟ್ಟಿರುವವರಲ್ಲಿ ನಾನೂ ಒಬ್ಬ. ಅಧಿಕಾರಗಳನ್ನು ಹಿಡಿದು ಈ ಜನ ನತದೃಷ್ಟ ಅಲ್ಪಸಂಖ್ಯಾತ ಸಮುದಾಯಗಳೊಂದಿಗೆ ಸಂಪರ್ಕಕ್ಕೆ ಬರಲು ಬದ್ಧರಾಗಿ ತಾವೇ ಅವರನ್ನು ಉನ್ನತಿಗೆ ತರಲು ಏನು ಮಾಡಬೇಕೆಂಬುದನ್ನು ನೋಡುತ್ತಾರೆ. ಸಂಪುಟದಲ್ಲಿ ಈ ಅಲ್ಪಸಂಖ್ಯಾತರು ಸೂಕ್ತ ಪ್ರಾತಿನಿಧ್ಯ ಹೊಂದಿರಬೇಕು ಎಂದು ನಾನು ಮನವಿ ಮಾಡಿದರೆ, ಕ್ಯಾಬಿನೆಟ್‌ಗಳು ಮಲಿನಗೊಳ್ಳುತ್ತವೆ ಅಥವಾ ಅವು ಅದಕ್ಷವಾಗುತ್ತವೆ ಎಂದು ಅರ್ಥವಲ್ಲ. ಆದರೆ ಸಮಾನ ಅವಕಾಶ ಕೊಡಬೇಕು. ಒಮ್ಮೆ ನೀವು ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಕೊಟ್ಟರೆಂದರೆ, ನಾನು ಕೂಡಾ ಕ್ಯಾಬಿನೆಟ್‌ನಲ್ಲಿ ಪ್ರಾತಿನಿಧ್ಯ ಆ ಅನುಪಾತದಲ್ಲಿ ಇರಬೇಕು ಎಂದು ಕೇಳುವವನೆ, ಈ ದೇಶದಲ್ಲಿ ಹಲವಾರು ಕಾರ್ಯಸ್ಥಾನಗಳಿಗೆ ಸಚಿವರಾಗಿ ಮತ್ತು ಶಾಸನ ಸಭೆಗಳಿಗೆ ಸ್ಪೀಕರ್(ಸಭಾಪತಿ) ಆಗಿ ಅನುಸೂಚಿತ ಜಾತಿಗಳಿಂದ ಆಯ್ಕೆಗೊಂಡ ಸದಸ್ಯರು ತಮ್ಮ ಕರ್ತವ್ಯಗಳನ್ನು ಸಮಾನವಾಗಿ ಚೆನ್ನಾಗಿಯೇ ನಿರ್ವಹಿಸಿದ್ದಾರೆ ಎಂದು ಘಟನೆಗಳು ತೋರಿಸಿವೆ.

ಈ ಸಮುದಾಯಗಳಿಂದ ಉನ್ನತಾಧಿಕಾರಗಳಿಗೆ ಆಯ್ಕೆಯಾದವರು ದಕ್ಷರಾಗಿರುವುದಿಲ್ಲ ಎಂದು ಬಹುಸಂಖ್ಯಾತ ಸಮುದಾಯಗಳ ಮನಸುಗಳಲ್ಲಿ ಪೂರ್ವಗ್ರಹ ಇರುವುದು ಬೇಡ. ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ, ೧೯೩೫ರ ಅಧಿನಿಯಮಕ್ಕನುಗುಣವಾಗಿ ಒಂದು ಸಂಪ್ರದಾಯ ಒಪ್ಪಂದ ಸೃಷ್ಟಿಸಬೇಕಿದೆ ಎಂದು ನಾನು ಭಾವಿಸುತ್ತೇನೆ. ಬಹುಸಂಖ್ಯಾತ ಸಮುದಾಯಗಳ ಶುಭೇಚ್ಛೆ ಆ ದುರ್ಬಲರು ಅಲ್ಪಸಂಖ್ಯಾತ ಸಮುದಾಯಗಳು ಕ್ಯಾಬಿನೆಟ್‌ಗಳಲ್ಲಿ ಸಮರ್ಪಕವಾಗಿ ಪ್ರಾತಿನಿಧ್ಯಕ್ಕೊಳಗಾಗುತ್ತವೆ ಎಂಬುದನ್ನು ನೋಡಲು ಸದಾ ಇರುತ್ತದೆ ಎಂಬ ಭರವಸೆ ನನ್ನದಾಗಿದೆ. ಮಾನ್ಯರೆ, ಸೇವೆಗಳ ವಿಚಾರದಲ್ಲಿ, ನಾನು ಮನಃಪೂರ್ವಕವಾಗಿ ಕೋರುವುದೆಂದರೆ, ಈ ಅಲ್ಪಸಂಖ್ಯಾತ ಸಮುದಾಯಗಳಿಗೆ ಪ್ರತಿಯೊಂದನ್ನು ಮಾಡಬೇಕು ಎಂದು. ಹಾಗಾಗಿ ಈ ಮಹತ್ತ್ವದ ನೆಲದ ಸೇವೆಗಳಲ್ಲಿ ಅವರ ಹಕ್ಕಿನ ಪಾಲು ಅವರು ಹೊಂದಬಹುದು. ದಲಿತ ವರ್ಗಗಳು ಅಗತ್ಯವಾದ ವಿದ್ಯಾರ್ಹತೆ ಹೊಂದಿದ್ದರೂ, ಯಾವುದೇ ಕುಂಟುನೆಪ ಅಥವಾ ಮತ್ತೊಂದರಡಿ ಅವರಿಗೆ ಸೇವೆಗಳಲ್ಲಿ ಅವಕಾಶಗಳು ಕೊಡುತ್ತಿಲ್ಲ ಎಂದು ಆಗಾಗ್ಗೆ ಹೇಳಲಾಗಿದೆ. ಮಾನ್ಯರೆ, ಈ ವರದಿಯನ್ನು ಸಂವಿಧಾನ ರಚನಾಸಭೆಯು ಸಮ್ಮತಿಸಿದ ಅನಂತರ ಈ ವಿಷಯದಲ್ಲಿ ಆಡಳಿತ ಹೊಂದುವ ಬಹುಸಂಖ್ಯಾತ ಸಮುದಾಯಗಳು ಅನುಸೂಚಿತ ಜಾತಿಗಳ ಬೇಡಿಕೆಗಳನ್ನು ಮರೆಯುವುದಿಲ್ಲ ಎಂದು ನಾನು ಆಶಿಸುತ್ತೇನೆ. ಒಂದು ಆರಂಭ ಎನ್ನುವಂತೆ ಪ್ರಸ್ತುತ ಪ್ರಭುತ್ವದ ಕ್ಯಾಬಿನೆಟ್ ಈಗಾಗಲೇ ಒಂದು ಕಾರ್ಯಕಾರಿ ಆದೇಶ ಹೊರಡಿಸಿ ಸ್ಪರ್ಧಾತ್ಮಕ ಮತ್ತು ಸ್ಪರ್ಧೇತರ ಎರಡೂ ಸೇವೆಗಳ ವಿಷಯದಲ್ಲಿ ಶೇಕಡಾ ೧೨% ಮತ್ತು ಶೇಕಡಾ ೧೬%ಯಷ್ಟನ್ನು ಅನುಸೂಚಿತ ಜಾತಿಗಳಿಗೆಂದು ಮೀಸಲಿಟ್ಟಿದ ಎಂಬುದನ್ನು ನಾನು ಬಲ್ಲೆ. ಇದು ಒಂದು ಶುಭಶಕುನ ಮತ್ತು ಈ ಹೃತ್ಪರಿವರ್ತನೆ ಮುಂದೆಯೂ ಇದನ್ನು ಅನುಸರಿಸಲಾಗುತ್ತದೆ ಮತ್ತು ಸೇವೆಗಳಲ್ಲಿ ಅನುಸೂಚಿತ ಜಾತಿಗಳ ಪ್ರಾತಿನಿಧ್ಯಕ್ಕೆ ಸೂಕ್ತ ಪಾಲು ಕಾಯ್ದುಕೊಳ್ಳಲಾಗುತ್ತದೆ ಎಂಬ ಭರವಸೆ ನನ್ನದಾಗಿದೆ.

ಕೊನೆಯದಾಗಿ, ಮಾನ್ಯರೆ, ವರದಿಯು ಒಂದು ಶಾಸನಬದ್ಧ ಆಯೋಗದ ಸೃಷ್ಟಿಗೆ ಕಾರಣವಾಗುವುದಲ್ಲದೆ ಪ್ರಾಂತ್ಯಗಳ ಅಧಿಕಾರಿಗಳು ಈ ಜನರನ್ನು ಎಲ್ಲ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಲಯಗಳಲ್ಲಿ ಹಿಂದುಳಿದವರಾಗಿಡಲು ವಾಸ್ತವ ಸಂಗತಿಗಳೇನು ಎಂಬುದನ್ನು ಆಲೋಚಿಸುವಂತೆ ಮಾಡುತ್ತದೆ. ನಾನು ಇದನ್ನು ಸ್ವಾಗತಿಸುತ್ತೇನೆ. ಏಕೆಂದರೆ, ಈ ಆಯೋಗಕ್ಕೂ ಮತ್ತು ಅಧಿಕಾರಗಳು ಕೂಡ ಅನುಸೂಚಿತ ಜಾತಿಗಳನ್ನು ತಿಳಿಯಲು ಹಾಗೂ ಅದನ್ನು ಮುಂದಿನ ಹತ್ತು ವರ್ಷಗಳ ಕಾಲ ಮಾಡಲೂ ಮತ್ತೆ ೧೦ನೇ ವರ್ಷದ ನಂತರ ನಾವು ಅನುಸೂಚಿತ ಜಾತಿಗಳು ಪ್ರಾಂತೀಯ ಶಾಸನಸಭೆಗಳಲ್ಲಿ ಅಥವಾ ಈ ಯಾವುದೇ ವಿಷಯಗಳಲ್ಲಿ ಮೀಸಲಾತಿ ಕೇಳದಂತೆ ಮಾಡುವಲ್ಲಿ ಪರಸ್ಪರ ತಿಳಿಯಲು ಇದು ಮಹತ್ತರ ಪರಿಣಾಮ ಬೀರುತ್ತದೆ. ಬಹುಸಂಖ್ಯಾತ ಸಮುದಾಯದವರಷ್ಟೆ ಈ ಮಹಾನ್ ಭೂಮಿಯ ಆಡಳಿತದಲ್ಲಿ ಸಮಾನ ಪಾಲು ತೆಗೆದುಕೊಳ್ಳುವಂತೆ ಶೈಕ್ಷಣಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಈ ಅಲ್ಪಸಂಖ್ಯಾತರು ಎದ್ದು ನಿಲ್ಲಲು ನ್ಯಾಯ ಸಿಗುವಂತೆ ನೋಡಬೇಕು. ಸ್ವಾಮಿ, ನನ್ನ ಕೆಲವು ಗೆಳೆಯರ ಮನಸ್ಸುಗಳಲ್ಲಿ, ವಿಶೇಷವಾಗಿ ಅನುಸೂಚಿತ ಜಾತಿಗಳಲ್ಲಿ ಹಿಂದೂಗಳು ಅಧಿಕಾರಕ್ಕೆ ಬರುತ್ತಾರೆ ಮತ್ತು ಹಿಂದೂ ರಾಜ್ ಜಾರಿಗೆ ಬರುತ್ತದೆ ಹಾಗೂ ಅವರು ಈ ಹಿಂದಿನ ವರ್ಷಗಳಲ್ಲಿದ್ದಂತೆ ಹರಿಜನರನ್ನು ಪುನಃ ಪೀಡಿಸುವಂಥ ವರ್ಣಾಶ್ರಮವನ್ನು ತರುತ್ತಾರೆ ಎಂಬ ಭಯವಿದೆ. ಅಂತಹ ಗೆಳೆಯರಿಗೆ ನಾನು ಏನು ಹೇಳಬಹುದೆಂದರೆ ನಾವು ನೋಡುತ್ತಿರುವಂತೆ, ವರ್ಣಾಶ್ರಮ ಧರ್ಮವನ್ನು ವಿಭಿನ್ನ ಅರ್ಥದಲ್ಲಿ ಅನ್ವಯಿಸಬಹುದಷ್ಟೆ, ಆದರೆ ವರ್ಷಗಳ ಹಿಂದೆ ಪಡೆದ ಅರ್ಥದಲ್ಲಿ ಅಲ್ಲ ಎಂದು ಈ ವರದಿಯನ್ನು ಈ ಸದನದಲ್ಲಿ ಸರ್ವಾನುಮತದಿಂದ ಒಪ್ಪಲಾಗುತ್ತದೆ ಹಾಗೂ ಗೌರವಾನ್ವಿತ ಮಿತ್ರ ಸರ್ದಾರ್ ವಲ್ಲಭ ಬಾಯಿ ಪಟೇಲ್‌ಜಿಯವರು ಸಿದ್ಧಪಡಿಸಿರುವ ಬಹು ಉತ್ತಮ ವರದಿಯನ್ನು ತರಬಹುದಾದ ಯಾವುದೇ ತಿದ್ದುಪಡಿಗಳು ವಿರೂಪಗೊಳಿಸುವುದಿಲ್ಲ ಎಂಬುದು ನನ್ನ ಖಚಿತ ಭರವಸೆಯಾಗಿದೆ.

**ಶ್ರೀ ಎಫ್.ಆರ್. ಆಂಥನಿ** (ಸಿ.ಪಿ ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಅಲ್ಪಸಂಖ್ಯಾತರ ಉಪಸಮಿತಿಯ ಹಾಗೂ ಸಲಹಾ ಸಮಿತಿಯ ಒಬ್ಬ ಸದಸ್ಯನಾಗಿ ವರದಿ ಕುರಿತಂತೆ ಕೆಲವು ಮಾತುಗಳನ್ನು ನಾನು ಹೇಳಬೇಕು. ಕೆಲವು ಚರ್ಚೆಯ ವಿಷಯಗಳು ತುಂಬ ವಿವಾದಾತ್ಮಕವಾಗಿದ್ದವು ಎಂದು ನಾನು ಹೇಳಬಹುದಾಗಿದೆ. ಅವುಗಳ ಪೈಕಿ ಕೆಲವು ಗಂಟೆಗಳ ಕಾಲ ವಾದ ಮತ್ತು ಪ್ರತಿವಾದಗಳನ್ನೊಳಗೊಂಡಿದ್ದವು. ಆದರೆ ಕೆಲವೊಮ್ಮೆ ದಿನಗಟ್ಟಳೆ. ಆದರೂ ಎರಡೂ ಪಕ್ಕಗಳಲ್ಲಿ ಎಲ್ಲ ಚರ್ಚೆಗಳೂ ಔದಾರ್ಯದ ಅತ್ಯುತ್ತಮ ಸಂಪ್ರದಾಯಗಳಲ್ಲಿ ನಿರ್ವಹಿಸಲಾದುವು. ಯಾವಾಗಲೂ ಶ್ರೀ ಮುನ್ಷಿಯವರಂಥ ಒಬ್ಬ ಸಮರ್ಥ ಮತ್ತು ಬಹುಮಟ್ಟಿಗೆ ಸೋಜಿಗದ ಪಟ್ಟು ಬಿಡದ ವಕೀಲರೊಂದಿಗೆ ಯಶಸ್ವಿಯಾಗಿ ಮಾತುಗಳನ್ನು ದಾಟಿಕೊಂಡು ಹೋಗುವುದು ಸುಲಭದ ವಿಷಯವಾಗಿರಲಿಲ್ಲ. ಹಲವು ದೃಷ್ಟಿಕೋನಗಳು ಇಲ್ಲಿ ಇದ್ದವು. ಕೆಲವು ಜನ ಪೂರ್ಣ ಪರಿಶುದ್ಧ ಸಿದ್ಧಾಂತಗಳ ತಮ್ಮದೇ ದೃಷ್ಟಿಕೋನಗಳಿಂದ ಗಣನೀಯವಾಗಿ ಅರ್ಥವತ್ತಾಗಿ ನಿರ್ದೇಶಿತರಾಗಿದ್ದರು. ಇತರರು ತಮ್ಮ ರೀತಿಯಲ್ಲಿ ಅದೃಷ್ಟವಶಾತ್ ಹೆಚ್ಚು ವಾಸ್ತವವೂ ಮತ್ತು ಹೆಚ್ಚು ಮುತ್ಸದ್ದಿತನದಂತೆ ಇದ್ದವರು. ನನ್ನ ಸಮುದಾಯದ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ಯಾರು ನಮ್ಮ ಸಮಸ್ಯೆಗಳನ್ನು ವಾಸ್ತವಿಕತೆಯ ನಿಲುವಿನಲ್ಲಿ ನೋಡಿರುವರೋ ಅವರಿಗೆ ಅದರಲ್ಲಿಯೂ ಸರ್ದಾರ ಪಟೇಲ್‌ರಿಗೆ ನಾನು ನನ್ನ ಮೆಚ್ಚುಗೆಯ ವಿಶೇಷ ಮಾತು ಮತ್ತು ವಂದನೆಗಳನ್ನು ಹೇಳಬೇಕು ಎನಿಸುತ್ತದೆ. ಒಂದು ಒಪ್ಪಂದದ ಪರಿಹಾರಕ್ಕೆ ಬರಲು ನಾನು ನಮ್ಮ ಕಡೆಯಿಂದ ಸಾಧ್ಯವಾದ ಪ್ರತಿಯೊಂದನ್ನು ಮಾಡಿದೆವು. ಕಡೆಗೆ ನಾವು ಅದನ್ನು ಪಡೆದೆವು ಎಂದು ಹೇಳಲು ಹರ್ಷಿಸುತ್ತೇನೆ. ಆಂಗ್ಲೋ ಇಂಡಿಯನ್ ಸಮುದಾಯದ ವಿಶೇಷ ಅಗತ್ಯಗಳನ್ನು ಅರ್ಥಮಾಡಿಕೊಂಡು ಹಾಗೂ ಕಡೆಗೆ ಸಲಹಾ ಸಮಿತಿಯ ವರದಿಯಲ್ಲಿ ಅವುಗಳಿಗೆ ಆಕಾರ ಕೊಟ್ಟ ಎಲ್ಲರಿಗೂ ನನ್ನ ಸಮುದಾಯದ ಮೆಚ್ಚುಗೆಯನ್ನು ಮತ್ತು ವಂದನೆಗಳು ವ್ಯಕ್ತ ಪಡಿಸಬೇಕು

ಎಂದು ನಾನು ಭಾವಿಸುತ್ತೇನೆ. ಸ್ವಾಮಿ, ಈ ವರದಿಯ ಭವಿಷ್ಯಕ್ಕೆ ಒಂದು ಶುಭಶಕುನವನ್ನು ಸೂಚಿಸುತ್ತದೆ. ನಿಜಸ್ಥಿತಿಗಳಿಗೆ ಹೊಂದುವಂತೆ ನನ್ನ ಸಿದ್ಧಾಂತಗಳನ್ನು ಮಾರ್ಪಡಿಸಿಕೊಳ್ಳಬೇಕು ಎಂದು ಭಾವಿಸಿದವರಲ್ಲಿ ನಾನು ಸಹ ಯಾವಾಗಲೂ ಒಬ್ಬನಾಗಿರುತ್ತೇನೆ. ಮುತ್ಸದ್ದಿತನ ಮತ್ತು ವಾಸ್ತವಿಕತೆಯ ಪರಿಜ್ಞಾನ ಇವೆರಡನ್ನೂ ತರಲಾಯಿತು ಹಾಗೂ ಸರ್ದಾರ್ ಪಟೇಲ್‌ರಿಂದ ಅವುಗಳೊಳಗೆ ಉತ್ಸಾಹ ತುಂಬಲಾಯಿತು ಎಂದು ಹೇಳಲು ಹರ್ಷಿಸುತ್ತೇನೆ. ಬಹುಸಂಖ್ಯಾತ ಸಮುದಾಯದವರು ಉದಾರವಾಗಿದ್ದು ಅಲ್ಪಸಂಖ್ಯಾತರಿಗೆ ಉದಾತ್ತತೆಯ ಮನೋಭಾವವನ್ನು ಅಳವಡಿಸಿಕೊಂಡು ತಾವು ಅಲ್ಪಸಂಖ್ಯಾತರ ಅಗತ್ಯಗಳು ಮತ್ತು ದೃಷ್ಟಿಕೋನಗಳನ್ನು ಪರಿಗಣಿಸುವುದಿಲ್ಲ ಎಂಬ ಭಯವನ್ನು ತೊಡೆದುಹಾಕಲು ನೆರವಾಗಿರುವಿರಿ. ಆ ಮುತ್ಸದ್ದಿತನದ ಕಾರ್ಯದಿಂದ ನಮ್ಮನ್ನೆದುರಿಸುತ್ತಿರುವ ರಾಷ್ಟ್ರನಿರ್ಮಾಣದ ಕೆಲಸಗಳಿಗೆ ಅಲ್ಪಸಂಖ್ಯಾತರ ನಿಷ್ಠೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ನೆರವಾಗಿರುವಿರಿ.

ಇಂದು ಸ್ಥಿತಿಗಳು ಅಲ್ಪಸಂಖ್ಯಾತರಿಗೆ ಒಂದು ಸವಾಲು ಎಂಬುದನ್ನು ನಾನು ನಂಬುತ್ತೇನೆ. ಪ್ರತಿ ಬುದ್ಧಿವಂತ ಅಲ್ಪಸಂಖ್ಯಾತನೂ ಶೀಘ್ರವೋ ಅಥವಾ ಅನಂತರವೋ ವೇಳೆಗಾಗಿ ಕಾದು ನೋಡುತ್ತಾನೆ. ಅದು ತನ್ನ ಸ್ಥಾನವು ಯಾವುದೇ ಕೋಮುವಾದದ ಹಣೆಪಟ್ಟಿಯಡಿ ಅಥವಾ ಅಂಕಿತದಡಿ ಆಗಿರದೆ ಇಡೀ ಭಾರತೀಯ ಸಮುದಾಯದ ಅವಿಭಾಜ್ಯ ಅಂಗವಾಗಿ ಪಡೆದುಕೊಳ್ಳುತ್ತದೆ ಎಂಬಂತೆ ಆಗಿರುತ್ತದೆ. (ಕೇಳಿ ಕೇಳಿ). ಇಂದಿನ ಸ್ಥಿತಿಗಳು ಬಹುಸಂಖ್ಯಾತ ಸಮುದಾಯದ ಕೆಲವು ಸದಸ್ಯರಿಗೂ ಘಟನೆಗಳ ಹಿನ್ನೆಲೆಯ ಕಾರಣ ಒಂದು ಸವಾಲೇ ಆಗಿದೆ ಎಂದು ನಾನು ನಂಬುತ್ತೇನೆ. ನಾನು ಅವರಿಗೆ, "ಈ ಹುರುಪಿನಿಂದ ನಾವೆಲ್ಲರೂ ಸ್ಫೂರ್ತಿಗೊಂಡು ಮುನ್ನಡೆಯೋಣ. ನಾವು ವಿಳಂಬಕ್ಕಿಂತ ಶೀಘ್ರವಾಗಿ ಎಲ್ಲ ಕೋಮುವಾದದ ಹಣೆಪಟ್ಟಿಗಳನ್ನು ಕಳಚಿ ಒಂದು ಭಾರತೀಯ ಸಮುದಾಯಕ್ಕೆ ಸೇರಿದವರೆಂಬ ಅಗ್ರಹ ಪೂರ್ವಕ ಪರಿಜ್ಞಾನದಿಂದ ಒಟ್ಟಾಗಿರೋಣ" ಎಂದು ಹೇಳುತ್ತೇನೆ (ಚಪ್ಪಾಳೆ)

**ಶ್ರೀಯುತ ರೋಹಿಣಿಕುಮಾರ್ ಚೌಧುರಿ** (ಅಸ್ಸಾಮ್ : ಸಾಮಾನ್ಯ) : ನಾನು ನನ್ನ ಕೆಲವು ಭಾವನೆಗಳನ್ನು ವ್ಯಕ್ತ ಪಡಿಸಲು ಈ ಪ್ರಸ್ತಾವ ಕುರಿತು ಮಾತನಾಡಲು ಈ ಅವಕಾಶವನ್ನೆತ್ತಿಕೊಳ್ಳಲು ಇಚ್ಛಿಸುತ್ತೇನೆ. ಹಾಗೆ ನೋಡಿದರೆ ನಮ್ಮ ಸ್ವಾತಂತ್ರ್ಯಾನಂತರ ಯಾವುದೇ ಪ್ರಸ್ತಾವ ಕುರಿತಂತೆ ಮಾತನಾಡಲು ಹೊರಟದ್ದು ಇದೇ ಮೊದಲು. ಮಾನ್ಯರೆ, ಈ ಚರ್ಚೆಯ ಪಥವನ್ನು ನಾನು ಗಮನಿಸಿದ್ದೇನೆಯೇ ಅಥವಾ ಅಲ್ಪಸಂಖ್ಯಾತರ ಹಕ್ಕುಗಳ ಮೇಲಿನ ವರದಿಯ ಸಿಕ್ಕುಗಳೇನು ಎಂದು ಅರ್ಥಮಾಡಿಕೊಂಡಿದ್ದೇನೆಯೇ ಎಂದು ನನಗೆ ತಿಳಿದಿಲ್ಲ. ಹೀಗೆ ಹೇಳಿದುದಕ್ಕೆ ನನಗೆ ಕ್ಷಮೆ ಇದೆ ಎಂದು ನಾನು ಭರವಸೆ ಇಟ್ಟಿದ್ದೇನೆ. ಆದರೆ ನನಗೆ ತೋರುವುದೆಂದರೆ, ಸದ್ಯ ಎರಡು ವಿಧಗಳ ಅಲ್ಪಸಂಖ್ಯಾತರಿದ್ದಾರೆ ಎಂದು. ಇವರಲ್ಲಿ ಒಬ್ಬರು ಭಾರತಕ್ಕೆ ಸೇರಿ ನಮ್ಮವರೇ ಆಗಿದ್ದು ಪ್ರಾಯೋಗಿಕವಾಗಿ ಬಲಿಗೊಳಗಾದವರು. ಈಗ ಸ್ವರ್ಗದಲ್ಲಿ ದೇವರಿಂದ ರಕ್ಷಿತರಾಗಿ ಆತನ ಸ್ಥಳದಲ್ಲಿರುವರು. ಏಕೆಂದರೆ ಎಲ್ಲ ಧರ್ಮೀಯರಿಗೆ ಮತ್ತು ಸಂತರಿಗೆ ಅದು ಧಾಮ. ೧೯೪೭ರ ಆಗಸ್ಟ್ ೧೫ರಿಂದ ಈವರೆಗೆ ಸ್ವರ್ಗದಲ್ಲಿ ಅವರಿಗೆ ಅಪರಿಮಿತ ಸಂಖ್ಯೆಯ ಸ್ಥಾನಗಳು ಮೀಸಲಾಗಿವೆ. ಸ್ವರ್ಗದಲ್ಲಿ ಸ್ಥಾನಗಳಿಗೆ ಭಾರಿ ನೂಕಾಟವಿದ್ದಾಗ್ಯೂ, ಅಲ್ಲಿ ಜಾಗಕ್ಕೆ ಬೇಡಿಕೆ ಇದ್ದಂತಿಲ್ಲ. ನಾವು ಸಂವಿಧಾನ ರಚನಾಂಗದ ಸದಸ್ಯರು. ಅವರ ದುಃಖಗಳು ಮತ್ತು ಸಂಕಟಗಳಿಗೆ ನಾವು ಮಾಡುವುದೇನೂ ಇಲ್ಲ. ನಾವು ಶುಕ್ರವಾರದ ವರೆಗೆ ಕೆಲವು ನಿಯಮಗಳನ್ನು ರೂಪಿಸುವುದಾಗುತ್ತದೆ ಮತ್ತು ಅದರ ಅನಂತರ ನಾವು ಶನಿವಾರ ಚದರುತ್ತೇವೆ ಹಾಗೂ ವಿವಿಧ ಪ್ರಾಂತೀಯ ವಿಧಾಯಕ ಸಭೆಗಳಿಗೆ ಮತ್ತು ಪರಿಷತ್ತುಗಳಿಗೆ ಹೋಗುತ್ತೇವೆ. ಆ ಬಳಿಕ ನಾವು ದಸರೆ ರಜಾ ಮತ್ತು ದುರ್ಗಾಪೂಜಾಗಳಲ್ಲಿ ಸಂಭ್ರಮಿಸುತ್ತೇವೆ. ಪುನಃ ನಾವು ಈ ಸಂವಿಧಾನಕ್ಕೆ ಮುಕ್ತಾಯದ ಸ್ಪರ್ಶ ಕೊಡಲು ಬರುತ್ತೇವೆ. ಆಗ ನಮಗೆ ಭಾರತದ ನಮ್ಮ ವಿಭಾಗದ ನತದೃಷ್ಟ ಬಲಿಪಶುಗಳನ್ನು ಕುರಿತು ಆಲೋಚಿಸಲು ಸಾಕಷ್ಟು ಸಮಯವಿರುತ್ತದೆ. ಮಾನ್ಯರೆ, ಸದನವನ್ನು ಕೆಲವು ನಿಮಿಷಗಳ ಕಾಲ ಮುಂದೂಡುವ

ಮೂಲಕ ಅಥವಾ ಒಂದೆರಡು ನಿಮಿಷಗಳ ಕಾಲ ಮೌನ ಆಚರಿಸುವ ರೀತಿಯಲ್ಲಿ ನತದೃಷ್ಟರ ಹಿತಾಸಕ್ತಿಗಳನ್ನು ಜೀವಂತವಿಡಬಹುದೆಂದು ನನ್ನ ಖಚಿತ ನಿಲುವು. ಹೀಗೆ ಮೌನ ಆಚರಿಸಿ ಯಾರೆಲ್ಲ ಹೋರಾಡಿ ತೀರಿಕೊಂಡರೋ ಅವರಿಗೆ ನಮ್ಮ ಶ್ರದ್ಧಾಂಜಲಿ ಅರ್ಪಿಸೋಣ. ನಾವು ಯಾರು ತೀರಿಕೊಂಡಿದ್ದಾರೆಯೋ ಅವರಿಗಾಗಿ ಮೌನ ಆಚರಿಸಲು ಈಗ ಈ ಸಮಾವೇಶವನ್ನು ಪ್ರಾರಂಭಿಸಿದ್ದೇವೆ. ನಾವು ಈ ಸಮಾವೇಶವನ್ನು ನಮ್ಮ ಈ ನತದೃಷ್ಟ ದೇಶದಲ್ಲಿ ಸುದೀರ್ಘ ಕಾಲ ಮಾಡಬೇಕಾಗುತ್ತದೆ ಎಂಬ ಅಂಜಿಕೆ ನನ್ನದು.

ಮಾನ್ಯರೆ, ನಾವು ತತ್‌ಕ್ಷಣವೆ ಕಾಳಜಿ ವಹಿಸಿಲ್ಲದ ಇನ್ನೊಂದು ವಿಧದ ಅಲ್ಪಸಂಖ್ಯಾತರಿದ್ದಾರೆ. ಆ ಅಲ್ಪಸಂಖ್ಯಾತರಿಗೆ ಸಾಕಷ್ಟು ಒದಗಿಸಲಾಗಿದೆ ಎಂಬುದನ್ನು ತಿಳಿದು ಹರ್ಷವಾಗುತ್ತದೆ. ಅವರಿಗೆ ೧೦ ವರ್ಷಗಳ ಕಾಲ ಮೀಸಲಿರಿಸಿರುವ ಸ್ಥಾನಗಳಿವೆ. ಅವರು ಮೀಸಲಿರಿಸದ ಸ್ಥಾನಗಳಿಗೆ ಸ್ಪರ್ಧಿಸಲು ಅವಕಾಶವಿದೆ. ಮೀಸಲಿಟ್ಟ ಸ್ಥಾನಗಳಿಂದ ಅವರು ತಮ್ಮ ಕೋಮಿನ ಪಕ್ಷದಲ್ಲಿ ಮುಂದುವರಿಯುತ್ತಾರೆ ಮತ್ತು ಕಾಂಗ್ರೆಸ್ ಪಕ್ಷದ ಕೃಪೆಯ ಮೂಲಕ ಮೀಸಲಿರಿಸದ ಸ್ಥಾನಗಳನ್ನು ಕೂಡ ಪಡೆಯುವರು. ಅಲ್ಪಸಂಖ್ಯಾತ ಸಮುದಾಯವನ್ನು ಒಂದು ಬಹುಸಂಖ್ಯಾತ ಸಮುದಾಯವಾಗಿ ಈ ಮೂಲಕ ಮಾಡಲು ಹತ್ತು ವರ್ಷಗಳೇನೂ ತೆಗೆದುಕೊಳ್ಳುವುದಿಲ್ಲ ಎಂದು ನಾನು ತಿಳಿಯುತ್ತೇನೆ. ಅಲ್ಲಿಂದಾಚೆಗೆ, ಅಲ್ಪಸಂಖ್ಯಾತ ಸಮುದಾಯಗಳೆಂಬುದೇ ಇರುವುದಿಲ್ಲ. ನಾವು ಈ ನೀತಿ ಅಳವಡಿಸಿಕೊಂಡಿರುವುದರಿಂದ ಮತ್ತು ನಮ್ಮ ಕರ್ತವ್ಯ ಹಾಗೂ ನಮ್ಮ ಜವಾಬ್ದಾರಿಗಳನ್ನು ವಿಭಜಿಸಿರುವುದರಿಂದ ಇದು ಹೀಗೆಯೇ ಇರಬೇಕಾಗುತ್ತದೆ.

ಪಾಕಿಸ್ತಾನ ಎಂದು ತಿಳಿಯಲಾದ ಪ್ರದೇಶದಲ್ಲಿ, ಆ ದೇಶದ ಸರ್ಕಾರ ಬಹುಸಂಖ್ಯಾತರ ಹಿತಾಸಕ್ತಿಗಳನ್ನು ನೋಡಿಕೊಳ್ಳುತ್ತದೆಯಾದರೆ ಭಾರತ ಎಂದು ತಿಳಿಯಲಾದ ಪ್ರದೇಶದಲ್ಲಿ ನಾವು ಅಲ್ಪಸಂಖ್ಯಾತರ ರಕ್ಷಣೆಗೆ ನಾವಾಗಿಯೇ ಅರ್ಪಿಸಿಕೊಂಡಿದ್ದೇವೆ. ನಾವು ಹಾಗೆಯೇ ಸಂಭ್ರಮಿಸಿ ಮಾಡುತ್ತಿರುತ್ತೇವೆ. ಸ್ವಾಮಿ ಈ ದೇಶದ ವಿವಿಧ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತರನ್ನು ಕುರಿತು ಆಲೋಚಿಸುವಲ್ಲಿ, ಸದನ ಸಂಪೂರ್ಣ ಹಿಂದುಳಿದಿರುವ ಕೆಲವು ಪ್ರಾಂತ್ಯಗಳನ್ನು ಮರೆಯಬಾರದು. ಉದಾಹರಣೆಗೆ, ಅಸ್ಸಾಮ್ ಮತ್ತು ಒರಿಸ್ಸಾ, ಇಲ್ಲಿ ಭಾರತ ಸರ್ಕಾರದಲ್ಲಿ ಒಂದು ಸ್ಥಾನವನ್ನು ತುಂಬಿದ ಒಬ್ಬರಾದರೂ ಕಾಣಸಿಗುವುದಿಲ್ಲ. ಇಲ್ಲಿ ಒಬ್ಬ ರಾಜ್ಯಪಾಲನ ಸ್ಥಾನವನ್ನು ತುಂಬಿದ ಒಬ್ಬರಾದರೂ ಕಾಣಸಿಗುವುದಿಲ್ಲ. ಇಲ್ಲಿ ರೈಲ್ವೇ ಅಥವಾ ಅಂಚೆ ಮತ್ತು ತಂತಿ ಇಲಾಖೆಗಳ ಉನ್ನತ ಕಛೇರಿಗಳ ಅಧಿಕಾರ ಹಿಡಿದ ಒಬ್ಬರಾದರೂ ಕಾಣಸಿಗುವುದಿಲ್ಲ, ಅಥವಾ ತನ್ನ ಸಾಮ್ರಾಜ್ಯಶಾಹಿ ಲಕ್ಷಣವನ್ನು ಇನ್ನೂ ಉಳಿಸಿಕೊಂಡಿರುವ ಸಚಿವಾಲಯದಲ್ಲಿ ಕೂಡ.

ಪ್ರಾಂತ್ಯವನ್ನು, ಭ್ರಮನಿರಸನಗೊಳಿಸಿದ ಅನಂತರ ಸಿಂಡ್ರೆಲಾ ಪ್ರಾಂತ್ಯ ಎಂದು ಕರೆಯುವುದು ಸುಲಭ. ಇತರ ಪ್ರಾಂತ್ಯಗಳ ಜನರಿಗೆ ಕೊಡಲಾದ ಅವಕಾಶವನ್ನು ನಿರಾಕರಿಸಿದ ಅನಂತರ ಕೀಳರಿಮೆಯಿಂದ ನರಳುತ್ತಿರುವ ಒಂದು ಪ್ರಾಂತ್ಯದ ಜನರನ್ನು ಆ ರೀತಿ ಕರೆಯುವುದೂ ಬಹಳ ಸುಲಭ. ಈ ಸದನದ ಕೆಲವು ಗೌರವಾನ್ವಿತ ಸದಸ್ಯರ ಮುಖಗಳು ಸಿಂಡರಿಸಿಕೊಂಡಿರುವುದನ್ನು ನಾನು ಗಮನಿಸಿದ್ದೇನೆ ಮತ್ತು ಸುರಕ್ಷತೆಯ ಸಲುವಾಗಿ ನಾನು ಈಗ ನನ್ನ ಸ್ಥಾನಕ್ಕೆ ಓಡಿಹೋಗಬೇಕೆಂದು ಆಲೋಚಿಸುತ್ತಿದ್ದೇನೆ.

**ಎಸ್. ಶ್ರೀನಾಗಪ್ಪ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಭಾರತೀಯ ಇತಿಹಾಸದ ವಾರ್ಷಿಕ ಬಖೈರುಗಳಲ್ಲಿ ನಿಜವಾಗಿ ಇದೊಂದು ಬಹು ಮುಖ್ಯ ದಿನವಾಗಿದೆ. ಮಾನ್ಯರೆ, ಈಗಾಗಲೆ ನನ್ನ ಮಿತ್ರರು ಒಂದು ಸರ್ವ ಸಮ್ಮತ ವರದಿಯನ್ನು ಸಲ್ಲಿಸಿರುವುದಕ್ಕೆ ಸಮಿತಿಗೆ ಅಭಿನಂದನೆಗಳು ಸಲ್ಲಬೇಕಾಗಿದೆ ಎಂದು ಹೇಳಿರುವರು. ನಾನು ತಮ್ಮ ಗಮನಕ್ಕೆ ತರುವುದೆಂದರೆ, ಬಹುಕಾಲದಿಂದಲೂ ಈ ಅಲ್ಪಸಂಖ್ಯಾತರು ನಮ್ಮ ದಾರಿಯಲ್ಲಿ ನಿಂತಿದ್ದರು, ಬ್ರಿಟಿಷರು ನಮಗೆ ಸ್ವಾತಂತ್ರ್ಯವನ್ನು ಕೊಡಲು ವಿಳಂಬ ಮಾಡುವಂತಾಗಲು ಈ ಎಲ್ಲ ದಿನಗಳೂ ಅಲ್ಪಸಂಖ್ಯಾತರೊಂದಿಗೆ ಚಿತಾವಣೆ ಮಾಡಿದರು. ನಾವಾದರೂ ಆಗಸ್ಟ್ ೧೫ರಂದು ಸ್ವಾತಂತ್ರ್ಯವನ್ನು ಪಡೆದೆವು ಮತ್ತು ಇಂದು ದಿನಾಂಕ ೨೭ ಅಷ್ಟೆ, ಈ ೧೨ ದಿನಗಳೊಳಗೆ ಅಲ್ಪಸಂಖ್ಯಾತರು

ಒಂದು ಒಪ್ಪಂದಕ್ಕೆ ಬಂದಿರುತ್ತಾರೆ. ಆದುದರಿಂದ, ಮಾನ್ಯರೆ, ಭಾರತದಲ್ಲಿ ಎಷ್ಟರ ಮಟ್ಟಿಗೆ ಏಕತೆ ಇದೆ ಎಂದು ತಾವು ನೋಡಬಹುದು. ಇಲ್ಲಿ ಒಂದು ವಿಧದ ತಬ್ಬಿಬ್ಬು ಅವರಿಸಿತ್ತು. ಅವರು ನಮ್ಮೊಂದಿಗೆ ಆಟವಾಡ ತೊಡಗಿದರು. ಎಲ್ಲ, ಕಾಲ ಬರುವವರೆಗೆ ನಾವು ಒಂದಾಗಿರಲಿಲ್ಲವೆಂದು ತೋರುತ್ತದೆ. ಈಗ ಕೆಲವೇ ತಿಂಗಳುಗಳೊಳಗೆ ನಾವು ಪರಸ್ಪರ ಅರಿತುಕೊಂಡಿದ್ದೇವೆ ಮತ್ತು ಒಂದು ಅಲ್ಪಸಂಖ್ಯಾತ ಸಮಿತಿ ವರದಿ ಮಂಡಿಸಲು ಸಮರ್ಥರಿದ್ದೇವೆ. ಅದೂ ಒಂದು ಸಮ್ಮತಿಸಲಾದ ವರದಿ ಹಾಗೂ ಇವರೆಲ್ಲ ಅಲ್ಪಸಂಖ್ಯಾತ ಸಮುದಾಯಗಳಿಂದ ಬಂದ ಬಹಳಷ್ಟು ಸದಸ್ಯರು. ಇದೇ ಆ ದಿನಗಳಲ್ಲಿ ನಮ್ಮ ಸ್ವಾತಂತ್ರ್ಯದ ಪ್ರಶ್ನೆಯನ್ನು ಬದಿಗಿಡಲು ಅವರು ಮನವಿ ಮಾಡಿದಾಗ ನಮ್ಮ ಗೆಳೆಯರ ಪ್ರಾಮಾಣಿಕತೆಯ ಪೊಳ್ಳುತನ ತೋರಿಸುವುದಿಲ್ಲವೆ? ಆದರೆ ಏನೇ ಇರಲಿ ನಾನು ಹಿಂದಿನ ದಿನಗಳಿಗೆ ಹೋಗುವುದಿಲ್ಲ. ಈಗ, ರಾಮ್ಸೆ ಮೆಕ್‌ಡೊನಾಲ್ಡ್‌ರವರಿಂದ ೧೫ ವರ್ಷಗಳ ಹಿಂದೆ ಆದ ತಪ್ಪನ್ನೆ ಮಾಡದಿರಲು ನಾವು ಇಂದು ಸಮರ್ಥರಿದ್ದೇವೆ ಎಂದು ಸಂತೋಷ ಪಡುತ್ತೇನೆ. ಇಂದಿನ ವಿನಾಶಕ್ಕೆ ಆತನೇ ಜವಾಬ್ದಾರ. ಆತ ಈ ದೇಶದಲ್ಲಿನ ಪ್ರಾಣ ಮತ್ತು ಆಸ್ತಿ ಪಾಸ್ತಿಗಳ ಹಾನಿಗೆ ಜವಾಬ್ದಾರ. ನನಗೇನಾದರೂ ಅಧಿಕಾರವಿದ್ದಿದ್ದರೆ ಈ ಪ್ರಶ್ನೆಗಳಿಗೆ ಉತ್ತರಿಸಲು ನಾನು ಆತನನ್ನು ಕರೆಯುತ್ತಿದ್ದೆ. ಅನೈಕ್ಯದ ಬೀಜವನ್ನು ಮತ್ತು ಸುಮಾರು ೧೫ ವರ್ಷಗಳ ಹಿಂದೆ ಕೋಮುವಾದಿ ಅವಾರ್ಡ್ ಕೊಡುವ ಮೂಲಕ ವಿನಾಶದ ಬೀಜವನ್ನೂ ಆತನೇ ಬಿತ್ತಿದುದಾಗಿದೆ.

ಈಗ ಮಾನ್ಯರೆ, ಇದು ಒಂದು ಶುಭದಿನ. ಎಲ್ಲ ಅಲ್ಪಸಂಖ್ಯಾತರು ಒಟ್ಟಾಗಿದ್ದಾರೆ ಮತ್ತು ಯಾವುದೇ ವ್ಯಕ್ತಿ ಅಥವಾ ಒಂದು ನಿರ್ದಿಷ್ಟ ಸಮುದಾಯಕ್ಕಿಂತ ದೇಶದ ಕಲ್ಯಾಣ ತುಂಬ ಮುಖ್ಯ ಎಂದು ಅರ್ಥಮಾಡಿಕೊಳ್ಳಲು ಸಮರ್ಥರಾಗಿದ್ದಾರೆ.

ಈಗ ನಾನು ಮೀಸಲಿರಿಸದ ಸ್ಥಾನಗಳಿಗೂ ಎಲ್ಲ ಅಲ್ಪಸಂಖ್ಯಾತರು ಸ್ಪರ್ಧಿಸಲು ಅವಕಾಶ ಮಾಡುವಲ್ಲಿ ಸಮರ್ಥರಾದ ಸರ್ದಾರ್‌ರನ್ನು ವಿಶೇಷವಾಗಿ ಅಭಿನಂದಿಸುತ್ತೇನೆ. ಸರ್ದಾರರನ್ನು ಇನ್ನೂ ಅಭಿನಂದಿಸಲಿರುವ ಮಹತ್ತ್ವದ ಸಂಗತಿ ಎಂದರೆ ಅವರು ಅಗತ್ಯವಿದ್ದ ಕಡೆಯೆಲ್ಲ ಬಗ್ಗದೆ ಸೆಟೆದು ನಿಂತುದೇ ಆಗಿದೆ. ಎಲ್ಲೆಲ್ಲಿ ಹಾಗಿರಲೇಬೇಕಿತ್ತೋ ಅಲ್ಲೆಲ್ಲ ಬಿಗಿಯಾಗಿ ಕುಳಿತದ್ದು ಅವರ ಮುತ್ಸದ್ದಿತನ. ಕೆಲವು ಬೇಡಿಕೆಗಳನ್ನು ವಿಶೇಷವಾಗಿ ಮತಗಳ ಶೇಕಡಾವಾರು ಇಂಥದನ್ನು ಅವರು ಅಂಗೀಕರಿಸಿಲ್ಲ. ಮುತ್ಸದ್ದಿತನದ ಗುಣಗಳು ಔದಾರ್ಯ ಬಯಸುತ್ತವೆ. ಅದು ಎಲ್ಲಿ ಔದಾರ್ಯ ತೋರಬೇಕೋ ಅಷ್ಟೆ ಮತ್ತು ಎಲ್ಲಿ ಅಗತ್ಯವೋ ಅಲ್ಲಿ ಬಾಗಬಾರದಷ್ಟೆ.

೧೯೩೫ರ ಅಧಿನಿಯಮ ತಿಳಿವಳಿಕೆಯ ಪತ್ರದಡಿ ಕ್ಯಾಬಿನೆಟ್‌ಗಳಲ್ಲಿ ಸೇರ್ಪಡೆಗೆ ಒಂದು ನಿಬಂಧನೆ ಇದೆ. ಆದರೆ ಕ್ಯಾಬಿನೆಟ್‌ನಲ್ಲಿ ಸೇರಿಸಲು ಒಂದು ಅಲ್ಪಸಂಖ್ಯಾತ ಸಮುದಾಯ ಸದಸ್ಯನಿಗೆ ಒಂದು ಭರವಸೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಹಾಗೂ ಒಂದು ಶಾಸನಬದ್ಧ ಸೌಲಭ್ಯ ಇದ್ದಿದ್ದರೆ ಇನ್ನೂ ಹೆಚ್ಚು ತೃಪ್ತಿಕರವಿರುತ್ತಿತ್ತು. ಉದಾಹರಣೆಗೆ, ನಾನು ನನ್ನದೇ ಪ್ರಾಂತ್ಯವನ್ನು ಉಲ್ಲೇಖಿಸುತ್ತೇನೆ. ಅದು ೨೧೫ ಸದಸ್ಯರ ಒಂದು ಪ್ರಾಂತ್ಯ. ಅಲ್ಲಿ ಸುಮಾರು ೩೦ ಹರಿಜನರಿದ್ದಾರೆ. ಅವರು ಶಾಸಕಾಂಗದ ಏಳನೆಯ ಒಂದರಷ್ಟು. ಒಟ್ಟು ೪೯ ಮಿಲಿಯದಲ್ಲಿ ೮ ಮಿಲಿಯದಷ್ಟು ಇದ್ದಾರೆ. ಅವರು ಜನಸಂಖ್ಯೆಯ ಐದನೆಯ ಒಂದರಷ್ಟು, ಶಾಸಕಾಂಗದ ಏಳನೆಯ ಒಂದರಷ್ಟು ರೂಪಿಸುತ್ತಾರೆ. ಆದರೆ ಈ ಕ್ಯಾಬಿನೆಟ್‌ನಲ್ಲಿ ಅವರ ಪಾಲೆಷ್ಟು? ಸದಸ್ಯರ ಬಲಕ್ಕನುಗುಣವಾಗಿ ಅವರು ಎರಡು ಇರಬೇಕಾಗಿತ್ತು. ಏಕೆಂದರೆ, ಅವರು ಏಳನೆಯ ಒಂದರಷ್ಟು ಮತ್ತು ಇಡೀ ಕ್ಯಾಬಿನೆಟ್ ೧೪ ಅಥವಾ ೧೩ ಇದ್ದಾಗ ಅದು ಎರಡು ಇರಬೇಕಿತ್ತು. ಆದರೆ ಪ್ರಶ್ನೆ ಮುಂದೆ ಬಂದಾಗ ಅವರು ಒಂದು ಹರಿಜನ ಹುದ್ದೆಯನ್ನು ರದ್ದುಮಾಡಿರುವರು. ಅವರು ಅದನ್ನು ೧೩ ಮಾಡಿರುವರು ಮತ್ತು ಒಂದು ಕೊಡಲಿಲ್ಲ. ಹರಿಜನರು ಮಂತ್ರಿಗಳನ್ನು ಚುನಾಯಿಸಲು ಹೋಗುವುದಿಲ್ಲ. ಅದರ ಆಯ್ಕೆ ಪ್ರಧಾನಿಗೆ ಬಿಟ್ಟದ್ದಾಗಿದೆ ಎಂದು ನಾನು ಹೇಳುತ್ತೇನೆ. ಪಾಲು ಶಾಸನಬದ್ಧವಾಗಿ ಮೀಸಲಿರಬೇಕು. ನಾವು ಪ್ರಧಾನಿಗಳ ಸಂಪೂರ್ಣ ಅಧೀನರಾಗಿರಬೇಕಿಲ್ಲ. ಪ್ರಧಾನಿಗಳು ಅವರ ಆಯ್ಕೆಗನುಗುಣವಾಗಿ ಸಚಿವರನ್ನು ಆಯ್ಕೆ ಮಾಡಲಿ, ಅವರು

ನಮಗೆ ದೊಡ್ಡ ಕೃಪೆ ತೋರಿರುವರೆಂದು ನಾವೇಕೆ ಆಲೋಚಿಸಬೇಕು? ಅದು ನಮ್ಮ ಪಾಲು. ನಾವೇನೂ ಯಾವುದೇ ಅನುದಾನಗಳನ್ನು ಕೇಳುತ್ತಿಲ್ಲ. ಆದುದರಿಂದ ಸ್ವಾಮಿ, ಇದು ಹೀಗೆ ಅನ್ಯಾಯ ಮಾಡಲಾಗುತ್ತದೆ. ನಾವು ತೆರೆದ ಕಣ್ಣುಗಳಿಂದ ನೋಡುತ್ತೇವೆ ಮತ್ತು ಆದುದರಿಂದ, ಸಂಪುಟದಲ್ಲಿ ಅವರ ಸ್ಥಾನಕ್ಕೆ ಸಂಬಂಧಿಸಿದಂತೆ ಈ ಅಲ್ಪಸಂಖ್ಯಾತರಿಗೆ ಒಂದು ಭರವಸೆ ಕೊಡುವುದಾದರೆ ಉತ್ತಮ.

ಈಗ ಅಲ್ಪಸಂಖ್ಯಾತರನ್ನು ಪ್ರಧಾನಿಯಾಗಿ ಮಾಡಲು ಸಾಧ್ಯವಿಲ್ಲ. ಏಕೆಂದರೆ ಪ್ರಧಾನಿಗಳು ಬಹುಸಂಖ್ಯಾತ ಪಕ್ಷದ ವಿಶ್ವಾಸವನ್ನು ಗಳಿಸುವುದನ್ನು ನಿರೀಕ್ಷಿಸಲಾಗುತ್ತದೆ. ಆದುದರಿಂದ ಪ್ರಧಾನಿ ಪಟ್ಟಕ್ಕೆ ಆವರ್ತವನ್ನು ಅನ್ವಯಿಸಬೇಕೆಂದು ನಿರೀಕ್ಷಿಸುವುದು ಉತ್ತಮವಲ್ಲ ಆದರೆ ಹಲವು ಸಮುದಾಯಗಳಿಂದ ಆವರ್ತಾನುಸಾರ ಪ್ರಾಂತ್ಯದ ರಾಜ್ಯಪಾಲರುಗಳನ್ನಾಗಿ ಆಯ್ಕೆ ಮಾಡಲು ಪ್ರತಿ ಅವಕಾಶ, ಸಾಧ್ಯತೆ ಮತ್ತು ಸಂಭವ ಇರುತ್ತವೆ. ವರದಿಯಲ್ಲಿ ಇದನ್ನು ಸೇರಿಸಿದ್ದಿದ್ದರೆ ಇದು ಸುಲಭವಿರುತ್ತಿತ್ತು.

ಚಕ್ರಾಧಿಪತ್ಯದ ಪ್ರಧಾನಿಯಾಗಿ ಒಬ್ಬ ಅಲ್ಪಸಂಖ್ಯಾತ ಸಮುದಾಯದವರನ್ನು ಮಾಡಲು ಆಯ್ಕೆ ಸಾಧ್ಯವಿಲ್ಲ ನಿಜ. ಆದರೆ ಅದೇ ಕಾಲಕ್ಕೆ, ಸುಲಭವೆಂದರೆ, ಉದಾಹರಣೆಗೆ, ಹನ್ನೆರಡು ಆವರ್ತಗಳಲ್ಲಿ ಆರು ಸಾಮಾನ್ಯ ಸಮುದಾಯಕ್ಕೂ ಮೂರುಸಲ ಅನುಸೂಚಿತ ಜಾತಿಗಳಿಗೂ, ಎರಡುಸಲ ಮುಸ್ಲಿಮರಿಗೂ ಮತ್ತು ಒಂದು ಇತರ ಸಣ್ಣ ಅಲ್ಪಸಂಖ್ಯಾತರಿಗೂ ಹೋಗುತ್ತದೆ ಮತ್ತು ೧೨ರ ಆವರ್ತದ ಪೈಕಿ ಒಂದು ಚಕ್ರಾಧಿಪತ್ಯದ ರಾಷ್ಟ್ರಪತಿಸ್ಥಾನದ, ರಾಜ್ಯಪಾಲಸ್ಥಾನದ, ಉಪರಾಜ್ಯಪಾಲ ಸ್ಥಾನದ, ಉಪರಾಷ್ಟ್ರಪತಿ ಸ್ಥಾನದ ಪಾಲು ಆಗಿರುತ್ತದೆ. ಇದು ಸಾಧ್ಯವಾಗಿದ್ದರೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಬಹುಸಂಖ್ಯಾತರು ಅಲ್ಪಸಂಖ್ಯಾತರ ಪರವಾಗಿ ಇದ್ದಾರೆ ಮತ್ತು ಅಲ್ಪಸಂಖ್ಯಾತರತ್ತ ಪ್ರಾಮಾಣಿಕವಾಗಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗುತ್ತಿತ್ತು, ಸೇವೆಗಳ ವಿಷಯವಾಗಿ ಬಹಳ ಈಚೆಗೆ ಚಕ್ರಾಧಿಪತ್ಯ ಸರ್ಕಾರ ತನ್ನ ನೀತಿಯೊಂದಿಗೆ ಹೊರ ಬಂದಿರುವುದು ನನಗೆ ಸಂತೋಷ ಉಂಟುಮಾಡಿದೆ. ಅದಕ್ಕೂ ಸಹ ನಾನು ಚಕ್ರಾಧಿಪತ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ ಅದು ಕೆಲವು ಸಮುದಾಯಗಳಿಗೆ ನ್ಯಾಯವನ್ನು ಉಂಟುಮಾಡಿದೆ ಮತ್ತು ನ್ಯಾಯಕ್ಕೂ ಮಿಗಿಲಾಗಿ ವಿಶೇಷವಾಗಿ ಕ್ರೈಸ್ತ ಸಮುದಾಯ ಇಲ್ಲವೇ ಅಂತಹ ಕೆಲ ಸಮುದಾಯಕ್ಕೆ ನೀಡಿದೆ. ಅಲ್ಲಿ ಅದು ತೃಪ್ತಿಕರವಾಗಿದೆ. ವರದಿಯಲ್ಲಿ ಅದನ್ನು ಒದಗಿಸಿದ್ದಿದ್ದರೆ ಉತ್ತಮವಿರುತ್ತಿತ್ತು. ಉದಾಹರಣೆಗೆ, ಒಂದು ನಿರ್ದಿಷ್ಟ ಸಮುದಾಯ ತನ್ನ ಜನಸಂಖ್ಯೆಗನುಗುಣವಾಗಿ ತನ್ನ ಪಾಲು ಹೊಂದಿರುತ್ತದೆ. ನಾನು ಪೀಟರ್‌ದನ್ನು ದೋಚಿ ಪಾಲ್‌ಗೆ ಕೊಡ ಬಯಸುವುದಿಲ್ಲ. ಅದು ಒಂದು ಬಹು ಕೆಟ್ಟ ನೀತಿ, ನಾನು ನನ್ನ ಪಾಲು ಬಯಸುತ್ತೇನೆ; ನಾನು ಏನೂ ತಿಳಿಯದವನಾದರೂ, ಹೆಡ್ಡ ಮೂಗನಾದರೂ, ನನ್ನ ಹಕ್ಕು ಸ್ಥಾಪಿಸಲು ಬಯಸುತ್ತೇನೆ. ತಾವು ನಾನು ಮೂಗನಾಗಿರುವುದರ ಲಾಭ ಪಡೆದುಕೊಳ್ಳಬೇಡಿ. ನಾನು ಅಮಾಯಕನಾಗಿರುವುದರ ಅನುಕೂಲ ಪಡೆದುಕೊಳ್ಳಬೇಡಿ. ನಾನು ನನ್ನ ಪಾಲಷ್ಟೆ ಬಯಸುತ್ತೇನೆ ಮತ್ತು ನಾನು ಯಾವುದೇ ಹೆಚ್ಚು ಬಯಸುವುದಿಲ್ಲ. ಇತರರಂತೆ ನಾನು ಹೆಚ್ಚಿನ ಸೌಲಭ್ಯ ಅಥವಾ ಒಂದು ಪ್ರತ್ಯೇಕ ರಾಜ್ಯ ಬಯಸುವುದಿಲ್ಲ. ಒಂದು ಪ್ರತ್ಯೇಕ ರಾಜ್ಯಕ್ಕೆ ನಮಗಿಂತ ಇನ್ನಾರು ಒಂದು ಉತ್ತಮ ಹಕ್ಕು ಹೊಂದಿಲ್ಲ. ನಾವು ಈ ದೇಶದ ಆದಿವಾಸಿಗಳು.

ಮಾನ್ಯರೆ, ಸೇವೆಗಳಿಗೆ ಸಂಬಂಧಿಸಿದಂತೆ, ನಾನು ಸಾಮ್ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ವರದಿಯಲ್ಲಿ ಉಪಬಂಧಿಸಿದ್ದರೆ ಚೆನ್ನಾಗಿರುತ್ತಿತ್ತು. ಅದರಂತೆ ಪ್ರಾಂತ್ಯಗಳು ಕೂಡ ನಕಲು ಮಾಡಬಹುದಿತ್ತು. ಈಗಲೂ ಸಾಮ್ರಾಜ್ಯ ಸರ್ಕಾರಕ್ಕೆ ಪ್ರಾಂತೀಯ ಸರ್ಕಾರಗಳಿಗೆ ಅದನ್ನು ನಕಲು ಮಾಡಲು ಸೂಚನೆಗಳು ಕೊಡಲು ಕಷ್ಟವೇನಿಲ್ಲ. ಈಗ, ಜನಸಂಖ್ಯೆ ಕುರಿತಂತೆ, ಮಾನ್ಯರೆ, ೧೯೩೧ರ ಜನಗಣತಿಯಂತೆ ನಾವು ಸುಮಾರು ಏಳು ಕೋಟಿಗಳಷ್ಟು ಇದ್ದೆವು. ಶೇಕಡಾ ೧೪ರಷ್ಟು ಸರಾಸರಿ ಏರಿಕೆ ಇರುವುದು ನಾವು ನೋಡಿದ್ದೇವೆ. ಬಡತನ ಜನಸಂಖ್ಯೆಯನ್ನು ಬೆಳಸುತ್ತದೆ, ನಮ್ಮ ಅಲ್ಪಸಂಖ್ಯಾತರು ಶೇಕಡ ಒಂದಕ್ಕಿಂತ ಕಡಿಮೆ ಇಲ್ಲದಂತೆ ಹೆಚ್ಚಿರಬಹುದು.

ಇದು ಮ್ಯಾಲಥೂಸ್ ಕೊಟ್ಟಿರುವ ಸಿದ್ಧಾಂತ; ನಾನು ಹೇಳುತ್ತಿಲ್ಲ. ಏಕೆಂದರೆ ಒಬ್ಬ ಸಿರಿವಂತ ಜೀವನದ ವಿಭಿನ್ನ ಮಟ್ಟ ಹೊಂದಿರುತ್ತಾನೆ ಮತ್ತು ಅವನು ಯಾವುದೇ ಸ್ಥಾನವನ್ನು ಪಡೆದಾಗ ಅಥವಾ ಯಾವುದೇ ಅಧಿಕಾರ ಅಥವಾ ಆಸ್ತಿ ಗಳಿಸಿದಾಗಷ್ಟೆ ಮದುವೆಯಾಗಬಯಸುತ್ತಾನೆ. ಅದೇ ನೀವು ಬಡವನ ಮನೆಗೆ ಹೋದರೆ, ಓಡಾಡಿಕೊಂಡಿರುವ ಹಲವು ಮಕ್ಕಳನ್ನು ನೋಡುವಿರಿ. ನೀವು ಸಿರಿವಂತನ ಮನೆಗೆ ಹೋದರೆ, ಅವನು ತನಗೆ ಮಕ್ಕಳನ್ನು ಕೊಡು ಎಂದು ದೇವರಲ್ಲಿ ಪ್ರಾರ್ಥಿಸುತ್ತಿರುತ್ತಾನೆ. ಬಡತನ ಜನಸಂಖ್ಯೆಯನ್ನು ಪೋಷಿಸುತ್ತದೆ ಎಂದು ಮ್ಯಾಲಥೂಸ್ ಹೇಳಿರುವಲ್ಲಿ ಆಶ್ಚರ್ಯವಿಲ್ಲ. ೧೯೩೧ರಲ್ಲಿ ನಾವು ಆರು ಕೋಟಿಗಳಿಗಿಂತ ಹೆಚ್ಚು ಇದ್ದರೆ ೧೯೪೧ರಲ್ಲಿ ನಾವು ಹೇಗೆ ಐದೂವರೆ ಕೋಟಿಗಳಿಗೆ ಇಳಿಯಲು ಆಗುತ್ತದೆ? ಇದರ ಹಿಂದೆ ಏನೋ ಒಂದಿದೆ. ವಿಶೇಷವಾಗಿ ಬಿಹಾರ ಮತ್ತು ಪಂಜಾಬ್‌ಗಳಲ್ಲಿ–ಕ್ಷಮಿಸಿ ಬಂಗಾಳದಲ್ಲಿ ಯಾರಿಂದಲೋ ಏನೋ ಕಿಡಿಗೇಡಿತನ ನಡೆದಿದೆ. ಅಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ವಿವಾದವಿತ್ತು. ಈ ಇಬ್ಬರೂ ಬಡ ಹಾಗೂ ಅಮಾಯಕ ಹರಿಜನರ ಮೇಲೆ ಬೀಳುವುದೆ ಕ್ಷೇಮವೆಂದು ಆಲೋಚಿಸಿದರು ಮತ್ತು ಈ ಜನ ಪರಿವರ್ತಿತರಾದರು ಇಲ್ಲವೆ ನಮ್ಮ ಜನ ಹಿಂದೂಗಳಾಗಿ ಉಳಿದು, ಹಿಂದೂ ಜನಸಂಖ್ಯೆಗೆ ಸೇರ್ಪಡೆಯಾದರು. ಏಳಕ್ಕೆ ಏರುವ ಬದಲು, ನಾವು ಐದೂವರೆ ಕೋಟಿಗಳಿಗಿಳಿದೆವು. ಆದುದರಿಂದ, ನಾನು ಹರಿಜನರಿಗೆ ಸ್ಥಾನಗಳನ್ನು ಕೊಡುವಲ್ಲಿ ತಾವು ೧೯೩೧ರ ಜನಗಣತಿಯನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ. ಆ ಜನಗಣತಿ ಹರಿಜನರಿಂದ ತಯಾರಾದುದಲ್ಲ. ಅದನ್ನು ಸರ್ಕಾರ ಸಿದ್ಧಪಡಿಸಿತ್ತು. ಮತ್ತು ನಾವು ಅದರಲ್ಲಿ ಕೈಹಾಕಿರಲಿಲ್ಲ. ಯಾವುದೇ ತಪ್ಪು ಮಾಡಬಹುದಾದ ಒಬ್ಬ ಹರಿಜನನೂ ಅಲ್ಲಿರಲಿಲ್ಲ. ಅದೂ ಅಲ್ಲದೆ ಅದು ಒಂದು ಸರ್ಕಾರಿ ದಾಖಲೆ; ತಾವೇ ತಿಳಿದಂತೆ ಜನಸಂಖ್ಯೆಯಲ್ಲಿ ಒಂದು ಸಾಮಾನ್ಯ ಏರಿಕೆ ಇರುತ್ತದೆ. ತಾವು ನಮಗೆ ಸರಾಸರಿ ಪ್ರಾತಿನಿಧ್ಯ ಕೊಡಿ! ನಾನು ಯಾವುದೇ ವಿಶೇಷ ಸೌಲಭ್ಯ ಬಯಸುವುದಿಲ್ಲ. ಜನಗಣತಿಗನುಗುಣವಾಗಿ ದಯವಿಟ್ಟು ಲೆಕ್ಕಹಾಕಿ. ನನಗೆ ಅಂಜಿಕೆಯಾಗಿದೆ. ಏಕೆಂದರೆ ಭವಿಷ್ಯದಲ್ಲಿ ಪ್ರಾತಿನಿಧ್ಯ ಜನಸಂಖ್ಯೆ ಆಧರಿಸಿಯೆ ಇರುತ್ತದೆ. ಅದೇ ಸ್ಥಿತಿಯಾದಲ್ಲಿ ಕಾಲ ಸರಿದಂತೆ, ಇನ್ನು ೧೦ ವರ್ಷಗಳಲ್ಲಿ ಎರಡು ಕೋಟಿಗಳಷ್ಟು ಕಡಿಮೆಯಾಗಿರುತ್ತದೆ; ಈ ದರದಲ್ಲಿ ಬಿಡಹೋದಲ್ಲಿ, ಹತ್ತು ಅಥವಾ ಇಪ್ಪತ್ತು ವರ್ಷಗಳಲ್ಲಿ ನಿಜ ಅರ್ಥದಲ್ಲಿ ಹರಿಜನರು ಅಂದರೆ ಒಬ್ಬ ಹರಿಜನನೂ ಇರುವುದೇ ಇಲ್ಲ ಎಂಬ ಭಯ ನನ್ನದು. ಬಾಂಬೆಯ ಗೌರವಾನ್ವಿತ ಮುಖ್ಯಮಂತ್ರಿ ಹೇಳುವಂತೆ, ನಾನು ಅವನಿಗಿಂತ ಉತ್ತಮವಿಲ್ಲದಿದ್ದರೂ ಸಹ, ಅವನಷ್ಟೆ ಇದ್ದರೂ ಚಿಂತೆಯಿಲ್ಲ, ನನಗೆ ಒಂದು ಸ್ಥಾನ ಸಿಕ್ಕರೆ ಸಾಕು. ಇದನ್ನು ಸಂವಿಧಾನಕ್ಕೆ ಬಿಡುತ್ತೇನೆ. ಈ ಸಮುದಾಯದ ವಿಷಯವನ್ನು ಎಷ್ಟು ತ್ವರಿತವಾಗಿ ನೀವು ಕೈಗೆತ್ತಿಕೊಳ್ಳುತ್ತೀರೋ ಕಾದು ನೋಡಬೇಕು.

ಒಟ್ಟಾರೆ ಈ ವರದಿ ಅಭಿನಂದನೀಯ ಸರ್ದಾರ್ ಪಟೇಲ್‌ರಷ್ಟೆ ಅಲ್ಲ, ಅವರೊಂದಿಗೆ ಸಹಕರಿಸಿದ ಸರ್ವಸಮ್ಮತ ವರದಿ ತರುವಲ್ಲಿ ಸಮರ್ಥರಾದ ಸಲಹಾ ಸಮಿತಿಯ ಪ್ರತಿಯೊಬ್ಬ ಸದಸ್ಯರಿಗೂ ಅಭಿನಂದನೆ ಸಲ್ಲುತ್ತದೆ. ಮಾನ್ಯರೆ, ನಾನು ಈ ವರದಿಯನ್ನು ಈ ಸದನ ಪರಿಗಣಿಸಲು ಶಿಫಾರಸು ಮಾಡುತ್ತೇನೆ.

**ಡಾ. ಎಚ್.ಸಿ. ಮುಖರ್ಜಿ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಆರಂಭದಲ್ಲಿ ನಾನು ಹೇಳುವುದಿಷ್ಟೆ. ಒಂದು ದೇಶದ ಮಹತ್ತ್ವ ಆ ದೇಶದಲ್ಲಿನ ಒಂದು ನಿರ್ದಿಷ್ಟ ಸಮೂಹದ ಹಿರಿಮೆ ಅಥವಾ ಆರ್ಥಿಕ ಅಥವಾ ರಾಜಕೀಯ ಪ್ರಾಮುಖ್ಯದಿಂದ ಹೆಚ್ಚುತ್ತದೆ ಎಂಬುದರಲ್ಲಿ ನಂಬಿಕೆ ಇಟ್ಟವರಲ್ಲಿ ನಾನೊಬ್ಬನಲ್ಲ. ಇನ್ನೊಂದೆಡೆ, ನಾನು ಯಾವಾಗಲೂ ರಾಷ್ಟ್ರೀಯ ಹಿತಾಸಕ್ತಿ ಸಮೂಹ ಹಿತಾಸಕ್ತಿಗಳಿಗಿಂತ ಪ್ರತಿಪಾದಿಸುವುದನ್ನು. ಅದೇ ಕಾಲಕ್ಕೆ ಅಲ್ಪಸಂಖ್ಯಾತರ ಉಪಸಮಿತಿಗೆ ಅಧ್ಯಕ್ಷನಾಗಿ ನನ್ನ ಅನುಭವ, ಶಾಂತಿಗಾಗಿ, ನಮ್ಮ ದೇಶದ ಭವಿಷ್ಯದ ಪ್ರಗತಿಗಾಗಿ ಅಲ್ಪಸಂಖ್ಯಾತರ ಆಶಯಗಳನ್ನು ಪೂರೈಸಲು ಪ್ರತಿಯೊಂದು ಪ್ರಯತ್ನವನ್ನೂ ಮಾಡುವ ಆವಶ್ಯಕತೆ ಇದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದೆ. ಸ್ವತಃ ನಾನೇ ಒಂದು ಅಲ್ಪಸಂಖ್ಯಾತ

ಸಮುದಾಯದ ಒಬ್ಬ ಸದಸ್ಯ. ನಾನು ಯಾವ ಸಮುದಾಯದ ಒಬ್ಬ ಸದಸ್ಯನಾಗಿದ್ದೇನೆಯೋ ಆ ಬಗ್ಗೆ ನನಗೆ ಹೆಮ್ಮೆ ಇದೆ. ನಾನು ಎಲ್ಲ ವಿಶೇಷ ಸವಲತ್ತುಗಳನ್ನು ಬಿಟ್ಟುಬಿಡಲು ನಿರ್ಧರಿಸಿದ್ದೇನೆ. ಮೊಟ್ಟಮೊದಲಿಗೆ ಸದಸ್ಯರಾಗಿರುವ ಮತ್ತು ಇಂದು ಇಲ್ಲಿ ಹಾಜರಿರುವ ನನ್ನ ಸಮುದಾಯದ ಸಹೋದ್ಯೋಗಿಗಳಿಗೆ ವಂದನೆ ಸಲ್ಲಿಸಬೇಕು. ಇದರೊಂದಿಗೆ ಹಲವು ಸಮೂಹಗಳು ಬಹುಸಂಖ್ಯಾತರ ಅಪನಂಬಿಕೆ ಹೊಂದಿರುವುದು ಅರಿವಾಯಿತು. ಹಾಗೂ ವೈಯಕ್ತಿಕವಾಗಿ ಹೇಳುವುದಾದರೆ, ಅವರಲ್ಲಿ ಬಹುಪಾಲು ಅಪನಂಬಿಕೆ ಹೊಂದಿರುವುದನ್ನು ಮನಗಂಡೆ ನಾನು ಅವರನ್ನು ಒಂದಷ್ಟು ಮಟ್ಟಿಗೆ ಬಹುಸಂಖ್ಯಾತರಲ್ಲಿ ನಂಬಿಕೆ ಇರುವಂತೆ ಒತ್ತಾಯಿಸಿದ್ದೇನೆ ಮತ್ತು ಅವರನ್ನು ಪುನಃ ಪುನಃ ಒತ್ತಾಯಿಸುತ್ತಿದ್ದೇನೆ. ಅವರು ರಕ್ಷಣೆ ಬಯಸಿದರೆ, ಆ ರಕ್ಷಣೆಯನ್ನು ಬಹುಸಂಖ್ಯಾತ ಸಮುದಾಯದಲ್ಲಿ ವಿಶ್ವಾಸವಿಡುವುದಾದರೆ ರಕ್ಷಣೆ ಒದಗಿಸಬಹುದು. ಆದರೆ ಅವಿಶ್ವಾಸ ತೆಗೆದುಹಾಕುವವರೆಗೂ, ಅವರ ಬಯಕೆಗಳನ್ನೀಡೇರಿಸಲು ಏನಾದರೂ ಮಾಡಬೇಕಾಗುತ್ತದೆ ಎನಿಸುತ್ತದೆ. ಇಲ್ಲೇ ನಾನು ಶ್ರೀ ಮುನ್ಷಿಯವರನ್ನು ಶ್ಲಾಘಿಸಬೇಕು. ಅವರು ಅಲ್ಪಸಂಖ್ಯಾತರ ಉಪಸಮಿತಿಯಲ್ಲಿ, ಅವರ ಕನಿಷ್ಠ ಬೇಡಿಕೆಗಳನ್ನು ಕಂಡುಕೊಳ್ಳುವ ಸಲುವಾಗಿ, ಬಳಿಕ ಅವರ ಕುರಿತಾಗಿ ಅಲ್ಪಸಂಖ್ಯಾತರ ಸಮಿತಿಯ ಗಮನ ಸೆಳೆಯಲು ಒತ್ತಾಯಿಸಿ ಹಾಗೂ ಸಲಹಾ ಸಮಿತಿಗೆ ಅವನ್ನೊಯ್ಯಲು ಒಂದು ಗುಂಪಿನಿಂದ ಇನ್ನೊಂದು ಗುಂಪಿಗೆ ಸಾಕಷ್ಟು ಓಡಾಡಿದರು. ನಮ್ಮ ಬಗ್ಗೆ ಸರ್ದಾರ್ ಪಟೇಲ್ ಅವರು ತೋರಿದ ಶುಭೇಚ್ಛೆ ಮತ್ತು ಔದಾರ್ಯಕ್ಕೆ ನಾನು ಸಾಕ್ಷಿಯಾಗಿರಬೇಕು. ಆದುದರಿಂದ ನಾನು ಸಲಹಾ ಸಮಿತಿಯ ಆವಿಷ್ಕರಣವನ್ನು ಸದನಕ್ಕೆ ಶಿಫಾರಸು ಮಾಡುತ್ತೇನೆ. ಅದೇ ಸಮಯಕ್ಕೆ ವೈಯಕ್ತಿಕವಾಗಿ ಹೇಳುವಲ್ಲಿ ನಾನು ಇನ್ನೊಮ್ಮೆ ಬಹುಸಂಖ್ಯಾತರ ವಿಶ್ವಾಸಕ್ಕಾಗಿ ನಿಶ್ಚಿತ ಅಭಿಪ್ರಾಯ ಉಳ್ಳವನಾಗಿದ್ದೇನೆ ಎಂದು ಸ್ಪಷ್ಟ ಪಡಿಸಬೇಕು. ಹಾಗೂ ನಮ್ಮ ಪೈಕಿ ಕೆಲವರು ಯಾರು ತೀವ್ರಗಾಮಿ ನೀತಿಗೆ ಬದ್ಧರೋ ಅವರು ಸರ್ದಾರ್ ಪಟೇಲ್‌ರ ವಿರುದ್ಧ ಒಂದು ವಿಧದ ಬೇಗುದಿ ಹೊಂದಿದ್ದಾರೆ, ಏಕೆಂದರೆ ಅವರು ನಮ್ಮ ಚಿಂತನೆಗಳನ್ನು ಒಯ್ಯಲು ನಮಗೆ ಸ್ವಾತಂತ್ರ್ಯ ನೀಡಲಿಲ್ಲ ಎಂದು ಭಾವಿಸಿದ್ದೇನೆ. ಬಹುಸಂಖ್ಯಾತ ಸದಸ್ಯರನೇಕರಿಂದ ನಾವು ಸೋಲಿಗೊಳಗಾಗಿದ್ದೇವೆ ಎಂದೂ ನಾನು ಹೇಳಬೇಕು.

**ಮಾನ್ಯ ಸಭಾಧ್ಯಕ್ಷರು** : ಈ ಪ್ರಸ್ತಾವ ಕುರಿತಂತೆ ನಾವು ಸುದೀರ್ಘ ಚರ್ಚೆ ಮಾಡಿದ್ದೇವೆ. ಇನ್ನು ಮಾತನಾಡುವವರು ನಿಲ್ಲಿಸಬೇಕೆಂದು ನಾನು ಆಶಿಸದಿದ್ದರೂ ಇನ್ನು ಹತ್ತು ನಿಮಿಷಗಳಲ್ಲಿ ಚರ್ಚೆ ಮುಗಿಸಬೇಕೆಂದು ನಿರೀಕ್ಷಿಸುತ್ತೇನೆ. ಮಾತನಾಡಲು ಇನ್ನೂ ಇಬ್ಬರೋ ಮೂವರೋ ಇದ್ದಾರೆ. ಒಬ್ಬೊಬ್ಬರೂ ಮೂರು ನಿಮಿಷಗಳಿಗೆ ತಮ್ಮ ಭಾಷಣಗಳನ್ನು ಸೀಮಿತಗೊಳಿಸಬೇಕೆಂದು ಕೋರುತ್ತೇನೆ, ಶ್ರೀ ಸಿಧ್ವಾ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ ಮತ್ತು ಬೇರಾರ್ : ಜನರಲ್) : ಮಾನ್ಯರೆ, ನಾನು ಸದನದ ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ. ನನ್ನ ಬಾಲ್ಯದಿಂದಲೂ ನಾನು ಜಾತಿ ಅಥವಾ ಮತ ಯಾವುದೇ ಭೇದಭಾವವಿಲ್ಲದೆ ಮಾನವಕುಲದ ಸೇವೆ ಮಾಡುವುದು ಒಂದು ಪವಿತ್ರ ಧಾರ್ಮಿಕ ಕರ್ತವ್ಯ ಎಂದು ನಂಬಿದವ. ನಾನು ಈ ಗುರಿಯನ್ನು ಗಮನದಲ್ಲಿರಿಸಿ, ಯಾವಾಗಲೂ ನನ್ನ ಸಮುದಾಯಕ್ಕೆ ಆ ದೃಷ್ಟಿಯನ್ನು ಮೈಗೂಡಿಸಿಕೊಳ್ಳಲು ಮತ್ತು ಅದರ ಪರವಾಗಿರಲು ವಾದಿಸಿದ್ದೇನೆ. ನನ್ನ ಸಮುದಾಯ ಈ ಎಲ್ಲ ಕಾಲವೂ ನನ್ನ ಸಮುದಾಯದ ಒಂದು ಭಾಗದ ವಿರೋಧದ ನಡುವೆಯೂ ಪ್ರತ್ಯೇಕ ಮತದಾರರ ಸಮುದಾಯವನ್ನಾಗಲೀ ಇಲ್ಲವೆ ಶಾಸನಸಭೆ ಅಥವಾ ಸೇವೆಗಳಲ್ಲಿ ವಿಶೇಷ ಪ್ರಾತಿನಿಧ್ಯಕ್ಕಾಗಲಿ ಸೂಚನೆ ಮಾಡಿರುವುದಿಲ್ಲ ಎಂದು ಹೇಳಲು ನಾನು ಹೆಮ್ಮೆ ಪಡುತ್ತೇನೆ. ಇನ್ನೂ ಹೆಮ್ಮೆ ಪಡುವ ವಿಷಯವೆಂದರೆ, ನಾವು ಯಾವುದೇ ವಿಶೇಷ ಪ್ರಾತಿನಿಧ್ಯಕ್ಕಾಗಲಿ ವಾದಿಸದೆ, ಜಂಟಿಮತದಾರರ ಸಮುದಾಯದ ಮತ್ತು ಶಾಸನಸಭೆಗಳಲ್ಲಿ ಸ್ಥಾನಗಳ ಮೀಸಲಾತಿಗೆ ಹೊರತಾದ ವಿಷಯ ಕುರಿತಂತೆ ನಾವೆಲ್ಲ ಸಂತೋಷವಾಗಿದ್ದೇವೆ ಎಂದು ತಿಳಿಸಲು ಹರ್ಷಿಸುತ್ತೇನೆ. ಸರ್ದಾರ್ ಪಟೇಲರು, ನಾವುಗಳು ರಾಜಕೀಯ, ಶಿಕ್ಷಣ, ಸಾಮಾಜಿಕ ಮತ್ತು ಜೀವನದ ಎಲ್ಲ ನಡೆಗಳಲ್ಲಿ ಪಾಲ್ಗೊಂಡಿದ್ದೇವೆ ಮತ್ತು

ನಾವು ನಮ್ಮ ದೃಷ್ಟಿಕೋನವನ್ನು ಬಹುಸಂಖ್ಯಾತರಿಗೆ ಕಂಡಿಸಿದ್ದೇವೆ, ಬಹುಸಂಖ್ಯಾತರ ನಡುವೆ ಇದು ಸಾರ್ವಜನಿಕ ಜೀವನದ ಎಲ್ಲ ವಲಯಗಳಲ್ಲೂ ವಾಸ್ತವವಾಗಿ ಪಾಲುಗೊಳ್ಳುತ್ತಿರುವ ಒಂದು ಸಮುದಾಯವನ್ನು ಉಪೇಕ್ಷಿಸಲಾಗದು ಎಂದು ಅವರೇ ತಿಳಿದು ಭಾವಿಸುವ ರೀತಿಯಲ್ಲಿ ವರ್ತಿಸಿದ್ದೇವೆ ಎಂದು ಸರಿಯಾಗಿಯೇ ಹೇಳಿದ್ದಾರೆ.

ಮಾನ್ಯರೆ, ಅಲ್ಪಸಂಖ್ಯಾತರ ಉಪಸಮಿತಿಯಲ್ಲಿ, ನನ್ನ ಮಿತ್ರ ಮತ್ತು ಸಹೋದ್ಯೋಗಿ ಸರ್ ಹೋಮಿ ಮೋದಿಯವರು ಶಾಸಕಾಂಗದಲ್ಲಿ ವಿಶೇಷ ಪ್ರಾತಿನಿಧ್ಯದ ಪರವಾಗಿದ್ದರು ಮತ್ತು ನಾನು ಅದರ ವಿರುದ್ಧ ಬಲವಾಗಿ ವಾದಿಸಿದೆ. ಆದರೆ ಸುಮಾರು ೨೨ಕ್ಕೆದುರಾಗಿ ನಾನು ಮೂರು ಮತಗಳನ್ನು ಮಾತ್ರ ಪಡೆದೆ. ಸದಸ್ಯರು ನಾನು ಸರಿ ಇಲ್ಲ ಎಂಬ ಕಾರಣಕ್ಕಲ್ಲ. ಆದರೆ ಅವರು ನಾನು ತರ್ಕಸಮ್ಮತ ದೃಷ್ಟಿಕೋನ ಮತ್ತು ಹೆಚ್ಚು ಉನ್ನತ ದೃಷ್ಟಿಕೋನ ಹೊಂದಿದ್ದೇನೆ ಎಂದು ಭಾವಿಸಿದ್ದರು. ನಾನು ಹೇಳುತ್ತೇನೆ. ಮುಂದಿನ ದಿನ ನಾನು ಸರ್ ಹೋಮಿ ಮೋದಿ ಅವರನ್ನು ಸಂಪರ್ಕಿಸದಿದ್ದರೂ ಅವರು ನಾನು ಹಿಂದಿನ ದಿನ ಏನು ಹೇಳಿದ್ದೆನೋ ಅದು ಸರಿ, ಖಚಿತವಾಗಿ ಸರಿ ಎಂದು ಗ್ರಹಿಸಿ ಸ್ವತಃ ತಾವೇ ಮರುದಿನ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡರು; ಮತ್ತು ತಾವು ಪಾರಸಿ ಸಮುದಾಯದವರಾಗಿ ಯಾವುದೇ ವಿಶೇಷ ಪ್ರಾತಿನಿಧ್ಯ ಕೇಳುವುದಿಲ್ಲ; ಏಕೆಂದರೆ ಹಾಗೆ ಮಾಡಿದಲ್ಲಿ, ತಮ್ಮ ಸಮುದಾಯಕ್ಕೆ ಹಾನಿಕರ ಎಂದು ಹೇಳಿದರು. ಈ ದೃಷ್ಟಿಕೋನದಿಂದ, ತಾವು, ಸರ್ದಾರ್ ಪಟೇಲ್‌ರು ಹೇಳಿದಂತೆ ನಮ್ಮ ನಡುವೆಯೇ ನಾವು ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬುದನ್ನು ನೋಡಬಹುದು. ನಾನು ಸರ್ ಹೋಮಿ ಮೋದಿಯವರನ್ನು ಖಾಸಗಿಯಾಗಿ ಇಲ್ಲವೇ ಮುಕ್ತವಾಗಿ ಸಂಪರ್ಕಿಸದೇ ಅವರು ತಮ್ಮ ದೃಷ್ಟಿಯನ್ನು ಬದಲಾಯಿಸಿಕೊಳ್ಳಬೇಕಾಯಿತು. ನಾನಾದರೂ ಇತರ ಸಮುದಾಯಗಳಿಗೆ ಮನದಟ್ಟು ಮಾಡುವುದೆಂದರೆ ಅವರು ನಿಜವಾಗಿ ತಮ್ಮ ಅಭಿಪ್ರಾಯಗಳನ್ನು ಈಗಿನಿಂದ ಬಹುಸಂಖ್ಯಾತರ ಅಭಿಪ್ರಾಯಗಳೊಂದಿಗೆ ವಿಲೀನಗೊಳಿಸಿದಲ್ಲಿ, ನಾನು ಅವರಿಗೆ ಭರವಸೆ ಕೊಡುತ್ತೇನೆ, ಅವರಿಗೆ ಕೊಡಲಾಗಿರುವ ಹತ್ತು ವರ್ಷಗಳ ಅವಧಿಯಲ್ಲಿ ಅವರು ಯಾವುದೇ ಬೇಗುದಿಗೆ ಒಳಗಾಗುವುದಿಲ್ಲ ಮತ್ತು ಬಹುಸಂಖ್ಯಾತರ ವಿರುದ್ಧ ಸಲ್ಲಿಸಲು ಯಾವ ದೂರು ಇರುವುದಿಲ್ಲ. ತಮ್ಮಲ್ಲಿಯೇ ಹೊಂದಾಣಿಕೆಗೆ ಅಲ್ಪಸಂಖ್ಯಾತರ ಪರವಾಗಿ ಬೇಕಾಗಿರುವುದು ಹೃದಯವಷ್ಟೆ. ನನ್ನ ಅಭಿಪ್ರಾಯವೆಂದರೆ, ಅವರಿಗೆ ಕೊಡಲಾಗಿರುವ ಹತ್ತು ವರ್ಷಗಳು ಸಾಕಷ್ಟು ದೀರ್ಘ ಎಂದು; ಆ ಅವಧಿಯಲ್ಲಿ ಸಣ್ಣ ಅಲ್ಪಸಂಖ್ಯಾತರನ್ನು, ತಮ್ಮಲ್ಲೆ ಹೊಂದಾಣಿಕೆ ಮಾಡಿಕೊಳ್ಳಿರೆಂದು ನಾನು ಮನವಿ ಮಾಡುತ್ತೇನೆ. ಹಾಗಾಗಿ ಹತ್ತು ವರ್ಷಗಳ ಕೊನೆಯಲ್ಲಿ ಅವರು ಬಹುಸಂಖ್ಯಾತರ ಬಳಿ ಹೋಗಿ 'ಇದು ಕೊಡಿ ಅಥವಾ ಅದು ಕೊಡಿ' ಎಂದು ಕೇಳಲು ಹೋಗಬೇಕಾಗುವುದಿಲ್ಲ. ಪ್ರತಿಯಾಗಿ ನಾವು ಇದಕ್ಕೆ ಅರ್ಹರೆಂದು ಬೇಡಿಕೆ ಇಡಬೇಕು. ಅವರು ಇದನ್ನು ನಮ್ಮ ಸಮುದಾಯ ಮಾಡುತ್ತಿರುವಂತೆ ನಡೆಸಬೇಕು.

ಈ ಮಾತುಗಳೊಂದಿಗೆ ನಾನು ಸಮಿತಿಯನ್ನು ಅವರು ತೋರಿರುವ ಔದಾರ್ಯಕ್ಕೆ ಅಭಿನಂದಿಸುತ್ತೇನೆ; ಕೆಲವರು ಅಲ್ಪಸಂಖ್ಯಾತರು ಅವರು ಏನು ಪಡೆದುಕೊಂಡಿರುವರೊ ಅದಕ್ಕೆ ಭಾಜನರಲ್ಲ. ನಾನು ಬಹುಸಂಖ್ಯಾತ ಸಮುದಾಯದವರಿಗೆ ಅವರು ಏನು ಮಾಡಿರುವರೋ ಅದಕ್ಕಾಗಿ ಗೌರವ ನೀಡುತ್ತೇನೆ. ನಾನು ಹಲವು ವಿಷಯಗಳನ್ನು ವಿರೋಧಿಸುತ್ತಿದ್ದೆ; ಸಮಿತಿಯಲ್ಲಿ ನಾನು ಬಹುಮತ ಹೊಂದಿರಲಿಲ್ಲ. ಆದರೆ ಇಷ್ಟು ದಿನ ಅವರು ಅಲ್ಪಸಂಖ್ಯಾತರಿಗೆ ಅವಕಾಶ ಮಾಡಲು ಹೊಂದಿದ್ದ ಶ್ರೇಷ್ಠ ಮತ್ತು ಉದಾತ್ತ ಹೃದಯದಿಂದ ನಾನು ಪ್ರಭಾವಿತನಾಗಿದ್ದೇನೆ.

ಮಾನ್ಯರೆ, ನಾನು ಬಯಸುವುದಿಷ್ಟೆ 'ಅಲ್ಪಸಂಖ್ಯಾತರು' ಎಂಬ ಪದಸಮುಚ್ಚಯ ಇತಿಹಾಸದಿಂದ ಅಳಿಸಿಹೋಗಬೇಕು. ಅವರಿಗೆ ನೀಡಿರುವ ಹತ್ತು ವರ್ಷಗಳು ಸಾಕಷ್ಟು ಸುದೀರ್ಘ ಅವಧಿಯಾಗಿದೆ ಮತ್ತು ಹತ್ತು ವರ್ಷಗಳಿಗೆ ನಾವು ಅತ್ಯಂತ ಅಲ್ಪ ಅವಧಿಯಲ್ಲಿ ಸಂಧಿಸಿದಾಗ ಈ ಅಲ್ಪಸಂಖ್ಯಾತರು ಬಂದು 'ನಾವು ಸಂತೋಷವಾಗಿದ್ದೇವೆ. ನಮಗೆ ಬೇರಾವುದೂ ಇನ್ನೇನೂ ಬೇಡ' ಎಂದು ಹೇಳುವರು ನಾನು ಆಶಿಸುತ್ತೇನೆ.

**ಶ್ರೀ ಜೈಪಾಲ್ ಸಿಂಗ್** (ಬಿಹಾರ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಸಲಹಾ ಸಮಿತಿಯ ಒಬ್ಬ ಸದಸ್ಯ, ಹಾಗಾಗಿ ನಾನು ನನ್ನನ್ನು ಸೇರಿ ಸಹೋದ್ಯೋಗಿಗಳನ್ನು ಅಭಿನಂದಿಸಲು ನಾನು ಇಚ್ಛಿಸುವುದಿಲ್ಲ. ಆದರೆ ನಾನು ಅಲ್ಪಸಂಖ್ಯಾತರ ಉಪಸಮಿತಿಯ ಶಿಫಾರಸ್ಸುಗಳಿಂದ ಬಾಧಿತರಾಗಿರುವ ಕಾರಣ ಭಾರತದ ಆದಿವಾಸಿಗಳ ಪರವಾಗಿ ಕೆಲವು ಮಾತುಗಳು ಹೇಳಲು ಬಂದಿರುತ್ತೇನೆ. ನಮ್ಮ ಸಂಖ್ಯೆಗಳ ಹೋಲಿಕೆಯೊಂದಿಗೆ, ಆಂಗ್ಲೋ ಇಂಡಿಯನ್ನರು ಮತ್ತು ಪಾರಸಿಗಳಂತಹ ಅತ್ಯಂತ ಸೂಕ್ಷ್ಮ ಅಲ್ಪಸಂಖ್ಯಾತ ಸಮೂಹಗಳನ್ನು ಅವರ ಯಶಸ್ಸಿಗಾಗಿ ಗೌರವಿಸುತ್ತೇನೆ. ಆಂಗ್ಲೋ ಇಂಡಿಯನ್ನರ ವಿಷಯಕ್ಕೆ ಬಂದರೆ, ಅವರು ಖಂಡಿತವಾಗಿ ತಮ್ಮ ಪಾಲಿನ ಸಿಹಿಗಳಿಂತ ಹೆಚ್ಚಾಗಿಯೆ ಸ್ವೀಕರಿಸಿದ್ದಾರೆ. ನಾನು ಅದಕ್ಕಾಗಿ ವಿರೋಧಿಸುವುದಿಲ್ಲ; ಅವರು ಅದನ್ನು ಹೊಂದಲಿ. ಭವಿಷ್ಯದಲ್ಲಿ ಅವರಿಗೆ ಒಳ್ಳೆ ಅದೃಷ್ಟವಿರಲಿ. ನಮ್ಮ ನಿಲುವು ಸಾಪೇಕ್ಷವಾಗಿ ಅಲ್ಪಸಂಖ್ಯಾತರಾಗಿರುವ ಹಿನ್ನೆಲೆಯ ಮೇಲಲ್ಲವೇ ಅಲ್ಲ. ನಮ್ಮ ಸ್ಥಾನ ನಾವು ಹಿಂದೂಗಳಿಗಿಂತ ಅಥವಾ ಮುಸ್ಲಿಮರಿಗಿಂತ ಕಡಿಮೆ ಇದೆ. ಪಾರಸಿಗಳಿಗಿಂತ ಹೆಚ್ಚು ಇದ್ದೇವೆ. ಇಂಥವುಗಳೊಂದಿಗೆ ಏನೂ ಮಾಡುವಂಥದಿಲ್ಲ. ನಮ್ಮ ನಿಲುವು ಎಂದರೆ ನಮ್ಮ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟಗಳಲ್ಲಿ ಭಾರಿ ಅಸಮತೆ ಇದೆ ಎಂಬುದು ಮತ್ತು ಯಾವುದಾದರೂ ಶಾಸನಬದ್ಧ ಪ್ರಚೋದನೆಯಿಂದ ಸಾಮಾನ್ಯ ಜನಸಂಖ್ಯಾ ಮಟ್ಟಕ್ಕೆ ನಾವು ಬರಬಹುದೆಂದಷ್ಟೆ. ನಾನು ಆದಿವಾಸಿಗಳನ್ನು ಒಂದು ಅಲ್ಪಸಂಖ್ಯಾತ ಪಂಗಡ ಎಂದು ಪರಿಗಣಿಸುವುದಿಲ್ಲ. ನಾನು ಯಾವಾಗಲೂ ಈ ದೇಶದ ಮೂಲ ಮಾಲೀಕರೆನ್ನಲಾದ ಒಂದು ಜನಸಮೂಹವನ್ನೂ ಅವರು ಕೇವಲ ಕೆಲವರೇ ಇದ್ದರೂ ಬಹುಸಂಖ್ಯಾತರೆಂದು ಪರಿಗಣಿಸಲಾಗುವುದಿಲ್ಲ ಎಂಬುದನ್ನು ಎತ್ತಿಹಿಡಿದಿದ್ದೇನೆ. ಅವರು ಯಾವೊಂದನ್ನು ನಿರಾಕರಿಸಲಾಗದ ಕಟ್ಟಳೆ ಮಾಡುವ ಹಕ್ಕುಗಳನ್ನು ಹೊಂದಿದ್ದಾರೆ. ನಾವು ಹೇಗೇ ಇರಲಿ ಆ ಕಟ್ಟಳೆ ಮಾಡುವ ಹಕ್ಕುಗಳನ್ನು ಕೇಳುತ್ತಿಲ್ಲ, ನಾವು ಇತರ ಯಾರೇ ಇರಲಿ ಅವರನ್ನು ಉಪಚರಿಸುವಂತೆ ನಮ್ಮನ್ನು ಉಪಚರಿಸಿ ಎಂದು ಬಯಸುತ್ತೇವೆ. ಈ ಹಿಂದೆ, ನಮ್ಮನ್ನು ಪ್ರತ್ಯೇಕಿಸಿ ಒಂದು ಮೃಗಾಲಯದಲ್ಲಿರಿಸುವಂತೆ ಇರಿಸಲಾಗಿತ್ತು. ಪ್ರಮುಖ ರಾಜಕೀಯ ಪಕ್ಷಗಳು, ಬ್ರಿಟಿಷ್ ಸರ್ಕಾರ ಮತ್ತು ಪ್ರತಿಯೊಬ್ಬ ಪ್ರಬೋಧಿತ ಭಾರತೀಯನಿಂದಲೆ ಎಂಬ ಒತ್ತಡವಿಲ್ಲ. ವಂದನೆಗಳು. ನಮ್ಮ ಈಗಿನ ದೃಷ್ಟಿಕೋನವೆಂದರೆ, ನೀವು ನಮ್ಮೊಂದಿಗೆ ಬೆರೆಯಲೇಬೇಕು ನಾವು ನಿಮ್ಮೊಂದಿಗೆ ಬೆರೆಯಲು ಇಚ್ಛಿಸುತ್ತೇವೆ. ಶಾಸನಸಭೆಯಲ್ಲಿ ಸ್ಥಾನಗಳ ಮೀಸಲಾತಿಗೆ ನಾವು ಒತ್ತಿ ಹೇಳಿದ್ದೇವೆ. ನಾವು ಕೇಳಿಲ್ಲ ಮತ್ತು ಹಾಗೆ ನೋಡಿದರೆ ನಾವು ಎಂದೂ ಪ್ರತ್ಯೇಕ ಮತದಾರರ ಸಮುದಾಯ ಹೊಂದಿಯೇ ಇಲ್ಲ; ಕೇವಲ ಆದಿವಾಸಿಗಳ ಒಂದು ಸಣ್ಣ ಪಾಲು, ಅದರ ಭಾಗ ಹಲವು ಧಾರ್ಮಿಕ ಪಂಗಡಗಳಿಗೆ ಮತ್ತು ನಿರ್ದಿಷ್ಟವಾಗಿ ಪಶ್ಚಿಮದ ಕ್ರೈಸ್ತ ಧರ್ಮಗಳಿಗೆ ಪರಿವರ್ತನೆಗೊಳಿಸಲಾಯಿತು. ಅದು ಪ್ರತ್ಯೇಕ ಮತದಾರರ ಸಮುದಾಯ ಹೊಂದಿತ್ತು. ಆದರೆ ವ್ಯಾಪಕ ಬಹುಮತ, ಎಲ್ಲೆಲ್ಲಿ ಮತದಾನದ ಹಕ್ಕು ಕೊಡಲಾಗಿತ್ತೋ ಅದು ಸಾಮಾನ್ಯ ಮತದಾರರ ಸಮುದಾಯವಾಗಿದ್ದು ಸ್ಥಾನಗಳ ಮೀಸಲಾತಿಯೊಂದಿಗಿತ್ತು. ಆದಿವಾಸಿಗಳಿಗೆ ಸಂಬಂಧಿಸಿದಂತೆ, ಏನೂ ಬದಲಾವಣೆ ಇಲ್ಲ. ಆದರೆ ಸಂಖ್ಯಾ ದೃಷ್ಟಿಯಿಂದ ಒಂದು ಬಹುದೊಡ್ಡ ಬದಲಾವಣೆ ಇದೆ. ೧೯೩೫ರ ಅಧಿನಿಯಮದ ಅಡಿ, ಭಾರತದಲ್ಲಿ ಶಾಸನಸಭೆಗಳ ಪೂರಾ ಒಟ್ಟಾರೆ ೧೫೮೫ರ ಪೈಕಿ ಕೇವಲ ೨೪ ಆದಿವಾಸಿ ಶಾಸಕರು ಪ್ರಾಂತೀಯ ಶಾಸನಸಭೆಗಳಿಗೆ ಸಂಬಂಧಿಸಿದಂತೆ ಇದ್ದರು. ಕೇಂದ್ರದಲ್ಲಿ ಒಬ್ಬ ಪ್ರತಿನಿಧಿಯೂ ಇರಲಿಲ್ಲ. ಈಗ ಒಂದು ಲಕ್ಷ ಜನಸಂಖ್ಯೆಗೆ ಒಬ್ಬ ಸದಸ್ಯನಂತೆ ವಯಸ್ಕರಮತದಾನ ಪದ್ಧತಿಯಲ್ಲಿ ದೊಡ್ಡ ಉತ್ಕರ್ಷೆಯನ್ನು ತಾವು ಕಾಣಬಹುದು. ಅದು ಆ ಅಂಕಿಗಿಂತ ಹತ್ತರಷ್ಟು, ನಾನು ಭಾರತೀಯ ಭಾರತ ಕುರಿತು ಮಾತನಾಡಿದಾಗ ನಾನು ರಾಜಾಡಳಿತ ಭಾರತಕ್ಕೂ ನನ್ನ ಮನವಿ ಮಾಡುತ್ತೇನೆ ಕೂಡ. ರಾಜಾಡಳಿತ ಭಾರತದಲ್ಲಿ ಎಲ್ಲಿಯೂ ಆದಿವಾಸಿಗಳ ಯಾವುದೇ ಪ್ರಾತಿನಿಧ್ಯ ಕಂಡುಬರಲಿಲ್ಲ. ಭಾರತೀಯ ಭಾರತದ ಚೇತನ ಅಲ್ಲಿ ಒಳಹೊಕ್ಕು ವ್ಯಾಪಿಸುತ್ತದೆ ಎಂದು ಆಶಿಸುತ್ತೇನೆ.

**ಶ್ರೀ ಎಂ.ಎಸ್. ಅನೆ** (ಡೆಕ್ಕನ್ ರಾಜ್ಯಗಳು) : ಈಗ ಭಾರತೀಯೇತರ ಭಾರತ ಇಲ್ಲ.

**ಶ್ರೀ ಜೈಪಾಲ್ ಸಿಂಗ್** : ಶ್ರೀ ಅನೆ ಅವರಿಗೆ ನಾನು ವಿವರಿಸಿ ಹೇಳುತ್ತೇನೆ. 'ಬ್ರಿಟಿಷ್ ಇಂಡಿಯಾ' ಬದಲಿಗೆ ನಾನು ಅದನ್ನು 'ಭಾರತೀಯ ಭಾರತ' ಎಂದು ಕರೆದು ಹೊಸ ಪದವೃಂದವನ್ನು ಮತ್ತು ರಾಜ್ಯಗಳಿಗೆ ರಾಜಾಡಳಿತ (ಪ್ರಿನ್ಸ್ಲಿ) ಭಾರತ ಎಂದು ಪದ ಉಪಯೋಗಿಸುತ್ತಿದ್ದೆ. ಅವರು ಇಷ್ಟ ಪಟ್ಟರೆ ಇನ್ನಾವುದಾದರೂ ರಾಜಾಡಳಿತಕ್ಕೆ ಉಪಯೋಗಿಸಬಹುದು. ಆದರೆ ಭಾರತೀಯ ಭಾರತ ಎಂಬುದಕ್ಕೆ ನಾನು ಅರ್ಥೈಸುವುದು ಒಳಪಡದ ಭಾರತ ಎಂದು. ಭಾರತೀಯ ಸಮಾಜದ ಅತ್ಯಂತ ಹಿಂದುಳಿದ ಭಾಗಕ್ಕೆ ಒಂದು ಒತ್ತು ಕೊಡಲು ಪ್ರಯತ್ನಿಸುವ ಈ ಭಾವನೆ ಭಾರತೀಯ ರಾಜ್ಯಗಳ ಒಳಹೊಕ್ಕು ವ್ಯಾಪಿಸುತ್ತದೆ ಕೂಡ ಎಂದು ನಾನು ಆಶಿಸುತ್ತೇನೆ.

ಮಾನ್ಯರೆ, ನೇಮಕಾತಿಯಲ್ಲಿ ಮೀಸಲಾತಿಯ ಬಗ್ಗೆ ನನ್ನ ಗೆಳೆಯರು ಕೃತಜ್ಞತೆಯ ಮಾತುಗಳನ್ನು ಸಾಕಷ್ಟು ಆಡಿದ್ದಾರೆ. ಕೆಲದಿನಗಳ ಹಿಂದೆಯಷ್ಟೆ ಭಾರತ ಸರ್ಕಾರ ಅನುಸೂಚಿತ ಜಾತಿಗಳು ಒಂದು ಜಾಗ ಪಡೆಯುವಲ್ಲಿ ಒಂದು ನಿಶ್ಚಿತ ನೀತಿ ಅನುಸರಿಸಲಾಗುತ್ತದೆ ಎಂದು ಘೋಷಿಸಿದೆ. ತುಂಬ ಅಗತ್ಯವಿರುವ, ಅತ್ಯಂತ ಅರ್ಹರಿರುವ ಆದಿವಾಸಿಗಳ ಸಮೂಹವನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದಾಗಿದ್ದು ಈ ಬಗ್ಗೆ ನಾನು ತುಂಬ ವಿಷಾದಿಸುತ್ತೇನೆ, ನಾನು ಇಲ್ಲಿ ಏನು ಹೇಳುತ್ತೇನೆಯೋ ಅದು ಭಾರತ ಸರ್ಕಾರವನ್ನು ತಲಪುತ್ತದೆ ಮತ್ತು ಅವರು ಈ ನಿರ್ದಿಷ್ಟ ಅಂಶಕ್ಕೆ ತುಸು ಗಮನ ಹರಿಸುವರೆಂದು ನಾನು ಆಶಿಸುತ್ತೇನೆ ನಾವು ಯಾವುದೇ ಅಸಮ ನಿಬಂಧನೆಗಳ ಮೇಲೆ ಮೀಸಲಾತಿ ಬಯಸುವುದಿಲ್ಲ ನೇಮಕಾತಿ ಅಗತ್ಯವಾದ ಮಟ್ಟಕ್ಕೆ ನಾವು ಬರುವವರೆಗೆ ನಮ್ಮನ್ನು ಏನೇ ಆಗಲಿ ಈ ಸನ್ನಿವೇಶದಿಂದ ಹೊರಗಿಡಬಾರದು ಎಂದು ಇಚ್ಛಿಸುತ್ತೇವೆ.

ಆದಿವಾಸಿಗಳ ವಿಷಯ ಕುರಿತಂತೆ ಹೇಳುವುದು ಬಹಳಷ್ಟಿದೆ. ಆದರೆ ಈ ಸಭೆಯ ಮುಂದೆ ಎರಡು ಬುಡಕಟ್ಟು ಉಪಸಮಿತಿಗಳ ವರದಿಗಳು ಬಂದಾಗ ಸದನವು ಆ ವಿಶಿಷ್ಟ ಸಮಸ್ಯೆ ಬಗೆಗೆ ಚರ್ಚಿಸಲು ಅವಕಾಶ ಹೊಂದಿರುತ್ತದೆ; ನಾನು ಈಗ ಹೆಚ್ಚು ಹೇಳಹೋಗುವುದಿಲ್ಲ. ಆದರೆ ಅಲ್ಪಸಂಖ್ಯಾತರ ವಿಷಯದಲ್ಲಿ ಸಲಹಾ ಸಮಿತಿಯ ಶಿಫಾರಸುಗಳು ಸಭೆಯ ಸೌಹಾರ್ದಯುತ ಪರಿಶೀಲನೆ ಪಡೆಯುವಂತೆ ಶಿಫಾರಸು ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ಚರ್ಚೆಯನ್ನು ಈಗ ಮುಗಿಸಬಹುದೆಂದು ತಿಳಿಯುತ್ತೇನೆ. ಸದನವು ಅನ್ಯಥಾ ಬಯಸದಿದ್ದರೆ ನಾವು ಈ ಅಂಶ ಕುರಿತು ಸಾಕಷ್ಟು ಚರ್ಚೆ ಮಾಡಿದ್ದೇವೆ ಎನ್ನಬೇಕು. ಖಂಡಗಳನ್ನು ಕುರಿತು ಚರ್ಚಿಸುವಾಗ ಸದಸ್ಯರು ಇನ್ನೊಂದು ಅವಕಾಶ ಪಡೆಯುವರು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ಸಲಹಾ ಸಮಿತಿಯ ಪರವಾಗಿ ಅಲ್ಪಸಂಖ್ಯಾತರ ಸಮಿತಿಯ ಎಲ್ಲ ಸದಸ್ಯರಿಗೂ, ಸಲಹಾಸಮಿತಿಯ ಎಲ್ಲ ಸದಸ್ಯರಿಗೂ, ಬಹುತೇಕ ಸರ್ವಾನುಮತ ವರದಿಯನ್ನು ಹೊರತರುವಲ್ಲಿ ನೆರವಾಗಿ ಸಹಕರಿಸಿದುದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ವರದಿಯು ತುಂಬ ವಿವಾದಾತ್ಮಕವಾಗುವುದೆಂದು ನಿರೀಕ್ಷಿಸಲಾಗಿತ್ತು ಮತ್ತು ವರದಿ ಸದನದ ಸದಸ್ಯರು ಈ ಸದನದಲ್ಲಿ ಮಾಡಿದ ಭಾಷಣಗಳಿಂದ ಸಾಕ್ಷ್ಯ ದೊರೆತಿರುವಂತೆ ಸಾಮಾನ್ಯ ತೃಪ್ತಿಯನ್ನು ನೀಡಿದೆ. ಆದುದರಿಂದ ನಾನು ವರದಿಯನ್ನು ಆಂಗ್ಲೋ ಇಂಡಿಯನ್ನರಿಗೆ ಸಂಬಂಧಿಸಿದ ಅದರ ಅಡಕದೊಂದಿಗೆ ಮುಂದಿಡುತ್ತೇನೆ. ಈ ಬಗ್ಗೆ ನನ್ನ ಹಿಂದಿನ ಟೀಕೆಗಳಲ್ಲಿ ನಮೂದು ಕೂಡ ಮಾಡಿದ್ದು ಪರಿಗಣನೆಗೆ ತೆಗೆದುಕೊಳ್ಳಬೇಕಿದೆ. ಬಳಿಕ ನಾವು ಖಂಡದಿಂದ ಖಂಡಕ್ಕೆ ಮುಂದೆ ಸಾಗಬಹುದು.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ವರದಿಯನ್ನು (ಆಂಗ್ಲೋ ಇಂಡಿಯನ್ನರಿಗೆ ಸಂಬಂಧಿಸಿದ ಅದರ ಅಡಕದೊಂದಿಗೆ) ಪರಿಗಣನೆಗೆ ತೆಗೆದುಕೊಳ್ಳಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ವರದಿಗೆ ಅನುಬಂಧದಲ್ಲಿರುವ ಆಂಗ್ಲೋ ಇಂಡಿಯನ್ನರಿಗೆ ಸಂಬಂಧಿಸಿದ ಅಂಶಗಳನ್ನು ನಾವು ಈಗ ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮೊದಲನೆಯ ವಿಷಯ ಮತದಾರರ ಸಮುದಾಯಗಳಿಗೆ ಸಂಬಂಧಿಸಿದೆ. ಅದು ಹೀಗಿದೆ:

"ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಎಲ್ಲ ಚುನಾವಣೆಗಳನ್ನು ಜಂಟಿಮತದಾರರ ಸಮುದಾಯಗಳ ಆಧಾರದ ಮೇಲೆ ನಡೆಸಲಾಗುತ್ತದೆ"

ಈ ಅಂಶದ ಮೇಲೆ ಸದನವು ಸರ್ವಾನುಮತ ಹೊಂದಿದೆ ಎಂದು ತಿಳಿಯುತ್ತೇನೆ. ಆದುದರಿಂದ ಮಾನ್ಯರೆ, ನಾನು ಯಾವುದೇ ಭಾಷಣ ಮಾಡಲು ಉದ್ದೇಶಿಸಿಲ್ಲ. ಮಾನ್ಯರೆ, ನಾನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇದಕ್ಕೇನಾದರೂ ತಿದ್ದುಪಡಿ ಇದೆಯೆ?

**ಬಿ. ಪಾಕರ್ ಸಾಹಿಬ್ ಬಹದೂರ್** : ಮಾನ್ಯ ಸಭಾಧ್ಯಕ್ಷರೆ, ಈ ಪ್ರಸ್ತಾವವನ್ನು ಗೌರವಾನ್ವಿತರು ಯಾವ ಹುರುಪಿನಲ್ಲಿ ಮಂಡಿಸಿದರೋ ಅದಕ್ಕಾಗಿ ನಾನು ಆ ಗೌರವಾನ್ವಿತರನ್ನು ಅಭಿನಂದಿಸಲೇಬೇಕು ಮತ್ತು ಸದಸ್ಯರನ್ನು ಹಿಂದಿನದನ್ನು ಮರೆತು ಸ್ನೇಹದ ಹರುಪಿನಲ್ಲಿ ಚರ್ಚೆಯನ್ನು ನಡೆಸಲು ಸದನಕ್ಕೆ ಮನವಿ ಮಾಡಿದುದಕ್ಕಾಗಿ ನಾನು ಆ ಹುರುಪನ್ನು ತುಂಬ ಸ್ವಾಗತಿಸಬೇಕು. ಗೌರವಾನ್ವಿತರು ಮಂಡಿಸಿದವರ ಆಶಯಗಳಿಗೆ ನಿಶ್ಚಿತವಾಗಿ ಬದ್ಧವಾಗಿ ತಾವು ಬಲ್ಲಿರಿ, ನಾವು ತುಂಬ ಸಂಕಷ್ಟ ಸಮಯದಲ್ಲಿದ್ದೇವೆ. ಇಲ್ಲಿ ಹೇಳಲಾದ ಪ್ರತಿಯೊಂದು ಮಾತೂ ಎರಡೂ ರೀತಿ ಪರಿಣಾಮ ಬೀರಬಹುದು. ಗೆಳೆತನದ ಸಂಬಂಧವನ್ನು ಬಲ ಪಡಿಸಬಹುದು ಇಲ್ಲವೇ ಜನರ ನಡುವೆ ವೈಮನಸ್ಯ ಸೃಷ್ಟಿಸಬಹುದು. ಆದುದರಿಂದ, ಮಾನ್ಯರೆ, ನಾನು ನನ್ನ ತಿದ್ದುಪಡಿಗಳನ್ನು ಪ್ರಸ್ತಾವಿಸಬೇಕಾದಾಗ ಗೌರವಾನ್ವಿತ ಮಂಡನೆಕಾರರಿಂದ ಮತ್ತು ಸಮಿತಿಯ ಶಿಫಾರಸುಗಳಿಂದ ನಾನು ಭಿನ್ನವಾಗಬೇಕಾಗಬಹುದು ಎಂಬುದು ನನ್ನ ಮನಸ್ಸಿನಲ್ಲಿದೆ. ಈ ಹೇಳಿಕೆಗಳೊಂದಿಗೆ, ಕಾರ್ಯಸೂಚಿಯಲ್ಲಿರುವ ನನ್ನ ಮೊದಲ ತಿದ್ದುಪಡಿಯನ್ನು ಪ್ರಸ್ತಾವಿಸುತ್ತೇನೆ. ನನ್ನ ತಿದ್ದುಪಡಿ ಈ ಕೆಳಗಿನಂತಿದೆ:

"ಅಲ್ಪಸಂಖ್ಯಾತರು, ಮೂಲಭೂತ ಹಕ್ಕುಗಳು ಇತ್ಯಾದಿ ಮೇಲಿನ ಸಲಹಾ ಸಮಿತಿಯ ವರದಿ ಪರಿಗಣನೆ ಮಾಡುವಲ್ಲಿ, ಅಲ್ಪಸಂಖ್ಯಾತರ ಹಕ್ಕುಗಳು ಕುರಿತಂತೆ, ಈ ಸಂವಿಧಾನ ರಚನಾಸಭೆಯ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಎಲ್ಲ ಚುನಾವಣೆಗಳಿಗೂ, ಮುಸ್ಲಿಮರಿಗೂ ಸಂಬಂಧಿಸಿದಂತೆ, ಪ್ರತ್ಯೇಕ ಮತದಾರರ ಸಮುದಾಯ ಆಧಾರದ ಮೇಲೆ ನಡೆಸತಕ್ಕದ್ದು ಎಂದು ನಿರ್ಧರಿಸಿದೆ."

ಈ ಪ್ರಸ್ತಾವವನ್ನು ಮಾಡುವಲ್ಲಿ, ನನ್ನಿಂದ ವಿಭಿನ್ನವಾಗಿಯೇ ಆಲೋಚಿಸಿಸುವ ಬಹು ಪ್ರಬಲ ವಿಭಾಗವೊಂದಿದೆ ಎಂದು ಬಲ್ಲೆ. ಅವರು ಪ್ರತ್ಯೇಕ ಮತದಾರರ ಸಮುದಾಯ ಅನಪೇಕ್ಷಣೀಯ ಎಂದು ಭಾವಿಸುವವರಷ್ಟೇ ಅಲ್ಲದೆ, ಪ್ರತ್ಯೇಕ ಮತದಾರರ ಸಮುದಾಯಗಳು ಈ ದೇಶವನ್ನು ದಾಳಿ ಮಾಡಿರುವ ಹಲವಾರು ಕೇಡುಗಳಿಗೆ ಜವಾಬ್ದಾರಿಯಾಗಿವೆ ಎಂದು ಮತ್ತು ಅವು ಈ ದೇಶಕ್ಕೆ ಹೆಚ್ಚು ಹಾನಿ ಉಂಟುಮಾಡಲು ಕಾರಣವಾಗಿವೆ ಎಂದೂ ಭಾವಿಸಿರುವವರು. ನಾನು ಈ ಪ್ರಶ್ನೆಯನ್ನು ಪರಿಗಣಿಸುವಲ್ಲಿ ಸದನದ ಗೌರವಾನ್ವಿತ ಸದಸ್ಯರು, ಮಂಡನೆಕಾರರ ಕೋರಿಕೆಗೆ ಸ್ಪಂದಿಸಬೇಕು ಮತ್ತು ಹಿಂದಿನವನ್ನು ಮರೆತು ಒಂದು ಸ್ಪಷ್ಟ ವಿಮರ್ಶೆಯೊಂದಿಗೆ ಆರಂಭಿಸಬೇಕು ಎಂದು ಅಹವಾಲು ಸಲ್ಲಿಸುತ್ತೇನೆ. ಅವರು ಈ ಪ್ರಶ್ನೆಗೆ ತಮ್ಮ ಮನಸ್ಸುಗಳನ್ನು ಇತ್ತೀಚಿನ ವರ್ಷಗಳಲ್ಲಿ ತಾವು ಪ್ರದರ್ಶಿಸಿದ ಪೂರ್ವಗ್ರಹಗಳೊಂದಿಗೆ ಸಿದ್ಧಗೊಳಿಸಬಾರದು. ಅವರು ಹಿಂದೆ ನಡೆದುದೆಲ್ಲವನ್ನು ಮರೆತುಬಿಡಬೇಕು ಮತ್ತು ಈ ಪ್ರಶ್ನೆ ಕುರಿತು ಮಾತ್ರ ಹೇಗೆ ಈ ಸೌಲಭ್ಯ ಅಂದರೆ ನಾನು ಪ್ರಸ್ತಾವಿಸಿದುದು, ಸಮುದಾಯಗಳ ನಡುವೆ ಒಂದು ಉತ್ತಮ ತಿಳಿವಳಿಕೆಯನ್ನು ಬೆಳೆಸಲು ಉಪಯುಕ್ತವಾಗುತ್ತದೆ ಮತ್ತು ಹೇಗೆ ಅದು ಸಂಬಂಧಪಟ್ಟ ಎಲ್ಲ ಸಮುದಾಯಗಳ ಸೌಖ್ಯಕ್ಕೆ ಕೊಡುಗೆ ನೀಡುತ್ತದೆ ಎಂಬ ದೃಷ್ಟಿಯಿಂದ ನೋಡಬೇಕು. ತಾವೇ ಹಿಂದಿನ ಘಟನೆಗಳ ಎಲ್ಲ ಕಲ್ಪನೆಗಳನ್ನು ನಿವಾರಿಸಿ ಪ್ರಶ್ನೆಯತ್ತ ಇಡಿಯಾಗಿ, ಅದು

ಎಷ್ಟರ ಮಟ್ಟಿಗೆ ಆವಶ್ಯಕ ಮತ್ತು ಇನ್ನು ಮುಂದೆ ಸ್ನೇಹಯುತ ಸಂಬಂಧಗಳನ್ನು ಗಟ್ಟಿಗೊಳಿಸಲು ಸೂಕ್ತ ಎಂಬ ದೃಷ್ಟಿಕೋನದಿಂದ ನೋಡಲು ಮತ್ತು ಈ ನೆಲದಲ್ಲಿನ ಎಲ್ಲ ಸಮುದಾಯಗಳು ತೃಪ್ತಿ ಹೊಂದಿವೆಯೆ, ಈ ಸವಲತ್ತು ಸಂಬಂಧಪಟ್ಟ ಎಲ್ಲ ಸಮುದಾಯಗಳ ಸೌಖ್ಯಕ್ಕೆ ಮುನ್ನಡೆಸುವುದಿಲ್ಲವೆ ಎಂಬುದನ್ನು ನೋಡಬೇಕು ಎಂದು ಕೋರುತ್ತೇನೆ. ನಾನು ಸಂವಿಧಾನ ಎಲ್ಲ ಸಮುದಾಯಗಳನ್ನು ತೃಪ್ತಿ ಪಡಿಸುತ್ತದೆ ಮತ್ತು ಎಲ್ಲ ಸಮುದಾಯಗಳ ನಡುವೆ ತೃಪ್ತಿಗೆ ತರುವಂತೆ ಮಾಡುವುದು ನಮ್ಮ ಪ್ರಾಥಮಿಕ ಮತ್ತು ಮೂಲಭೂತ ಕರ್ತವ್ಯ ಎಂಬ ಮೂಲ ವಚನದೊಂದಿಗೆ ಆರಂಭಿಸಲು ಕೋರುತ್ತೇನೆ. ಮುಖ್ಯ ಸಮುದಾಯಗಳು ಅತೃಪ್ತರಾಗುವಂತೆ ಬಿಟ್ಟಲ್ಲಿ, ಮತ್ತು ಅವರನ್ನು ದೇಶದ ಆಡಳಿತದಲ್ಲಿ ತಮ್ಮ ಧ್ವನಿ ಪಡೆಯಲಿಲ್ಲ ಎಂಬ ಭಾವನೆಯೊಂದಿಗಿರಲು ಬಿಟ್ಟಲ್ಲಿ, ಅದೊಂದು ಕೆಡುಕಾಗಿ ನಾವು ಯಾವುದೇ ಬೆಲೆತೆತ್ತು, ಅದನ್ನು ತಪ್ಪಿಸಬೇಕು ಎಂದು ಹೇಳುವಲ್ಲಿ ಸದನ ಒಪ್ಪುತ್ತದೆ ಎಂದು ಆಶಿಸುತ್ತೇನೆ. ಈ ನೆಲದ ಎಲ್ಲ ಸಮುದಾಯಗಳು ತೃಪ್ತಿ ಮತ್ತು ಸಮಾಧಾನಕ್ಕೆ ಒಂದು ಒಳ್ಳೆಯ ಸಂವಿಧಾನದ ಅತ್ಯಗತ್ಯ. ಇದು ಇಲ್ಲಿ ಮಾಡಬೇಕಾದ ನಮ್ಮ ಧಾರ್ಮಿಕ ಕರ್ತವ್ಯ.

ಕೆಲವು ಭಾಷಣಗಳಲ್ಲಿ ಅಲ್ಪಸಂಖ್ಯಾತರು ಅಥವಾ ಬಹುಶಃ ಅಲ್ಪಸಂಖ್ಯಾತ ಸಮುದಾಯಗಳು ಎಂದು ಕರೆದು ಅದರ ಅಸ್ತಿತ್ವ ಕುರಿತಂತೆ ವಿಷಾದ ವ್ಯಕ್ತಪಡಿಸಿದುದನ್ನು ಕಂಡೆ. ಹಾಗೆ ನೋಡಿದರೆ, ನಾವು ಮಾನವಸ್ವಭಾವದ ವಿರುದ್ಧ ಹೋಗುವುದು ಮತ್ತು ಅರ್ಥಮಾಡಿಕೊಳ್ಳಲು ಅಸಾಧ್ಯವಿರುವ ಸಿದ್ಧಾಂತಗಳನ್ನು ನಮ್ಮ ಮುಂದೆ ಇಟ್ಟುಕೊಳ್ಳುವುದರಿಂದ ಯಾವ ಉಪಯೋಗವೂ ಇಲ್ಲ. ಮಾನವಸ್ವಭಾವ ಏನೇ ಇರುವಲ್ಲಿ, ಪ್ರತಿ ನೆಲದಲ್ಲೂ ಅಲ್ಪಸಂಖ್ಯಾತರು ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಇರುವುದೇ; ಮತ್ತು ವಿಶಿಷ್ಟವಾಗಿ ಭಾರತದಂತಹ ವಿಶಾಲ ಉಪಖಂಡಗಳಲ್ಲಿ ಅವು ಅಸ್ತಿತ್ವದಲ್ಲಿರಲು ಬದ್ಧ ಮತ್ತು ಅದನ್ನು ಇಡಿಯಾಗಿ ಅಸ್ತಿತ್ವದಿಂದ ಹೊರಗೆ ಅಳಿಸಿಹಾಕಲು ಮನುಷ್ಯಮಾತ್ರರಿಂದ ಅಸಾಧ್ಯ. ನಾವು ಮಾಡಬಹುದಾದುದು ಎಂದರೆ ಅವರ ನಡುವೆ ಭಿನ್ನಾಪ್ರಾಯಗಳನ್ನು ಕಡಿಮೆ ಮಾಡುವುದು ಮತ್ತು ಎಲ್ಲ ಅಲ್ಪಸಂಖ್ಯಾತರು ತಾವು ತೃಪ್ತರಿದ್ದೇವೆ ಎಂದೂ ಭಾವಿಸುವಂಥ ಕೆಲಸಗಳನ್ನು ಮಾಡುವುದೇ ಆಗಿದೆ. ಈ ವಿಷಯವಾಗಿ ನಾವು ದೃಷ್ಟಿಯಲ್ಲಿಡಬೇಕಾದ ಎರಡು ತತ್ತ್ವಗಳಿವೆ: ಹಲವು ಸಮುದಾಯಗಳ ಪಾಲಿಗೆ ಕೊಟ್ಟು ತೆಗೆದುಕೊಳ್ಳುವ ಒಂದು ಹುರುಪು ಇರಬೇಕು. ಅದರಲ್ಲಿಯೂ ವಿಶಿಷ್ಟವಾಗಿ ಬಹುಸಂಖ್ಯಾತ ಸಮುದಾಯದ ಪಾಲಿಗೆ ಔದಾರ್ಯದ ಒಂದು ಹುರುಪು ಇರಲೇಬೇಕು. ಅವರು ವಿಷಯಗಳನ್ನು ಗಣಿತಾತ್ಮಕ ಮಾನದಂಡದ ಮೇಲೆ ನೋಡಲು ಹೋಗಬಾರದು ಮತ್ತು ಕೆಲವರು ಅಲ್ಪಸಂಖ್ಯಾತರು ದೊಡ್ಡ ಅನನುಕೂಲತೆಯ ನಡುವೆ ಕೆಲಸ ಮಾಡುತ್ತಿರುವಾಗ ಹಾಗೂ ದೇಶದ ಆಡಳಿತದಲ್ಲಿ ತಮ್ಮ ಪಾಲು ಹೊಂದಲಿಲ್ಲ ಎಂದು ಭಾವಿಸಿದಾಗ ವಾದ ಮಾಡಲು ಪ್ರಯತ್ನಿಸಬಾರದು. ಅವರನ್ನು ತೃಪ್ತಿ ಪಡಿಸುವ ಸಲುವಾಗಿ ಸಾಕಷ್ಟು ಸುವ್ಯವಸ್ಥೆಗಳನ್ನು ಮಾಡಬೇಕು. ಯಾವುದೇ ಅಲ್ಪಸಂಖ್ಯಾತರು ತಮ್ಮ ಗುರಿ ಸಾಧಿಸಲು ಒಂದು ವಿಶಿಷ್ಟ ವಿಧಾನ ಕೇಳುವಲ್ಲಿ ಸರಿ ಇಲ್ಲದಿದ್ದರೂ, ಆಗಲೂ ನಾವು ಕೊಟ್ಟು ಮತ್ತು ತೆಗೆದುಕೊಳ್ಳುವ ಮನೋಭಾವ ತೋರಬೇಕು ಹಾಗೂ ಬಹುಸಂಖ್ಯಾತ ಸಮುದಾಯ ಉದಾರವಾಗಿರಬೇಕು ಎಂದು ಹೇಳುತ್ತೇನೆ. ಈ ಔದಾರ್ಯವನ್ನು ಬಹುಸಂಖ್ಯಾತ ಸಮುದಾಯ ಪ್ರದರ್ಶಿಸಿದ್ದೆ ಆದರೆ ಅವರು ಯಾತನೆ ಪಡಲಾರರು ಎಂಬುದನ್ನು ನೆನಪಿಡಲು ಮನವಿ ಮಾಡಿಕೊಳ್ಳುತ್ತಿದ್ದೇನೆ. ಬಹುಸಂಖ್ಯಾತರು ಬಹುಸಂಖ್ಯಾತರೇ ಮತ್ತು ಅಲ್ಪಸಂಖ್ಯಾತರು ಅಲ್ಪಸಂಖ್ಯಾತರೇ, ಯಾವುದೇ ಮಾನದಂಡದಿಂದ, ಯಾವುದಾದರೂ ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯ ಅರ್ಹತೆಗಿಂತ ತುಸು ಹೆಚ್ಚು ಪಡೆದಲ್ಲಿ ಅವರ ಜನಸಂಖ್ಯೆಗನುಗುಣವಾಗಿ ಅಥವಾ ಯಾವುದೇ ಅಂಥ ವಿಷಯಕ್ಕನುಗುಣವಾಗಿ ಬಹುಸಂಖ್ಯಾತ ಸಮುದಾಯ ಕೂಡ ಕೊಟ್ಟು ತೆಗೆದುಕೊಳ್ಳುವ ಹುರುಪಿನಲ್ಲಿ ವರ್ತಿಸಿ ಉದಾರ ಭಾವ ಪ್ರದರ್ಶಿಸಬೇಕು. ಈ ಭಾವನೆಯಲ್ಲೆ ನಮ್ಮ ಮುಂದಿನ ಪ್ರಶ್ನೆಯತ್ತ ನೋಡಬೇಕು ಎಂದು ಮನವಿ ಮಾಡುತ್ತೇನೆ. ನಾನು ಈ ಪೂರ್ವಭಾವಿ ಟೀಕೆಗಳನ್ನು

ಮಾಡಲೇಬೇಕಿದೆ. ಏಕೆಂದರೆ ಬಹುಜನರಲ್ಲಿ ಪ್ರತ್ಯೇಕ ಮತದಾರರ ಸಮುದಾಯಗಳ ವಿರುದ್ಧ ಒಂದು ಪ್ರಬಲವಾದ ಭಾವನೆ ಇದೆ ಎಂದು ನಾನು ಬಲ್ಲೆ. ಇದು ಅಲ್ಪಸಂಖ್ಯಾತ ವರದಿ ಮತ್ತು ಸಲಹಾ ಸಮಿತಿಯ ವರದಿಯಲ್ಲಿ ಕೂಡ ಕಂಡುಬಂದಿದೆ. ಅವರು ಪ್ರತ್ಯೇಕ ಮತದಾರರ ಸಮುದಾಯಗಳನ್ನು ಹೊಂದುವುದಾಗಲಿ ಅಥವಾ ಪ್ರತ್ಯೇಕ ಮತದಾರರ ಸಮುದಾಯಗಳ ತತ್ತ್ವವನ್ನು ಗುರುತಿಸುವುದಾಗಲಿ ತುಂಬ ಅಪಾಯಕರ ಎಂದು ಭಾವಿಸುತ್ತಾರೆ.

ಈಗ ನಾನು ಈ ನೆಲದಲ್ಲಿ ಹಲವಾರು ಸಮುದಾಯಗಳಿವೆ ಮತ್ತು ಹಲವು ಅಲ್ಪಸಂಖ್ಯಾತರಿದ್ದಾರೆ ಮತ್ತು ಅವರನ್ನು ಅಸ್ತಿತ್ವದಿಂದ ಹೊರಗೆ ಅಳಿಸಿಹಾಕುವುದು ವಿಷಯಗಳ ಲಕ್ಷಣದಲ್ಲೆ ಅಸಾಧ್ಯ ಎಂದು ಹೇಳಬೇಕಿದೆ. ಇವರೆಲ್ಲರನ್ನೂ ತೃಪ್ತಿರಾಗಿರುವಂತಿರಿಸಲು ಅವಕಾಶಗಳಿವೆ ಎಂಬ ರೀತಿಯಲ್ಲಿ ಮಾಡಬೇಕಾದುದು ನಮ್ಮ ಕರ್ತವ್ಯ ಹಾಗೂ ಯಾರು ಸಂವಿಧಾನ ರೂಪಿಸುವರೋ ಅವರ ಕರ್ತವ್ಯ.

ಅನಂತರ, ಮುಂದಿನ ವಿಷಯವೆಂದರೆ ಈ ಪರಿಶೀಲನೆ ಪೂರ್ಣ ಪರಿಣಾಮಕಾರಿಯಾಗಬೇಕಾದುದು ಆಗಿದೆ. ಅಲ್ಪಸಂಖ್ಯಾತರನ್ನು ತೃಪ್ತಿಗೊಳಿಸಿಡಬೇಕು ಎಂದು ಎಲ್ಲಿಯವರೆಗೆ ಭಾವಿಸುತ್ತೇವೆಯೇ ಅಲ್ಲಿಯವರೆಗೆ ಅವರ ಅಭಿಪ್ರಾಯಗಳಿಗೆ ಮತ್ತು ಅವರ ಬೇಗುದಿಗಳಿಗೆ ಶಾಸನಸಭೆಗಳ ಚರ್ಚೆಗಳಲ್ಲಿ ಪರಿಣಾಮಕಾರಿ ಧ್ವನಿ ನೀಡಬೇಕು. ಯಾರು ವಾಸ್ತವವಾಗಿ ಆ ಸಮುದಾಯವನ್ನು ಪ್ರತಿನಿಧಿಸುತ್ತಾರೆಯೋ ಆ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವುದೇ ಇರುವ ಒಂದೇ ಮಾರ್ಗ ಎಂದೂ ನಾನು ಹೇಳುತ್ತೇನೆ. ಇನ್ನೊಂದೆಡೆ, ಯಾವ ಸಮುದಾಯವೂ ಒಂದು ಅಧಿಕೃತ ಸಮುದಾಯವಾಗಿ ಉಳಿಯಲು ಹಕ್ಕು ಇಲ್ಲ ಎಂದು ಹೇಳುವುದಾದರೆ, ಮತ್ತು ಲೇಖನಿಯ ಒಂದು ಗೆರೆಯಿಂದ ತೊಡೆದುಹಾಕಬೇಕೆಂದು ಹೇಳಿದರೆ ಆಗ ಮಾನ್ಯರೆ, ನಾನು ನಿಶ್ಚಿತವಾಗಿ ವಾದಾರ್ಹವಲ್ಲ ಎಂದು ಹೇಳುತ್ತೇನೆ. ಮತಧರ್ಮ ಹಿನ್ನೆಲೆ ಇರಬಹುದು ಅಥವಾ ಇತರ ಭೇದಗಳ ಹಿನ್ನೆಲೆಯಲ್ಲಿ ಇರಬಹುದು, ಹೀಗೆ ಭಿನ್ನಾಭಿಪ್ರಾಯಗಳಿರುವ ಸಮುದಾಯಗಳಿವೆ ಎಂಬುದನ್ನು ತಾವು ಮಾನ್ಯ ಮಾಡಬೇಕು. ಅದರ ಸಂಪೂರ್ಣ ಆವಶ್ಯಕತೆಯೂ ಇದೆ. ಎಂತಹ ಸಮುದಾಯಗಳಿವೆ ಎಂದರೆ ಅವರನ್ನೆಲ್ಲ ಸಾಂವಿಧಾನಿಕವಾಗಿ ತಕ್ಕಷ್ಟು ಪ್ರತಿನಿಧಿಸಲಾಗಿದೆ ಎಂದು ನಿರೂಪಿಸುವುದು ನಮ್ಮ ಕರ್ತವ್ಯವಾಗಿದೆ, ಆ ಸಮುದಾಯವನ್ನು ಪ್ರತಿನಿಧಿಸಬಲ್ಲ ಅತ್ಯುತ್ತಮ ವ್ಯಕ್ತಿಯ ಆಯ್ಕೆಗೆ ಒಂದು ಕ್ರಮವನ್ನು ರೂಪಿಸಬೇಕು; ಆತ ಶಾಸನಸಭೆಗೆ ಚುನಾಯಿತನಾದರೆ ಆ ಸಮುದಾಯದ ಭಾವನೆಗಳನ್ನು ಕುರಿತು ಧ್ವನಿ ಎತ್ತಬೇಕು. ಇದೇ ಮಾನದಂಡ ಆಧಾರವಾಗಿರಬೇಕು. ಪ್ರಶ್ನೆ ಎಂದರೆ ಆ ಗುರಿಯನ್ನು ಸಾಧಿಸಲು ಪ್ರತ್ಯೇಕ ಮತದಾರರ ಸಮುದಾಯಗಳು ಇರುವ ಆವಶ್ಯಕತೆ ಇದೆಯೆ ಇಲ್ಲವೆ ಎಂದು. ಸಮುದಾಯಗಳ ಹಿತಾಸಕ್ತಿಗಳು ಶಾಸನಸಭೆಯಲ್ಲಿ ಒಂದು ಪ್ರಾತಿನಿಧ್ಯ ಹೊಂದಿರಬೇಕೆಂಬುದು ಸಮಿತಿಯ ವರದಿಯಿಂದ ಕೂಡ ಅಂಗೀಕೃತವಾಗಿದೆ. ಒಂದೇ ವ್ಯತ್ಯಾಸ ಎಂದರೆ ಅವರು ಆ ಉದ್ದೇಶವನ್ನು ಕೆಲವು ಇತರೆ ಮಾರ್ಗಗಳಿಂದ ಸಾಧಿಸಲು ಬಯಸುತ್ತಾರೆ. ಆ ಮಾರ್ಗದಿಂದ ಗುರಿ ಸಾಧನೆಯಾಗದು. ಅಲ್ಪಸಂಖ್ಯಾತರ ಸಮಿತಿ ಹೇಳುವುದೇನೆಂದರೆ, "ಆ ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳಿಗೆ ನಿಶ್ಚಿತ ಸಂಖ್ಯೆಯ ಸ್ಥಾನಗಳನ್ನು ಮೀಸಲಿಡಿ ಆದರೆ ಜಂಟಿಮತದಾರರ ಸಮುದಾಯದ ಆಧಾರದ ಮೇಲೆ" ಎಂದು. ಆಗ, ಯಾರನ್ನು ಬಹುಸಂಖ್ಯಾತ ಸಮುದಾಯ ಬೆಂಬಲಿಸುವುದೋ ಆ ವ್ಯಕ್ತಿ ಚುನಾಯಿತನಾಗುತ್ತಾನೆ. ಬಹುಶಃ ಆ ವ್ಯಕ್ತಿ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವನೆಂಬ ಸೋಗಿನಡಿ ಬಹುಸಂಖ್ಯಾತರಿಂದ ಇಷ್ಟ ಪಟ್ಟವನಾಗಿರಬಹುದು. ಅಸಹಕಾರದ ಹಳೆಯ ದಿನಗಳಲ್ಲಿ ಮುಸ್ಲಿಮರು ಮತ್ತು ಹಿಂದೂಗಳು ಒಟ್ಟಿಗೆ ಸೇರಿದ್ದ ಪ್ರಸಂಗಗಳಿದ್ದವು ಹಾಗೂ ಎಲ್ಲ ಶಾಸನಸಭೆಗಳನ್ನು ಬಹಿಷ್ಕರಿಸಿದವು. ಇಡೀ ಪ್ರದರ್ಶನವನ್ನು ಅಣಕ ಮಾಡಲು ತಮಾಷೆಗೆಂದು, ಒಂದು ನಿರ್ದಿಷ್ಟ ಸಮುದಾಯದಿಂದ ಬರುತ್ತಿರುವಂತೆ ಯಾರೊ ಅನಕ್ಷರಸ್ಥ ಕಸಗುಡಿಸುವವನನ್ನೊ ಅಥವಾ ಜಾಡಮಾಲಿಯನ್ನೊ ಅಥವಾ ಅಂಥ ವ್ಯಕ್ತಿಯನ್ನು ಒಬ್ಬ ಅಭ್ಯರ್ಥಿಯಾಗಿ ಕಾಣಿಸಲಾಯಿತು. ಆ ದಿನಗಳಲ್ಲಿ

ಆ ರೀತಿ ಮಾಡುವುದಾಗಿದ್ದಲ್ಲಿ, ಮತ್ತೆ ಅಂತಹ ಪ್ರಸಂಗಗಳು ಸಂಭವಿಸುತ್ತವೆಯೆ ಎಂದು ಕೇಳುತ್ತೇನೆ. ಅಲ್ಲದೆ ಅದು ಪ್ರಶ್ನೆಯನ್ನು ಯಾವ ಭಾವದಲ್ಲಿ ನೋಡಲಾಗುತ್ತದೆ ಎಂಬುದನ್ನು ಅವಲಂಬಿಸುತ್ತದೆ. ಒಂದು ನಿರ್ದಿಷ್ಟ ಸಮುದಾಯಕ್ಕೆ ಒಬ್ಬ ನಿರ್ದಿಷ್ಟ ಸದಸ್ಯ ಸೇರಿದ್ದಾನೆ ಎಂದರೆ ಅದು ಅವನ ಅಭಿಪ್ರಾಯಗಳು ಆ ನಿರ್ದಿಷ್ಟ ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತವೆ ಎಂಬುದಕ್ಕೆ ಖಾತರಿಯಲ್ಲ. ಆ ನಿರ್ದಿಷ್ಟ ಸಮುದಾಯವನ್ನು ಪ್ರತಿನಿಧಿಸಲೇಬೇಕೆಂದಿದ್ದರೆ ಆ ಸಮುದಾಯದ ಸದಸ್ಯರ ಪೈಕಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಬೇಕು. ಅದು ತಮ್ಮಲ್ಲಿ ನನ್ನ ಮನವಿ. ಒಂದು ವೇಳೆ ಯೋಗ್ಯನಲ್ಲದ ವ್ಯಕ್ತಿಯನ್ನು ಅಥವಾ ಸಮುದಾಯದ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲೂ ಆಗದ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿದರೆ, ಆತ ಆ ಸಮುದಾಯವನ್ನು ಪ್ರತಿನಿಧಿಸುತ್ತಾನೆ ಎಂಬುದನ್ನು ನಿರೀಕ್ಷಿಸಲಾಗುವುದಿಲ್ಲ. ಏಕೆಂದರೆ, ಆ ವ್ಯಕ್ತಿಗೆ, ಆ ಸಮುದಾಯಕ್ಕೆ ಸೇರಿದ ಒಬ್ಬನೆಂದು ಹಣೆಪಟ್ಟಿ ಹಚ್ಚಲಾಗಿರುತ್ತದೆ. ಈ ವರದಿಯು ಅಲ್ಪಸಂಖ್ಯಾತ ಸಮುದಾಯವನ್ನು ಶಾಸನಸಭೆಯಲ್ಲಿ ಪ್ರತಿನಿಧಿಸಬೇಕು ಎಂದು ಅಂಗೀಕರಿಸಿರುವ ಸಿದ್ಧಾಂತಕ್ಕೆ ಪರಿಣಾಮ ನೀಡಿದೆಯೇ ಎಂದು ನಿರ್ಧರಿಸುವ ಮಾನದಂಡ. ಒಂದು ವೇಳೆ ಅಲ್ಪಸಂಖ್ಯಾತರ ಅಸ್ತಿತ್ವ ಮತ್ತು ಪ್ರಾತಿನಿಧ್ಯಕ್ಕೆ ಅವರ ಹಕ್ಕು ನಿರಾಕರಿಸಿದರೆ, ಆಗ ನಾನು ಹೆಚ್ಚು ಹೇಳುವುದೇನೂ ಇಲ್ಲ. ಆದರೆ ಈ ಸಮಸ್ಯೆಯನ್ನು ಒಂದು ಉದಾರ ಭಾವದಲ್ಲಿ ನೋಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ನಾನು ಗೌರವಾನ್ವಿತ ಸದಸ್ಯರನ್ನು ೧೯೧೬ರ ಲಕ್ನೋ ಒಪ್ಪಂದದನುಸಾರವಾಗಿ ಪ್ರತ್ಯೇಕ ಮತದಾರರ ಸಮುದಾಯಗಳನ್ನು ಮಾನ್ಯ ಮಾಡಲಾದ ದಿನಗಳನ್ನು ಹಾಗೂ ೧೯೨೦ರ ಅಸಹಕಾರ ದಿನಗಳಲ್ಲಿ ಎರಡೂ ಸಮುದಾಯಗಳು ಸಹೋದರರಂತೆ ಪಾಲ್ಗೊಂಡಿದ್ದುದನ್ನು ನೆನಪು ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆ ದಿನಗಳಲ್ಲಿ ಸೋದರ ಸೋದರಿಯರಂತೆ ಓಡಾಡಿದಂಥ ಸಮುದಾಯಗಳು ಈಗ ಸ್ವಾತಂತ್ರ್ಯ ಸಾಧನೆಗೆ ತಳಪಾಯ ಹಾಕಬಲ್ಲವರಾದಲ್ಲಿ, ನಾವೇಕೆ ಇನ್ನು ಮುಂದೆ ಅದೇ ಸಿದ್ಧಾಂತದ ಮೇಲೆ ಕೆಲಸ ಮಾಡಲಾರೆವು ಮತ್ತು ಒಂದೇ ಕುಟುಂಬದ ಸದಸ್ಯರಂತೆ ಕೆಲಸ ಮಾಡಲಾರೆವು ಹಾಗೂ ರಾಷ್ಟ್ರಗಳ ಸಮಿತಿಯಲ್ಲಿ ಅತ್ಯಂತ ಹೆಮ್ಮೆಯ ರಾಷ್ಟ್ರಗಳಲ್ಲಿ ಒಂದಾಗಿ ಭಾರತವನ್ನು ಮಾಡಲಾರೆವು ಎಂಬುವುದಕ್ಕೆ ನನಗೆ ಯಾವುದೇ ಕಾರಣ ಕಾಣುತ್ತಿಲ್ಲ. ನಾವು ಸೌಹಾರ್ದತೆ ಮತ್ತು ಸ್ನೇಹ ಭಾವದಲ್ಲಿ ವರ್ತಿಸಿದ್ದೇ ಆದಲ್ಲಿ ಭಾರತವನ್ನು ವಿಶ್ವದಲ್ಲಿ ಅಗ್ರಗಣ್ಯ ರಾಷ್ಟ್ರವನ್ನಾಗಿ ಮಾಡುವುದು ನಮ್ಮ ಕೈಲೇ ಇದೆ. ಅಸಹಕಾರದ ದಿನಗಳಲ್ಲಿ ೧೯೨೦ರಲ್ಲಿ ನಾವು ಕೆಲಸ ಮಾಡಿದಂತೆ ಮುಂದೆ ಕೂಡ ಕೆಲಸ ಮಾಡಲು ನಮಗೆ ಸಾಧ್ಯ ಮತ್ತು ದೇಶದ ಎಲ್ಲ ಕೆಡುಕುಗಳಿಗೂ ಪ್ರತ್ಯೇಕ ಮತದಾರರ ಸಮುದಾಯಗಳ ಈ ವ್ಯವಸ್ಥೆಯೇ ಕಾರಣ ಎಂಬ ಒಂದು ಉದಾಹರಣೆಯಾಗಿರುವುದು ಈ ಸದನದ ಸದಸ್ಯರಿಗೆ ಬಿಟ್ಟದ್ದು. ಈ ಅಭಿಪ್ರಾಯದ ತಿದ್ದುಪಡಿಗಾಗಲಿ, ಇನ್ನಾವುದಕ್ಕಾಗಲಿ ಚರ್ಚೆಗಳಲ್ಲಿ ನಾನು ಪ್ರವೇಶಿಸಲು ಇಷ್ಟ ಪಡುವುದಿಲ್ಲ. ಹಿಂದಿನದನ್ನು ಮರೆತು ಸ್ನೇಹಭಾವದಲ್ಲಿ ವರ್ತಿಸಬೇಕು ಎಂದು ತಮ್ಮನ್ನು ಕೋರುತ್ತೇನೆ.

ನಾನು ಒಂದು ಅಂಶವನ್ನು ಒತ್ತಿ ಹೇಳಬೇಕು. ಶಾಸನಸಭೆ ಇಡೀ ದೇಶಕ್ಕೆ ಮತ್ತು ಎಲ್ಲರ ಸಮುದಾಯಗಳಿಗೆ ಕಾನೂನು ಮಾಡಲು ಉದ್ದೇಶಿಸಿದೆ. ಶಾಸನಸಭೆಯಲ್ಲಿ ಎಲ್ಲ ಸಮುದಾಯಗಳ ಅಗತ್ಯಗಳನ್ನು ಶ್ರುತಪಡಿಸುವ ಅಗತ್ಯವಿದೆ. ಈ ದೇಶದಲ್ಲಿ ಪ್ರಸ್ತುತ ವಿಷಯಗಳಿರುವಂತೆ, ನಿರ್ದಿಷ್ಟ ಸಮುದಾಯಗಳ ಸದಸ್ಯರಿಗೆ, ಮುಸ್ಲಿಮೇತರರು ಎನ್ನಿ; ಮುಸ್ಲಿಮ್ ಸಮುದಾಯದ ವಾಸ್ತವ ಅಗತ್ಯಗಳನ್ನು ತಿಳಿಯಲು ತುಂಬ ಕಷ್ಟ. ಒಬ್ಬ ಮುಸ್ಲಿಮೇತರ ಮುಸ್ಲಿಮ್ ಸಮುದಾಯಕ್ಕೆ ತನ್ನಿಂದಾದ ಅತ್ಯುತ್ತಮವಾದುದನ್ನು ಮಾಡಿದಾಗ್ಯೂ, ಅವರ ಅಭಿಪ್ರಾಯಗಳನ್ನು ಪ್ರತಿನಿಧಿಸುವುದು ಆತನಿಗೆ ಅಸಾಧ್ಯವೆಂದೇ ಕಾಣುತ್ತಾನೆ. ಏಕೆಂದರೆ ಅವನು ಆ ಸಮುದಾಯಕ್ಕೆ ಸೇರದವರೆಗೂ ಸದಸ್ಯರ ವಾಸ್ತವ ಅಗತ್ಯಗಳನ್ನು ತಿಳಿದು ಅರ್ಥಮಾಡಿಕೊಂಡು ಮೆಚ್ಚುವ ಸ್ಥಿತಿಯಲ್ಲಿ ಅವನಿರುವುದಿಲ್ಲ. ಅವರ ಅಗತ್ಯಗಳು ಏನು ಎಂದು ಖಚಿತವಾಗಿ ತಿಳಿಯಲು ಪ್ರಾಯೋಗಿಕವಾಗಿ ಅವನಿಗೆ ಅಸಾಧ್ಯ. ವಿಶಿಷ್ಟವಾಗಿ ಇಲ್ಲಿಂದ ಮುಂದೆ ಹಲವು ಪ್ರಶ್ನೆಗಳಿರುತ್ತವೆ. ಅವನ್ನು ಸಮುದಾಯಗಳು ಶಾಸನಸಭೆಗಳಲ್ಲಿ ಶ್ರುತ ಪಡಿಸಲು

ಬಯಸುತ್ತವೆ. ವಕ್ಫ್, ಮದುವೆ, ವಿಚ್ಛೇದನ ಮತ್ತು ಸಾಮಾಜಿಕ ಪ್ರಾಮುಖ್ಯದ ಇನ್ನೂ ಹಲವು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಶಾಸನರಚನೆ ಇರಬಹುದು. ಸದನ ಈ ವಿಷಯವನ್ನು ವ್ಯತಿರಿಕ್ತ ದೃಷ್ಟಿಕೋನದಿಂದ ಪರಿಗಣಿಸಲು ಕೋರುತ್ತೇನೆ. ಒಂದು ವೇಳೆ ಮುಸ್ಲಿಮರು ಶಾಸನಸಭೆಯಲ್ಲಿ ಅವರ ಬೇಗುದಿಗಳನ್ನು ಪ್ರತಿನಿಧಿಸಬೇಕಿದ್ದಲ್ಲಿ ಮತ್ತು ದೇವಾಲಯ ಪ್ರವೇಶ, ವಿವಾಹ ಪದ್ಧತಿ–ಸಂಪ್ರದಾಯಗಳು ಮೊದಲಾದವನ್ನು ಕುರಿತಂತೆ ಪರಿಣಾಮಕಾರಿ ಪರಿಹಾರಗಳನ್ನು ಒದಗಿಸುವಂತಿದ್ದರೆ ಹಿಂದೂಗಳು ಹೇಗೆ ಭಾವಿಸುವರು? ಹಿಂದೂಗಳ ಮತ್ತು ಮುಸ್ಲಿಮರ ಅಗತ್ಯಗಳ ಪರಿಜ್ಞಾನ ಹೊಂದಿರುವವರು ಎರಡೂ ಕಡೆ ದಕ್ಷರೇ ಇರಬಹುದು ಎಂದು ನಾನು ಒಪ್ಪುತ್ತೇನೆ. ಆದರೆ ಅವರ ಸಂಖ್ಯೆ ಅತ್ಯಲ್ಪ; ಒಂದು ನಿರ್ದಿಷ್ಟ ಸಮುದಾಯದಲ್ಲಿ ಅತ್ಯುತ್ತಮ ವ್ಯಕ್ತಿ ಆ ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸಬೇಕು ಮತ್ತು ಈ ಉದ್ದೇಶ ಪ್ರತ್ಯೇಕ ಮತದಾರರ ಸಮುದಾಯಗಳ ಮೂಲಕವಷ್ಟೆ ಹೊರತು ಇತರೆ ಯಾವುದರಿಂದ ಪೂರೈಸುವುದಿಲ್ಲ.

ತಮ್ಮ ಮುಂದೆ ಇರಿಸಲು ಇಷ್ಟ ಪಡುವ ಇನ್ನೊಂದು ಅಂಶವೆಂದರೆ, ಪ್ರತ್ಯೇಕ ಮತದಾರರ ಸಮುದಾಯದ ಸಿದ್ಧಾಂತವನ್ನು ಈ ದೇಶದ ಮುಸ್ಲಿಮ್ ಸಮುದಾಯ ಮೊದಲ ದಶಕದಿಂದ ಅಂದರೆ ಸುಮಾರು ೪೦ ವರ್ಷಗಳ ಕಾಲ ಅನುಭೋಗಿಸಿದೆ. ಈಗ ಸ್ವಾತಂತ್ರ್ಯ ಪಡೆದ ಮೇಲೆ ಅದನ್ನು ರದ್ದುಗೊಳಿಸಲಾಗುತ್ತದೆ. ಇದೊಂದು ಬಲುದುಃಖದ ಸಂಗತಿ. ಭಾರತದ ಮುಸ್ಲಿಮರು ಈ ತತ್ತ್ವದ ಲಾಭದಿಂದ ವಂಚಿತರಾಗುತ್ತಿದ್ದೇವೆ ತಮ್ಮ ಧ್ವನಿ ಕುಂಠಿತಗೊಂಡಿದೆ ಎಂಬ ಭಾವನೆ ತಾಳುವಂತಾಗಿದೆ. ಇಂಥ ಒಂದು ಅನಿರೀಕ್ಷಿತ ಸಂದರ್ಭವನ್ನು ತಪ್ಪಿಸಬೇಕೆಂದು ಕೋರುತ್ತೇನೆ.

ಇನ್ನೂ ಒಂದು ಅಂಶ ನಾನು ನಿವೇದಿಸಲು ಇಷ್ಟಪಡುವುದೆಂದರೆ, ಮುಸ್ಲಿಮ್ ಸಮುದಾಯ ಸುವ್ಯವಸ್ಥಿತವಿದೆ. ಒಟ್ಟಾರೆ ದೇಶದ ಹಿತಾಸಕ್ತಿಗಳಲ್ಲಿ ಮುಖ್ಯ ಸಮುದಾಯಗಳು ಸುವ್ಯವಸ್ಥಿತವಾಗಿರಬೇಕಾದುದು ತುಂಬ ಅವಶ್ಯ. ಆಗ ಎಲ್ಲರೂ ಒಟ್ಟಿಗೆ ಬಂದು ದೇಶದ ಭವಿಷ್ಯದ ಆಡಳಿತದ ತಿಳಿವಳಿಕೆಗೆ ಮುಂದಾಗುವರು. ಪ್ರಸ್ತುತ ಮುಸ್ಲಿಮರು ಪ್ರಬಲರೂ ಮತ್ತು ಸುವ್ಯವಸ್ಥಿತರೂ ಆಗಿರುವರು. ಈಗ ಅವರು ತಮ್ಮ ಧ್ವನಿ ಶಾಸನಸಭೆಯಲ್ಲಿ ಕೇಳುವುದಿಲ್ಲ ಎಂಬ ಭಾವನೆಗೊಳಗಾದರೆ ಹತಾಶರಾಗುತ್ತಾರೆ. ನಾನು ತಮ್ಮಲ್ಲಿ ಅಂತಹ ಅನಿರೀಕ್ಷಿತ ಸಂದರ್ಭ ಸೃಷ್ಟಿಸಬಾರದೆಂದು ಕೇಳಿಕೊಳ್ಳುತ್ತಿದ್ದೇನೆ. ಪ್ರಸ್ತುತ ತಾವು ತಮ್ಮ ಉದ್ದೇಶ ಕುರಿತಂತೆ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ನಡುವೆ ತುಂಬಾ ಕಡಿಮೆ ಭಿನ್ನಾಭಿಪ್ರಾಯಗಳಿವೆ. ನಿಸ್ಸಂಶಯವಾಗಿ ಇದುವರೆಗೂ ಅವರಲ್ಲಿ ಭಾರಿ ಭಿನ್ನಾಭಿಪ್ರಾಯಗಳಿದ್ದವು. ಆದರೆ ಹೇಗೋ, ಬುದ್ಧಿವಂತಿಕೆಯಿಂದಲೋ ಅಥವಾ ಬುದ್ಧಿವಂತಿಕೆ ಇಲ್ಲದುದರಿಂದಲೋ, ಸರಿಯಾಗಿಯೋ ಅಥವಾ ತಪ್ಪಾಗಿಯೋ ಅವು ಬಗೆಹರಿದು ಈ ಎರಡೂ ಮಹತ್ತ್ವದ ಸಂಸ್ಥೆಗಳ ನಡುವೆ ಒಂದು ಒಪ್ಪಂದ ಉಂಟಾಗಿದೆ. ಅವರು ಯಾವ ಮೂಲಭೂತ ಅಂಶ ಕುರಿತಂತೆ ಭಿನ್ನಾಭಿಪ್ರಾಯ ಉಳ್ಳವರಿದ್ದರೋ ಅದು ಬಗೆಹರಿದಿದ್ದು ವಾಸ್ತವ ಈಗ ಯಾವ ಭೇದವೂ ಇರುವುದಿಲ್ಲ. ಈ ಹಂತದಲ್ಲಿ ಅವರು ಕೈ ಕೈ ಜೋಡಿಸಬೇಕು ಮತ್ತು ದೇಶದಲ್ಲಿನ ವಿನಾಶಕಾರಕ ಗುಂಪುಗಳನ್ನು ಸದೆಬಡೆಯಬೇಕು. ಈ ನೆಲದಲ್ಲಿ ವಿನಾಶಕಾರಕ ಹಾಗೂ ಕಾನೂನು ಸುವ್ಯವಸ್ಥೆ ವಿರುದ್ಧ ವರ್ತಿಸುವ ಬಹುಸಂಖ್ಯೆಯ ಜನರ ಗುಂಪುಗಳಿವೆ. ಪ್ರಾಂತೀಯ ಸರ್ಕಾರಗಳು ಈ ಜನರ ಗುಂಪುಗಳ ಹಾವಳಿ ನಿಲ್ಲಿಸುವಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಸಂಪೂರ್ಣ ಅಧಿಕಾರವನ್ನು ತಮ್ಮ ಕೈಗೆತ್ತಿಗೊಂಡಿವೆ. ಈಗ ನಾನು ಈ ಸದನದ ಗೌರವಾನ್ವಿತರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಕಾಂಗ್ರೆಸಿಗರೂ ಮತ್ತು ಮುಸ್ಲಿಮರು ಹಾಗೂ ಇತರ ಸಮುದಾಯಗಳು ಒಟ್ಟಿಗೆ ಕೈಕೂಡಿಸಿ ಈ ಮಹತ್ತ್ವದ ನೆಲದ ಇತಿಹಾಸದ ಸಂದಿಗ್ಧ ಸಂದರ್ಭದಲ್ಲಿ ತಮ್ಮ ತಲೆ ಎತ್ತಿರುವ ಈ ವಿನಾಶಕಾರಿ ಜನರನ್ನು ಹತ್ತಿಕ್ಕಬಹುದು. ಹಾಗೆ ಮಾಡಲು ಇಂದು ಉಳಿದಿರತಕ್ಕ ಮಹತ್ತ್ವದ ಭಿನ್ನಾಭಿಪ್ರಾಯವಿದ್ದರೂ ಪ್ರತ್ಯೇಕ ಮತದಾರರ ಸಮುದಾಯವನ್ನು ಮುಸ್ಲಿಮರಿಗೆ ಕೊಟ್ಟು ಹಾಗೂ ಮುಸ್ಲಿಮರ

ಧ್ವನಿ ಶಾಸನಸಭೆಯಲ್ಲಿ ಕೇಳುವಂತೆ ಮಾಡಿ ಅವರು ಕಾಂಗ್ರೆಸಿನೊಂದಿಗೆ ಕೈಯಲ್ಲಿ ಕೈಗೂಡಿಸುವಂತೆ ಮಾಡುವುದು ಅತ್ಯುತ್ತಮ ವಿಧಾನ, ಇಲ್ಲದಿದ್ದರೆ, ಈ ಜನರ ಗುಂಪು ಆಂತರಿಕವಾಗಿಯಷ್ಟೆ ಅಲ್ಲದೆ ಬಾಹ್ಯವಾಗಿ ಕೂಡ ದೇಶದ ಜನರ ಸುರಕ್ಷತೆಗೆ ಭಾರಿ ದೊಡ್ಡ ಅಪಾಯ ತರುತ್ತಾರೆ. ನಾನು ಈ ಅಂಶ ಕುರಿತು ಹೆಚ್ಚು ವಿಶದಪಡಿಸಲು ಇಷ್ಟ ಪಡುವುದಿಲ್ಲ. ಏಕೆಂದರೆ ನಾನು ಇದನ್ನು ಹೇಳಿದಾಗ ಗೌರವಾನ್ವಿತ ಸದಸ್ಯರು ಅರ್ಥಮಾಡಿಕೊಳ್ಳುತ್ತಾರೆ ಎಂದು ನಾನು ಬಲ್ಲೆ. ಈ ಕೆಲವು ಮಾತುಗಳೊಂದಿಗೆ ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇತರ ತಿದ್ದುಪಡಿಗಳಿವೆ. ಆ ಬಗ್ಗೆ ನಾನು ಸೂಚಿಸಿದ್ದೇನೆ. ಅವು ಅನುಬಂಧದಲ್ಲಿ ಒಂದಲ್ಲ ಒಂದು ಅಂಶಗಳಡಿ ಬರುತ್ತವೆ, ಆದುದರಿಂದ ನಾನು ಅವನ್ನು ಮಂಡಿಸಲು ನನ್ನ ಹಕ್ಕು ಕಾದಿರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿ ಮತ್ತು ಪ್ರಸ್ತಾವ ಈಗ ಚರ್ಚೆಗೆ ಮುಕ್ತವಾಗಿದೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಹಿಂದಿನ ಭಾಷಣಕಾರರು ಮಾಡಿದ ಭಾಷಣದಿಂದ ನಾನು ತೀವ್ರ ಉತ್ಸಾಹಗುಂದಿದ್ದೇನೆ, ಪಾಕಿಸ್ತಾನವನ್ನು ಪಡೆದುಕೊಂಡ ಅನಂತರ ಭಾರತದಲ್ಲಿ ನನ್ನ ಮಿತ್ರರು ತಮ್ಮ ಮನೋಭಾವ ಬದಲಿಸಿಕೊಳ್ಳುತ್ತಾರೆ ಎಂದು ನಾನು ಆಲೋಚಿಸಿದ್ದೆ. ಹೆಚ್ಚಿಗೆ ಇನ್ನೇನು ಮಾಡಬೇಕು ಎಂದು ನಾನು ನಿಜವಾಗಿ ಆಶ್ಚರ್ಯಪಟ್ಟಿದ್ದೇನೆ. ಪ್ರತಿಯೊಂದು ಸಾಧ್ಯವಾದ ವಿಧದಲ್ಲೂ ಅವರನ್ನು ಸಮಾಧಾನಗೊಳಿಸಲು ನಾವು ಬಹುದೂರ ಹೋಗುತ್ತಿದ್ದೇವೆ ಮತ್ತು ಯತ್ನಿಸುತ್ತಿದ್ದೇವೆ. ಇಲ್ಲಿ ನನ್ನ ಬಳಿ ಜಿನೀವಾದಲ್ಲಿ ೧೯೨೩ರ ಜುಲೈ ೨೪ರಂದು ತನ್ನ ಅಲ್ಪಸಂಖ್ಯಾತ ರಕ್ಷಣೆ ಕುರಿತು ಟರ್ಕಿ ಮಾಡಿಕೊಂಡ ಒಪ್ಪಂದ ಇದೆ. ನಾನು ಈ ತಿದ್ದುಪಡಿ ಬೆಂಬಲ ನೀಡುವ ಯಾರೇ ಒಬ್ಬರನ್ನು ಕೇಳುತ್ತೇನೆ, ದೇಶದ ಯಾವುದೇ ಭಾಗದಲ್ಲಿ, ವಿಶ್ವದ ಯಾವುದೇ ಭಾಗದಲ್ಲಿ ಒಂದು ರಾಜಕೀಯ ಹಕ್ಕನ್ನು ಇಲ್ಲಿ ಅಂಗೀಕರಿಸಿದ ರೀತಿಯಲ್ಲಿ ಅಂಗೀಕರಿಸಿರುವುದನ್ನು ನನಗೆ ತೋರಿಸಿ ಎಂದು. ನಾನು ಸದನದ ಇಚ್ಛಾಪೂರ್ವಕೆಗೆ ಟರ್ಕಿ ಒಪ್ಪಂದದ ಅನುಚ್ಛೇದ ೩೯ನ್ನು ಓದಲು ಕೇಳುತ್ತಿದ್ದೇನೆ. ಟರ್ಕಿಗಿಂತ ಮುಸ್ಲಿಮರ ಹಕ್ಕುಗಳಿಗೆ ಇತ್ತೀಚಿನ ವರ್ಷಗಳಲ್ಲಿ ನಿಲ್ಲಬಲ್ಲ ಅತ್ಯಂತ ದೊಡ್ಡ ರಾಷ್ಟ್ರ ವಿಶ್ವದಲ್ಲಿ ಇದೆ ಎಂದು ಹೇಳಲಾಗುವುದಿಲ್ಲ. ಟರ್ಕಿಯಲ್ಲಿ ಯಾವೆಲ್ಲ ಹಕ್ಕುಗಳನ್ನು ಇತರ ಅಲ್ಪಸಂಖ್ಯಾತರಿಗೆ ಅವರು ಕೊಟ್ಟಿದ್ದಾರೆ ಮತ್ತು ಯಾವೆಲ್ಲ ಹಕ್ಕುಗಳನ್ನು ಅವರು ಇತರ ದೇಶಗಳಲ್ಲಿ ತಮ್ಮ ರಾಷ್ಟ್ರೀಯರಿಗೆ ಒತ್ತಾಯಿಸಿದ್ದಾರೆ ಎಂಬುದನ್ನು ನಾವು ನೋಡೋಣ. ನಾನು ಇಲ್ಲಿ ಪರಿಸ್ಥಿತಿಯ ಎರಡೂ ಮಗ್ಗಲುಗಳನ್ನು ಹೊಂದಿದ್ದೇನೆ. ಎರಡು ಒಪ್ಪಂದಗಳು ಸಾಂವಿಧಾನಿಕ ಪೂರ್ವ ನಿದರ್ಶನಗಳು ಸಂಖ್ಯೆ ೩ರಲ್ಲಿ ಮುದ್ರಿಸಲಾಗಿರುವುದು ಇವೆ. ನಾನು ಅನುಸೂಚಿ ೩೯ನ್ನು ಓದುತ್ತೇನೆ.

> "ಮುಸ್ಲಿಮೇತರ ರಾಷ್ಟ್ರಗಳಿಗೆ ಸೇರಿದ ಟರ್ಕಿಶ್ ರಾಷ್ಟ್ರೀಯರು ಮುಸ್ಲಿಮರಂತೆ ಅದೇ ಪೌರ ಮತ್ತು ರಾಜಕೀಯ ಹಕ್ಕುಗಳನ್ನು ಅನುಭೋಗಿಸುವರು"

ಈ ಹಕ್ಕುಗಳನ್ನು ಅವರೂ ಹೊಂದಿದ್ದಾರೆ. ಅದೆಂದರೆ ಅವರು ಇತರ ಸಮುದಾಯದವರೊಂದಿಗೆ ಭುಜಕ್ಕೆ ಭುಜ ಕೊಟ್ಟು ನಿಲ್ಲಲು ಅರ್ಹರೆಂದೂ, ಯಾವುದೇ ಅಡ್ಡಿ–ಅಡಚಣೆಗಳಿಲ್ಲದೆ ಎಲ್ಲಿ ಬೇಕಾದರೂ ಯಾವುದೇ ಸ್ಥಾನಕ್ಕೆ ನಿಲ್ಲಬಹುದೆಂದೂ, ಯಾವುದೇ ಹುದ್ದೆ ಅಥವಾ ಕಛೇರಿಗೆ ಅನರ್ಹರಲ್ಲವೆಂದೂ ಅರ್ಥ. ಎಲ್ಲ ವಿಧದಲ್ಲೂ ಅವರು ಇಡೀ ಸಮುದಾಯದ ವಿಶ್ವಾಸವನ್ನು ಪಡೆದುಕೊಳ್ಳಲು ಅವರೆಲ್ಲ ಒಟ್ಟಿಗೆ ಮುಂಬರಲು ಇದೊಂದೆ ಮಾರ್ಗ–ಇನ್ನೊಂದು ವಿಧಾನ ಯಾವುದು ಎಂದು ನಾನು ಗೌರವಾನ್ವಿತ ಸದಸ್ಯರನ್ನು ಕೇಳುತ್ತೇನೆ. ಅವರ, ದೂರಿನ ಬೀಜಾವಾಪನ ೧೯೧೬ರಲ್ಲಿ ನಡೆಯಿತು. ನಮ್ಮಿಂದಲ್ಲ ಆದರೆ ಬ್ರಿಟಿಷರಿಂದ. ನಾನು ನಮ್ಮ ನೆಲದ ತುಸು ಮುಂಚಿನ ಇತಿಹಾಸಕ್ಕೆ ಹೋಗುತ್ತೇನೆ. ಅದು ಸದನದ ಸ್ವಲ್ಪ ಸಮಯವನ್ನು ತೆಗೆದುಕೊಳ್ಳಬಹುದೇನೋ. ೧೮೫೭ರ ವೇಳೆಗೇ ಹಿಂದೂಗಳು ಮತ್ತು ಮುಸ್ಲಿಮರು ಭುಜಕ್ಕೆ ಭುಜ ಕೊಟ್ಟ

ಹೋರಾಡಿದರು. ನಾವು ಹಿಂದೂಗಳಿರಲಿ ಅಥವಾ ಮುಸ್ಲಿಮರಿರಲಿ, ಎಲ್ಲೇ ದೇಶದ ಹಲವು ಭಾಗಗಳಲ್ಲಿ ಇರಲಿ, ನಮ್ಮವರೇ ಆದ ಸ್ವಂತ ಜನರಿಂದ ನಮ್ಮ ದೇಶದಲ್ಲಿ ಆಡಳಿತವನ್ನು ಪುನಃ ಸ್ಥಾಪಿಸಲು ಬಯಸಿದ್ದೆವು ಎಂಬುದನ್ನು ಮರೆಯದಿರೋಣ. ಅವರು ದೇಶದ ಬಿಡುಗಡೆಗೂ ಮತ್ತು ಅದರ ಸ್ವಾತಂತ್ರ್ಯಕ್ಕೂ ಒಂದು ಶ್ರಮದಾಯಕ ಹೋರಾಟದಲ್ಲಿ ಒಟ್ಟಾದರು. ಪಾಶ್ಚಾತ್ಯ ಇತಿಹಾಸಕಾರರು ಅದನ್ನು ಯಾವುದೇ ಹೆಸರುಗಳಿಂದ ಕರೆಯಲಿ ಅದು ಸ್ವಾತಂತ್ರ್ಯಕ್ಕಾಗಿ ಒಂದು ಯುದ್ಧವಾಗಿತ್ತು. ಬಳಿಕ ಬ್ರಿಟಿಷ್ ಸರ್ಕಾರ ಒಂದು ಸಮುದಾಯವನ್ನು ಇನ್ನೊಂದರ ವಿರುದ್ಧ ಎತ್ತಿ ಕಟ್ಟಲು ಬಯಸಿತು. ಕೆಲವೊಮ್ಮೆ ಅವರು ಹಿಂದೂಗಳಿಗೆ ಕೃಪೆ ತೋರಿದರೆ ಕೆಲವೊಮ್ಮೆ ಮುಸ್ಲಿಮರಿಗೆ ತೋರಿದರು. ಕೆಲವರು ಗೌರವಯುತ ಮತ್ತು ದೇಶಭಕ್ತ ಐರೋಪ್ಯರು ನಿಸ್ಸಂಶಯವಾಗಿ ನಮ್ಮ ಮನಸ್ಸುಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅನ್ನು ಆರಂಭಿಸುವ ಕಲ್ಪನೆಯನ್ನು ಹುಟ್ಟುಹಾಕಿದರು. ಇದು ನಿಸ್ಸಂಶಯವಾಗಿಯೂ ನಿಜ, ಆದರೆ ಅವರ ಮುಂದಿನವರು ಏನು ಮಾಡಿದರು? ಹದಿನೈದು ವರ್ಷಗಳ ಅಲ್ಪಕಾಲದಲ್ಲಿ ಅವರು ಈ ದೇಶದಲ್ಲಿ ಸ್ವಾತಂತ್ರ್ಯದ ಕಲ್ಪನೆಗಳು ಮೂಡಿವೆ ಎಂಬುದನ್ನು ಕಂಡುಕೊಂಡರು. ಅದು ಅವರಿಗೆ ಅಪಾಯಕಾರಿಯಾಗಿತ್ತು. ಆದುದರಿಂದ ೧೯೦೫ರಲ್ಲಿ ಲಾರ್ಡ್ ಕರ್ಜನ್ ಬಂಗಾಳದಲ್ಲಿ ಹಿಂದೂಗಳನ್ನು ಮತ್ತು ಮುಸ್ಲಿಮರನ್ನು ಪ್ರತ್ಯೇಕಿಸಲು ಬಯಸಿದನು. ಯಾವುದೇ ಪುರುಷ ಅಥವಾ ಸ್ತ್ರೀ, ಒಂದು ಮಗು ಸಹ ಆ ಪ್ರಾಂತ್ಯದ ವಿಭಜನೆಗೆ ಏರ್ಪಾಟನ್ನು ತಡೆದು ನಿಲ್ಲಿಸುವವರೆಗೂ ನಿದ್ದೆ ಮಾಡಲಿಲ್ಲ. ಪುನಃ ನಾವು ಒಟ್ಟಾದೆವು ಮತ್ತು ಇಂದು ಪ್ರತ್ಯೇಕ ಮತದಾರರ ಸಮುದಾಯದ ಕಾರಣ ಪುನಃ ನಾವು ಪ್ರತ್ಯೇಕವಾಗಿರುವೆವು. ಮಾನ್ಯರೆ, ೧೯೧೬ರಲ್ಲಿ ಒಂದು ದಿನ ತಿಳಿದು ಬಂದುದೆಂದರೆ ಈ ದೇಶದಲ್ಲಿ ಯಾರು ಪ್ರತ್ಯೇಕ ಮತದಾರರ ಸಮುದಾಯಕ್ಕೆ ಜವಾಬ್ದಾರನಾಗಿದ್ದನೊ ಆ ಐರೋಪ್ಯ ಇಂಗ್ಲೆಂಡ್‌ನಲ್ಲಿದ್ದ ತನ್ನ ಮಿತ್ರನಿಗೆ ವಿಶ್ವದಲ್ಲಿ ತಾನು ಸಾಧಿಸಿದ ಅತ್ಯುತ್ತಮ ವಿಷಯಗಳಲ್ಲಿ ಒಂದು ಎಂದರೆ ಹಿಂದೂಗಳು ಮತ್ತು ಮುಸ್ಲಿಮರನ್ನು ಪ್ರತ್ಯೇಕಿಸಿದ್ದು ಎಂದು ಪತ್ರ ಬರೆದನಂತೆ. ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಭೇದಭಾವವಿದೆ ಎಂಬುದರಲ್ಲಿ ಅನುಮಾನವಿಲ್ಲ. ಒಬ್ಬ ಪೂರ್ವದ ಕಡೆಗೆ ಪ್ರಾರ್ಥನೆ ಮಾಡಿದರೆ ಇನ್ನೊಬ್ಬ ಪಶ್ಚಿಮ ಕಡೆಗೆ ಪ್ರಾರ್ಥನೆ ಮಾಡುತ್ತಾನೆ. ಆದರೆ ಒಂದು ಸಾಮಾನ್ಯ ಸಂಬಂಧವೂ ಇದೆ ಕೂಡ. ಮೊಹಮ್ಮದ್ ಕಲಹ ಮಾಡುತ್ತಿದ್ದ ಹಲವು ಜನರ ಗುಂಪನ್ನು ಒಟ್ಟಿಗೆ ಒಂದು, ತಮ್ಮ ಮತದ ಸಾಮಾನ್ಯ ಪತಾಕೆಯಡಿ ತರಲು ಆರಂಭಿಸಿದರು. ಪ್ರಾಚೀನ ದಿನಗಳಲ್ಲಿ ಮತ-ಧರ್ಮ ಒಂದು ಸಮನ್ವಯ ಶಕ್ತಿಯಾಗಿತ್ತು. ಎಲ್ಲರೂ ನಿಲ್ಲಬಹುದಾದ ಒಂದು ಸಾಮಾನ್ಯ ವೇದಿಕೆ ಇರಬೇಕು. ನಾನು ಮನುಕುಲ ಒಂದಾಗಿ, ಎಲ್ಲ ಜಾತಿ ಮತ್ತು ಮತಗಳು ಮಾಯವಾಗಿ, (ಹರ್ಷೋದ್ಗಾರ) ಮಕ್ಕಳನ್ನು ನೀವು ಯಾವ ಮತಕ್ಕೆ ಸೇರಿದವರು ಎಂದು ಕೇಳಿದಾಗ ಅವರು, "ನಾನು ಯಾವ ಮತಕ್ಕೂ ಸೇರಿಲ್ಲ. ನಾನೊಬ್ಬ ಭಾರತೀಯ ಮತ್ತು ಒಂದಾಗಿ ಇರಲು ಹೆಮ್ಮೆ ಪಡುತ್ತೇನೆ" ಎಂದು ಕೇಳಬಹುದಾದ ದಿನಕ್ಕೆ ಎದುರು ನೋಡುತ್ತೇನೆ. ನಾನು ಯಾವಾಗ ಭೇದಭಾವಗಳಿರುವುದಿಲ್ಲವೋ ಆ ದಿನಕ್ಕಾಗಿ ಎದುರು ನೋಡುತ್ತೇನೆ. ಒಂದು ಮಗುವಿಗೂ ತಂದೆಯದಕ್ಕಿಂತ ತಾಯಿಯ ಲಿಂಗ ಭಿನ್ನ ಎಂದು ಗೊತ್ತು; ಒಂದು ವಿದ್ಯುದ್ದೀಪ ಬೆಳ್ಳಗಿರಬಹುದು ಮತ್ತು ಇನ್ನೊಂದು ಕೆಂಪಗಿರಬಹುದು. ಹರಿಯುತ್ತಿರುವ ವಿದ್ಯುತ್ತು ಒಂದೇ. ಒಬ್ಬ ತತ್ತ್ವಜ್ಞಾನಿಯು ಇದ್ದು ಈ ಎಲ್ಲ ಸಂಭವಗಳ ನಡುವೆ ಆವಿರ್ಭವಿಸಿ "ಭೂಮಿಯ ಮೇಲೆ ಸ್ವರ್ಣಯುಗವನ್ನು ತರೋಣ" ಎಂದು ಹೇಳಬೇಕಿದೆ-ಜಗತ್ತಿನ ನನ್ನ ಭಾಗದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಮುಸ್ಲಿಮರು ಅಲ್ಪಸಂಖ್ಯಾತರಿದ್ದರೂ ಅವರೂ ಕೂಡ ದೇಶವಿಭಜನೆ ಕೆಲಸದಲ್ಲಿ ಸೇರಿಕೊಂಡರು. ಯಾರೇ ಜವಾಬ್ದಾರು ಇರಲಿ, ಪಂಜಾಬಿನ ವಿದ್ಯಮಾನಕ್ಕೆ ಸಮನಾದುದು ಎಲ್ಲಾದರೂ ಉಂಟೆ? ಇದು ನಮ್ಮ ಪ್ರಾಚೀನ ಧರ್ಮ ಮತ್ತು ಪ್ರವಾದಿಯ ಧರ್ಮಕ್ಕೆ ಒಂದು ಕಳಂಕ. ಮುನಿಗಳಾಗಲಿ ಅಥವಾ ಮಹರ್ಷಿಗಳಾಗಲಿ ದೇಶದಲ್ಲಿ ಏನಾಗುತ್ತಿದೆ ಎಂದು ನೋಡುತ್ತಿದ್ದರೆ ಅವರು ಇದರಿಂದ ಸಮಾಧಾನ ಹೊಂದುವುದಿಲ್ಲ. ಇದಕ್ಕೆ ಹೊಣೆ ಯಾರು ಎಂಬುದನ್ನು ಬುದ್ಧಿವಂತಿಕೆಯಿಂದ

ಪರಿಗಣಿಸಲು ನಮಗೆ ಇದು ಸಮಯವಲ್ಲವೆ? ನಾವೆಲ್ಲ ಸಹೋದರರು. ಶ್ರೀ ಪಾಕರ್‌ರವರು ನನ್ನಿಂದ ಹೇಗೆ ಭಿನ್ನ ಎಂದು ಕೇಳಬಹುದೆ? ಅವರು ತಮಿಳು ಮಾತನಾಡುತ್ತಾರೆ ಮತ್ತು ನಾನು ಕೂಡ ತಮಿಳು ಮಾತನಾಡುತ್ತೇನೆ. ಅವರು ಹಿಂದೂಸ್ಥಾನಿಯಲ್ಲಿ ಮಾತನಾಡಲಾರರು. ಆದರೆ ನಾನು ಹಿಂದೂಸ್ಥಾನಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಹಿಂದೂಸ್ಥಾನಿಯಲ್ಲಿ ಮಾತನಾಡಲು ಸಮರ್ಥ. ನಾಳೆ ನಾನು ಒಬ್ಬ ಮುಸ್ಲಿಮ್ ಆದರೆ ಒಬ್ಬ 'ಮದರಾಸೀ'ಗಿಂತ ಕಡಿಮೆಯಾಗಿ ಬಿಡುತ್ತೇನೆ ಎಂದು ನೀವು ಆಲೋಚಿಸುವಿರಾ? ದುರದೃಷ್ಟವಶಾತ್, ದೇಶ ವಿಭಜನೆಗೊಂಡಿದೆ ಮತ್ತು ಯಾರು ಇದಕ್ಕೆ ಜವಾಬ್ದಾರರೋ ಅವರಿಗೆ ಇದು ಹೆಮ್ಮೆ ಇರಬಹುದು. ಇದು ಇಬ್ಬರು ಸಹೋದರರ ನಡುವಿನ ಒಂದು ಕಲಹದಂತೆಯಷ್ಟೆ ನಾನೊಬ್ಬ ವಕೀಲ ಮತ್ತು ಕೇಸುಗಳ ಬಗ್ಗೆ ಬಲ್ಲೆ. ಒಬ್ಬ ಕಿರಿಯ ಸೋದರ ಹಿರಿಯ ಸೋದರನ ವಿರುದ್ಧ ಒಂದು ದಾವಾ ಹಾಕುತ್ತಾನೆ. ಕಿರಿಯವ ತನ್ನ ತಂದೆಗೆ ಹುಟ್ಟಿದವನಲ್ಲ ಎಂದು ಹೇಳುತ್ತಾನೆ. ಕೇಸು ಮುಗಿದ ಅನಂತರ ಹಿರಿಯ ಸೋದರನ ಮನೆಯಲ್ಲಿ ಮದುವೆ ಇದ್ದರೆ ಕಿರಿಯವ ಅಲ್ಲಿ ಹಾಜರಿರಲು ನಿರಾಕರಿಸುತ್ತಾನೆ ಮತ್ತು ಹಿರಿಯ ಸಹೋದರ ನಾವು ಕಲಹ ಮಾಡಿದುದು ನಿಸ್ಸಂಶಯವಾಗಿ ನಿಜ, ಆದರೆ ನಾನು ನನ್ನ ಕಿರಿಯ ಸೋದರ ಭಾಗವಹಿಸದಿದ್ದರೆ ನಾನು ಮದುವೆ ನಡೆಸುವುದೆ ಇಲ್ಲ ಎಂದು ಹೇಳುತ್ತಾನೆ. ಹಾಗೆಯ ಒಂದು ದಿನ ಪಾಕಿಸ್ತಾನ ಕೂಡ ನಮಗೆ ಹಿಂದಕ್ಕೆ ಬರಬಹುದು. ನನ್ನ ಮಿತ್ರ ಶ್ರೀ ಪಾಕರ್‌ರವರ ತಿದ್ದುಪಡಿಯ ಪರಿಣಾಮವೇನು? ನೀವು ಬೆಳಗ್ಗೆ ಮಸೀದಿಗೆ ಹೋಗುವಿರಿ ಮತ್ತು ನಾನು ದೇವಾಲಯಕ್ಕೆ ಹೋಗುತ್ತೇನೆ ಆದರೆ ಹಲವು ವಿಷಯಗಳ ಮೇಲೆ ನಾವು ಒಟ್ಟಿಗೆ ಸೇರಲು ಒಂದು ಸಾಮಾನ್ಯ ವೇದಿಕೆ ಇರಲೇಬೇಕಾಗುತ್ತದೆ. ಕ್ಷಾಮ ತಲೆದೋರಿದರೆ ನಾವೆಲ್ಲ ಅದನ್ನೆದುರಿಸಲು ಹೋರಾಡಬೇಕು. ಜಂಟಿಮತದಾರರ ಸಮುದಾಯಗಳಿದ್ದಲ್ಲಿ ಯಾವುದಾದರೂ ಸಮಯ ನಾವು ಒಟ್ಟಿಗೆ ಬರುವುದನ್ನು ನಿರೀಕ್ಷಿಸುತ್ತೇನೆ. ಸಮುದಾಯ ವ್ಯವಸ್ಥೆಯಡಿ ಒಬ್ಬ ಹಿಂದೂ, ಮುಸ್ಲಿಮರನ್ನು ಪ್ರತಿನಿಧಿಸಬಹುದು ಒಂಟಿ ಮತದಾರರ ಒಬ್ಬ ಮುಸ್ಲಿಮ್ ಹಿಂದೂಗಳನ್ನು ಪ್ರತಿನಿಧಿಸಬಹುದು. ನಿಮಗಿಂತ ನಾನು ಹೆಚ್ಚು ಪ್ರತಿನಿಧಿಸುತ್ತೇನೆ. ಏಕೆಂದರೆ, ನಾನು ಮುಸ್ಲಿಂ ಅಲ್ಲ ಎಂದು ನಾನು ಬಲ್ಲೆ ಹಾಗೂ ಹಾಗಾಗಿ ನಾನು ಸದಾ ಕೀಳರಿಮೆ ಹೊಂದಿದ್ದು ನಿಮ್ಮ ಹಿತಾಸಕ್ತಿಗಳನ್ನು ಚೆನ್ನಾಗಿ ಗಮನಿಸುತ್ತೇನೆ. ಅದರ ಉಪಯೋಗ ಪಡೆಯಬಾರದೇಕೆ? ನನ್ನ ಗೆಳೆಯ ಶ್ರೀ ಪಾಕರ್ ಅವರು, "ನಾನು ಒಬ್ಬ ಒಳ್ಳೆಯ ಪ್ರಾಮಾಣಿಕ ಪ್ರತಿನಿಧಿಯನ್ನು ಬಯಸುತ್ತೇನೆ" ಎಂದು ಹೇಳುತ್ತಾರೆ, ಒಳ್ಳೆತನ ಎಂಬುದರ ವ್ಯಾಖ್ಯೆ ಏನು? ಒಳ್ಳೆತನ ಒಬ್ಬ ಮುಸ್ಲಿಮ್ ಆಗುವುದರಿಂದ ಅಥವಾ ಒಬ್ಬ ಹಿಂದೂ ಆಗುವುದರಿಂದ ಬರುವುದಿಲ್ಲ. ಅವರು ಮುಸ್ಲಿಮರ ಧ್ಯೇಯವನ್ನು ಪರಿಣಾಮಕಾರಿಯಾಗಿ ಬೆಂಬಲಿಸುವ ಒಬ್ಬ ವ್ಯಕ್ತಿಯನ್ನು ಬಯಸುತ್ತಾರೆ ಎಂದು ನಾನು ನಂಬುತ್ತೇನೆ. ಬಂಗಾಳದಲ್ಲಿ ಹತ್ಯಾಕಾಂಡ ಆದಾಗ ಎಷ್ಟು ಜನ ಹಿಂದೂಗಳಿದ್ದರು ಮತ್ತು ಎಷ್ಟು ಜನ ಮುಸ್ಲಿಮರಿದ್ದರು ಎಂದು ವಿಚಾರಣೆ ಮಾಡಹೋಗಲಿಲ್ಲ. ಹಾಗೂ ಇಂದಿಗೂ ನಮಗೆ ಅದು ತಿಳಿದಿಲ್ಲ. ದುರದೃಷ್ಟವಶಾತ್ ಹಿಂದೂಗಳು ಕೂಡ ಕೆಲವೊಮ್ಮೆ, "ನಾವು ಇನ್ನೂ ಮಾನವರು; ದೇಶ ವಿಭಜನೆಯಾಗಿರುವಲ್ಲಿ, ಅವರನ್ನು ಇನ್ನೂ ಏಕೆ ರಕ್ಷಿಸಬೇಕು? ಈ ವ್ಯಾಪಾರ ಮುಗಿದುಹೋಗಲಿ" ಎಂದು ಭಾವಿಸುವರು. ದಯಮಾಡಿ ಇದನ್ನೆಲ್ಲ ತಪ್ಪಿಸಿ; ಈಗ ಅವರು ತಾವು ಮುಸ್ಲಿಮರ ಸೂಕ್ತ ಪ್ರತಿನಿಧಿಯಲ್ಲ. ಅವರ ವಿಶ್ವಾಸ ಪಡೆದಿಲ್ಲ ಎಂದು ಹೇಳುತ್ತಾರೆ. ಭಾರತ ಒಂದು ಜಾತ್ಯತೀತ ರಾಷ್ಟ್ರ ಆಗುವ ಬದಲು ಒಂದು ಧಾರ್ಮಿಕ ರಾಷ್ಟ್ರವಾಗುವಲ್ಲಿ ಒಬ್ಬ ಹಿಂದೂ ಅಥವಾ ಒಬ್ಬ ಮುಸ್ಲಿಮ್ ಪುರೋಹಿತನೇ ಪ್ರಮುಖವಾಗಿ ನಿಂತು ನಡೆಸುತ್ತಾನೆ. ಅದಕ್ಕಿಂತ ಹೆಚ್ಚೇನಿಲ್ಲ. ಆದುದರಿಂದ ಇವೆಲ್ಲ ನಮ್ಮನ್ನು ಒಟ್ಟಿಗೆ ತರುವುದಿಲ್ಲ. ನಾನೊಬ್ಬ ಹಿಂದೂ–ನನಗೆ ನಿಮ್ಮನ್ನು ಪ್ರತಿನಿಧಿಸಲು ಅವಕಾಶ ಕೊಟ್ಟರೆ ನಾನು ನಿಮ್ಮಲ್ಲಿಗೆ ಕನಿಷ್ಠ ಪ್ರತಿ ೪ ವರ್ಷಗಳಿಗೆ ಬರುತ್ತೇನೆ. ಹಾಗೆಯೇ ಒಬ್ಬ ಮುಸ್ಲಿಮ್ ಹಿಂದೂಗಳ ಬಳಿಗೆ ಬರಬಹುದಾಗುತ್ತದೆ. ಕಡೆಗೆ ನಾವು ಒಟ್ಟಿಗೆ ಬರುತ್ತೇವೆ. ಇದು ಜಂಟಿಮತದಾರರ ಸಮುದಾಯ ಇದ್ದರೆ ಮಾತ್ರ ಸಾಧ್ಯ. ನಾನು ಆತನ ಮತಕ್ಕೆ ಬರದಿದ್ದರೆ, ನಾನು ಆತನ

ಪ್ರತಿನಿಧಿ ಆಗದಿದ್ದರೆ ಭೂಮಿಯ ಮೇಲೆ ನನ್ನನ್ನು ಆತನೊಂದಿಗೆ ಬಂಧಿಸುವುದಕ್ಕೇನಿದೆ? ಪ್ರಾಯೋಗಿಕ ದೃಷ್ಟಿಕೋನದಿಂದ ನಾನು ಈ ತಿದ್ದುಪಡಿ ಮಂಡಿಸಿದ ಮಿತ್ರರನ್ನು ಕೇಳುತ್ತೇನೆ: ಅವರು ಇನ್ನೂರರ ಒಂದು ಸದನದಲ್ಲಿ ಒಂದೋ ಅಥವಾ ಮೂರೋ ಅಥವಾ ಇಪ್ಪತ್ತೋ ಇದ್ದರೆ ಇತರರ ಸಹಕಾರವಿಲ್ಲದೆ ಅವರು ಏನು ತಾನೆ ಮಾಡಬಹುದು? ಅವರೇನು ಇಲ್ಲಿ ಇಸ್ಲಾಮ್ ಬೋಧಿಸುವರೇ ಅಥವಾ ಕುರಾನ್ ಪಠಿಸುವರೆ? ಇಲ್ಲಿ ವೇದಗಳನ್ನು ಪಠಿಸಲು ನನಗೆ ಅವಕಾಶವಿರುವುದೆ? ಈ ಸದನದಲ್ಲಿ ಬಹುಮತದ ನೆರವಿಲ್ಲದೆ ಒಬ್ಬರು ಏನು ತಾನೆ ಮಾಡಬಲ್ಲರು? ನಾನು ಇಲ್ಲಿ ಬಹು ಬೇಗ ಒಂದು ಜಾತ್ಯತೀತ ರಾಷ್ಟ್ರ ಉದಯಿಸುವುದೆಂದು ನಿರೀಕ್ಷಿಸುತ್ತೇನೆ ತಾವು ನಮ್ಮ ಮತ್ತು ಒಂದು ಜಾತ್ಯತೀತ ರಾಷ್ಟ್ರಸ್ಥಾಪನೆಯ ನಡುವೆ ಇರುತ್ತೀರಾ? ಇತಿಹಾಸದಲ್ಲಿ ದಾಖಲಾದ ಘಟನೆಗಳಿಂದ ತಾವು ಲಾಭ ಪಡೆಯುವುದಿಲ್ಲವೆ? ೧೫೦ ವರ್ಷಗಳ ಹಿಂದೆ ಅಮೆರಿಕ ಏನಾಗಿದ್ದಿತು? ಅವರ ಇತಿಹಾಸದ ಪುಸ್ತಕಗಳಿಂದ ನೀವು ಪಾಠಕಲಿಯುವುದಿಲ್ಲವೆ? ೧೫೦ ವರ್ಷಗಳ ಹಿಂದೆ ಅವರ ಮಣ್ಣಿನ ನೆಲದಿಂದ ಹೊರಗೆ ಹಾಕಲ್ಪಟ್ಟ ವ್ಯಕ್ತಿಗಳು ಎಸ್.ಎಸ್. ಮೇ ಫ್ಲವರ್‌ಹಡಗಿನಲ್ಲಿ ಇತರ ನೆಲಗಳ ಹುಡುಕಾಟಕ್ಕಾಗಿ ಸಾಗಿದರು ಮತ್ತು "ಪಶ್ಚಿಮ ಇಂಡಿಯಾ" ತಲಪಿದರು. ಅದೇ ಪ್ರಸ್ತುತ ಅಮೆರಿಕ. ಇಂದು ಆರ್ಥಿಕ ಕ್ಷೇತ್ರದಲ್ಲಿ ಜಗತ್ತಿನ ಯಜಮಾನರು ಅವರೇ ಇಂದು ಏನಾದರೊಂದು ಮಾಡುತ್ತಿರುವವರು. ಅವರು ನಮ್ಮ ಜನರಿಗೆ ಪಾಠ ಹೇಳುತ್ತಿದ್ದಾರೆ. ನಾವಾದರೂ ೫೦೦೦ ವರ್ಷಗಳ ಹಿಂದೆಯೇ ಹೇಗೆ ನಮ್ಮ ಹಲ್ಲುಗಳನ್ನು ಶುಚಿ ಮಾಡಿಕೊಳ್ಳಬೇಕು ಮತ್ತು ನಮ್ಮ ಮುಖಗಳು ತೊಳೆಯಬೇಕು ಇವೆಲ್ಲ ತಿಳಿದವರು. ನಾವು ನಮ್ಮ ಆಹಾರವನ್ನು ಸ್ನಾನ ಮಾಡದೆ ತೆಗೆದುಕೊಳ್ಳುವುದಿಲ್ಲ ಎಂಬ ಸತ್ಯವನ್ನು ಅವರು ತಿಳಿದಿಲ್ಲ. ಅವರು ಬಂದು ಈ ವಿಷಯಗಳನ್ನು ನಮಗೆ ಹೇಳುತ್ತಾರೆ. ಏಕೆಂದರೆ, ನಮ್ಮ ದೇಶದಲ್ಲಿ ಸಮಗ್ರವಾಗಿರುವುದನ್ನು ಬಿರಿಯುವ ಬಲಗಳು ಕೆಲಸ ಮಾಡುತ್ತಿವೆ. ಹಾಗಾಗಿ ನಮ್ಮ ಮೇಲೆ ಹರಿಹಾಯ್ದಿದ್ದಾರೆ. ಇಟಾಲಿಯನ್ನರು, ಫ್ರೆಂಚ್ ಜನ, ಸ್ಪೇನೀಯರು ಮತ್ತಿತರರು ಅಮೆರಿಕ ಖಂಡದಲ್ಲಿ ಒಟ್ಟಿಗೆ ಸೇರಿಲ್ಲವೇನು? ಆದುದರಿಂದ ಒಂದು ಜಾತ್ಯತೀತ ರಾಷ್ಟ್ರ ಸೃಷ್ಟಿಸುವುದು ನಮ್ಮ ಕೈಲೇ ಇದೆ. ಈ ಸಂಬಂಧವಾಗಿ ವಿಭಜನೆಗೆ ಮೊದಲು ಏನೇ ಹೇಳಿರಬಹುದಾದ ಶ್ರೀ ಜಿನ್ನಾರನ್ನು ಉಲ್ಲೇಖಿಸುವುದು ನನಗೆ ತಪ್ಪಾಗಿ ಕಾಣುವುದಿಲ್ಲ ಅವರೆಂದರು: 'ಇಲ್ಲಿ ಒಂದು ಜಾತ್ಯತೀತ ರಾಷ್ಟ್ರ ಹೊಂದುವುದು ನನ್ನ ಕಲ್ಪನೆ' ಯಾರೋ ಕೇಳಿದರು: 'ಧಾರ್ಮಿಕವೊ ಅಥವಾ ಜಾತ್ಯತೀತವೋ' ಅವರು ಹೇಳಿದರು: 'ಹಿಂದೂಗಳು ಮತ್ತು ಮುಸ್ಲಿಮರು ನನಗೊಂದೆ. ಅವರು ಸಮಾನ ಅವಕಾಶಗಳನ್ನು ಹೊಂದಬೇಕು. ನಾನು ನಮ್ಮಿಬ್ಬರಿಗೂ ಒಂದೇ ರಾಷ್ಟ್ರವನ್ನು ಮಾಡಲು ಯತ್ನಿಸುತ್ತೇನೆ.' ನಮ್ಮ ಮುಸ್ಲಿಮ್ ಮಿತ್ರರೇ ಶ್ರೀ ಜಿನ್ನಾರಿಗೆ ನಿಷ್ಠರೂ ಮತ್ತು ಅವರನ್ನು ನನ್ನಂತೆ ಗೌರವದಿಂದ ಕಾಣುವರೇ ಆಗಿದ್ದು ಈ ವಿಷಯದಲ್ಲಿ ವಿಭಿನ್ನವಾಗಿ ಏಕೆ ಆಲೋಚಿಸಬಾರದು? ನಾನು ಒಬ್ಬನೇ ವ್ಯಕ್ತಿಯನ್ನು ಒಂದು ಅಲ್ಪಸಂಖ್ಯಾತ ಎಂದು ಕರೆಯಲು ಸಿದ್ಧವಿಲ್ಲ. ನಾನು ಅಲ್ಪಸಂಖ್ಯಾತ ಎಂಬ ಶಬ್ದವನ್ನೆ ಇಷ್ಟ ಪಡುವುದಿಲ್ಲ ಆದುದರಿಂದ ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತಿದ್ದೇನೆ ಎಂದು ಹೇಳುತ್ತಿದ್ದೇನೆ.

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಸದನದ ಮುಂದೆ ವರ್ಷಗಳ ಕಾಲ ಚರ್ಚಿಸಿದ ವಿಷಯಗಳನ್ನು ಪುನಃ ಚರ್ಚಿಸಲು ನಮಗೆ ಅವಕಾಶ ಕೊಡಬೇಕೆ?

**ಮಾನ್ಯ ಸಭಾಧ್ಯಕ್ಷರು** : ಶ್ರೀ ಬಿ. ದಾಸ್ ಅವರು ಎತ್ತಿದ ಕ್ರಿಯಾಲೋಪವನ್ನು ನಾನು ಮೆಚ್ಚುತ್ತೇನೆ. ಸದಸ್ಯರು ತಾವಾಗಿಯೇ ಪ್ರಸ್ತಾವದ ವಿಷಯಕ್ಕಷ್ಟೆ ಸೀಮಿತಗೊಳ್ಳಬೇಕು ಎಂದು ನಿರೀಕ್ಷಿಸುತ್ತೇನೆ. ನಾವು ಹಲವು ಅಂಶಗಳನ್ನು ಕುರಿತು ದೀರ್ಘವಾಗಿ ಮಾತನಾಡಬಹುದು ನಿಜ. ನಾನು ಸದಸ್ಯರು ಗಡಿಯಾರದ ಕಡೆಗೂ ಒಂದು ಕಣ್ಣಿಡಬೇಕೆಂದು ನಿರೀಕ್ಷಿಸುತ್ತೇನೆ. ಶ್ರೀ ಅಯ್ಯಂಗಾರ್ ಈಗಾಗಲೇ ೨೦ ನಿಮಿಷಗಳಿಗೂ ಹೆಚ್ಚು ತೆಗೆದುಕೊಂಡಿರುತ್ತಾರೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಹೌದು ಮಾನ್ಯರೆ, ಆದರೆ ನಾನು ನಮ್ಮ ಮನಸ್ಸಿನಲ್ಲಿ

ಪ್ರಮುಖವಾಗಿರುವ ವಿಷಯದ ಮೇಲೆ ಮೊದಲಬಾರಿಗೆ ಮಾಡನಾಡುತ್ತಿದ್ದೇನೆ. ಕೆಲವು ಘಟನೆಗಳನ್ನು ಉಲ್ಲೇಖಿಸುವುದು ಸುಲಭವೇನಲ್ಲ. ಪಂಜಾಬಿನಲ್ಲಿ ೧೬೫ ನಾಗರಿಕ ಅಧಿಕಾರಗಳನ್ನು ರೈಲಿನಲ್ಲಿ ಇಲ್ಲಿಂದ ಕರಾಚಿಗೆ ಕಳುಹಿಸಲಾಗಿತ್ತು. ಆ ಪೈಕಿ ಇಬ್ಬರು ಮಾತ್ರ ಹಿಂದಿರುಗಿದ್ದಾರೆ. ಅವರು ಭಾರತಕ್ಕೆ ಮರಳಿದ್ದಾರೆ, ನೆನ್ನೆ 'ಹಿಂದುಸ್ಥಾನ ಟೈಮ್ಸ್'ನಲ್ಲಿ ಇದೇ ಸುದ್ದಿ ಇತ್ತು. ದೆಹಲಿ ಸಚಿವಾಲಯಕ್ಕೆ ಸೇರಿದ ೧೬೩ ಪೌರಸೇವಕರಿಗೆ ಏನಾಗಿದೆ? ಅವರ ಪಾಡು ಇನ್ನೂ ತಿಳಿದಿಲ್ಲ. ನಾನು ಇಂತಹ ಘಟನೆಗಳನ್ನು ಕುರಿತಂತೆ ೨೦ ನಿಮಿಷಗಳಷ್ಟೇ ಅಲ್ಲ ಇನ್ನೂ ೨೦ ವರ್ಷಗಳನ್ನು ಅಳುತ್ತಾ ಮತ್ತು ವ್ಯಥೆ ಪಡುತ್ತಾ ಕಳೆಯುತ್ತೇನೆ. ಒಂದು ಪರಿಹಾರ ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದೇನೆ. ನಾನು ನನ್ನ ಗೆಳೆಯ ಶ್ರೀ ಪಾಕರ್‌ರನ್ನು ಕೋರಲು ಯತ್ನಿಸುತ್ತಿದ್ದೇನೆ ಮತ್ತು ಮತ್ತೊಮ್ಮೆ ಅವರಲ್ಲಿ ಒಂದು ಜಾತ್ಯತೀತ ರಾಷ್ಟ್ರ ಮೂಡಿಸಲು ಮನವಿ ಮಾಡುತ್ತಿದ್ದೇನೆ. ಸಾಂಸ್ಕೃತಿಕ, ಭಾಷೆ ಮತ್ತು ಶೈಕ್ಷಣಿಕ ವಿಷಯಗಳಿಗೆ ಯಥೇಚ್ಛ ಅವಕಾಶ ಕಲ್ಪಿಸಲಾಗಿದೆ. ಮತ್ತು ಇನ್ನೇನಾದರೂ ತೊಡರು ಇದ್ದರೆ ನಾವು ಒಟ್ಟಿಗೆ ಕುಳಿತು ಅದನ್ನು ಬಗೆಹರಿಸೋಣ ಯಾವುದೇ ಒಂದು ಸಮುದಾಯದ ಅಥವಾ ವ್ಯಕ್ತಿಯ ಆಸಕ್ತಿಯನ್ನು ಉಳಿದವರ ಕಾರಣಕ್ಕಾಗಿ ಬಲಿ ಕೊಡುವುದು ಬೇಡ.

ರಾಜಕೀಯ ವಿಷಯಗಳನ್ನು ಕುರಿತಂತೆ, ನಾವು ಒಟ್ಟಿಗೆ ಕುಳಿತು ನಮ್ಮ ಸಮಸ್ಯೆಗಳನ್ನು ಬಗೆಹರಿಸೋಣ. ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ಕೊನೆಗಾಣಿಸಿದ್ದೇವೆ. ಈಗ ನಾವು ಒಂದು ಜಾತ್ಯತೀತ ರಾಷ್ಟ್ರ ಕಟ್ಟುವೆವಾದರೆ ವಿಶ್ವದಲ್ಲಿ ಅತ್ಯಂತ ಅಗ್ರಗಣ್ಯ ರಾಷ್ಟ್ರ ಎಂದು ನಮ್ಮ ತಲೆಗಳನ್ನೆತ್ತಿ ನಿಲ್ಲಬಹುದು. ನಾವು ಈಚೆಗೆ ಪಾಶ್ಚಾತ್ಯ ಸಂಸ್ಕೃತಿ ಕುರಿತು ಆಲೋಚಿಸುತ್ತಿದ್ದೇವೆ. ಪೂರ್ವದಲ್ಲಿ ಉದಯಿಸಿದ ವಿವೇಕದ ಸೂರ್ಯ ದುರದೃಷ್ಟವಶಾತ್ ಪಶ್ಚಿಮದಲ್ಲಿ ಮುಳುಗಿದ್ದಾನೆ. ನಾವು ಆ ಸೂರ್ಯನನ್ನು ಮತ್ತೆ ಕಾಣಿಸಿಕೊಳ್ಳೋಣ. ನಾವು ಅವನನ್ನು ಪೂರ್ವದಲ್ಲಿ ವೈಭವದಿಂದ ಉದಯಿಸುವಂತೆ ಮಾಡೋಣ. ಈ ಕೆಲವು ಮಾತುಗಳೊಂದಿಗೆ ನಾನು ನನ್ನ ಮಿತ್ರ ಶ್ರೀ ಪಾಕರ್‌ರನ್ನು ಮತ್ತಿತರರು ಯಾರು ಈ ತಿದ್ದುಪಡಿಯನ್ನು ಮಂಡಿಸುವಲ್ಲಿ ಅವರ ಜೊತೆ ಗೂಡಿರುವರೋ ಅವರನ್ನು ಅದನ್ನು ಹಿಂತೆಗೆದುಕೊಳ್ಳಬೇಕೆಂದೂ ಮತ್ತು ಸರ್ವಾನುಮತದಿಂದ ಜಂಟಿ ಮತದಾರರ ಸಮುದಾಯಕ್ಕೆ ಬದ್ಧವಿರಬೇಕೆಂದು ಕೋರುತ್ತೇನೆ (ಹರ್ಷೋದ್ಗಾರ).

**ಮಾನ್ಯ ಸಭಾಧ್ಯಕ್ಷರು** : ನಾನೀಗ ಮಹಾವೀರ ತ್ಯಾಗಿಯವರನ್ನು ಮಾತನಾಡಲು ಕರೆಯುತ್ತಿದ್ದೇನೆ. ಅವರು ವಿಷಯದತ್ತ ಕಡಿಮೆ ಸಮಯ ತೆಗೆದುಕೊಳ್ಳುವರೆಂದು ನಾನು ಆಶಿಸುತ್ತೇನೆ ಹಾಗೂ ಕೆಲವು ನಿಮಿಷಗಳ ಹಿಂದೆ ನನ್ನ ಟೀಕೆಗಳನ್ನು ಅವರು ಕೇಳಿದ್ದಾರೆಂದುಕೊಂಡಿದ್ದೇನೆ.

**ಶ್ರೀ ಮಹಾವೀರ ತ್ಯಾಗಿ** (ಉ.ಪ್ರ : ಸಾಮಾನ್ಯ) : *[ಮಾನ್ಯರೆ, ಕ್ಷಮಿಸಿ ಹಿಂದಿನ ಭಾಷಣಕಾರರು ಎಚ್ಚರಿಕೆ ಕೊಟ್ಟಿದ್ದಾರೆ. ನಾನಾದರೂ ಇಲ್ಲಿಗೆ ಶ್ರೀ ಪಾಕರ್ ಅವರು ಮಂಡಿಸಿದ ತಿದ್ದುಪಡಿಯನ್ನು ವಿರೋಧಿಸಲು ಬಂದಿದ್ದೇನೆ. ತಮ್ಮ ಸೂಚನೆಯನುಸಾರ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದರೆ ಈ ಪ್ರಶ್ನೆಯ ಪರಿಗಣನೆಗೆ ಮುಂದಾಗುವ ಮುನ್ನ ನಾನು ನಮ್ಮ ದೇಶ ಪ್ರತ್ಯೇಕ ಮತದಾರರ ಸಮುದಾಯ ಪ್ರಯೋಗದ ಒಳ್ಳೆ ವ್ಯವಹಾರ ಹೊಂದಿತ್ತು ಎಂಬುದನ್ನು ನೆನಪು ಮಾಡಲು ಇಷ್ಟ ಪಡುತ್ತೇನೆ. ಹಿಂದೂಗಳು ಮತ್ತು ಮುಸ್ಲಿಮರು ಇಲ್ಲಿರುವವರು ಅದರೊಂದಿಗೆ ತುಂಬ ಪರಿಚಿತರೇ ಆಗಿದ್ದಾರೆ. ಪ್ರಾಣಾಂತಕ ನಂಜಿನ ಈ ಚುಚ್ಚುಮದ್ದು ನಮ್ಮನ್ನಾಳಿದ ಇಂಗ್ಲಿಷರು ಕೊಟ್ಟಿದ್ದಾರೆ]*

**ಬಿ. ಪಾಕರ್ ಸಾಹಿಬ್ ಬಹಾದೂರ್** : ಮಾನ್ಯರೆ, ಒಂದು ಕ್ರಿಯಾಲೋಪ; ಗೌರವಾನ್ವಿತ ಸದಸ್ಯರು ಇಂಗ್ಲಿಷ್ ಭಾಷೆಯೊಂದಿಗೆ ತುಂಬ ಪರಿಚಯವಿರುವರು ಎಂದು ನಾನು ತಿಳಿಯುತ್ತೇನೆ. ಹೇಗೆ ಆಗಲಿ, ಗೌರವಾನ್ವಿತ ಸದಸ್ಯರು ಇಂಗ್ಲಿಷ್‌ನಲ್ಲಿ ಮಾತನಾಡಿದರೆ ನಾನವರಿಗೆ ಹೆಚ್ಚು ಆಭಾರಿಯಾಗಿರುತ್ತೇನೆ. ಇದರಿಂದ ನಾನು ಅವರನ್ನು ಅರ್ಥಮಾಡಿಕೊಳ್ಳಲು ಸಮರ್ಥನಾಗಬಹುದು.

**ಶ್ರೀ ಮಹಾವೀರ ತ್ಯಾಗಿ** : ನಾನು ಇಂಗ್ಲಿಷ್‌ನಲ್ಲಿ ಮಾತನಾಡಬಲ್ಲೆ. ಆದರೆ ಇಂಗ್ಲಿಷ್ ನನ್ನ

ಭಾಷೆಯಾಗಿಲ್ಲವಾಗಿ ಅದು ವ್ಯಾಕರಣಬದ್ಧವಾಗಿಲ್ಲದೆ ಭಾಷಾನುಗುಣವಾಗಿಲ್ಲದಿರಲು ಸಾಧ್ಯ. ನನ್ನ ಮಿತ್ರರು ಈ ವಿಧದ ಇಂಗ್ಲಿಷ್ ಎದುರಿಸಲು ಸಿದ್ಧರಿದ್ದರೆ ನಾನು ಅವರ ನಿರ್ಬಂಧಕ್ಕೆ ಒಪ್ಪುತ್ತೇನೆ.

**ಬಿ. ಪಾಕರ್ ಸಾಹಿಬ್ ಬಹಾದೂರ್ :** ಒಂದು ಕ್ರಿಯಾಲೋಪ ಕುರಿತಂತೆ, ಅವರು ನಮ್ಮನ್ನು ಗುಲಾಮಗಿರಿಯಡಿ ಇರಿಸಲು ಬಂದಾಗ ಆ ಚುಚ್ಚುಮದ್ದನ್ನು ಯಶಸ್ವಿಗಾಗಿ ಕೊಟ್ಟರು ಎಂದು ನಾನು ತಿಳಿಯುತ್ತೇನೆ. ಅವರು ಹಾಗೆ ನೋಡಿದರೆ ದೇಶದಲ್ಲಿ ದೈತ್ಯದಂತವನ್ನು ಬಿತ್ತಿದರು ಮತ್ತು ಅದು ಬೆಳೆದು ಹಿಂದೂಗಳು ಮತ್ತು ಮುಸ್ಲಿಮರು ಎಂಬ ತನ್ನ ಕೋಮುವಾದದ ಪ್ರಜ್ಞೆಯನ್ನು ಮೂಡಿಸಿತು. ಅವರು ಈ ಬೆಳೆಗೆ ನೀರಾವರಿ ಮಾಡುವಂತೆಯೂ ಮಾಡಿದರು ಮತ್ತು ನಾವು ಅದನ್ನು ತುಂಬ ಇಷ್ಟದಿಂದ ನೀರಿನ ಬದಲು ನಮ್ಮದೇ ರಕ್ತದಿಂದ ಮಾಡಿದೆವು. ಬೆಳೆಯನ್ನು ಅವರು ಚೆನ್ನಾಗಿ ಉಪಚರಿಸಿದ್ದು ಇಂದು ನಾವು ಆ ಪ್ರಾಣಾಂತಿಕ ಬೆಳೆಯ ಕಟಾವು ಮಾಡುತ್ತಿದ್ದೇವೆ. ಅವರ ರಾಜನೀತಿ ತಂತ್ರದ ಕಹಿ ಅನುಭವದ ಅನಂತರ, ಇಂದಿಗೂ ಈ ಸದನದಲ್ಲಿ ನಾವು ಎದ್ದು ನಿಂತು ಹೊಸ ನಿರ್ಮಾಣ ಮಾಡುತ್ತಿರುವಾಗ, ನಮ್ಮ ಶಾಂತಿ ಮತ್ತು ಸೌಖ್ಯಕ್ಕೆ ಭವಿಷ್ಯದ ತಲೆಮಾರುಗಳಿಗೆ ಶಾಸನಗಳನ್ನು ಮಾಡುವಾಗ ಪುನಃ ನಾವು ಆ ನಂಜುಕಾರಕ ಚುಚ್ಚುಮದ್ದಿನಿಂದ ಆರಂಭಿಸಬೇಕೆಂದು ಹೇಳಿದರೆ ನಾನು ಅದಕ್ಕೆ ಒಪ್ಪುವುದಿಲ್ಲ. ನಾವು ಅದರ ಬಹಳಷ್ಟನ್ನು ನೋಡಿದ್ದೇವೆ–ಇಂದು ನಾವು ಪ್ರಾಣಾಂತಿಕ ಫಸಲನ್ನು ಕಟಾವು ಮಾಡುತ್ತಿದ್ದೇವೆ. ಅದೂ ನಮ್ಮ ದೇಶದ ಗಡಿಗಳಲ್ಲಿ ರಕ್ತದೋಕುಳಿ ಆಗುತ್ತಿರುವಾಗ ಮತ್ತು ನಾಗರಿಕ ಎಂದೂ ಕಂಡಿರದ ಹದಗೆಟ್ಟ ಅವ್ಯವಸ್ಥೆ ಇರುವಲ್ಲಿ ಮತ್ತು ಇಲ್ಲಿಂದ ಕೇವಲ ನೂರು ಮೈಲಿಗಳ ಅಂತರದ ಸ್ಥಳಗಳು ಸುರಕ್ಷಿತವಿಲ್ಲದಿರುವಾಗ ಆಗಿದ್ದು ನಾವು ಇದೆಲ್ಲ ಬ್ರಿಟಿನ್ನರಿಂದ ನಮ್ಮ ರಕ್ತನಾಳಗಳಲ್ಲಿ ಚುಚ್ಚಲಾದ ಪ್ರತ್ಯೇಕತಾಪ್ರವೃತ್ತಿಯ ಫಲ ಎಂದು ಮನವರಿಕೆ ಮಾಡಿಕೊಂಡಿದ್ದೇವೆ. ಈಗ ನಾವು ಇಲ್ಲಿಂದ ಬ್ರಿಟಿಷರನ್ನು ಏಳು ಸಮುದ್ರಗಳಾಚೆ ಎಸೆದಿದ್ದೇವೆ ಮತ್ತು ನಾವು ಪುನಃ ಪ್ರತ್ಯೇಕತಾ ಪ್ರವೃತ್ತಿಯನ್ನು ಇಂದು ಮಾಡುತ್ತಿರುವ ಸಂವಿಧಾನದೊಳಗೆ ಲೀನಗೊಳಿಸುತ್ತಿರುವುದು. ಆಶ್ಚರ್ಯಕರವಾಗಿದೆ. ನಮ್ಮ ದೇಶ ಒಟ್ಟಾರೆಯಾಗಿ ಇದನ್ನು ವಿರೋಧಿಸುತ್ತದೆ. ಸಮಾಜೀಕರಣದಲ್ಲಿ ವೈಯಕ್ತಿಕವಾಗಿ ನಾನು ಆಸ್ತಿ ಮತ್ತು ರಾಜಕಾರಣ ಎರಡು ಕಲಬೆರಕೆ ರಹಿತ ಸಾಮಾಜಿಕರಿಸಬೇಕೆಂದು ನಂಬಿಕೆ ಉಳ್ಳವನು. ನಾನು ಆಸ್ತಿಯನ್ನು ಸಾಮಾಜೀಕರಿಸಬೇಕೆಂದು ನಂಬುವವನು. ಹಾಗೂ ನಾನು ಕಲಬೆರಕೆ ರಹಿತ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವವನು. ಅಂದರೆ ಜನರ ಒಂದು ನಿಜ ಪ್ರಾತಿನಿಧ್ಯ ಯಾವುದೇ ಹೆಚ್ಚಿನ ಸೌಲಭ್ಯವಿಲ್ಲದ, ನೈಜ ಕೃಪೆ ಇಲ್ಲದ, ನೈಜ ಜನರ ವಿಭಾಗದ ಅಥವಾ ನೈಜ ವ್ಯಕ್ತಿಯ ಯುಕ್ತ ವಿಶೇಷ ಸೌಲಭ್ಯಗಳ ಉಪೇಕ್ಷೆ ಇರದ ಪ್ರಾತಿನಿಧ್ಯ. ಈ ಹಕ್ಕುಗಳಿಂದ ಒಬ್ಬ ವ್ಯಕ್ತಿಯನ್ನು ವಂಚಿತನಾಗಿಸದೆ ಎಲ್ಲರ ಮುಕ್ತ ಪ್ರಾತಿನಿಧ್ಯ ಇರಬೇಕು ಮತ್ತು ಕೇಂದ್ರ ಅಥವಾ ಪ್ರಾಂತೀಯ ಶಾಸನಸಭೆಗಳ ಎಲ್ಲ ಜನರನ್ನು ಪೂರ್ಣ ಪ್ರತಿನಿಧಿಸಬೇಕು ಮತ್ತು ಯುಕ್ತ ರೀತಿಯಲ್ಲಿ ಪ್ರತಿನಿಧಿಸಬೇಕು. ಯಾವುದೇ ಒಂದರ ಮಾರ್ಗದಲ್ಲಿ ನಾವು ಅಡೆತಡೆಗಳನ್ನು ಹಾಕಿದರೆ ಅಥವಾ ಇತರರ ಮಾರ್ಗಕ್ಕೆ ತಡೆಹಾಕಿದರೆ ಅಥವಾ ಇತರರಿಗೆ ವಿಶೇಷ ಸೌಲಭ್ಯಗಳು ಕೊಟ್ಟರೆ ಅದು ಕಲಬೆರಕೆರಹಿತ ಪ್ರಜಾಪ್ರಭುತ್ವದಲ್ಲಿ ಇರಲೇಬೇಕಾದ, ನೈಜ ಶುದ್ಧ ಪ್ರಾತಿನಿಧ್ಯವಾಗಿ ಇರುವುದಿಲ್ಲ. ಧಾರ್ಮಿಕ (ಮತೀಯ) ಆಧಾರದ ಮೇಲೆ ಜನರ ಒಂದು ಭಾಗಕ್ಕೆ ಮತಾಧಿಕಾರದ ಹಕ್ಕು ಕೊಡುವುದು ವಿಶ್ವ ಅರ್ಥಮಾಡಿಕೊಳ್ಳಲಾಗದ ಬೇರೇನೋ ಆಗಿರುತ್ತದೆ ಹಾಗೂ ನಾವಿಲ್ಲಿ ಮತ ಕುರಿತು ಶಾಸನಮಾಡಲು ಬಂದಿಲ್ಲ. ದೇಶವ್ಯಾಪಿ ಆಧಾರದ ಮೇಲೆ ದೇಶದಲ್ಲಿ ಶಾಂತಿ ಕಾಯ್ದುಕೊಳ್ಳಲು ಶಾಸನಮಾಡಲು ಮತ್ತು ಕಾನೂನುಗಳನ್ನು ಮಾಡಲು ಬಂದಿರುತ್ತೇವೆ. ಇದು ಒಂದು ಭಾಗದ ವಿರುದ್ಧವಾಗಿ ಅಥವಾ ಒಂದು ಭಾಗದ ಪರವಾಗಿ ಶಾಸನಮಾಡುತ್ತಿರುವ ಪ್ರಶ್ನೆಯಲ್ಲ. ಇದು ಪರಿಶೀಲಿಸಬೇಕಾದ ಒಂದು ಅಥವಾ ಇನ್ನೊಂದು ಭಾಗದ ಪ್ರಶ್ನೆಯಲ್ಲ. ನಾವು ಶಾಸನಮಾಡುವಾಗ ಇಡೀ ದೇಶವನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದು ಆಗಿರುತ್ತದೆ. ಆದುದರಿಂದ ಧಾರ್ಮಿಕ ವಿಭಾಗಗಳಿಂದ ಪ್ರಾತಿನಿಧ್ಯ ಪಡೆಯುವ ಕಲ್ಪನೆ ಬರಿಯ ನಗೆಪಾಟಲು.

ಇದುವರೆಗೂ ನಾವು ಅದನ್ನು ಹೊಂದಿದ್ದೆವು. ಆದರೆ ಅದನ್ನು ಮುಂದುವರಿಸಲು ಆಗುವುದಿಲ್ಲ. ಏಕೆಂದರೆ, ಭವಿಷ್ಯದ ಸಂವಿಧಾನ ಮತಗಳ ಒಂದು ಸಂವಿಧಾನವಾಗಿರಬೇಕೆಂದು ಅರ್ಥವಲ್ಲ, ಒಂದು ರಾಷ್ಟ್ರ ಹಲವಾರು ಮತಗಳ ಅಥವಾ ಪಂಗಡ ಅಥವಾ ಸಮೂಹಗಳ ಒಂದು ಮಹಾ ಒಕ್ಕೂಟವಲ್ಲ. ದೇಶದ ಕಾನೂನುಗಳು ಮತ್ತು ಆಡಳಿತವನ್ನು ದೇಶದಲ್ಲಿ ಬಹುದೊಡ್ಡ ವಿಶ್ವಾಸವನ್ನು ಅರ್ಹರಿಗೆ ಗಳಿಸಿದವರಿಗೆ ಮಾತ್ರ ವಹಿಸಬಹುದು ಮತ್ತು ಅವರು ನಿರ್ವಹಿಸಬಹುದು, ಪ್ರಮುಖ ರಾಜಕೀಯ ಪಕ್ಷವು ಒಂದು ನಿಯಮವಾಗಿ ದೇಶದ ಆಡಳಿತದ ಅಧಿಕಾರ ವಹಿಸಿಕೊಳ್ಳಬಲ್ಲದು. ಎಲ್ಲೆಲ್ಲೂ ಅದು ಮಾನ್ಯ. ಅಲ್ಪಸಂಖ್ಯಾತರು ಅಲ್ಪಸಂಖ್ಯಾತರಾಗಿಯೇ ಉಳಿಯಬೇಕು. ಈಗ ಅಲ್ಪಸಂಖ್ಯಾತರ ಮುಂದೆ ಒಂದೇ ಆಯ್ಕೆ ಇದೆ. ಅದು ಬಹುಸಂಖ್ಯಾತರಿಗೆ ನಿಷ್ಠರಾಗಿದ್ದು ಸಹಕರಿಸಿ ಬಹುಸಂಖ್ಯಾತರ ವಿಶ್ವಾಸ ಗಳಿಸುವುದೇ ಆಗಿದೆ. ಇನ್ನೂ ಇತರ ಪರ್ಯಾಯಗಳಿವೆ. ಅವನ್ನು ನಾನು ವಾದಿಸುವುದಿಲ್ಲ ಅಥವಾ ಬೆಂಬಲಿಸುವುದಿಲ್ಲ. ಈ ಪರ್ಯಾಯಗಳಿಗನುಗುಣವಾಗಿ ಅಲ್ಪಸಂಖ್ಯಾತರು ಅಪ್ರಚಲಿತರಾಗುತ್ತಾರೆ; ದೇಶದ ಇನ್ನೊಂದು ಕಡೆ ಈ ನಂದಿಹೋಗುವ ಪ್ರಕ್ರಿಯೆ ಪ್ರಸ್ತುತ ನಡೆಯುತ್ತಲೇ ಇದೆ. ಮಾನ್ಯರೆ, ನನಗೆ ನಾವು ದೇಶದ ಯಾವ ಭಾಗಕ್ಕೆ ಸೇರಿದ್ದೇವೆ ಎಂದರೆ ಆರಂಭದಲ್ಲೇ ಯಾವುದು ಪ್ರತಿಯೊಬ್ಬರಿಗೂ, ಪ್ರತಿ ವ್ಯಕ್ತಿಗೂ ಜೀವ ಮತ್ತು ಆಸ್ತಿಪಾಸ್ತಿಯ ಸುರಕ್ಷತೆಗೆ ಭರವಸೆ ನೀಡಿದೆಯೊ ಆ ಭಾಗಕ್ಕೆ ಸೇರಿದ್ದೇವೆ. ಪಶ್ಚಿಮದಲ್ಲಿ ನಮ್ಮ ನೆರೆಯವರು ಮಾಡಿರುವಂತೆ ಭಯ ಮತ್ತು ದ್ವೇಷ ಆಧಾರದ ಮೇಲಲ್ಲದೆ ನಾವು ನಮ್ಮ ರಾಜಕಾರಣವನ್ನು ಪ್ರೀತಿ ಮತ್ತು ಸತ್ಯದ ಆಧಾರವಾಗಿರಿಸಿದ್ದೇವೆ. ನಾವು ಅಲ್ಪಸಂಖ್ಯಾತರನ್ನು ಉಪೇಕ್ಷಿಸುವುದರಲ್ಲಿಯಾಗಲಿ ಅಥವಾ ಅವರನ್ನು ಮುಗಿಸುವುದರಲ್ಲಿಯಾಗಲಿ ಅಥವಾ ಅವರನ್ನು ಸಾಮೂಹಿಕವಾಗಿ ಕೊಲ್ಲುವುದರಲ್ಲಾಗಲಿ ನಂಬಿಕೆ ಇಟ್ಟಿಲ್ಲ–ಏಕೆಂದರೆ ನಾವು ಪರಿವರ್ತನೆಯ ವಿಶ್ವಾಸಿಗಳು ಮತ್ತು ನಾವು ಅವರೆಲ್ಲರನ್ನೂ ನಮ್ಮ ವಶಕ್ಕೆ ತರುವ ಸಮರ್ಥವಿಶ್ವಾಸ ಇಟ್ಟಿದ್ದೇವೆ. ಕಾಲ ಸರಿದಂತೆ ಅಲ್ಪಸಂಖ್ಯಾತರು ಒಂದು ಸಮಷ್ಟಿಗೆ ಸೇರುತ್ತಾರೆ ಎಂದು ನಾವು ನಂಬುತ್ತೇವೆ ಮತ್ತು ಆ ಒಂದು ಸಮಷ್ಟಿಯು ಪ್ರಜಾಪ್ರಭುತ್ವದ ಜನರ ಒಂದು ಕಲಬೆರಕೆರಹಿತ ಏಕತೆ ಆಗಿರುತ್ತದೆ ನಾವು ನ್ಯಾಯಸಮ್ಮತವಾಗಿ ಅಲ್ಪಸಂಖ್ಯಾತರು ಬಹುಸಂಖ್ಯಾತರೊಳಗೆ ವಿಲೀನವಾಗುವುದನ್ನು ಬಯಸುತ್ತೇವೆ. ನಾವು ಪರಿಪೂರ್ಣ ನ್ಯಾಯದ ಆಧಾರದ ಮೇರೆಗೆ ಈ ದೇಶವನ್ನಾಳಲು ಮತ್ತು ಅದರ ಆಡಳಿತ ನಿರ್ವಹಿಸಲು ಬಯಸುತ್ತೇವೆ. ನ್ಯಾಯವೊಂದರ ಆಧಾರದ ಮೇಲೆ ಆಡಳಿತ ನಡೆಸುವ ದೇಶವೊಂದರಲ್ಲಿ ಅಲ್ಪಸಂಖ್ಯಾತರು ಅಥವಾ ಬಹುಸಂಖ್ಯಾತರು ಎಂಬ ಪ್ರಶ್ನೆ ಇರುವುದಿಲ್ಲ. ಎಲ್ಲ ವ್ಯಕ್ತಿಗಳೂ ಸಮಾನ. ರಾಷ್ಟ್ರ ಸಂಬಂಧಿಸಿದಂತೆ ನಾವು ಮತವನ್ನು ಮಾನ್ಯ ಮಾಡುವುದಿಲ್ಲ. ಯಾರು ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಮತದಾರರ ಸಮುದಾಯಕ್ಕೆ ಸಲಹೆ ಮಾಡಿದ್ದಾರೆಯೋ ಅವರು ಭಾರತದ ಒಬ್ಬ ಮಹಾನ್ ನಾಯಕನ ಟೀಕೆಗಳನ್ನು ಆ ನನ್ನ ಗೆಳೆಯರು ಮೆಚ್ಚುತ್ತಾರೇನೋ ತಿಳಿಯದು. ಆ ನಾಯಕ ಶ್ರೀ ಜಿನ್ನಾ ಇವರು ಪಾಕಿಸ್ತಾನ ವಿಧಾಯಕ ಸಭೆಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಹೀಗೆ ಹೇಳುತ್ತಾರೆ:

"ನಾವೆಲ್ಲ ಒಂದು ರಾಷ್ಟ್ರದ ಪೌರರು ಮತ್ತು ಸಮಾನ ಪೌರರು ಎಂಬ ಈ ಮೂಲಭೂತ ಸಿದ್ಧಾಂತದೊಂದಿಗೆ ನಾವು ಪ್ರಾರಂಭಿಸುತ್ತಿದ್ದೇವೆ. ನಾವು ಅದನ್ನು ನಮ್ಮ ಮುಂದೆ ನಮ್ಮ ಆದರ್ಶವಾಗಿ ಇಟ್ಟುಕೊಳ್ಳೋಣ ಮತ್ತು ಕಾಲಸರಿದಂತೆ ನೀವು ರಾಜಕೀಯ ಪರಿಜ್ಞಾನದಲ್ಲಿ ಹಿಂದೂಗಳು ಹಿಂದೂಗಳಾಗಿ ಮುಸ್ಲಿಮರು ಮುಸ್ಲಿಮರಾಗಿ ಉಳಿಯುವುದಿಲ್ಲ ಎಂಬುದನ್ನು ಕಾಣುವಿರಿ. ಏಕೆಂದರೆ ಮತ ಎನ್ನುವುದು ಪ್ರತಿ ವ್ಯಕ್ತಿಯ ವೈಯಕ್ತಿಕ ನಂಬಿಕೆ." ಮಾನ್ಯರೆ, ಭಾರತದ ಭಾಗಗಳಲ್ಲೊಂದರ ಗವರ್ನರ್ ಜನರಲ್ ಹೇಳುವ ಮಾತಿದು. ಅವರನ್ನು ಇಲ್ಲಿ ಅತಿ ಕೆಟ್ಟ ಕೋಮುವಾದಿ ಎಂದು ತಿಳಿಯಲಾಗಿದೆ ಆದರೂ ಅವರು ಒಂದು ಕೋಮುವಾದಿ ರಾಷ್ಟ್ರದ ಆಡಳಿತಗಳನ್ನು ವಹಿಸಿಕೊಂಡಾಗಲೂ ಮತ್ತು ಹಿಂದೂಗಳು ಮತ್ತು ಮುಸ್ಲಿಮರಿಂದ ಕೂಡಿದ ದೊಡ್ಡ ದೇಶವೊಂದರ ಆಡಳಿತ ವಹಿಸಿದಾಗಲೂ ಆಡುವ ಮಾತಿದು. ಅದು ಮಹಮ್ಮದೀಯ ರಾಷ್ಟ್ರವೆಂಬುದು

ಎಲ್ಲರಿಗೂ ಗೊತ್ತು. ಅವರು ಅದು ಮಹಮದೀಯ ರಾಷ್ಟ್ರ ಆಗಿರುವುದಕ್ಕೆ ಹೆಮ್ಮೆ ಪಡುತ್ತಾರೆ ಮತ್ತು ಅವರು ಹೆಮ್ಮೆಯಿಂದ ಅದನ್ನು 'ಪಾಕಿಸ್ತಾನ್' ಎಂದು ಕರೆಯುತ್ತಾರೆ. ಆ ರಾಷ್ಟ್ರದಲ್ಲಿ ಅವರು ಹಾಗಿದ್ದೂ ಆ ರಾಷ್ಟ್ರ ಮತಗಳನ್ನು ಗಮನಕ್ಕೆ ತಂದುಕೊಂಡಿಲ್ಲ. ಪ್ರತಿ ವ್ಯಕ್ತಿಯೂ ಒಬ್ಬ ವ್ಯಕ್ತಿ ಮತ್ತು ಹಿಂದೂಗಳು ತಮ್ಮ ಹಿಂದುತ್ವವನ್ನು ರಾಜಕೀಯ ಹಕ್ಕುಗಳು ಮತ್ತು ಸೌಲಭ್ಯ ಸಂಬಂಧಿಸಿದಂತೆ ಕಳೆದುಕೊಳ್ಳುತ್ತಾನೆ. ಮಾನ್ಯರೆ, ಅವರು ತಮ್ಮ ಜನರ ಏಕತೆಯ ವಿಶ್ವಾಸಗಳು, ನಾವೇಕೆ ನಮ್ಮ ರಾಜಕಾರಣದಲ್ಲಿ ಪ್ರತ್ಯೇಕತಾ ಪ್ರವೃತ್ತಿಯನ್ನು ಬೆಳೆಸಬೇಕು? ಮಾನ್ಯರೆ, ಇನ್ನೊಂದು ಕಡೆ ಅದೇ ಮಹಾನಾಯಕರು ಹೇಳುತ್ತಾರೆ : "ಪಾಕಿಸ್ತಾನ ರಾಷ್ಟ್ರದಲ್ಲಿ ನೀವು ದೇವಾಲಯಗಳಿಗೆ ಮತ್ತು ಆರಾಧನಾ ಸ್ಥಳಗಳಿಗೆ ಹೋಗಲು ಮುಕ್ತರು. ನೀವು ಒಂದು ಧರ್ಮ ಅಥವಾ ಜಾತಿ ಅಥವಾ ಮತಕ್ಕೆ ಸೇರಿರಬಹುದು ಅದು ರಾಷ್ಟ್ರದ ವ್ಯವಹಾರಕ್ಕೇನು ಸಂಬಂಧಿಸಿದುದಲ್ಲ." ಸಂವಿಧಾನ ರೂಪಿಸುವುದು ರಾಷ್ಟ್ರದ ವ್ಯವಹಾರ. ಹಾಗಾಗಿ ಮಹಮದೀಯರು ಅದರೊಂದಿಗೆ ಏನೂ ಮಾಡುವಂಥದಿಲ್ಲ. ಅವರು ಭಾರತದ ಪೌರರಾಗಿರುವುದರಿಂದ ಇಲ್ಲಿ ಇದ್ದಾರೆಯಷ್ಟೆ, ನ್ಯಾಯಕ್ಕಾಗಿ ಬದ್ಧವಿರುವ ರಾಷ್ಟ್ರದ ನಾವು ಒಂದು ರಾಷ್ಟ್ರ. ನಾವು ಯಾವ ರೀತಿ ಶಾಸನ ಮಾಡೋಣವೆಂದರೆ ಅದು ಎಲ್ಲ ಅನ್ಯಾಯಕ್ಕೆದುರಾಗಿ ಖಾತರಿ ನೀಡುವಂಥ ಶಾಸನವಾಗಿರಬೇಕು. ನಾವು ಯಾವುದೇ ಪಂಗಡಗಳನ್ನು ಮಾನ್ಯ ಮಾಡುವುದು ಬೇಡ. ಮಾನ್ಯರೆ, ಈ ತಿದ್ದುಪಡಿ ನಾವು ಹಿಂದೆ ಅಳವಡಿಸಿದಂಥ ಮತ್ತು ಯಾವುದನ್ನು ಹಿಂದೆ ನಿರ್ಣಯಗಳಾಗಿ ಅಂಗೀಕರಿಸಿದ್ದೇವೆಯೊ ಆ ಉನ್ನತ ಸಿದ್ಧಾಂತಗಳೊಂದಿಗೆ ಹೊಂದಿಕೊಂಡಿಲ್ಲ.

ಈಗ ವರದಿಗೆ ಸಂಬಂಧಿಸಿದಂತೆ, ಇದು ಪ್ರಾಯೋಗಿಕವಾಗಿ ಸರ್ವಾನುಮತದ್ದೆಂದು ಹೇಳಲು ನಾನು ಹರ್ಷಿಸುತ್ತೇನೆ, ಸ್ಥಾನಗಳ ಮೀಸಲಾತಿಗೆ ನಾನು ಇನ್ನೂ ಒಪ್ಪದಿದ್ದರೂ, ಅಲ್ಪಸಂಖ್ಯಾತರಿಗೆ ಕೆಲವು ಏರ್ಪಾಡು ಮಾಡುತ್ತಿದ್ದು ತಾತ್ಕಾಲಿಕವಾಗಿ ಪ್ರತಿನಿಧಿಸುವುದಿದ್ದು ನಾನು ಆ ದಾರಿಯಲ್ಲಿ ಬರುವುದಿಲ್ಲ. ಬಹುಶಃ ಅದು ಅವರ ಆಶಯಗಳಿಗೆ ತುಸು ನೆರವಾಗುವಂತೆ ಮಾಡಿರುವುದು ಅವರ ಭಯಗಳನ್ನು ಸಮಾಧಾನ ಪಡಿಸಲಿರಬಹುದು. ಆದರೆ ನಾನು ಅವರು ಸಾರ್ವತ್ರಿಕ ಸ್ಥಾನಗಳಿಗೂ ನಿಂತು ಸ್ಪರ್ಧಿಸಲು ಸ್ವಾತಂತ್ರ್ಯ ನೀಡಿರುವುದು ಏಕೆ ಎಂದು ಮೆಚ್ಚುವಲ್ಲಿ ವಿಫಲನಾಗಿದ್ದೇನೆ. ಪ್ರತಿಯೊಬ್ಬರೂ ತಮಗೆ ಮೀಸಲಾದ ಸ್ಥಾನಗಳ ಪಾಲು ಹೊಂದಿದ ಅನಂತರ ಯಾವುದೇ ಹೆಚ್ಚುವರಿ ಸ್ಥಾನದಿಂದ ಯಶಸ್ವಿ ಆಗಲಾರರು ಎಂಬುದನ್ನು ಬಲ್ಲರು. ಅವರ ವೈಫಲ್ಯವನ್ನು ಹತ್ತು ವರ್ಷಗಳ ಅನಂತರ ಉಲ್ಲೇಖಿಸಲಾಗುತ್ತದೆ.

ಒಂದು ವೇಳೆ ಒಬ್ಬ ಅಭ್ಯರ್ಥಿ ಒಂದು ಸಾರ್ವತ್ರಿಕ ಸ್ಥಾನಕ್ಕೆ ಸ್ವತಃ ತಾನೇ ನಿಲ್ಲುವುದಕ್ಕೆ ಪ್ರಸ್ತಾವಿಸಿದರೆ ನೋಡೋಣ. ಒಬ್ಬ ಹಿಂದೂ ವಿಶೇಷವಾಗಿ ಪಂಜಾಬ್ ಕಡೆ ಒಬ್ಬ ಮಹಮದೀಯನಿಗೆ ಮತ ಹಾಕುವನೆಂದು ನಿರೀಕ್ಷಿಸುವುದು ಅಸಾಧ್ಯ ಎನ್ನಬೇಕು. ಯಾರೂ ಮತ ಹಾಕರು. ಸಂದರ್ಭಗಳು ಹಾಗೆ ಬದಲಾಗಿವೆ. ಇದಕ್ಕೆ ಪುನಃ ಪ್ರತ್ಯೇಕ ಮತದಾರರ ಸಮುದಾಯದ ವ್ಯವಸ್ಥೆ ಕಾರಣ. ಇದನ್ನು ಕುರಿತು ನಾವು ಪ್ರಾಯೋಗಿಕ ಅನುಭವ ಹೊಂದಿದ್ದೇವೆ. ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಸಾರ್ವತ್ರಿಕ ಸ್ಥಾನಗಳಿಂದಲೂ ನಿಲ್ಲಲು ಅವಕಾಶ ನೀಡುವುದು ಪ್ರಾಯೋಗಿಕವಾಗಿ ಒಂದು ಅಣಕ. ಮಾನ್ಯರೆ, ನಾವು ಕೇವಲ ಒಂದೇ ಮತದಾರರ ಸಮುದಾಯ ಹೊಂದಿರಬೇಕು ಮತ್ತು ಒಂದು ಜಂಟಿ ಇರಬೇಕು ಎಂದು ನಿವೇದಿಸುತ್ತಿದ್ದೇನೆ. ಅಲ್ಪಸಂಖ್ಯಾತರಿಗೆ ಹತ್ತು ವರ್ಷಗಳ ಕಾಲ ಸ್ಥಳ ಮಾಡಿಕೊಡುವುದೂ ನಮ್ಮ ತತ್ತ್ವಗಳೊಂದಿಗೆ ನಿಖರವಾಗಿ ಒಪ್ಪಿಗೆ ಇಲ್ಲ. ನನಗನಿಸುತ್ತದೆ, ನಾವು ರಾಜಿ ಮಾಡಿಕೊಂಡಿದ್ದೇವೆ ಮತ್ತು ಸಾಕಷ್ಟು ರಾಜಿ ಮಾಡಿಕೊಂಡಿದ್ದೇವೆ. ಈ ರಾಜಿ ಸಹ ನಿಷ್ಪ್ರಯೋಜಕವಾಗುತ್ತದೆಂಬ ಹೆದರಿಕೆ ನನ್ನದು. ಆದರೆ ಈ ರಾಜಿ ಇದ್ದಾಗ್ಯೂ, ಈ ವರದಿ ಅತ್ಯಂತ ಉತ್ತಮ ಮತ್ತು ಈ ಸದನಕ್ಕೆ ಸಲ್ಲಿಸಿದ ಒಂದು ಸರ್ವಾನುಮತ ವರದಿಗಾಗಿ ಅದು ಪ್ರಾಯೋಗಿಕವಾಗಿ ಸಿದ್ಧವಾಗಿದೆ ಎಂಬುದಕ್ಕಾಗಿ ಸಮಿತಿಯ ಸದಸ್ಯರನ್ನು ನಿಜವಾಗಿ ಅಭಿನಂದಿಸಬೇಕು ಎಂದು ನಿವೇದಿಸುತ್ತಿದ್ದೇನೆ. ನಮಗೆ ಅವರ ಬಗ್ಗೆ ಹೆಮ್ಮೆ ಇದೆ ಮತ್ತು ಅವರು ದೇಶಕ್ಕೆ ಶಿಫಾರಸು ಮಾಡಿದ ಜಂಟಿಮತದಾರರ ಸಮುದಾಯಕ್ಕಾಗಿಯೂ

ನಾವು ಹೆಮ್ಮೆ ಪಡುತ್ತೇನೆ. ಅವರ ಪ್ರಸ್ತಾವಗಳನ್ನು ಅವು ಇರುವಂತೆಯೇ ನಾವು ಅಂಗೀಕರಿಸುತ್ತೇವೆ ಎಂದು ಆಶಿಸುತ್ತೇನೆ.

**ಶ್ರೀ ಟಿ. ಪ್ರಕಾಶಮ್** (ಮದ್ರಾಸ್ : ಸಾಮಾನ್) : ಮಾನ್ಯರೆ, ಅಲ್ಪಸಂಖ್ಯಾತರೆಂದು ಹೇಳಲಾದವರ ಹಲವಾರು ನಾಯಕರು ಸಮಿತಿಯ ಗೌರವಾನ್ವಿತ ಸದಸ್ಯರಿಗೆ ಮತ್ತು ಅದರ ಅಧ್ಯಕ್ಷರು ಸರ್ದಾರ್ ವಲ್ಲಭಭಾಯಿ ಪಟೇಲರಿಗೆ ಈ ದಿಕ್ಕಿನಲ್ಲಿ ಬಹುಸಂಖ್ಯಾತರು ತೋರಿದ ಔದಾರ್ಯಕ್ಕಾಗಿ ವಂದನೆಗಳನ್ನು ಮತ್ತು ಅಭಿನಂದನೆಗಳನ್ನು ಸಲ್ಲಿಸಿರುವರು. ಮಾನ್ಯರೆ, ಅವರು ತೋರಿಸಿದ ಔದಾರ್ಯಕ್ಕಾಗಿಯಲ್ಲದಿದ್ದರೂ ಅವರು ಈಗ ಮಾಡಿರುವಂತೆ ತಮ್ಮ ಕರ್ತವ್ಯವನ್ನು ನಿರ್ವಹಿಸಿದುದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕು ಎಂದು ಹೇಳುತ್ತೇನೆ. ಸಮಿತಿಯ ಸದಸ್ಯರಿಂದಾಗಲಿ, ಅಥವಾ ಸಮಿತಿಯ ಅಧ್ಯಕ್ಷರಾಗಿ ತಮ್ಮಿಂದಾಗಲಿ ಯಾವುದೇ ಔದಾರ್ಯವನ್ನು ತೋರುವಂತಹುದ್ದೇನಿಲ್ಲ. ಇದು ಬಹುಸಂಖ್ಯಾತರ ಮೇಲಿದ್ದ ಒಂದು ಕರ್ತವ್ಯ. ಬಹುಕಾಲ ಇದನ್ನು ನಿರ್ವಹಿಸಲಾಗಿರಲಿಲ್ಲವಷ್ಟೆ. ಬಹುಕಾಲದಿಂದ ಇದ್ದ ಕೋಮುವಾದದ ನಂಜಿನಿಂದ ನಾವು ಹಿಡಿದಿಡಲ್ಪಡುವವರೆಗೂ ಈ ಎಲ್ಲ ಅಲ್ಪಸಂಖ್ಯಾತರು ಈ ಹಂತಕ್ಕೆ ರೂಪುಗೊಂಡು ವೃದ್ಧಿಸುವ ವರೆಗೆ ಅವಕಾಶ ಕಲ್ಪಿಸಲಾಯಿತು. ನಾವು ಬಹುಸಂಖ್ಯಾತರ ಲೋಪಗಳು ಮತ್ತು ಕಾರ್ಯಭಾರಗಳ ಎಲ್ಲ ಪ್ರಮಾದಗಳಿಗೆ ಈಗ ಬೆಲೆ ತೆರುತ್ತಿದ್ದೇವೆ. ಮಾನ್ಯರೆ, ಎಲ್ಲ ಈ ಪ್ರತ್ಯೇಕತಾ ಪ್ರವೃತ್ತಿಗಳು ವೃದ್ಧಿಸದಂತೆ, ಪ್ರತ್ಯೇಕ ಸಮುದಾಯಗಳು ರೂಪುಗೊಳ್ಳದಂತೆ ನೋಡುವುದು ಬಹುಸಂಖ್ಯಾತರ ಕರ್ತವ್ಯವಾಗಿತ್ತು. ಈಗ ಅವೆಲ್ಲವನ್ನೂ ಒಟ್ಟಿಗೆ ಹಾಕಲಾಗಿದೆ. ಇದು, ಪ್ರತಿಯೊಬ್ಬರೂ ತಿಳಿದಂತೆ, ಒಂದೇ ಒಂದು ಮತ, ಒಂದೇ ದೇವರು ಮತ್ತು ಆರಾಧನೆಯ ಒಂದೇ ರೂಪ ಇದ್ದ ದೇಶ. ಎಲ್ಲ ಅನಂತರದ, ಆಚರಣೆಗಳು ಕ್ರಮೇಣ ಬಂದವುವೆ. ಈ ಮತಗಳು ಆರಂಭಗೊಂಡ ದಿನಾಂಕಗಳ ಕ್ರಮಾಗತಿಯನ್ನು ನೋಡಿ, ಕ್ರೈಸ್ತಮತವನ್ನು ತೆಗೆದುಕೊಳ್ಳಿ ಮತ್ತು ಅದು ಅಸ್ತಿತ್ವಕ್ಕೆ ಬಂದ ಅವಧಿಯನ್ನು ಗುರುತಿಸಿ, ಮುಸ್ಲಿಮ್ ಮತವನ್ನು ತೆಗೆದುಕೊಳ್ಳಿ ಮತ್ತು ಅದು ಯಾವಾಗ ಅಸ್ತಿತ್ವಕ್ಕೆ ಬಂದಿತು ಎಂಬುದನ್ನು ಗುರುತಿಸಿ. ಈ ಮತಧರ್ಮಗಳು ಅಸ್ತಿತ್ವಕ್ಕೆ ಬರುವ ಮೊದಲು ಇದ್ದ ಸ್ಥಿತಿ ಏನು? ಎರಡು ಸಾವಿರ ವರ್ಷಗಳ ಹಿಂದೆ ಮತ್ತು ಸಾವಿರದ ಮುನ್ನೂರು ವರ್ಷಗಳ ಹಿಂದೆ ಇಂದು ಇರುವಂಥ ವಿಷಯಗಳು ಇರಲಿಲ್ಲ.

ಆದರೆ ಈ ಮತಗಳು ನಾವು ಇಂದು ಕಾಣುತ್ತಿರುವ ಎಲ್ಲ ತೊಂದರೆಗಳಿಗೆ ಹೊಣೆಯಲ್ಲ; ಹೊಣೆ ಆಗಿರಬಾರದು ಕೂಡ. ಪ್ರಪ್ರಥಮ ಹಿಂದೂ ಮುಸ್ಲಿಮ್ ದಂಗೆ ಆರಂಭವಾದಾಗ ನಾನು ಮುಲ್ತಾನ್‌ನಲ್ಲಿದ್ದೆ. ಅಲ್ಲಿಂದ ಅದು ವರ್ಷದಿಂದ ವರ್ಷಕ್ಕೆ ನಿಡುಗಾಲ, ಕಡೆಗೆ ಈ ಹಂತ ತಲಪುವವರೆಗೂ ಮುಂದುವರಿದಿತ್ತು. ಇದೊಂದು ಬಹಳ ದುರದೃಷ್ಟಕರ ಸ್ಥಿತಿ; ಮೊದಲೇ ತಿಳಿಯಬೇಕಿತ್ತು. ಎಲ್ಲದಕ್ಕೂ ಕಾರಣವೇನು? ಇದಕ್ಕೆ ಮತ ಜವಾಬ್ದಾರಿಯಲ್ಲ. ಇಂದು ಪಂಜಾಬಿನಲ್ಲಿ ಹತ್ಯಾಕಾಂಡಗಳು ಮತ್ತು ಅಪರಾಧಗಳು ಆಗುತ್ತಿವೆ ಎಂದಾದರೆ, ಅದು ಮತದಲ್ಲಿನ ಭೇದದ ಕಾರಣ ಮಾತ್ರವೇ ಅಲ್ಲ. ಮತ ಎಂದು ಹೇಳಲಾದುದರ ಮೇಲೆ ಬಯಕೆ, ಲಾಭಕ್ಕಾಗಿ ಬಯಕೆ, ಕಛೇರಿ ಅಧಿಕಾರಕ್ಕಾಗಿ ಬಯಕೆ ಮತ್ತು ಇತರರ ಆಸ್ತಿಗಳ ಮೇಲಿನ ಆಕ್ರಮಣಕ್ಕೆ ಬಯಕೆ. ಮಾನ್ಯರೆ, ಹೋರಾಟದ ಈ ೨೭ ವರ್ಷಗಳು ಅಥವಾ ೩೧ ವರ್ಷಗಳು; ಮಹಾತ್ಮ ಗಾಂಧಿ ದೇಶಕ್ಕೆ ಬಂದಂದಿನಿಂದ, ಮೊದಲ ಅಥವಾ ಎರಡನೇ ವರ್ಷದಿಂದಲೇ ಇಡೀ ದೇಶ ಹಿಂಸೆಗೆ ತೊಡಗಿದ್ದರೂ ಹಾಗಿದ್ದೂ ಬಹುಸಂಖ್ಯಾತರು ಈ ವಿಷಯಗಳು ಒಟ್ಟಾಗಿ ಸೇತುವೆಯಾಗುವಂತೆ ನೋಡಲು ಎಚ್ಚರದಿಂದ ಗಮನಿಸುತ್ತಿದ್ದರು. ಎಲ್ಲಿವರೆಗೆಂದರೆ, ಕಡೆಗೆ ಅದು ರಾಷ್ಟ್ರೀಯ ಕಾಂಗ್ರೆಸ್‌ನ, ರಾಷ್ಟ್ರೀಯ ಕಾರಣದ ಗೌರವ ಮತ್ತು ಬ್ರಿಟಿಷರು ಮನ್ನಣೆಗೆ ಪಾತ್ರವಾಯಿತು. ಇದಕ್ಕಾಗಿ ನಾನು ಹರ್ಷಿಸುತ್ತೇನೆ. ಕಡೆಗೆ, ವಿಜಯ ಗಳಿಸಿದೆವು ಮತ್ತು ಈ ದೇಶ ಬಿಟ್ಟರು–ಅವರು ದೇಶವನ್ನು ತೊರೆದ ಕ್ಷಣದಲ್ಲೆ ಎಲ್ಲ ತೊಂದರೆಗಳೂ ಹಲವು ರೀತಿಯಲ್ಲಿ ತಲೆದೋರಿದವು. ನಾನು ಸಮಿತಿ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್‌ರನ್ನು, ಬಹುಕಾಲ ಶಾಸನಬದ್ಧವಾಗಿ

ಪ್ರತ್ಯೇಕಗೊಂಡಿದ್ದ ಎಲ್ಲ ಸಮುದಾಯಗಳನ್ನು ಒಟ್ಟಿಗೆ ತಂದ, ಹಾಗೂ ನಾವೆಲ್ಲ ಒಂದು ಎಂದು ಭಾವಿಸಿ ಒಪ್ಪುವಂತೆ ಮಾಡಿದ ರೀತಿಗೆ ಅಭಿನಂದಿಸಲೇಬೇಕು. ಗಳಿಸಿದ ಅತ್ಯುನ್ನತ ಅಂಶ ಅದು. ಮುಸ್ಲಿಮರ ನಡುವೆಯೂ ಭಾರತ–ಪಾಕಿಸ್ತಾನದ ವಿಭಜನೆ ಅನಂತರವೂ, ಇಲ್ಲಿ ಉಳಿತಿರುವ ಗೆಳೆಯರು ಬಹುತೇಕ ಪ್ರತಿಯೊಂದು ಪ್ರಾಂತ್ಯದಿಂದಲೂ ಆಗಮಿಸಿ ಅವರೆಲ್ಲ ಜಂಟಿ ಮತದಾರರ ಸಮುದಾಯಗಳ ಅಗತ್ಯಕ್ಕೆ ಒಪ್ಪಿರುವರು. ನಾವು ಕಳೆದ ೨೫ ವರ್ಷಗಳ ಹಿಂದೆಯೇ ಜಂಟಿ ಮತದಾರರ ಸಮುದಾಯಗಳನ್ನು ಹೊಂದಿದ್ದರೆ ಈ ದೇಶದಲ್ಲಿ ಯಾವ ತೊಂದರೆಯೂ ಇರುತ್ತಿರಲಿಲ್ಲ. ಇತರರ ಹಕ್ಕುಗಳ ಮೇಲಿನ ಆಕ್ರಮಣದ ಬಯಕೆ, ಇತರರನ್ನು ಹೊರದೂಡುವುದು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಇಂಥವು ಈ ದೇಶಕ್ಕೆ ವಿನಾಶ ತಂದುವು. ರಾಷ್ಟ್ರೀಯ ಹೋರಾಟ ಮತ್ತು ಚಳವಳಿ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಆರಂಭವಾದುದು ಒಂದಾಗಿರುವಂತೆ ದುಡಿಯಲು, ಹತೋಟಿಗೆ ತರಲು ಮತ್ತು ಕೇಂದ್ರೀಕರಿಸಲು ಪ್ರಯತ್ನಿಸಿದುವು. ನಾನು ಸರ್ದಾರ್ ಪಟೇಲರನ್ನು, ಅವರು ವಿವಿಧ ಅಲ್ಪಸಂಖ್ಯಾತ ಸಮುದಾಯಗಳನ್ನು ಒಟ್ಟಿಗೆ ತರುವಲ್ಲಿ ಮತ್ತು ಅವರು ಒಪ್ಪುವಂತೆ ಮಾಡುವಲ್ಲಿ ನಿರ್ವಹಿಸಿದ ರೀತಿಗೆ ಅಭಿನಂದಿಸಲು ಇಚ್ಛಿಸುತ್ತೇನೆ.

ಜೊತೆಗೆ ಈ ಸಮಿತಿಯನ್ನೂ ಗೌರವಿಸಬೇಕು. ಇದು ಸಮಿತಿಗೆ ಮಾತ್ರ ಇರುವ ಸುಯೋಗ, ದೇಶದ ಜನತೆ ಯಶಸ್ಸು ಗಳಿಸಿದೆ ಮತ್ತು ಇದೀಗ ಸಿದ್ಧವಾಗುತ್ತಿರುವಂತಹ ಒಂದು ಸಂವಿಧಾನವನ್ನು ಹೊರತಂದಿದೆ. ಎಂದು ನಾನು ಹೇಳಬೇಕು. ಆ ಸಂವಿಧಾನದಲ್ಲಿ, ನೆನ್ನೆ ಅಥವಾ ಮೊನ್ನೆಯ ಸಮುದಾಯಗಳಲ್ಲಿ ಒಂದನ್ನು ಒಂದು ಪ್ರತ್ಯೇಕ ಸಮುದಾಯ ಎಂದು ಪರಿಗಣಿಸಿದ್ದು, ಅದು ಕೂಡದು ಎಂದು ನಮೂದಿಸಲಾಗಿತ್ತು. ನಾವು ಒಂದು ಒಕ್ಕೂಟ ಸಂವಿಧಾನವನ್ನು ಎಲ್ಲ ಜನರು ಒಟ್ಟಾಗಿರಬೇಕೆಂದು ರೂಪಿಸುತ್ತಿದ್ದೇವೆ ಎಂಬುದು ಈ ಸಂದರ್ಭದಲ್ಲಿ ಅವರು ಒಪ್ಪದಿರಬಾರರು; ಅವರನ್ನು ಬಹುಸಂಖ್ಯಾತರ ಒಂದು ಭಾಗ ಎಂದು ನೋಡಬೇಕು. ಈ ವಿಷಯಗಳಲ್ಲೆ ಯುಗಯುಗಗಳಿಂದ ಹಾಗೂ ಶತಮಾನಗಳಿಂದ ತಪ್ಪು ನಡೆದಿದೆ ಎಂಬುದನ್ನು ನಾನು ಒಪ್ಪುತ್ತೇನೆ ಮತ್ತು ಒಂದು ಕ್ಷಣದಲ್ಲಿ ಅವನ್ನೆಲ್ಲ ಒಟ್ಟಿಗೆ ತರಲಾಗುವುದಿಲ್ಲ ಹಾಗೂ ಒಟ್ಟಿಗೆ ಹೋಗುವಂತೆ ಮಾಡಲಾಗದು; ಆದುದರಿಂದಲೆ ಸಮಿತಿಯು ವರದಿಯನ್ನು ಎಚ್ಚರಿಕೆಯ ರೀತಿಯಲ್ಲಿ ಸಿದ್ಧಪಡಿಸಿದೆ ಮತ್ತು ಮಹಾ ಫಲಿತಾಂಶ ಸಾಧಿಸಿದುದಕ್ಕಾಗಿ ಸಮಿತಿಗೆ ಮನ್ನಣೆ ಮತ್ತು ಗೌರವ ಸಲ್ಲುತ್ತದೆ. ಆದುದರಿಂದ ನಾನು ಸಮಿತಿ ಮತ್ತು ಅದರ ಅಧ್ಯಕ್ಷರಿಗೆ ಅಭಿನಂದಿಸುತ್ತೇನೆ.

ಇಂತಹ ಮಹಾ ಸಮರದಲ್ಲಿ ಭಾಗಿಯಾಗಿದ್ದ ತಾವು ಮತ್ತು ನಾವೆಲ್ಲರೂ ಫಲಿತಾಂಶ ಕಾಣಲು ಮತ್ತು ಇದು ಯಾವ ರೀತಿಯಲ್ಲಿ ಆಕಾರ ಪಡೆಯುತ್ತಿದೆ ಎಂದು ನೋಡಲು ಉಳಿದಿದ್ದೇವೆ ಎಂಬುದಕ್ಕೆ ನಾನು ಹೆಮ್ಮೆ ಪಡುತ್ತೇನೆ. ನಾವು ಈಗ ಬಹುಮಟ್ಟಿಗೆ ಅದರ ಕೊನೆಗೆ ಬಂದಿದ್ದೇವೆ. ಹತ್ತು ವರ್ಷಗಳೊಳಗೆ ಈ ಎಲ್ಲ ವಿಷಯಗಳೂ ಇಲ್ಲವಾಗುತ್ತವೆ ಎಂದು ಹೇಳಲಾಗಿದೆ. ಅವು ಹತ್ತು ವರ್ಷಗಳೊಳಗೆ ಅಥವಾ ಇನ್ನು ಕಡಿಮೆ ಅವಧಿಯಲ್ಲಿ ಮಾಯವಾಗುತ್ತದೆ ಎಂಬುದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ಇದು ಸ್ಥಾನ ಬಯಕೆ, ಕಛೇರಿ ಅಧಿಕಾರ ಬಯಕೆ ಮತ್ತು ಇತರರ ಆಸ್ತಿಗಳ ಬಯಕೆಯನ್ನು ತೆಗೆದು ದೇಶ ಸೇವೆ ಮಾಡುವಲ್ಲಿ ಯಾವ ಕರ್ತವ್ಯಗಳು ನಮ್ಮ ಮೇಲಿವೆಯೊ ಅವುಗಳಿಂದ ನಮ್ಮನ್ನು ವಿಮುಖರಾಗಿ ಮಾಡುವುದಿಲ್ಲ ಎಂಬುದನ್ನು ಪ್ರತಿಯೊಬ್ಬರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಪಂಜಾಬಿನಲ್ಲಿ ಇಂದು ಏನೆಲ್ಲ ಆಗುತ್ತಿದೆಯೊ ಅವನ್ನು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ ಮತ್ತು ಇವೆಲ್ಲ ಉನ್ನತ ಸ್ಥಾನದಲ್ಲಿರುವವರ ಆಸ್ತಿಪಾಸ್ತಿಗಳು ಮತ್ತು ಸೌಲಭ್ಯಗಳನ್ನು ಸ್ವಾಧೀನ ಪಡಿಸಿಕೊಳ್ಳುವ ದೃಷ್ಟಿಯಿಂದಲೇ ಆಗುತ್ತಿವೆ. ಪಾಕಿಸ್ತಾನದ ಗವರ್ನರ್ ಜನರಲ್ ಮತ್ತು ಅಲ್ಲಿನ ಸರ್ಕಾರ ಇದನ್ನು ತಡೆಯಬೇಕು. ಮತ್ತು ಇಲ್ಲಿ ಸರ್ಕಾರಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ ಎಂಬುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಪಾಕಿಸ್ತಾನದ ಗವರ್ನರ್ ಜನರಲ್ ಮತ್ತು ಅವರ ಸರ್ಕಾರ ಇಲ್ಲಿಂದ

ಜನರನ್ನು ಪಶ್ಚಿಮ ಪಂಜಾಬಿನೊಳಗೆ ಹೋಗಲು ಅವಕಾಶ ಮಾಡುವುದು ಮತ್ತು ಅವರಾಗಿಯೇ ಈ ವಿಷಯಗಳತ್ತ ಗಮನ ಹರಿಸುವುದು ಕೂಡ ನೋಡಬೇಕು. ನಾನು ಇಂದು ಪಶ್ಚಿಮ ಪಂಜಾಬಿನೊಳಗೆ ಹೋಗಲು ಇಚ್ಛಿಸುತ್ತೇನೆ, ನನಗೆ ಮಾರ್ಗವಿದೆಯೇ? ಹೋಗಲು ನನಗೆ ಸೌಲಭ್ಯಗಳು ಸಿಗುವುದೆ ಮತ್ತು ನಾನು ಪೂರ್ವಪಂಜಾಬಿನೊಳಗೆ ಹೋಗಿ ಅಲ್ಲಿ ಏನಾಗುತ್ತಿದೆ ಎಂದು ನೋಡಿದಂತೆ ಅಲ್ಲಿಗೂ ಹೋಗಿ ಖುದ್ದಾಗಿ ಅಲ್ಲಿ ಏನಾಗುತ್ತಿದೆ ಎಂದು ನೋಡಲು ಆದೀತೆ? ಈ ವಿಷಯಗಳು ಇತ್ಯರ್ಥವಾಗಬೇಕು ಮತ್ತು ಅವು ಲಭ್ಯವಾಗುವಂತೆ ನಮ್ಮ ನಾಯಕರು ಕ್ರಮ ತೆಗೆದುಕೊಳ್ಳುವರು ಎಂದು ನನಗೆ ಭರವಸೆ ಇದೆ. ಆದುದರಿಂದ ಸಮಿತಿಯನ್ನು ಅಭಿನಂದಿಸಲು ಮತ್ತು ವರದಿಯನ್ನು ಬೆಂಬಲಿಸುವುದಕ್ಕೆ ನನಗೆ ಸಂತೋಷವಾಗುತ್ತದೆ.

**ಚೌಧರಿ ಖಲಿಖುಜ್ಜಮಾನ್** (ಉ.ಪ್ರ. : ಮುಸ್ಲಿಮ್) : ಮಾನ್ಯರೆ, ಕಳೆದ ಮೂರು ದಶಕಗಳ ಅವಧಿಯಲ್ಲಿ ಜಂಟಿ ಮತದಾರರ ಸಮುದಾಯಗಳು ಮತ್ತು ಪ್ರತ್ಯೇಕ ಮತದಾರರ ಸಮುದಾಯಗಳ ಪರವಾಗಿ ಮತ್ತು ವಿರುದ್ಧವಾಗಿ ಸಾಕಷ್ಟು ಹೇಳಲಾಗಿದೆ ಮತ್ತು ಅವುಗಳ ಪರವಾಗಿ ಹಾಗೂ ವಿರುದ್ಧವಾಗಿ ಯಾರಿಗೆ ಆಗಲಿ ಏನೇ ಹೊಸ ವಾದವನ್ನು ಸೇರಿಸಲು ಸಾಧ್ಯವಿಲ್ಲ ಎಂದು ನಾನು ತಿಳಿದಿದ್ದೇನೆ. ಹೇಗೇ ಇರಲಿ, ನಾನು ಪ್ರತ್ಯೇಕ ಮತದಾರರ ಸಮುದಾಯದ ವಿರುದ್ಧ ಒಂದು ತುಂಬ ಗಂಭೀರ ಆಕ್ಷೇಪಣೆಯ ಬಗ್ಗೆ ಹೇಳುವುದು ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ. ಆಕ್ಷೇಪಣೆಯು ಮೂರನೆಯ ಪಕ್ಷಕ್ಕೆ ನೆರವಾಗಿದೆ. ಅದೃಷ್ಟವಶಾತ್ ಇಲ್ಲಿ ಮೂರನೆಯ ಪಕ್ಷ ಎಂಬುದಿಲ್ಲ. ನಾವು ವಾಸ್ತವದಲ್ಲಿ ಸನ್ನಿವೇಶವನ್ನು ಅದು ಇಂದು ಇರುವಂತೆ ನಿಜದೃಷ್ಟಿಕೋನದಲ್ಲಿ ಭಾವಿಸಿದಲ್ಲಿ ಪ್ರತ್ಯೇಕ ಮತದಾರರ ಸಮುದಾಯದ ಸುತ್ತ ತೂಗಾಡುತ್ತಿರುವ ಬಹಳಷ್ಟು ಅನುಮಾನ ಇಲ್ಲವಾಗುತ್ತದೆ. ಅವು ನಮಗೆ ಅಂಗೀಕಾರವಾದಲ್ಲಿ ಈ ದೊಡ್ಡ ಬಹುಸಂಖ್ಯಾತರಿಗೆ ಏನಾಗುತ್ತದೆ? ಇಂದು ನಾವು ಇಲ್ಲಿನ ವಿಷಯಗಳ ಕುರಿತು ಮನವಿ ಮಾಡಲು ಮೂರನೆಯ ಪಕ್ಷವಿಲ್ಲ. ಪೂರ್ವ ಪಂಜಾಬಿನಲ್ಲಿ ಏನಾದರೂ ಸಂಭವಿಸಿದರೆ ಇಲ್ಲವೆ ದೆಹಲಿಯಲ್ಲೆ ಅಹಿತಕರ ಘಟನೆಗಳೇನೇ ಇದ್ದರೆ ನಾವು ಗವರ್ನರ್ ಜನರಲ್ ಅಥವಾ ಇನ್ನಾರ ಬಳಿಗೋ ಹೋಗಲಾಗದು. ಸರ್ದಾರ್ ಪಟೇಲ್‌ರ ಬಳಿಯೇ ಹೋಗಬೇಕು. ಏಕೆಂದರೆ ಅವರು ಅಲ್ಪಸಂಖ್ಯಾತರ ಹಣೆಬರಹದ ಅಂತಿಮ ತೀರ್ಪುಗಾರ ಆಗಿರುವರು. ಜನರು ಆಗ ಇತಿಹಾಸವನ್ನು ಉದಾಹರಿಸಿದ್ದು ಏನು ಉಪಯೋಗ? ಇತಿಹಾಸ ಎಲುಬುಗಳಷ್ಟೆ ಸಂವೇದನೆ ಇಲ್ಲದಾಗಿದೆ. ಖಂಡಿತವಾಗಿ, ತುಂಬ ಗಂಭೀರ ಆಕ್ಷೇಪಣೆ ಇದ್ದಿತು. ಸರಿಯೊ ತಪ್ಪೋ ಮುಸ್ಲಿಮರು ವಿಭಜಿಸುತ್ತಿರುವ ಸಮುದಾಯಗಳಿಗೆ, ಪ್ರತ್ಯೇಕ ಮತದಾರರ ಸಮುದಾಯಗಳು ಕಾರಣ ಎಂದು ಅರ್ಥಮಾಡಿಕೊಳ್ಳಲಿಲ್ಲ. ಆದರೆ ಇಂದು ಆ ವಾದಗಳಿಗೆ ಅರ್ಥವಿಲ್ಲ. ನಾವು ಪ್ರತ್ಯೇಕ ಮತದಾರರ ಸಮುದಾಯಗಳನ್ನು ಅಂಗೀಕರಿಸಿದ್ದಿದ್ದರೆ ಮುಸ್ಲಿಮ್ ಸಮುದಾಯ ತಮ್ಮ ನಿಜಪ್ರತಿನಿಧಿಗಳನ್ನು ಮರಳಿಸುವಲ್ಲಿ ನೆರವಾಗುತ್ತೇವೆಂದು ಭಾವಿಸುವರು. ಈ ಪ್ರತಿನಿಧಿಗಳು ತಮ್ಮ ಮುಂದೆ ನಮ್ಮ ಬೇಗುದಿಗಳನ್ನು ಹಕ್ಕುಗಳನ್ನು ಮಂಡಿಸುವರು. ಯಾವುದೇ ಅಧಿಕಾರಕ್ಕಲ್ಲ, ಯಾವುದೇ ಇತರ ಸರ್ಕಾರ ಅಥವಾ ಪಾಕಿಸ್ತಾನದ ಮುಂದೆ ಅಲ್ಲ ಈ ಪ್ರಶ್ನೆ ಕುರಿತು ಚರ್ಚಿಸುವ ಹೊಸ ಸನ್ನಿವೇಶಗಳನ್ನು ತಾವು ಪರಿಶೀಲೀಸಬೇಕೆಂದು ಕೋರುತ್ತೇನೆ.

ಈ ಸದನದ ಹೆಚ್ಚಿನ ಸದಸ್ಯರು ಪ್ರತ್ಯೇಕ ಮತದಾರರ ಸಮುದಾಯಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ನಾನು ಬಲ್ಲೆ ಮತ್ತು ನಾನು ಆ ಬಗ್ಗೆ ಪೂರ್ಣ ಅರಿವುಳ್ಳವನಿದ್ದೇನೆ. ಅಲ್ಪಸಂಖ್ಯಾತರ ಉಪ–ಸಮಿತಿ ಮತ್ತು ಸಲಹಾ ಸಮಿತಿಯಲ್ಲಿ ಈ ಬೇಡಿಕೆ ಪಡೆದ ತಿರಸ್ಕಾರದ ಬೆನ್ನಲ್ಲೆ ಇಲ್ಲಿ ನಮ್ಮ ಮಾತು ಕೇಳಿಸಿಕೊಳ್ಳುವರೆ ಎಂಬುದರ ಕುರಿತಾಗಿ ಬಹು ಕಡಿಮೆ ಭರವಸೆ ಹೊಂದಿದ್ದೇವೆ. ನಮ್ಮನ್ನು ಆಲಿಸುವರೆ ಇಲ್ಲವೆ ಎಂಬುದು ವಿಷಯವಲ್ಲ. ಪ್ರಶ್ನೆ ಏನೆಂದರೆ ಬಹುಸಂಖ್ಯಾತರ ಸಮುದಾಯ ಯಾವ ಸನ್ನಿವೇಶದಲ್ಲಿ ಈ ಬೇಡಿಕೆ ಮಾಡಲಾಗಿದೆ ಆ ಹೊಸ ಸನ್ನಿವೇಶವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆಯೇ ಎಂಬುದೇ ಆಗಿದೆ. ನಿಮ್ಮ

ಅನುಮಾನಗಳನ್ನು ಬಿಡಿ. ಈ ಸದನದ ಹೊರಗೆ ಮತ್ತು ಒಳಗೆ ಎರಡೂ ಕಡೆ ಭಿನ್ನಾಭಿಪ್ರಾಯದ ಒಂದು ದೊಡ್ಡ ಸಮೂಹವೆ ಇದೆ. ಅದು ಈ ಅನುಮಾನಗಳನ್ನು ತ್ಯಜಿಸಲು ತಯಾರಿಲ್ಲ. ಮುಸ್ಲಿಮರ ವಿರುದ್ಧ ಸೃಷ್ಟಿಯಾದವುಗಳ ಬಗ್ಗೆ ಇರುವಂಥವು. ನಾವು ಈ ರಾಷ್ಟ್ರದ ಪೌರತ್ವವನ್ನು ಇಲ್ಲಿ ಒಪ್ಪಿಕೊಂಡಿರುವಾಗ ನಾವು ಪ್ರಾಮಾಣಿಕರು, ನಾವು ಸಹೃದಯರಾಗಿಯೂ ಇರುವವರು ಎಂದು ಅರ್ಥ. ಇದನ್ನು ಮನಗಾಣಬೇಕೆಂದು ನಾನು ತಮ್ಮನ್ನು ಬೇಡಿಕೊಳ್ಳುತ್ತೇನೆ, ನಾವು ಇಲ್ಲಿ ಅಲ್ಪಸಂಖ್ಯಾತರಾಗಿ ಜೀವಿಸಬೇಕು ಆದರೆ ಅಲ್ಪಸಂಖ್ಯಾತರಾಗಿ ಮತ್ತು ಒಬ್ಬ ಪೌರರಾಗಿ ವಾಸಿಸುವುದು ಎಂದರೆ ನಮ್ಮ ಸ್ವಂತ ಸಮುದಾಯಕ್ಕೆ ಒತ್ತಾಯಿಸಲು ನಾವು ಯಾವುದೇ ಹಕ್ಕುಗಳನ್ನು ಹೊಂದಿಲ್ಲ ಇಲ್ಲವೇ ಅದರಿಂದ ನಾವು ಹಿಮ್ಮೆಟ್ಟಬೇಕೆಂದು ಅರ್ಥವಲ್ಲ. ಅದನ್ನು ಮಾಡಿದರೆ, ಹಳೆಯ ಅನುಮಾನಗಳು ಮರುಕಳಿಸುವುದಿಲ್ಲ ಎಂದು ವಿಶ್ವಾಸವಿಡುತ್ತೇನೆ. ಏಕೆಂದರೆ, ಏನೇ ಸಂಭವಿಸಲಿ, ಬಹುಸಂಖ್ಯಾತರ ನಿರ್ಣಯ ಏನೇ ಇರಲಿ, ಮುಸ್ಲಿಮರು ಅದನ್ನು ಒಪ್ಪುತ್ತಾರೆ. ತಮಗೆ ಹೆಚ್ಚಿನ ರಕ್ಷಣೆ ಕೊಡಬಲ್ಲರು ಎಂದು ಭಾವಿಸಿದ ಮುಸ್ಲಿಮರ ಈ ಬೇಡಿಕೆಯನ್ನು ನಾವು ಪರಿಗಣಿಸಬೇಕೋ ಬೇಡವೋ ಎಂಬುದು ನಿಮಗೆ ಬಿಟ್ಟದ್ದು. ಹಾಗೂ ಈ ಸದನ ಅದನ್ನು ಒಪ್ಪುತ್ತದೆ ಎಂಬುದನ್ನು ಕಾಣೆ. ಆದುದರಿಂದ ಯಾವುದೇ ಇತರ ವಾದವನ್ನು ಮುಂದಿಡಲು ನನ್ನಲ್ಲಿ ಯಾವುದೇ ವಾದಗಳಿಲ್ಲದಿರುವುದರಿಂದಲೂ ನಾನು ಬದಲಾದ ಸಂದರ್ಭಗಳ ತಿಳುವಳಿಕೆಯಲ್ಲಿ ನಮ್ಮ ಬೇಡಿಕೆಗೆ ಬಹುಸಂಖ್ಯಾತರನ್ನು ಮಾತ್ರ ಅವಲಂಬಿಸಿರುತ್ತೇವೆ ಎಂದು ನಂಬುವಂತೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವು ಇದನ್ನು ಒಪ್ಪುವಿರಿ ಎಂದು ಆಶಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** (ಉ.ಪ್ರ. : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಿರ್ಣಯದ ಮಂಡನೆಕಾರರು ಈ ವಿಷಯವನ್ನು ಈ ಹಂತದಲ್ಲಿ ಮತ್ತು ಹಾಲಿ ಸಂದರ್ಭಗಳಲ್ಲಿ ಪ್ರಸ್ತಾವಿಸುವ ಅಗತ್ಯವಿತ್ತು ಎಂದು ಪರಿಗಣಿಸಿದ್ದಕ್ಕೆ ನಾನು ವಿಷಾದಿಸುತ್ತೇನೆ. ತರ್ಕದ ಮೇಲೆ ಸಂವೇದನೆ ಸವಾರಿ ಮಾಡುವ ಹಂತವನ್ನು ಮೀರಿ ಬೆಳೆಸಿದ್ದೇವೆ ಎಂದು ನಾನು ಆಲೋಚಿಸಿದ್ದೆ. ನನ್ನ ಗೆಳೆಯ ಮುಸ್ಲಿಮ್ ಲೀಗ್ ಪಕ್ಷದ ನಾಯಕರು ಬದಲಾದ ಸಂದರ್ಭಗಳನ್ನು ಗಮನಿಸಲು ನಮ್ಮನ್ನು ಕೇಳಿಕೊಂಡರು. ಇದನ್ನೆ ಮಾಡಲು ನಾನು ಅವರನ್ನು ನಿಖರವಾಗಿ ಕೇಳಿದ್ದು. ಮಹಾನ್ ಬದಲಾವಣೆಯ ಪರಿಣಾಮ ಈ ದೇಶದ ಮೇಲೆ ಆಗಿರುವುದನ್ನು ಮೆಚ್ಚಲಿಲ್ಲ, ಮೌಲ್ಯಮಾಪನ ಮಾಡಲಿಲ್ಲ ಎಂಬುದಕ್ಕೆ ತುಂಬ ವಿಷಾದಿಸುತ್ತೇನೆ. ಆಗಸ್ಟ್ ೧೫ರಿಂದ ಈ ದೇಶದ ಇಡೀ ಆಡಳಿತ, ಈ ದೇಶದ ಜನರಿಗೆ ಹಸ್ತಾಂತರವಾಗಿದೆ ಎಂಬುದನ್ನು ಮಂಡನೆಕಾರರು ಮನಗಂಡಂತಿಲ್ಲ. ನಾನು ಈ ಪ್ರಶ್ನೆಯತ್ತಲೇ ಅಲ್ಪಸಂಖ್ಯಾತರ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸುತ್ತಿದ್ದೇನೆ ಎಂದು ಅವರಿಗೂ ಮತ್ತು ಅವರ ಸಹಚರರಿಗೂ ಭರವಸೆ ನೀಡಬಹುದಾಗಿದೆ. ಪ್ರಜಾಪ್ರಭುತ್ವದ ಯಶಸ್ಸನ್ನು ಅದು ಸಮುದಾಯದ ವಿಭಿನ್ನ ವಿಭಾಗಗಳಲ್ಲಿ ಉಂಟುಮಾಡುವ ವಿಶ್ವಾಸದ ಮೊತ್ತದಿಂದ ಅಳೆಯಬೇಕು ಎಂದು ಭಾವಿಸಿರುವವರಲ್ಲಿ ನಾನೂ ಒಬ್ಬ. ಒಂದು ಸ್ವತಂತ್ರ ರಾಷ್ಟ್ರದಲ್ಲಿ ಪ್ರತಿಯೊಬ್ಬ ಪೌರನನ್ನು ಹೇಗೆ ನೋಡಬೇಕೆಂದರೆ ಆತನ ಐಹಿಕ ಅಭಿಲಾಷೆಗಳಷ್ಟೆ ಅಲ್ಲದೆ ಆತ್ಮಗೌರವದ ಆತನ ಪವಿತ್ರ ಪ್ರಜ್ಞೆ ಕೂಡ ಪೂರಾ ತೃಪ್ತಿಯಾಗುವ ರೀತಿಯಲ್ಲಿ ನೋಡಬೇಕು ಎಂದು ನಾನು ನಂಬುತ್ತೇನೆ ಅಲ್ಲದೆ ಬಹುಸಂಖ್ಯಾತರು ಈ ಪ್ರಶ್ನೆಗಳ ಪರಿಶೀಲನೆಗೆ ನ್ಯಾಯ ಕೊಡಲು ಪ್ರಯತ್ನಿಸಬೇಕಲ್ಲದೆ, ಅಲ್ಪಸಂಖ್ಯಾತರಿಗೆ ಮನ್ನಣೆಯ, ಪ್ರಾಮಾಣಿಕತೆಯ ಭಾವನೆಗಳಿಂದ ಸ್ಫೂರ್ತಿ ತುಂಬಬೇಕು; ಹಾಗೂ ಅದರ ಎಲ್ಲ ನಿರ್ಧಾರಗಳನ್ನು ತಿಳಿವಳಿಕೆ ಮತ್ತು ಕನಿಕರದ ನಿಜದೃಷ್ಟಿಯಿಂದ ಪ್ರೇರಿಸಬೇಕು ಎಂದು ಕೂಡಾ ನಾನು ನಂಬುತ್ತೇನೆ. ಆದುದರಿಂದ ನಾನು ಈ ಪ್ರಸ್ತಾವವನ್ನೂ ವಿರೋಧಿಸುತ್ತೇನೆ. ಏಕೆಂದರೆ, ಅಲ್ಪಸಂಖ್ಯಾತರಿಗೇ ಪ್ರತ್ಯೇಕ ಮತದಾರರ ಸಮುದಾಯದ ಪದ್ಧತಿಯನ್ನು ಒಪ್ಪಿ ಈಗ ಎತ್ತಿ ಹಿಡಿದದ್ದೆ ಆದರೆ ಅದು ಆತ್ಮಘಾತುಕಪ್ರವೃತ್ತಿ ಆಗುತ್ತದೆ. ಹಾಗೆ ನೋಡಿದರೆ, ದೊಡ್ಡ ಬದಲಾವಣೆಯನ್ನು ನಾವು ಮರೆತಂತಿದೆ. ಅದು ನಮ್ಮ ದೇಶದ ರಾಜಕೀಯ ಸ್ಥಾನಮಾನದ ಬದಲಾವಣೆ. ಹಿಂದಿನ ದಿನಗಳಲ್ಲಿ ನಮ್ಮ ಶಾಸಕರು ಯಾವುದೇ ಹೆಸರಿನಡಿ ಕೆಲಸ ಮಾಡಿದರೂ ವಾಸ್ತವದಲ್ಲಿ

ಅವರು ಸಲಹಾ ಮಂಡಳಿಗಳಿಗಿಂತ ಬೇರೇನೂ ಹೆಚ್ಚಿಗೆ ಇರಲಿಲ್ಲ. ಅಂತಿಮ ಅಧಿಕಾರವೆಲ್ಲ ಬ್ರಿಟಿಷರಿಗೆ ವಹಿಸಿಕೊಟ್ಟುದಾಗಿತ್ತು ಮತ್ತು ಬ್ರಿಟಿಷ್ ಪಾರ್ಲಿಮೆಂಟ್ ನಮ್ಮ ಹಣೆಬರಹದ ಅಂತಿಮ ತೀರ್ಪುಗಾರ ಆಗಿದ್ದಿತು. ವಿದೇಶೀಯರಲ್ಲಿ ಎಲ್ಲಿವರೆಗೆ ಅಧಿಕಾರ ಉಳಿದಿತ್ತೊ, ಅಲ್ಲಿಯವರೆಗೆ ಪ್ರತ್ಯೇಕ ಮತದಾರರ ಸಮುದಾಯಗಳ ಬಳಕೆ ಅರ್ಥವಾಗುತ್ತೆ. ಆಗ ಬಹುಶಃ ವಿವಿಧ ಸಮುದಾಯಗಳ ಪ್ರತಿನಿಧಿಗಳು ಅವರವರ ಪೂರಾ ಸ್ಥಾನಮಾನ ಪಡೆದ ವಕೀಲರಂತೆ ಅಸಹಜವಾಗಿ ನಡೆದುಕೊಳ್ಳಬಹುದು ಮತ್ತು ನಿರ್ಣಯ ದೇಶದ ಜನರೊಂದಿಗೆ ನಿಂತಿರದಿರುವ ಕಾರಣ ಅವರು ಆ ಸ್ಥಾನದೊಂದಿಗೆ ತಮ್ಮನ್ನು ತಾವೇ ತೃಪ್ತಿ ಪಡಿಸಿಕೊಳ್ಳಬಹುದಿತ್ತು. ಆದರೆ ಈಗ ಅದು ಕೇವಲ ವಕೀಲತನದ ಒಂದು ಪ್ರಶ್ನೆಯಲ್ಲ. ಸ್ವತಂತ್ರ ದೇಶದ ವ್ಯವಹಾರಗಳಲ್ಲಿ ಒಂದು ಪರಿಣಾಮಕಾರಿ ನಿರ್ಣಾಯಕ ಧ್ವನಿ. ಶಾಸಕರ ಮತ್ತು ಸಂಪತ್ತಿನ ಚರ್ಚೆಗಳಲ್ಲಿನ ಒಂದು ಪ್ರಶ್ನೆ ಹಾಗೂ ಒಂದು ಸಲಹಾ ಸಾಮರ್ಥ್ಯದಲ್ಲಿ ಯಾರೇ ಒಬ್ಬರು ಒಬ್ಬ ಉತ್ತಮ ವಕೀಲ ಆಗಿದ್ದಿದ್ದರೆ, ಅವರು ತಾವು ಯಾರಿಗೆ ಹೇಳಬೇಕೋ ಆ ನ್ಯಾಯಾಧೀಶರು ಅವರ ವಾದಗಳನ್ನು ಅಥವಾ ಸಂವೇದನೆಗ್ಳನ್ನು ಮೆಚ್ಚುವುದಿಲ್ಲವೋ ಆಗ ಅವರು ತಮ್ಮ ಕಕ್ಷಿಗಳಿಗಾಗಲಿ ಅಥವಾ ತಮಗೇ ಆಗಲಿ ನಿಷ್ಪ್ರಯೋಜಕವಾಗುತ್ತಾರೆ. ಮತ್ತು ವಕೀಲ ಎಂದೂ ನ್ಯಾಯಾಧೀಶನಾಗುವ ಸಾಧ್ಯತೆ ಇರುವುದಿಲ್ಲ. ವಕೀಲರಾದವರು ತಮ್ಮ ಮುಂದೆ ಒಬ್ಬ ನ್ಯಾಯಾಧೀಶನಾಗುವ ಭರವಸೆಯನ್ನು ಹೊಂದಿರಬೇಕೆಂದು ನಾನು ಅಪೇಕ್ಷಿಸುತ್ತೇನೆ. ನಾವು ಈಗ ಗಳಿಸಿರುವ ಹೊಸ ಸ್ಥಾನಮಾನದಲ್ಲಿ, ಈ ದೇಶದ ಪ್ರತಿ ಪೌರನೂ ನನ್ನ ದೃಷ್ಟಿಯಲ್ಲಿ ಘನವಂತನಾಗಬೇಕೆಂದು ಬಯಸುತ್ತೇನೆ. ಆತ ಸಮರ್ಥನಿರಬೇಕು ಮತ್ತು ಯಾವಾಗಲೂ ನಿರ್ಣಯಗಳತ್ತ ಪರಿಣಾಮಕಾರಿಯಾಗಿ ಪ್ರಭಾವ ಬೀರುವಲ್ಲಿ ಅವಕಾಶ ಹೊಂದಬೇಕು; ಆದುದರಿಂದ ನಾನು ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಮತದಾರರ ಸಮುದಾಯಗಳು ಆತ್ಮಘಾತುಕ ಮತ್ತು ಅವರಿಗೆ ಭಾರಿ ಹಾನಿ ಉಂಟುಮಾಡುತ್ತದೆ ಎಂದು ನಂಬುತ್ತೇನೆ. ಅವರು ಎಂದೆಂದಿಗೂ ಪ್ರತ್ಯೇಕವಾಗಿದ್ದಲ್ಲಿ, ಎಂದಿಗೂ ಬಹುಸಂಖ್ಯಾತರಾಗಿ ಪರಿವರ್ತಿತರಾಗುವುದಿಲ್ಲ ಮತ್ತು ಮೊದಲಿನಿಂದಲೇ ಅವರನ್ನು ಅವರ ನಿರಾಶಾವಾದ ಉಡುಗಿಸುತ್ತದೆ. ನೀವು ಬಯಸುವುದಾದರೂ ಏನು ಮತ್ತು ನಿಮ್ಮ ಅಂತಿಮ ಉದ್ದೇಶವೇನು? ಅಲ್ಪಸಂಖ್ಯಾತರು ಯಾವಾಗಲೂ ಅಲ್ಪಸಂಖ್ಯಾತರಾಗಿಯೇ ಉಳಿಯಲಾಶಿಸುವರೆ ಇಲ್ಲವೆ ಒಂದು ದೊಡ್ಡ ರಾಷ್ಟ್ರದ ಸಮಗ್ರ ಭಾಗವಾಗಿ ರೂಪುಗೊಳ್ಳಲು ಸದಾ ನಿರೀಕ್ಷಿಸುವರೆ ಹಾಗೂ ಅದರ ಹಣೆಬರಹಗಳನ್ನು ದಿಗ್ದರ್ಶಿಸಿ ನಿಯಂತ್ರಿಸ ನೋಡುವರೆ? ಸಮುದಾಯದ ಉಳಿದವರಿಂದ ಪ್ರತ್ಯೇಕಿತರಾದರೆ ಅವರು ತಮ್ಮ ಆಕಾಂಕ್ಷೆ ಸಾಧಿಸುವರೆ ಮತ್ತು ಆ ಆದರ್ಶ ಸಾಧಿಸಬಲ್ಲರೆ? ಅವರು ಉಳಿದವರಿಂದ ಪ್ರತ್ಯೇಕಗೊಂಡರೆ ಅದು ಅವರಿಗೆ ಅತೀವ ಅಪಾಯಕಾರಿ. ಮತ್ತು ತಾವು ಉಸಿರಾಡುವ ಗಾಳಿಗೂ ಅವರು ಇತರರನ್ನು ಅವಲಂಬಿಸಬೇಕಾಗಿ ಅನಂತರ ಉಸಿರುಗಟ್ಟುವ ಕೋಣೆಯೊಳಗೆ ಪ್ರತ್ಯೇಕವಾಗಿರಬೇಕಾಗುತ್ತದೆ. ಆವರು ಎಂತಹ ಸ್ಥಾನವನ್ನು ಹೊಂದಬೇಕೆಂದು ನಾನು ಬಯಸುತ್ತೇನೆ ಎಂದರೆ ಆ ಸ್ಥಾನದಲ್ಲಿ ಅವರ ಧ್ವನಿ ವಿರೋಧವೂ ತೀಕ್ಷ್ಣವೂ ಆಗಬೇಕು; ಶಕ್ತಿಯುತವಾಗಬೇಕು. ಅಲ್ಪಸಂಖ್ಯಾತರು ಪ್ರತ್ಯೇಕ ಸಮುದಾಯಕ್ಕೆ ಹಿಂದಿರುಗಿದರೆ ಅವರು ಎಂದೂ ಪರಿಣಾಮಕಾರಿ ಧ್ವನಿ ಹೊಂದಿರುವುದಿಲ್ಲ. ಶ್ರೀ ಜಿನ್ನಾ ಮತ್ತಿತರ ಮುಸ್ಲಿಮ್ ಲೀಗ್ ಪಕ್ಷದ ನಾಯಕರು ಮೇಲಿಂದ ಮೇಲೆ ಏನು ಘೋಷಿಸಿದರು? ಅವರು ಹೆಚ್ಚಿನ ಸೌಲಭ್ಯದೊಂದಿಗೆ ಪ್ರತ್ಯೇಕ ಮತದಾರರ ಸಮುದಾಯಗಳನ್ನು ಹೊಂದಿದ್ದರು ಅದು ಅವರ ನಿರ್ದುಷ್ಟ ಉದ್ಘೋಷವಾಗಿತ್ತು, ಕಳೆದ ಮೂರು ದಶಕಗಳ ಕಾಲ ಈ ಸೌಲಭ್ಯ ಹೊಂದಿದ್ದರಾದರೂ ಅವರು ಪಡೆದ ಅನುಭವವಾದರೂ ಒಂದು ಭ್ರಮೆಯ ರಕ್ಷೆಯಾಗಿತ್ತು; ಅದು, ಅವರ ಹಕ್ಕುಗಳು ಮತ್ತು ಅವರ ಹಿತಾಸಕ್ತಿಗಳನ್ನು ಗಳಿಸಿಕೊಡಲಿಲ್ಲ. ಬಂಗಾಳದ, ಬಿಹಾರದ ಹಾಗೂ ವಾಯವ್ಯ ಗಡಿ ಪ್ರಾಂತ್ಯಗಳಲ್ಲಿ ಮುಸ್ಲಿಮರು ಮತ್ತು ಹಿಂದೂಗಳು ಪ್ರತ್ಯೇಕ ಮತದಾರರ ಸಮುದಾಯ ಮತ್ತು ಸೌಲಭ್ಯವಿದ್ದಾಗ್ಯೂ ಅದು ಕಳೆದ ಹಲವು ತಿಂಗಳುಗಳು ಅವರಿಗೆ ನೆರವಾಯಿತೆ? ಈ ಶೋಚನೀಯ ದುಃಸ್ಥಿತಿಯಲ್ಲಿ ಯಾವುದೇ ವ್ಯಕ್ತ ಸಹಾಯ ಮಾಡಿತೆ? ಎಲ್ಲ ಅನುಭವವಿದ್ದರೂ ಇಂದು

ಪ್ರತ್ಯೇಕ ಮತದಾರರ ಸಮುದಾಯಗಳಿಗೆ ಒಂದು ಬೇಡಿಕೆ ಇರಬೇಕೆಂಬುದು ನಿಜವಾಗಿ ದುರದೃಷ್ಟಕರ.

ಮತ್ತೆ ಅಲ್ಪಸಂಖ್ಯಾತರು ಏನನ್ನು ಬಯಸುವರು? ದೇಶದ ಸರ್ಕಾರದಲ್ಲಿ ಮತ್ತು ಅದರ ಆಡಳಿತದಲ್ಲಿ ಅವರೇನಾದರೂ ಪಾಲು ಇಚ್ಛಿಸುವರೇ? ನೀವು ನೀವಾಗಿಯೇ ಸಮುದಾಯದ ಉಳಿದವರಿಂದ ಪ್ರತ್ಯೇಕರಾದರೆ ನೀವು ಸಂಪುಟದಲ್ಲಿ ಮೊದಲ ಸ್ಥಾನವನ್ನು ಹೊಂದಲಾರಿರಿ. ಸಂಪುಟ, ಸಮರಸವಾದ ರೀತಿಯಲ್ಲಿ ಒಂದು ತಂಡವಾಗಿ ಮಾತ್ರ ವರ್ತಿಸಬಲ್ಲದು ಹಾಗೂ ಸಂಪುಟದ ಪ್ರತಿಯೊಬ್ಬ ಸದಸ್ಯನೂ ಸಮತಾವಾದಿ ಮತದಾರರ ಸಮುದಾಯಕ್ಕೆ ಉತ್ತರದಾಯಿಯಾದ ಹೊರತು ಕ್ಯಾಬಿನೆಟ್ ಫಲಪ್ರದ ರೀತಿಯಲ್ಲಿ ಕಾರ್ಯನಿರ್ವಹಿಸುವುದಿಲ್ಲ. ತಾವು ಸರ್ಕಾರದಲ್ಲಿ ಪ್ರಾತಿನಿಧ್ಯದ ಹಕ್ಕನ್ನು ಬಿಟ್ಟುಕೊಡಲು ಸಿದ್ಧರಿರುವಿರಾ? ನೀವು ವಕೀಲರಿಗಿಂತ ಹೆಚ್ಚಿಗೇನೂ ಇಲ್ಲದಂತಹ ಕರುಣಾಜನಕ ಸ್ಥಿತಿಯಲ್ಲಿ ತೃಪ್ತರಾಗುವಿರಾ? ವಕೀಲರಾಗಿರಲು ಮಾತ್ರ ಇಷ್ಟಪಟ್ಟರೆ, ನಿಮ್ಮ ಕಕ್ಷಿದಾರರು ನಿಮ್ಮನ್ನು ತಿರಸ್ಕರಿಸದೆ ಇರಬಹುದು. ಅಪಹಾಸ್ಯಕ್ಕೆ ಗುರಿಮಾಡದೆ ಇರಬಹುದು. ಆದರೆ ನಿಮ್ಮ ಬಗ್ಗೆ ಮತದಾರರು ಉಪೇಕ್ಷೆ ತೋರಬಹುದು, ಪರಿಚಯವೆ ಇಲ್ಲದವರಂತೆ ಮುಖ ತೋರದೆ ಇರಬಹುದು. ನಿಮ್ಮ ನ್ಯಾಯಧೀಶರು ಕಕ್ಷಿದಾರರಿಗೆ ಉತ್ತರದಾಯಿಗಳಾಗುವುದಿಲ್ಲ. ಆಗ ನಿಮ್ಮ ಪಾಡೇನು? ನೈಜ ರಾಷ್ಟ್ರವನ್ನು ರೂಪಿಸುವ ಇಡೀ ಘಟಕದ ಒಂದು ಅವಿಭಾಜ್ಯ ಅಂಗವಾಗಿ ನಿಮ್ಮನ್ನೆ ನೀವು ತೊಡಗಿಸುವುದರಲ್ಲಿದೆ ನಿಮ್ಮ ಸುರಕ್ಷತೆ.

ಮತ್ತೆ ನಿಮ್ಮ ಅಂತಿಮ ಆದರ್ಶವೇನು? ನೀವು ಒಂದು ನಿಜವಾದ ಜಾತ್ಯತೀತ ರಾಷ್ಟ್ರವನ್ನೊ ಅಥವಾ ಒಂದು ಪುರೋಹಿತಶಾಹಿ ರಾಷ್ಟ್ರವನ್ನು ಬಯಸುವಿರೋ? ನೀವು ಪುರೋಹಿತಶಾಹಿ ರಾಷ್ಟ್ರ ಬಯಸಿದಲ್ಲಿ ಆಗ ಭಾರತದ ಒಕ್ಕೂಟದಲ್ಲಿ ಪುರೋಹಿತಶಾಹಿ ರಾಷ್ಟ್ರವಾಗಿ ಮಾತ್ರ ಇರಬಲ್ಲದು. ಈ ರೀತಿಯಲ್ಲಿ ನೀವಾಗಿಯೇ ಪ್ರತ್ಯೇಕವಾಗಲು ನಿಮ್ಮ ಆಸಕ್ತಿಯೇ? ರಾಷ್ಟ್ರ (ರಾಜ್ಯ)ದ ವ್ಯವಹಾರಗಳ ನಿಯಂತ್ರಣ ಹೊಂದಿರುವ ಪ್ರತಿನಿಧಿಗಳು ಚುನಾವಣೆಯಲ್ಲಿ ಯಾವುದೇ ಪಾಲು ಅಥವಾ ಧ್ವನಿ ಇಲ್ಲದವರಾದರೆ ಈ ರಾಷ್ಟ್ರ ಅಂಥವರತ್ತ ಗಮನ ಹರಿಸುವುದೆ? ಅದಕ್ಕಿಂತಲೂ ಹೆಚ್ಚು ಅಪಾಯಕಾರಿ ಇನ್ನೊಂದಿದೆಯೆ? ನೀವು ಅಂತಹ ಪರಿಸ್ಥಿತಿಯನ್ನು ತಲಪಿದರೆ ಅದು ನಿಮ್ಮ ಮೇಲೆ ಈಗ ಮಾತ್ರವಲ್ಲ ಇನ್ನು ಮುಂದೆಯೂ ಪ್ರತಿಕ್ರಿಯಿಸಬಲ್ಲದು ಎಂಬುದನ್ನು ಪರಿಗಣಿಸಬೇಕು. ಅಲ್ಪಸಂಖ್ಯಾತರಾಗಿ ನೀವು ಪ್ರತ್ಯೇಕ ಮತದಾರರ ಸಮುದಾಯ ಹೊಂದಿದರೆ, ಅನಿವಾರ್ಯ ಫಲಿತಾಂಶವೆಂದರೆ ಬಹುಸಂಖ್ಯಾತರು ಅಲ್ಪಸಂಖ್ಯಾತರಿಂದ ಪ್ರತ್ಯೇಕವಾಗುತ್ತಾರೆ ಆ ಪ್ರತ್ಯೇಕತೆ ಅವರ ಮೇಲೆ ಒರಟಾಗಿ ಸವಾರಿ ಮಾಡಬಲ್ಲದು.

ಆದುದರಿಂದ ನಾನು ತಮ್ಮನ್ನು ಕೇಳುತ್ತೇನೆ. ನೀವು ನಿಮ್ಮ ಸಮುದಾಯಕ್ಕೆ ಸೇರಿದ ಯಾರಿಗೇ ಆಗಲಿ ಬಹುಸಂಖ್ಯಾತರು ಉತ್ತರದಾಯಿಯಾಗದೆ ಯಾರೂ ನಿಮ್ಮ ಮೃದು ಭಾವನೆಗಳನ್ನು ಲಕ್ಷಿಸದೆ ಕಡಿದುಕೊಳ್ಳುವುದನ್ನು ಬಯಸುವಿರಾ? ಅದಕ್ಕಿಂತಲೂ ಯಾವುದೂ ಹೆಚ್ಚು ಹಾನಿಕರವಲ್ಲ ಮತ್ತು ನೀವು ಇಂದಿನ ನಿಶಾನೆಗಳನ್ನು ಕಾಣುತ್ತಿಲ್ಲವೆ? ನೀವುಗಳು ಹಿಂದೆ ಕಲ್ಮಷವಾಗದಿದ್ದ ಕೇರಿಗಳಲ್ಲೂ ಕೋಮುವಾದದ ಉದ್ವೇಗಗಳ ಪ್ರಚೋದನೆ ಕಾಣಲಿಲ್ಲವೆ? ಈಗ ನೀವು ಪ್ರತ್ಯೇಕ ಮತದಾರರ ಸಮುದಾಯಗಳಿಗೆ ಕೂಗಾಡಿದ್ದೆ ಆದಲ್ಲಿ ಯಾವುದೇ ದೃಷ್ಟಿಕೋನದಿಂದ ಅದರತ್ತ ನೋಡಿದರೂ ಅದು ನಿಮ್ಮ ಹಿತಾಸಕ್ತಿಗಳಿಗೆ ಬಾಧಕ ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಪ್ರಜಾಪ್ರಭುತ್ವದ ಸಾರ ಎಂದರೇನು? ಪ್ರಜಾಪ್ರಭುತ್ವದ ಯಶಸ್ಸಿಗೆ ಸ್ವಯಂ ಶಿಸ್ತಿನ ಕಲೆಯಲ್ಲಿ ಪ್ರತಿಯೊಬ್ಬನೂ ತಾನೇ ತರಬೇತಿ ಪಡೆದುಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಒಬ್ಬರು ತಮಗಾಗಿ ಕಡಿಮೆ ಲಕ್ಷ್ಯವಿಡಬೇಕು ಮತ್ತು ಇತರರಿಗೆ ಹೆಚ್ಚು ಎಂಬ ಯಾವುದೇ ವಿಭಜಿತ ನಿಷ್ಠೆ ಇರುವಂತಿಲ್ಲ. ಎಲ್ಲ ನಿಷ್ಠೆಗಳು ರಾಷ್ಟ್ರದ ಸುತ್ತಲೇ ಕೇಂದ್ರೀಕರಿಸಬೇಕು. ಒಂದು ಪ್ರಜಾಪ್ರಭುತ್ವದಲ್ಲಿ ನೀವು ಎದುರಾಳಿ ನಿಷ್ಠೆಗಳನ್ನು ಸೃಷ್ಟಿಸಿದರೆ ಅಥವಾ ಯಾವುದೇ ವೈಯಕ್ತಿಕ ಅಥವಾ ಸಮೂಹವು ಆತನ ಹದ್ದುಮೀರಿಕೆಯನ್ನು ದಮನಗೊಳಿಸುವ ಬದಲು, ದೊಡ್ಡ ಅಥವಾ ಇತರ ಆಸಕ್ತಿಗಳಿಗೆ ಗಮನ ಹರಿಸುವ ವ್ಯವಸ್ಥೆಯನ್ನು ಸೃಷ್ಟಿಸಿದರೆ, ಆಗ ಪ್ರಜಾಪ್ರಭುತ್ವ

ಮುಳುಗಿ ಹೋಗುತ್ತದೆ. ಆದುದರಿಂದ ಪ್ರತ್ಯೇಕ ಮತದಾರರ ಸಮುದಾಯಗಳು ಇಡಿಯಾಗಿ ರಾಷ್ಟ್ರ ಮತ್ತು ಸಮಾಜಕ್ಕೆ ಅಪಾಯಕಾರಿ. ಮಾತ್ರವಲ್ಲದೆ ಅವು ನಿರ್ದಿಷ್ಟವಾಗಿ ಅಲ್ಪಸಂಖ್ಯಾತರಿಗೆ ಹಾನಿಕರ. ನಾವೆಲ್ಲ ಇದರ ಅನುಭವವನ್ನು ಸಾಕಷ್ಟು ಹೊಂದಿದ್ದೇವೆ. ಮತ್ತು ಆ ಎಲ್ಲ ಅನುಭವವು ನಷ್ಟವಾಗಬೇಕು ಹಾಗೂ ಇನ್ನೂ ಜನ ಸಿಡಿದ ಘೋಷಣೆಗೆ ಜೋತುಬೀಳಬೇಕು ಎಂದರೆ ಅದು ದುರಂತವೇ ಸರಿ, ಹಿಂದಿನ ದಿನಗಳಲ್ಲಿ ಯಾರೇ ಒಬ್ಬರು ಹಾಗೆ ಕೂಗುತ್ತಿದ್ದರು; ಆದರೆ ಈಗ ವಿಶೇಷವಾಗಿ, ಅದೂ ನಮ್ಮ ಕಣ್ಣು ಮುಂದೆಯೇ, ಹಿಂಸೆಯ ಎಲ್ಲ ಸ್ವಚ್ಛಂದತೆ ಕಾಣುತ್ತಿರುವಾಗ, ಪ್ರತಿ ಗಂಟೆಗೂ ಹತ್ಯಾಕಾಂಡ, ಕೊಳ್ಳೆ, ಲೂಟಿ, ಅತ್ಯಾಚಾರಗಳ ಅತ್ಯಂತ ನೋವು ಉಂಟುಮಾಡುವ ಕಥೆಗಳನ್ನು ಕೇಳುತ್ತಿರುವಾಗ, ನಾಚಿಕೆಯಿಂದ ಎಲ್ಲರೂ ತಮ್ಮ ತಲೆಯನ್ನು ನೇಣಿಗೊಡ್ಡುವಂತೆ ಮಾಡುತ್ತಿರುವಲ್ಲಿ, ಪ್ರತ್ಯೇಕತೆಯ ಈ ಅಸಹ್ಯಕರ ಪಂಥಕ್ಕೆ ಸಾಕಷ್ಟು ನಾವು ಬೆಲೆ ತೆತ್ತಿದ್ದೇವೆ. ನಾವು ವಿವೇಕಿಗಳಾಗಬೇಕು ಎನಿಸುವುದಿಲ್ಲವೆ? ನಾವು ಈಗ ಸ್ವತಂತ್ರರಾಗಿದ್ದೇವೆ ಮತ್ತು ಈ ಸ್ವಾತಂತ್ರ್ಯಕ್ಕಾಗಿ ಬೆಲೆ ತೆತ್ತಿದ್ದೇವೆ; ಒಂದು ಕಡೆ ಪಾಕಿಸ್ತಾನ; ಇನ್ನೊಂದು ಕಡೆ ಭಾರತದ ಒಕ್ಕೂಟ ಅಥವಾ ಹಿಂದೂಸ್ತಾನ ಇದೆ. ಹಿಂದೂಸ್ತಾನದಲ್ಲಿ ಮುಸ್ಲಿಮರನ್ನು ಪರಕೀಯರೆಂದು ಅಥವಾ ಪಾಕಿಸ್ತಾನದಲ್ಲಿ ಹಿಂದೂಗಳನ್ನು ಪರಕೀಯರೆಂದು ಭಾವಿಸಲು ಬಹಳಷ್ಟು ಮಾತು ಆಗಿದೆ. ಈ ಪ್ರತ್ಯೇಕ ಮತದಾರರ ಸಮುದಾಯ ಎಂಬ ಸಂಸ್ಥೆ ಸ್ಫೋಟಗೊಳಿಸುವ ಪ್ರವೃತ್ತಿಗಳನ್ನು ಉತ್ತೇಜಿಸುವುದೇ ಅಥವಾ ಅದು ಅದಿಲ್ಲದೆ ಯಾವ ರಾಷ್ಟ್ರವೂ ಅಸ್ತಿತ್ವದಲ್ಲಿರದು ಎಂಬ ಸಮನ್ವಯ ಆಶ್ರಯಿಸಲು ತಂದುಕೊಡುವುದೆ? ನೀವು ಒಂದು ರಾಷ್ಟ್ರದ ನಾಗರಿಕರು ಇನ್ನೊಂದು ರಾಷ್ಟ್ರದಲ್ಲಿ ಅವರ ಸಹಧರ್ಮೀಯರನ್ನು ಅವರ ರಕ್ಷಣೆಗಾಗಿ ಅಥವಾ ನೀವು ಅವರನ್ನು ತಮ್ಮ ಸ್ವಂತ ಸ್ವತಂತ್ರ ಸಾರ್ವಭೌಮ ರಾಷ್ಟ್ರದ ಸಮಾನ ನಾಗರಿಕರಾಗಿ ನೋಡಬಯಸುವಿರಾ? ನಾನಾದರೂ ಅವರನ್ನು ಸ್ವಯಂ ಸಾರ್ಥಕತೆಗೆ ಪೂರ್ಣ ಅವಕಾಶಗಳು ಹೊಂದಿರಲು ಇಚ್ಛಿಸುತ್ತೇನೆ. ನಾನು ಈ ಸಂಸ್ಕೃತಿಗಳ ಸಂಶ್ಲೇಷಣೆ ಮುಂದುವರಿಯಲು ಇಚ್ಛಿಸುತ್ತೇನೆ. ಹಾಗಾಗಿ ನಾವೆಲ್ಲ ಸೋದರರಂತೆ ವಾಸಿಸುವರಾಗಿ, ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ ಇವುಗಳ ತತ್ತ್ವಗಳನ್ನು ಪೂರಾ ಕಾಯ್ದುಕೊಂಡು, ಗಮನಿಸಿ ಮತ್ತು ಅನುಸರಿಸಿ ಈ ಸ್ವಾತಂತ್ರ್ಯ ಗಳಿಸಲು ತಮ್ಮೆಲ್ಲವನ್ನು ಅರ್ಪಿಸಿದವರ ತ್ಯಾಗಗಳ ಫಲವನ್ನು ಸವಿಯುವಂಥ ರಾಷ್ಟ್ರವನ್ನು ಹೊಂದುವಂತಾಗುತ್ತದೆ. (ಹರ್ಷೋದ್ಗಾರ)

**ಮಾನ್ಯ ಸಭಾಧ್ಯಕ್ಷರು** : ನಾವೀಗ ನಿರ್ಗಮಿಸಿ ಮತ್ತೆ ೩ ಗಂಟೆಗೆ ಸೇರೋಣ.

**ಕೆಲವು ಸದಸ್ಯರು** : ಪ್ರಸ್ತಾವವನ್ನು ಮತಕ್ಕೆ ಹಾಕಬಹುದು.

**ಮಾನ್ಯ ಸಭಾಧ್ಯಕ್ಷರು** : ಸಭೆಯು ಇಚ್ಛೆಯು ಇದಾಗಿದ್ದರೆ, ನಾನು ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಮುಂದಿಟ್ಟಿರುವ ವಿಷಯ :

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ಗೌರವಾನ್ವಿತ ಸರ್ದಾರ್ ಪಟೇಲ್‌ರನ್ನು ಅವರು ಏನಾದರೂ ಹೇಳಲು ಬಯಸುವುದಾದರೆ ಉತ್ತರಿಸಲು ಕರೆಯುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಳ್ಳಲಾಯಿತೆಂಬುದು ತಿಳಿದು ವ್ಯಥೆಯಾಗಿದೆ. ಏಕೆಂದರೆ, ಸಲಹಾ ಸಮಿತಿಯ ಮುಂದೆ ಈ ಪ್ರಶ್ನೆ ಬಂದಾಗ ಇಂದು ಇಲ್ಲಿ ನಾನು ಕೇಳಿದಷ್ಟು ಚರ್ಚೆ ಇರಲಿಲ್ಲ. ಇಲ್ಲಿ ಈ ತಿದ್ದುಪಡಿಯನ್ನು ಯಾರು ಮಂಡಿಸಿದರೊ ಮತ್ತು ಬೆಂಬಲಿಸಿದರೋ ಆ ಮುಸ್ಲಿಮ್ ಲೀಗಿನ ನನ್ನ ಗೆಳೆಯರು ಒಂದರ್ಥದಲ್ಲಿ ಅವರು ನಿರ್ವಹಿಸಲು ಒಂದು ಕರ್ತವ್ಯವಿದೆ ಎಂದು ಪರಿಗಣಿಸಿರುವರು. ಅವರು ಬಹುಕಾಲದಿಂದ ಪ್ರತ್ಯೇಕ ಮತದಾರರ ಸಮುದಾಯಗಳಿಗೆ ಒತ್ತಡ ತಂದು ಅನುಭವಿಸುತ್ತಿದ್ದಾರೆ ಮತ್ತು ಅದನ್ನು ಇದ್ದಕ್ಕಿದ್ದಂತೆ ಬಿಟ್ಟುಬಿಡಬಾರದು ಎಂದು ಭಾವಿಸಿದ್ದಾರೆ, ಆದರೆ ಪ್ರಸ್ತಾವವನ್ನು ಮಂಡಿಸಿದವರು

ಸದನದ ಮತ ಹೊಂದಲು ನೋಡಿರುವರು. ಆದರೆ ನಾನು ಸುದೀರ್ಘ ಭಾಷಣಗಳನ್ನು ಕೇಳಿದಾಗ ಕೋಮುವಾದದ ಪ್ರಶ್ನೆ ಮೊದಲು ತರ್ಕಿಸಿದ ಯುಗಗಳಲ್ಲಿ ವಾಸಿಸುತ್ತ ಇದ್ದೇನೆ ಎಂದು ಆಲೋಚಿಸಿದೆ. ಕೋಮುವಾದದ ಮತದಾರರ ಸಮುದಾಯಗಳ ಪ್ರಶ್ನೆಯು ಕಾಂಗ್ರೆಸ್‌ನಲ್ಲಿ ಉದ್ಭವಿಸಿದಾಗ ಆರಂಭದ ಹಂತಗಳಲ್ಲಿ ಮಾಡಲಾದ ಭಾಷಣಗಳನ್ನು ಕೇಳುವ ಸಂದರ್ಭ ನನಗೊದಗಲಿಲ್ಲ; ಆದರೆ ಹಲವು ಖ್ಯಾತಿವೆತ್ತ ಮುಸ್ಲಿಮರಿದ್ದು ಅವರು ಅವರ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಅದೇಂದರೆ ಈ ದೇಶದ ದೊಡ್ಡ ಕೆಡುಕು ಎಂದರೆ ಅಂಗೀಕರಿಸಲು ತರಲಾದ ಕೋಮುವಾರು ಮತದಾರರ ಸಮುದಾಯ. ಕೋಮುವಾರು ಮತದಾರರ ಸಮುದಾಯಗಳ ಪದ್ಧತಿಯ ಜಾರಿ ನಮ್ಮ ದೇಶದ ಜನಸಮುದಾಯದೊಳಗೆ ಪ್ರವೇಶಿಸಿರುವ ಒಂದು ವಿಷ. ಇದಕ್ಕೆ ಜವಾಬ್ದಾರರಾದ ಹಲವರು ಆಂಗ್ಲರು ಕೂಡ ಇದನ್ನೊಪ್ಪಿರುವರು. ಆದರೆ ಇಂದು, ಈ ಕೋಮುವಾರು ಮತದಾರರ ಸಮುದಾಯದ ಫಲವಾಗಿ ದೇಶದ ವಿಭಜನೆಗೆ ಒಪ್ಪಿದ ಮೇಲೆ, ಆ ಪ್ರಸ್ತಾವವನ್ನು ಇಷ್ಟು ಗಂಭೀರವಾಗಿ ಮಂಡಿಸಲಾಗುತ್ತದೆ ಎಂದು ನಾನು ಆಲೋಚಿಸಿಯೇ ಇರಲಿಲ್ಲ. ಹಾಗೂ ಅದು ಗಂಭೀರವಾಗಿ ಮಂಡನೆಯಾದರೂ, ಗಂಭೀರವಾಗಿ ತೆಗೆದುಕೊಳ್ಳಲಾಗುತ್ತದೆ ಎಂದೂ ಆಲೋಚಿಸಿರಲಿಲ್ಲ. ಇರಲಿ, ಪಾಕಿಸ್ತಾನವನ್ನು ಅಂಗೀಕರಿಸಿದಾಗ, ಕಡೇಪಕ್ಷ ಭಾರತದ ಉಳಿದ ಭಾಗ ಅಂದರೆ ಶೇಕಡಾ ೮೦ರಷ್ಟನ್ನು ಒಂದು ರಾಷ್ಟ್ರವಾಗಿ ಇರುತ್ತದೆ ಮತ್ತು ಇಲ್ಲಿ ಕೂಡಾ ಎರಡು ರಾಷ್ಟ್ರಗಳ ವಿಷಯ ಮಾತನಾಡಲು ಯಾವ ಯತ್ನವೂ ಇರುವುದಿಲ್ಲ ಎಂದುಕೊಳ್ಳಲಾಯಿತು. ಪ್ರತ್ಯೇಕ ಮತದಾರರು ಇರಬೇಕೆಂದು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಅದು ನಮಗೆ ಒಳ್ಳೆಯದು ಎಂದು ನಾವು ಅದನ್ನು ದೀರ್ಘವಾಗಿ ಕೇಳಿದ್ದೇವೆ–ನಾವು ಅದನ್ನು ವರ್ಷಗಳ ಕಾಲ ಕೇಳಿದ್ದೇವೆ. ಈ ಚಳವಳಿಯ ಫಲವಾಗಿ ನಾವು ಇಂದು ಒಂದು ಪ್ರತ್ಯೇಕ ರಾಷ್ಟ್ರ. "ನಾವು ಒಂದು ಪ್ರತ್ಯೇಕ ರಾಷ್ಟ್ರ ನಾವು ನಮ್ಮ ರಕ್ಷಣೆಗೆ ಪ್ರತ್ಯೇಕ ಮತದಾರರ ಸಮುದಾಯವನ್ನೋ ಅಥವಾ ಹೆಚ್ಚಿನ ಸೌಲಭ್ಯವನ್ನೋ ಅಥವಾ ಯಾವುದೇ ಇತರ ರಿಯಾಯಿತಿಗಳನ್ನೋ ಇಲ್ಲವೆ ತಕ್ಕಷ್ಟು ಲಕ್ಷ್ಯ ಹೊಂದುವಂತಿಲ್ಲ, ಆದುದರಿಂದ ನಮಗೆ ಒಂದು ಪ್ರತ್ಯೇಕ ರಾಷ್ಟ್ರ ಕೊಡಿ." ನಾವು ಹೇಳಿದೆವು, "ಸರಿ ನಿಮ್ಮ ಪ್ರತ್ಯೇಕ ರಾಷ್ಟ್ರ ತೆಗೆದುಕೊಳ್ಳಿ." ಆದರೆ ಭಾರತದ ಉಳಿದ ಭಾಗದಲ್ಲಿ, ಭಾರತದ ಶೇ. ೮೦ರಷ್ಟರಲ್ಲಿ ಒಂದು ರಾಷ್ಟ್ರವಿರುತ್ತದೆ ಎಂದು ನೀವು ಒಪ್ಪುವಿರಾ? ಅಥವಾ ನೀವು ಇನ್ನೂ ಎರಡು ರಾಷ್ಟ್ರಗಳ ಮಾತು ಇಲ್ಲಿ ಕೂಡ ತರಬೇಕೆಂದು ಬಯಸುವಿರಾ? ನಾನು ಪ್ರತ್ಯೇಕ ಮತದಾರರ ಸಮುದಾಯಗಳಿಗೆ ವಿರುದ್ಧವಿದ್ದೇನೆ. ಪ್ರತ್ಯೇಕ ಮತದಾರರ ಸಮುದಾಯಗಳಿರುವ ಒಂದು ಸ್ವತಂತ್ರ ದೇಶವನ್ನು ತಾವು ನನಗೆ ತೋರಿಸುವಿರಾ? ಹಾಗಿದ್ದರೆ, ಅದನ್ನು ಒಪ್ಪಿಕೊಳ್ಳಲು ನಾನು ತಯಾರಾಗುತ್ತೇನೆ, ಆದರೆ ಈ ನತದೃಷ್ಟ ದೇಶದಲ್ಲಿ ಪ್ರತ್ಯೇಕ ಮತದಾರರ ಸಮುದಾಯ ದೇಶ ವಿಭಜನೆಯಾದ ಮೇಲೂ ದೃಢವಾಗಿ ನಿಲ್ಲುವುದಾದಲ್ಲಿ, ದೇಶಕ್ಕೆ ತೀವ್ರ ಸಂಕಟ ಆಗುತ್ತದೆ; ಇಲ್ಲಿ ವಾಸಿಸುವುದು ಯೋಗ್ಯವಲ್ಲ. ಆದುದರಿಂದ ನಾನು ನನ್ನ ಒಳ್ಳೆಯದಕ್ಕೆ ಮಾತ್ರವೇ ಅಲ್ಲ, ನಿಮ್ಮ ಒಳ್ಳೆಯದಕ್ಕೂ ಹೇಳುತ್ತೇನೆ "ಹಿಂದೆ ಆದುದನ್ನು ಮರೆಯಿರಿ, ಒಂದು ದಿನ ನಾವು ಸಂಘಟಿತರಾಗಬಹುದು. ನಾನು ಪಾಕಿಸ್ತಾನಕ್ಕೆ ಒಳ್ಳೆಯದು ಬಯಸುತ್ತೇನೆ. ಅದು ಯಶಸ್ಸು ಪಡೆಯಲಿ. ಅವರು ತಮ್ಮದೇ ಸ್ವಂತ ರೀತಿಯಲ್ಲಿ ನಿರ್ಮಾಣ ಮಾಡಲಿ, ಅವರು ಸಂವೃದ್ಧಿ ಹೊಂದಲಿ. ನಾವು ಸಂವೃದ್ಧಿಯ ಪೈಪೋಟಿಯಲ್ಲಿ ಪ್ರವೇಶಿಸೋಣ, ಆದರೆ ನಾವು ಪಾಕಿಸ್ತಾನದ ನೆಲದಲ್ಲಿ ಇಂದು ಆಗುತ್ತಿರುವ ಪೈಪೋಟಿಯಲ್ಲಿ ಪ್ರವೇಶಿಸುವುದು ಬೇಡ. ದೆಹಲಿಯಲ್ಲಿ ನಾವು ಒಂದು ಜ್ವಾಲಾಮುಖಿಯ ಮೇಲೆ ಕುಳಿತಿದ್ದೇವೆ ಎಂಬುದು ನಿಮಗೆ ತಿಳಿದಿಲ್ಲ. ಸಮೀಪದಲ್ಲಿ ಏನು ಆಗುತ್ತಿದೆ ಎಂಬ ಕಾರಣಕ್ಕಾಗಿ ನಮ್ಮ ಮೇಲೆ ಎಷ್ಟು ಪೀಡನೆ ಹಾಕಲಾಗಿದೆ ಎಂಬುದು ನಿಮಗೆ ತಿಳಿದಿಲ್ಲ. ತಿದ್ದುಪಡಿಯ ಮಂಡನೆಕಾರರು ನನ್ನ ಗೆಳೆಯರು, ಮುಸ್ಲಿಮ್ ಸಮುದಾಯ ಇಂದು ಬಲವಾದ ಒಂದುಗೂಡಿದ ಸಮುದಾಯ ಎಂದು ಹೇಳುತ್ತಾರೆ. ಒಳ್ಳೆಯದು; ಅದನ್ನು ಕೇಳಲು ನನಗೆ ಸಂತೋಷವಾಗಿದೆ. ಆದುದರಿಂದ ನಾನು ನೀವು ಯಾವುದೇ ಆಸರೆಗಳನ್ನು ಕೇಳಲು ನಿಮಗೆ ಹಕ್ಕಿಲ್ಲ

(ಹರ್ಷೋದ್ಗಾರ). ಚೆನ್ನಾಗಿ ವ್ಯವಸ್ಥಿತವಾಗಿರದ ಮತ್ತು ವಿಶೇಷ ಲಕ್ಷ್ಯ ಹಾಗೂ ರಕ್ಷಣೆಗಳಿಗೆ ಅರ್ಹರಾಗಿರುವ ಇತರ ಅಲ್ಪಸಂಖ್ಯಾತರು ಇರುವುದರಿಂದ ನಾವು ಅವರಿಗೆ ಉದಾರಿಗಳಾಗಿರಲು ಬಯಸಿದ್ದೇವೆ. ಆದರೆ ಅದೇ ಕಾಲಕ್ಕೆ, ನೀವು ಬಹುಕಾಲ ಇದನ್ನು ಸಾಕಷ್ಟು ಅನುಭೋಗಿಸಿರುವುದರಿಂದ ಮತ್ತು ತಾರತಮ್ಯವಿದೆ ಎಂದು ನೀವು ಭಾವಿಸಿಲ್ಲವಾದ ಕಾರಣ, ನಾವು ಜನಸಂಖ್ಯೆ ಆಧಾರದ ಮೇರೆಗೆ ಅನುಗುಣವಾಗಿ ಮೀಸಲಾತಿಗೆ ಒಪ್ಪುತ್ತೇವೆ. ವಿಶ್ವದಲ್ಲಿನ ಇನ್ನಾವ ಇತರ ಸ್ವತಂತ್ರ ದೇಶದಲ್ಲಿ ಈ ವಿಧದ ಮೀಸಲಾತಿ ಇದೆ? ತಾವು ನನಗೆ ತೋರಿಸುವಿರಾ? ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನೀವು ಒಂದು ಸುವ್ಯವಸ್ಥಿತ ಸಮುದಾಯ. ಹೇಳಿ, ನೀವೇಕೆ ಒಬ್ಬ ಅತೃಪ್ತಿಕರ ಮನುಷ್ಯನಂತೆ ವರ್ತಿಸುತ್ತೀರಿ? ನೀವು ಚೆನ್ನಾಗಿ ವ್ಯವಸ್ಥಿತರಿರುವಲ್ಲಿ ಒಬ್ಬ ಧೈರ್ಯಶಾಲಿ ಮತ್ತು ಬಲಿಷ್ಠ ಮನುಷ್ಯನಾಗಿ ಎದ್ದು ನಿಲ್ಲಿ. ಈ ಪಕ್ಕ ನಿರ್ಮಾಣವಾಗುತ್ತಿರುವ ರಾಷ್ಟ್ರದ ಬಗ್ಗೆ ಆಲೋಚಿಸಿ. ಚೌಧುರಿ ಖಲಿಖಜ್ಜುಮಾನ್ ಹೇಳುತ್ತಾರೆ– "ನಾವು ಒಂದು ರಾಷ್ಟ್ರದ ಅಸ್ತಿವಾರ ಹಾಕಿದ್ದೇವೆ. ಈಗಿನಿಂದ ಹೊಸ ಸಂವಿಧಾನದ ಅಡಿಯಲ್ಲಿ ಬ್ರಿಟಿಷ್ ಆಡಳಿತಗಾರ ಇರಲಾರ, ಆತ ಹೋದಂತೆ. ಶಂಕಿತರನ್ನು ಮರೆಯಿರಿ." ಬ್ರಿಟಿಷ್ ಜನರ ಗುಂಪು ಹೋಗಿದೆ. ಆದರೆ ಅವರು ಕಿಡಿಗೇಡಿತನ ಇಲ್ಲಿ ಬಿಟ್ಟು ಹೋಗಿದ್ದಾರೆ. ನಾವು ಆ ಕಿಡಿಗೇಡಿತನ ಅಮರಗೊಳಿಸಲು ಇಚ್ಛಿಸುವುದಿಲ್ಲ. ಬ್ರಿಟಿಷರು ಈ ಕಿಡಿಗೇಡಿತನ (ಘೋಷಾನುಮೋದನೆ) ಕಿಡಿಹೊತ್ತಿಸಿ ತಾವು ಇಷ್ಟು ಬೇಗ ತೊಲಗುವುದನ್ನು ಎಂದು ನಿರೀಕ್ಷಿಸಿರಲಿಲ್ಲ. ಅವರು ಅದನ್ನು ತಮ್ಮ ಆಡಳಿತದ ಸೌಲಭ್ಯಕ್ಕೆ ಬಯಸಿದ್ದರು. ಅದು ಸರಿ ಆದರೆ ಅವರು ಇಲ್ಲೆ ಪರಂಪರೆಯನ್ನು ಬಿಟ್ಟರು. ನಾವು ಅದರಿಂದ ಹೊರಬರಬೇಕೆ ಬೇಡವೆ? ಆದುದರಿಂದ ನಿಮ್ಮಲ್ಲಿ ಮನವಿ ಮಾಡುತ್ತೇನೆ. "ನೀವು ಏನು ಮಾಡುತ್ತಿದ್ದೀರಿ?'' ಎಂದು. ಅದನ್ನು ಆಲೋಚಿಸಿ–ಈ ದೇಶದಲ್ಲಿ ಮುಸ್ಲಿಮ್ ಲೀಗ್‌ನ ಹೊರಗೆ ಯಾರಾದರೊಬ್ಬರು "ಈಗ ಕೂಡ ನಾವು ಪ್ರತ್ಯೇಕ ಮತದಾರರ ಸಮುದಾಯಗಳಿಗೆ ಒಪ್ಪಿಕೊಳ್ಳೋಣ" ಎಂದು ಹೇಳುವರನ್ನು ನಿರೀಕ್ಷಿಸುವಿರಾ? ಹೀಗೇಕೆ ಮಾಡುತ್ತೀರಿ? ಈ ರಾಷ್ಟ್ರಕ್ಕೆ "ಈಗ ನಾವು ಸ್ವಾಮಿನಿಷ್ಠೆ ಹೊಂದಲು ಬಯಸುತ್ತೇವೆ" ಎಂದು ನೀವು ಹೇಳಿದರೆ, "ಇದೇ ಸ್ವಾಮಿನಿಷ್ಠೆಯೇ?" ಎಂದು ನಾನು ಕೇಳಲೇ. ಇನ್ನೊಂದು ಪಕ್ಕದಿಂದ ನೀವು ಸ್ವಾಮಿನಿಷ್ಠೆಯ ಸ್ಪಂದನವನ್ನು ಕೆರಳಿಸುತ್ತಿದ್ದೀರಾ? ಈ ಕುರಿತು ನಾನು ಮಾತನಾಡುವ ಉದ್ದೇಶವಿಲ್ಲ. ಆದರೆ ಈ ತಿದ್ದುಪಡಿಯ ಮಂಡನೆ ಮಾಡಿದವರು ಸುದೀರ್ಘಕಾಲ ಮಾತನಾಡಿ ತಮ್ಮ ನಾಯಕನಿಂದ ಅದು ಬೆಂಬಲ ಪಡೆದಾಗ, ನಾನು ಈ ನೆಲದಲ್ಲಿ ಪುನಃ ಇನ್ನೂ ಏನೋ ತಪ್ಪು ಇದೆ ಎಂದು ಯೋಚಿಸಿದೆ. ಆದುದರಿಂದ ನನ್ನ ಪ್ರೀತಿಯ ಗೆಳೆಯರೆ, "ಈ ನೆಲದಲ್ಲಿ ನೀವು ಶಾಂತಿಯನ್ನು ಈಗ ಬಯಸುತ್ತೀರಾ ಎಂದು ಕೇಳುತ್ತೇನೆ. ಹಾಗಿದ್ದರೆ ಅದನ್ನು ತೆಗೆದುಹಾಕಿ. ನೀವು ಪಾಕಿಸ್ತಾನಕ್ಕಾಗಲಿ ಅಥವಾ ಭಾರತಕ್ಕಾಗಿ ಅಥವಾ ಇನ್ನಾವುದಕ್ಕೊ ಹಾನಿ ಮಾಡುವುದಿಲ್ಲ, ಆದರೆ ಮಾತ್ರ ನಮ್ಮ ಸಮೀಪದಲ್ಲಿ ಏನಾಗುತ್ತಿದೆ ಅದನ್ನು ಇಡೀ ದೇಶಾದ್ಯಂತ ಪ್ರಸರಿಸುತ್ತೀರಿ. ಅದನ್ನ ಮಾಡುವ ಬಯಕೆಯಾದರೆ, ಆಗಬಹುದು." ಆದರೆ ನಾನು ನಿಮ್ಮಲ್ಲಿ "ಈ ಭಾಗದಲ್ಲಿ ಕಡೇಪಕ್ಷ ಎಲ್ಲವನ್ನೂ ಮರೆತಿದ್ದೇವೆ ಎಂದು ತೋರಿಸಿ" ಎಂದು ಮನವಿ ಮಾಡುತ್ತಿದ್ದೇನೆ ಮತ್ತು ನಾವು ಮರೆಯುವುದೇ ಆದರೆ ಹಿಂದೆ ಏನೆಲ್ಲ ಮಾಡಿಯಾಗಿದೆಯೊ ಅದನ್ನು ಮತ್ತು ಇಂದು ಏನೆಲ್ಲ ಆಗುತ್ತಿದೆಯೋ ಅದಕ್ಕೆ ಯಾರು ಹೊಣೆಯೋ ಅದು ಕೂಡ ಮರೆಯೋಣ. ಆದುದರಿಂದ ನಾನು ಮತ್ತೊಮ್ಮೆ ತಮ್ಮಲ್ಲಿ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಿ ಮತ್ತು ಹೊರಗಿನ ವಿಶ್ವ ನಾವೆಲ್ಲ ಒಂದಾಗಿದ್ದೇವೆ ಎಂದು ತಿಳಿಯುವಂತಾಗಲಿ ಎಂದು "ಸರ್ವಾನುಮತದಿಂದ ಇದನ್ನು ಮೂಲ (ಪ್ರಸ್ತಾವವನ್ನು) ಅಂಗೀಕರಿಸೋಣ" ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ (ಹರ್ಷೋದ್ಗಾರ)

**ಗೌರವಾನ್ವಿತ ಸದಸ್ಯರು :** ಹಿಂತೆಗೆದುಕೊಳ್ಳಿ!

**ಮಾನ್ಯ ಸಭಾಧ್ಯಕ್ಷರು :** ನಾನೀಗ ತಿದ್ದುಪಡಿಯನ್ನು ಮೊದಲು ಮತಕ್ಕೆ ಹಾಕುತ್ತೇನೆ. ತಿದ್ದುಪಡಿ ಈ ರೀತಿ ಇದೆ:

"ಅಲ್ಪಸಂಖ್ಯಾತರು, ಮೂಲಭೂತ ಹಕ್ಕುಗಳು ಇತ್ಯಾದಿ ಮೇಲಿನ ಸಲಹಾ ಸಮಿತಿಯ ವರದಿ ಪರಿಗಣನೆ ಮಾಡುವಲ್ಲಿ ಅಲ್ಪಸಂಖ್ಯಾತರ ಹಕ್ಕುಗಳು ಕುರಿತಂತೆ, ಈ ಸಂವಿಧಾನ ರಚನಾಸಭೆಯು ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಎಲ್ಲ ಚುನಾವಣೆಗಳನ್ನು ಮುಸ್ಲಿಮರಿಗೆ ಸಂಬಂಧಿಸಿದಂತೆ, ಪ್ರತ್ಯೇಕ ಮತದಾರರಿಗೆ ಸಮುದಾಯ ಆಧಾರದ ಮೇಲೆ ನಡೆಸತಕ್ಕದ್ದು ಎಂದು ನಿರ್ಧರಿಸಿದೆ."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ನಾನು ಮೂಲ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಅದು ಹೀಗಿದೆ:

"ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಎಲ್ಲ ಚುನಾವಣೆಗಳನ್ನು ಜಂಟಿ ಮತದಾರರ ಸಮುದಾಯ ಆಧಾರದ ಮೇಲೆ ನಡೆಸಲಾಗುತ್ತದೆ."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಅನಂತರ ಸದನವನ್ನು ಅಪರಾಹ್ನ ೩ ಗಂಟೆಗೆ ಮುಂದೂಡಲಾಯಿತು.

ಭಾರತದ ಸಂವಿಧಾನ ರಚನಾಸಭೆಯು ಭೋಜನಾನಂತರ ಅಪರಾಹ್ನ ೩ ಗಂಟೆಗೆ ಪುನಃ ಸೇರಿತು. ಸಭಾಧ್ಯಕ್ಷರು (ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್) ಅಧ್ಯಕ್ಷತೆ ವಹಿಸಿದರು.

**ಮಾನ್ಯ ಸಭಾಧ್ಯಕ್ಷರು** : ನಾವು ವಿಷಯಗಳ ಬಗ್ಗೆ ಮತ್ತಷ್ಟು ಚರ್ಚೆ ಮುಂದುವರಿಸೋಣ, ಸರ್ದಾರ್ ಪಟೇಲ್.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ಮೊದಲನೆಯ ವಿಷಯಕ್ಕೆ ನಿಬಂಧನೆ ಮಂಡಿಸುತ್ತೇನೆ.

"ಒಂದು ಸಾಮಾನ್ಯ ನಿಯಮವಾಗಿ ಒದಗಿಸಿದಂತೆ, ಅವರ ಜನಸಂಖ್ಯೆ ಆಧರಿಸಿ ವಿವಿಧ ಶಾಸನಸಭೆಗಳ ಅನುಸೂಚಿಯಲ್ಲಿ ತೋರಿಸಿದ ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ ಇರತಕ್ಕದ್ದು:

ಆದರೆ ಅಂತಹ ಮೀಸಲಾತಿಯು ೧೦ ವರ್ಷಗಳು ಇರತಕ್ಕದ್ದು. ಅವಧಿಯ ಕೊನೆಯಲ್ಲಿ ಸ್ಥಿತಿಯ ಪುನಃ ಪರಿಶೀಲನೆ ಮಾಡಬೇಕು"

ನಾನು ಇದನ್ನು ಸದನದ ಅನುಮೋದನೆಗೆ ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಕೆಲವು ತಿದ್ದುಪಡಿಗಳಿವೆ. ಮೊದಲನೆಯದು ಪಂಡಿತ್ ಠಾಕೂರ್ ದಾಸ್ ಭಾರ್ಗವರಿಂದ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ): ತಮ್ಮ ಅನುಮತಿಯೊಂದಿಗೆ, ಮಾನ್ಯರೆ, ನಾನು ಪಟ್ಟಿ ೧ರಲ್ಲಿನ ನನ್ನ ತಿದ್ದುಪಡಿ ಸಂಖ್ಯೆ ೧೯ನ್ನು ಮಂಡಿಸಲು ಪ್ರಸ್ತಾಪಿಸುತ್ತೇನೆ, ೧೮ ಅಲ್ಲ.

"ಮೊದಲ ನಿಬಂಧನೆಯಲ್ಲಿ ಕಂಡಿಕೆ ೧ಕ್ಕೆ 'ಸ್ಥಾನಗಳು' ಎಂಬ ಶಬ್ದಕ್ಕೆ ಬದಲಾಗಿ 'ಪ್ರಾತಿನಿಧ್ಯ' ಎಂಬ ಶಬ್ದವನ್ನು ಪ್ರತಿಯೋಜಿಸಬೇಕು."

ನಾನು ಈ ತಿದ್ದುಪಡಿಯನ್ನು ಪ್ರಸ್ತಾವಿಸಲು ಕಾರಣ, ಶ್ರೀ ಮುನ್ಷಿಯವರು ಮತ್ತೊಂದು ತಿದ್ದುಪಡಿಯನ್ನು ಪ್ರಸ್ತಾವಿಸಲು ಇದು ಒದಗುತ್ತದೆ. ಪ್ರಸ್ತುತ ಸನ್ನಿವೇಶಗಳಲ್ಲಿ ನನ್ನ ತಿದ್ದುಪಡಿಗೆ ಬೆಂಬಲ್ಲ ಸೂಚ್ಚಿಸಲು ಮತ್ತೇನನ್ನೂ ಆಡಲು ಇಚ್ಛಿಸುವುದಿಲ್ಲ.

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಕೆಳಗಿನ ತಿದ್ದುಪಡಿಯನ್ನು ಪಂಡಿತ ಭಾರ್ಗವ ಅವರ ತಿದ್ದುಪಡಿಗೆ ಮಂಡಿಸುತ್ತೇನೆ.

"೧೯೪೭ರ ಆಗಸ್ಟ್ ೨೫ ದಿನಾಂಕ ಪಟ್ಟಿ ೧ರಲ್ಲಿ ತಿದ್ದುಪಡಿ ಸಂಖ್ಯೆ ೧೯ರಲ್ಲಿ 'ಸ್ಥಾನ' ಎಂಬ ಶಬ್ದಕ್ಕೆ 'ಪ್ರಾತಿನಿಧ್ಯ' ಎಂಬ ಶಬ್ದ ಪ್ರತಿಯೋಜಿಸಬೇಕು, ಮತ್ತು

'ಅನುಸೂಚಿ' ಶಬ್ದದ ಅನಂತರ 'ಮತ್ತು ಕಂಡಿಗೆ ೧ಎ ನಲ್ಲಿ ಇದರ ಬಗ್ಗೆ ಉಲ್ಲೇಖಿಸಿದ 'ಹಿಂದೂ ಸಮುದಾಯದ ಪಂಗಡ' ಎಂದು ಒಳಸೇರಿಸಬೇಕು.

ನಿಬಂಧನೆಯ ಪದಗಳು ಇವು:

"ಒಂದು ಸಾಮಾನ್ಯ ನಿಯಮವಾಗಿ ಒದಗಿಸಿದಂತೆ ಅನುಸೂಚಿಯಲ್ಲಿ ತೋರಿಸಿದ ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ ಇರತಕ್ಕದ್ದು"

ಮತ್ತು ನನ್ನ ತಿದ್ದುಪಡಿ ಅಳವಡಿಸಿದ್ದರೆ ಅದು ಕೆಳಗಿನಂತೆ ಇರುತ್ತದೆ :

"ಅನುಸೂಚಿಯಲ್ಲಿ ತೋರಿಸಿರುವ ಅಲ್ಪಸಂಖ್ಯಾತರಿಗೆ ಮತ್ತು ಇದರ ಬಗ್ಗೆ ವಾಕ್ಯವೃಂದ ೧ಎ ನಲ್ಲಿ ಉಲ್ಲೇಖವಿರುವ ಹಿಂದೂ ಸಮುದಾಯದ ಪಂಗಡಕ್ಕೆ ಸ್ಥಾನಗಳ ಮೀಸಲಾತಿ."

ನಾನು ಸಂಖ್ಯೆ ೮೫೮ಕ್ಕೆ ಒಂದು ತಿದ್ದುಪಡಿಯನ್ನು ಕೂಡಾ ಮಂಡಿಸಿದ್ದೇನೆ. ಹಾಗಾಗಿ ಅನುಸೂಚಿತ ಜಾತಿಗಳು ವಿಷಯವನ್ನು ಪ್ರತ್ಯೇಕ ಕಂಡಿಕೆ ಸಂಖ್ಯೆ ೧-ಎಗೆ ತೆಗೆಯಲಾಗಿದೆ ಮತ್ತು ಅನುಸೂಚಿಯಲ್ಲಿ ಸೇರಿಸಿಲ್ಲ.

ತಿದ್ದುಪಡಿಯ ಉದ್ದೇಶ ಅನುಸೂಚಿತ ಜಾತಿಗಳು ಎನ್ನಲಾಗ್ಗದ ಸ್ಥಿತಿಯ ಸ್ಪಷ್ಟನೆ ನೀಡುವುದೆ ಆಗಿದೆ ಅಂತಾರಾಷ್ಟ್ರೀಯ ಒಪ್ಪಂದಗಳು ಮತ್ತು ಅಂತಾರಾಷ್ಟ್ರೀಯ ಕಾನೂನಿಗೆ ಸಂಬಂಧಿಸಿದಂತೆ 'ಅಲ್ಪಸಂಖ್ಯಾತರು' ಶಬ್ದವನ್ನು ಜನಾಂಗೀಯ ಭಾಷಾವಾರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೀಮಿತಗೊಳಿಸಲಾಗಿದೆ. ಸಾಮಾನ್ಯವಾಗಿ ಅನುಸೂಚಿತ ಜಾತಿಗಳು ಎಂದು ತಿಳಿಯಲಾದ ಹರಿಜನರು ಇತ್ತ ಜನಾಂಗದ ಅಲ್ಪಸಂಖ್ಯಾತರಲ್ಲ ಅತ್ತ ಭಾಷಾವಾರು ಅಲ್ಪಸಂಖ್ಯಾತರಲ್ಲ. ಖಂಡಿತವಾಗಿ ಒಂದು ಧಾರ್ಮಿಕ ಅಲ್ಪಸಂಖ್ಯಾತವಲ್ಲ. ಆದುದರಿಂದ ನಿಖರ ಶಬ್ದ ಹಿತಾಸಕ್ತಿಯಲ್ಲಿ ಪ್ರಯೋಗದ ದೃಷ್ಟಿಯಿಂದ ಈ ತಿದ್ದುಪಡಿ ಆವಶ್ಯಕ ಎಂದು ಕಂಡುಬಂದಿತು. ಅದು ಕೇವಲ, ಸದನದ ಸದಸ್ಯರು ನೆನಪು ಮಾಡಿಕೊಳ್ಳುವಂತೆ, ಭಾರತ ಸರ್ಕಾರದ ಅಧಿನಿಯಮವನ್ನು ಮಂಡಿಸಿದಾಗ, ರಾಜ್ಯಪಾಲರು ಅಲ್ಪಸಂಖ್ಯಾತರು ಎಂದು ಪರಿಗಣಿಸಲು ಯೋಗ್ಯ ಎಂದು ಆಲೋಚಿಸಿದ ಪ್ರತಿಯೊಬ್ಬ ಅಲ್ಪಸಂಖ್ಯಾತನನ್ನು ಸೇರಿಸುವಂತೆ ಆ ಪದದ ವ್ಯಾಖ್ಯೆಯನ್ನು ಸಾಮ್ಯುಯೆಲ್ ಹೋರ್ ವಿಸ್ತರಿಸಿದ್ದಾಗಿದೆ. ಇದು ಶಬ್ದದ ಅತಿ ಕುಚೋದ್ಯದ ವಿಸ್ತರಣೆ ಮತ್ತು ನನ್ನ ತಿದ್ದುಪಡಿಯು, ಈ ಸ್ಥಿತಿಯನ್ನು ಸ್ಪಷ್ಟಪಡಿಸಲು ನೋಡುತ್ತದೆ ಅದೆಂದರೆ ಅನುಸೂಚಿತ ಜಾತಿಗಳಿಗೆ ಸಂಬಂಧಿಸಿದಂತೆ, ಶಬ್ದದ ಕಟ್ಟುನಿಟ್ಟಾದ ಅರ್ಥದಲ್ಲಿ ಅವರು ಅಲ್ಪಸಂಖ್ಯಾತರಲ್ಲ; ಹರಿಜನರು ಹಿಂದೂ ಸಮುದಾಯದ ಭಾಗವೇ ಆಗಿರುವರು, ಮತ್ತು ಅವರು ಹಿಂದೂ ಸಮುದಾಯದಲ್ಲಿ ಸಂಪೂರ್ಣವಾಗಿ ವಿಲೀನವಾಗುವವರೆಗೆ ಮಾತ್ರ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಅವರಿಗೆ ರಕ್ಷಣೆಗಳನ್ನು ಕೊಡಲಾಗಿದೆ,

ಇನ್ನೊಂದು ಕಾರಣ, ಬಹುಶಃ ನಾನು ನಮೂದಿಸಬಹುದು. ಅದು ಈ ಸದನ ಈಗಾಗಲೇ ತೆಗೆದುಕೊಂಡ ನಿರ್ಧಾರಗಳನ್ನಾಧರಿಸಿದೆ. ಅನುಸೂಚಿತ ಜಾತಿಗಳನ್ನು ಹೊರತುಪಡಿಸಿದ ಹಿಂದೂ ಸಮುದಾಯ ಮತ್ತು ಅನುಸೂಚಿತ ಜಾತಿಗಳ ನಡುವಣ ವ್ಯತ್ಯಾಸವೆಂದರೆ ಅಸ್ಪೃಶ್ಯತೆಯ ಪ್ರತಿಬಂಧ. ಈಗ ನಾವು ಒಪ್ಪಿರುವ ಮೂಲಭೂತ ಹಕ್ಕುಗಳಿಂದ ಅಸ್ಪೃಶ್ಯತೆಯನ್ನು ಕಾನೂನುಬದ್ಧವಾಗಿ ನಿಷೇಧಿಸಲಾಗಿದೆ ಮತ್ತು ಒಕ್ಕೂಟದ ಕಾನೂನಿನಡಿ ಅದರ ರೂಢಿ ಒಂದು ಅಕ್ಷಮ್ಯ ಅಪರಾಧ, ನಾವು ಮೂಲಭೂತ ಹಕ್ಕುಗಳಲ್ಲಿ ಯಾರೊಬ್ಬರ ಹುಟ್ಟಿನ ಕಾರಣದಿಂದ ಯಾರೊಬ್ಬರಿಗೂ ಯಾವ ಸಾರ್ವಜನಿಕ ಸ್ಥಳದ ಪ್ರವೇಶವನ್ನು ನಿಷೇಧಿಸಕೂಡದು ಎಂದೂ ಕೂಡ ಸ್ವೀಕರಿಸಿದ್ದೇವೆ. ಒಕ್ಕೂಟಕ್ಕೆ ಸಂಬಂಧಿಸಿದಂತೆ ನಾವು ಹಿಂದೂ ಸಮುದಾಯದ ಒಂದು ಭಾಗ ಮತ್ತು ಇನ್ನೊಂದರ ನಡುವೆ ಕೃತಕ ಪ್ರತಿಬಂಧವನ್ನು ತೆಗೆದುಹಾಕಿದ್ದೇವೆ.

ಆ ನಿಜಾಂಶಗಳ ದೃಷ್ಟಿಯಿಂದ, ಅನುಸೂಚಿತ ಜಾತಿಗಳಿಗೆ ಸಂಬಂಧಿಸಿದಂತೆ ಒಬ್ಬ ಅಲ್ಪಸಂಖ್ಯಾತನಾಗಿ ಯಾವುದೇ ರಕ್ಷಣೆ ತರ್ಕಸಮ್ಮತವಲ್ಲ ಮತ್ತು ಹಿಂದೂ ಸಮುದಾಯದಲ್ಲಿ ಅವರ ಸಂಪೂರ್ಣ ವಿಲೀನವನ್ನು ತಡೆಯುವ ಸಾಧ್ಯತೆ ಇದೆ. ಆದುದರಿಂದ ನಾನು, ನಾನು ಮಂಡಿಸುತ್ತಿರುವ ತಿದ್ದುಪಡಿಯು ಸ್ಪಷ್ಟವಾಗಿ ಸ್ಥಿತಿಯನ್ನು ವಿವರಿಸುತ್ತದೆ ಎಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಚ್.ಜೆ. ಖಾಂಡೇಕರ್** (ಸಿ.ಪಿ ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿಯು ಅತಿ ಸರಳ. ಅದು

"ಅನುಬಂಧ ೫ರಲ್ಲಿ ಕಂಡಿಕೆ ೩(ಸಿ) ಕೊನೆಯಲ್ಲಿ ಮತ್ತು ಕಂಡಿಕೆ (೧೫)ರಲ್ಲಿ ಕಂಡಿಕೆ ೧ಕ್ಕೆ ನಿಬಂಧನೆಯಲ್ಲಿ ಎಲ್ಲೆಲ್ಲಿ, 'ಜನಸಂಖ್ಯೆ' ಎಂಬ ಶಬ್ದ ಕಂಡುಬಂದಿದೆಯೋ ಅಲ್ಲಿ ಶಬ್ದದ ನಂತರ ಕೆಳಗಿನ ಶಬ್ದಗಳನ್ನು ಸೇರಿಸಬೇಕು: '೧೯೩೧ರ ಜನಗಣತಿಗನುಣವಾಗಿ ಅನುಸೂಚಿತ ಜಾತಿಗಳ ವಿಷಯದಲ್ಲಿ.'"

ಈ ತಿದ್ದುಪಡಿಯನ್ನು ಮಂಡಿಸಲು ನನ್ನ ವಿಶೇಷ ಕಾರಣವನ್ನು ಸದನಕ್ಕೆ ಹೇಳಲು ಬಯಸುತ್ತೇನೆ. ಭಾರತದ ಜನಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ನಾವು ೧೯೧೧ರ ಜನಗಣತಿ ಮತ್ತು ೧೯೪೧ರ ಜನಗಣತಿಯ ನಡುವಣ ಅವಧಿಯನ್ನು ಪರಾಮರ್ಶಿಸಿದರೆ, ಭಾರತದ ಜನಸಂಖ್ಯೆ ೪೦ ಕೋಟಿಯಷ್ಟಕ್ಕೆ ತಲಪಿದೆ ಎಂದು ತಿಳಿದುಬರುತ್ತದೆ. ನಿಮ್ಮ ಮುಂದೆ ನಿಮಗೆಲ್ಲ ತಿಳಿದ ಒಂದು ಅಂಶ ಮಂಡಿಸಲು ಬಯಸುತ್ತೇನೆ, ಅದೆಂದರೆ ಉನ್ನತ ಅಂತಸ್ತಿಗೆ ಯಾವ ವಿಧದಲ್ಲೂ ಹಿಂದೆ ಬೀಳದೆ ಕೆಳಅಂತಸ್ತಿಗೆ ಸೇರಿದವರಾಗಿ ತಮ್ಮ ಸಂಖ್ಯೆಯನ್ನು ಅನುಸೂಚಿತ ಜಾತಿಯವರು ಹೆಚ್ಚಿಸಿಕೊಂಡಿದ್ದಾರೆ. ಒಬ್ಬ ಮೇಲ್ಜಾತಿ ಹಿಂದೂಗೆ ಒಂದು ಮಗುವಾದರೆ ಅನುಸೂಚಿತ ಜಾತಿ ಹಿಂದೂವಿಗೆ ನಾಲ್ಕು ಮಕ್ಕಳಾಗುತ್ತವೆ. ಆದರೆ ೧೯೩೧ರಿಂದ ಹರಿಜನರ ಜನಸಂಖ್ಯೆ ಇಳಿಮುಖವಾಗುತ್ತಿದೆ ಎಂಬುದು ತುಂಬ ದುಃಖಕರ ಮತ್ತು ಅಚ್ಚರಿ ಮೂಡಿಸಿದೆ. ಇದು ಏಕೆ ಹೀಗೆ ಎಂದು ನಾನರಿಯೆ, ಕಾರಣಕ್ಕಾಗಿ ನಾವು ಹುಡುಕಿದಾಗ ೧೯೪೧ರ ಜನಗಣತಿಯಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ನಮ್ಮ ಮುಸ್ಲಿಮ್ ಸೋದರರು ಅನುಸೂಚಿತ ಜಾತಿಗಳವರನ್ನು ಮುಸ್ಲಿಮ್‌ಗಳಾಗಿಯೂ ಒಂದೆಡೆ ನೋಂದಾಯಿಸಿದರೆ ಇನ್ನೊಂದೆಡೆ ಜಾತಿ ಹಿಂದೂಗಳು ಅವರನ್ನು ಹಿಂದೂಗಳೆಂದು ನೋಂದಾಯಿಸಿದ್ದು ತಿಳಿದುಬಂದಿತು. ೧೯೩೧ರ ಜನಗಣತಿಯಿಂದ ನಮ್ಮ ಜನಸಂಖ್ಯೆ ನಿರಂತರವಾಗಿ ಇಳಿಮುಖವಾಗುತ್ತಿರುವುದಕ್ಕೆ ಇದು ಕಾರಣ. ೧೯೪೧ರಲ್ಲಿ ಜನಗಣತಿಯಲ್ಲಿ ಅನುಸೂಚಿತ ಜಾತಿಗಳ ಸಂಖ್ಯೆ ೧೯೩೧ರ ಜನಗಣತಿಯಲ್ಲಿಗಿಂತ ೨ ಕೋಟಿಗಳಷ್ಟು ಕಡಿಮೆ ಇದೆ. ಆದುದರಿಂದ ತಮ್ಮ ಮುಂದೆ ನಾನು ಈ ತಿದ್ದುಪಡಿ ಇಡಲೇಬೇಕಿದೆ. ಏಕೆಂದರೆ, ಅಲ್ಪಸಂಖ್ಯಾತರು ಅವರ ಸಂಖ್ಯಾಬಲಕ್ಕನುಗುಣವಾಗಿ ಪ್ರಾಂತೀಯ ಮತ್ತು ಕೇಂದ್ರ ಶಾಸನಸಭೆಗಳಲ್ಲಿ ತಮ್ಮ ಹಕ್ಕುಗಳನ್ನು ಪಡೆದುಕೊಂಡರೆ ಆಗ ನಮ್ಮ ಪ್ರಾತಿನಿಧ್ಯ ತುಂಬ ಕಡಮೆ ಇರುತ್ತದೆ. ಕಾರಣ, ೧೯೩೧ರ ಜನಗಣತಿಗನುಗುಣವಾಗಿ ನಾವು ಕಡಿಮೆ. ೧೯೪೧ರದ್ದು ತೆಗೆದುಕೊಂಡಾಗ ಸಮರ ಆರಂಭವಾಗಿತ್ತು ಮತ್ತು ಬಹುಶಃ ಜನಗಣತಿಯನ್ನು ಸರಿಯಾಗಿ, ವಿಶೇಷವಾಗಿ ಅನುಸೂಚಿತ ಜಾತಿಗಳದ್ದು ಸರಿಯಾಗಿ ತೆಗೆದುಕೊಂಡಿಲ್ಲದಿರುವುದು ಸಾಧ್ಯ. ಜಾತಿ ಹಿಂದೂಗಳು ಅನುಸೂಚಿತ ಜಾತಿಗಳನ್ನು ಹಿಂದೂಗಳಾಗಿ ಮತ್ತು ಮುಸ್ಲಿಮರು ಅವರನ್ನು ಮುಸ್ಲಿಮರಾಗಿ ನೋಂದಾಯಿಸಿದರು. ಆದುದರಿಂದ ನಾನು ೧೯೪೧ರ ಜನಗಣತಿ ಸಂಪೂರ್ಣ ತಪ್ಪು ಎಂದು ಸಂಶಯಿಸುತ್ತೇನೆ. ನಾನು ಮಾತ್ರವಲ್ಲ, ಇದೇ ಹರಿಜನ ಸಮುದಾಯ ದೇಶಾದ್ಯಂತ ೧೯೪೧ರ ಜನಗಣತಿಯಲ್ಲಿ ತೋರಿಸಿದಂತೆ ನಮ್ಮ ಸಂಖ್ಯೆ ತಪ್ಪಿದೆ ಮತ್ತು ನಮ್ಮ ಪ್ರಾತಿನಿಧ್ಯ ಆ ಅಂಕಿ ಆಧರಿಸಿ ಇರಬಾರದು ಎಂದು ಘೋಷಿಸಿದೆ. ಈಗ ಬೇರೆ ದಾರಿ ಇಲ್ಲ, ಮಾಡಬೇಕಾದುದೆಂದರೆ ಈ ನಿರ್ಣಯದ ಮಂಡನೆಕಾರರು ಪುನಃ ಜನಗಣತಿ ಮಾಡಲಾಗುತ್ತದೆ ಎಂಬ ಭರವಸೆ ಕೊಡಲಿ. ಆಗ ನಾನು ನನ್ನ ತಿದ್ದುಪಡಿಯನ್ನು ಹಿಂದೆ ತೆಗೆದುಕೊಳ್ಳಲು ತಯಾರಿರುತ್ತೇನೆ. ಜನಗಣತಿಯನ್ನು ಚೊಕ್ಕವಾಗಿ ತೆಗೆದುಕೊಂಡಿದ್ದಲ್ಲಿ ನಮ್ಮ ಸಂಖ್ಯಾಬಲ ಹೆಚ್ಚು ಇರುತ್ತಿತ್ತು. ಆದರೆ ೧೯೪೧ರ ಜನಗಣತಿ ಕುರಿತಂತೆ ನಾನು ಅದು ನಮಗೆ ಸಂಬಂಧಿಸಿದ ಹಾಗೆ ಸರಿಯಾದ ಜನಗಣತಿಯಲ್ಲ ಎಂದು ಅನುಮಾನಿಸುತ್ತೇನೆ. ಈ ನಿಲುವಿನ ದೃಷ್ಟಿಯಿಂದ ನಾನು ತಿದ್ದುಪಡಿಯನ್ನು ತಮ್ಮ ಮುಂದಿಡುತ್ತೇನೆ. ಈ ಸದನದ ಪ್ರತಿಯೊಬ್ಬ ಸದಸ್ಯರು ಅನುಸೂಚಿ ಜಾತಿಗಳ ಬಗ್ಗೆ ಭಾರಿ ಕನಿಕರ ಹೊಂದಿರುವವರೆಂದು ನಾನು ಬಲ್ಲೆ. ನಾನು ಹಲವು ಭಾಷಣಗಳನ್ನು ಕೇಳಿದ್ದೇನೆ. ಹಲವು ನಾಯಕರು ನಮ್ಮ ಮೇಲೆ ಕನಿಕರ ಉಳ್ಳವರು.

ಆದರೆ ಅದು ಮಾತಿನ ಮೂಲಕವಾದರೆ ಏನೂ ಉಪಯೋಗವಿಲ್ಲ. ಜನ ನಾವು ಹಿಂದೂ ಸಮುದಾಯದ ಒಂದು ಭಾಗ ಎಂದು ಹೇಳುತ್ತಾರೆ. ನಾನೂ ಎತ್ತಿಹಿಡಿಯುತ್ತೇನೆ. ತಾವು ನನ್ನ ಈ ತಿದ್ದುಪಡಿಯನ್ನು ವಿರೋಧಿಸಿದರೆ, ೧೯೪೧ರ ಜನಗಣತಿಗನುಗುಣವಾಗಿ ನಾವು ಪಡೆಯುತ್ತಿರುವುದಕ್ಕಿಂತ ಹೆಚ್ಚಿಗೆ ಏನೂ ನೀವು ಕೊಡಲು ಸಿದ್ಧರಿಲ್ಲ ಎಂದು ಮಾತ್ರ ಅರ್ಥ. ಅವರು ಹಿಂದೂಗಳು; ಮತ್ತು ಕೆಲವು ಸ್ಥಾನಗಳು ಕಡಿಮೆ ಅಥವಾ ಕೆಲವು ಸ್ಥಾನಗಳು ಹೆಚ್ಚು ಪಡೆದರೆ ಹೆಚ್ಚು ವ್ಯತ್ಯಾಸವಿರುವುದಿಲ್ಲ ಎಂದು ನೀವು ಹೇಳಿದಲ್ಲಿ, ನಾನು ೧೯೩೧ರ ಜನಗಣತಿಯಡಿ ನಾವು ಕೆಲವು ಸ್ಥಾನಗಳನ್ನು ಹೆಚ್ಚಿಗೆ ಪಡೆಯುವುದಾದರೆ ಸದನ ನಮಗೆ ಆ ಸ್ಥಾನಗಳನ್ನು ಕೊಡಲು ಹಿಂಜರಿಯಬಾರದು–ಎಂದು ಕೇಳಿಕೊಳ್ಳುತ್ತೇನೆ. ಆದುದರಿಂದ ನಾನು ಗೌರವಾನ್ವಿತ ಮಂಡನೆಕಾರರು ತಿದ್ದುಪಡಿಯನ್ನು ಸ್ವೀಕರಿಸಬಹುದು. ಅನುಸೂಚಿತ ಜಾತಿಗಳಿಗೆ ೧೯೩೧ರ ಜನಗಣತಿಗನುಗುಣವಾಗಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ಮಾತುಗಳೊಂದಿಗೆ ನಾನು ಗೌರವಾನ್ವಿತ ಮಂಡನೆಕಾರರು ನನ್ನ ತಿದ್ದುಪಡಿಯನ್ನು ಒಪ್ಪುವರೆಂದು ಆಶಿಸುತ್ತೇನೆ.]*

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೆ :** ಮಾನ್ಯರೆ, ನನ್ನ ಗೆಳೆಯ ಶ್ರೀ ಮುನ್ಷಿಯವರು ಅನುಸೂಚಿತ ಜಾತಿಗಳು ಒಂದು ಅಲ್ಪಸಂಖ್ಯಾತರನ್ನು ರೂಪಿಸುತ್ತವೆಂದು ಸ್ಪಷ್ಟನೆ ನೀಡಿರುತ್ತಾರೆ. ಇನ್ನೂ ಅವರನ್ನು ನಮೂದಿಸಲಾದ ಮೂರು ಪ್ರವರ್ಗಗಳಡಿ ಅವರು ಬರುವುದಿಲ್ಲ ಎಂಬ ಅಂಶದ ದೃಷ್ಟಿಯಿಂದ ಅಲ್ಪಸಂಖ್ಯಾತರೆಂದು ಪರಿಗಣಿಸಿಲ್ಲ. ಮಾನ್ಯರೆ, ಈ ಸಂಬಂಧದಲ್ಲಿ ಅನುಸೂಚಿತ ಜಾತಿಗಳನ್ನು ಅಲ್ಪಸಂಖ್ಯಾತ ಎಂದು ಮೇ ೧೬ರ ವರೆಗೆ ಪರಿಗಣಿಸಲಾಗಿತ್ತು, ಆದರೆ ಕ್ಯಾಬಿನೆಟ್ ಮಿಷನ್ ಬಂದಾಗ ಲೋಪವಾದ ಒಂದು ಪ್ರಕ್ರಿಯೆಯಿಂದ ಅವರು ದಲಿತವರ್ಗಗಳನ್ನು ಅಂದರೆ ಅನುಸೂಚಿತ ಜಾತಿಗಳನ್ನು ಕೈಬಿಟ್ಟಿದ್ದಾರೆ ಮತ್ತು ಇತರ ಸಮುದಾಯಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ ಎಂದು ಈ ಸದನಕ್ಕೆ ಹೇಳಬಹುದಾಗಿದೆ. ಆದರೆ ನನ್ನ ಗೆಳೆಯ ಶ್ರೀ ಮುನ್ಷಿ ಅನುಸೂಚಿತ ಜಾತಿಗಳಿಗೆ ಅನರ್ಹತೆ ಇದೆ ಎಂದು ಅವರನ್ನು ಅಲ್ಪಸಂಖ್ಯಾತ ಎಂದು ಪರಿಗಣಿಸಿ ಎಲ್ಲ ಅನುಕೂಲಗಳನ್ನು ಕೊಡಲಾಗುತ್ತದೆ ಮತ್ತು ಅವರಿಗೆ ಅಗತ್ಯವೆನ್ನಲಾದ ಸೌಲಭ್ಯಗಳಿಂದ ಯಾವುದೇ ಕಾರಣಕ್ಕೂ ವಂಚಿತಗೊಳಿಸುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆ ದೃಷ್ಟಿಯಿಂದ ಮಾನ್ಯರೆ, ನನ್ನ ತಿದ್ದುಪಡಿಯನ್ನು ಸಮ್ಮತಿಸಬಹುದೆಂದು ಭಾವಿಸುತ್ತೇನೆ. ನಾನು ಮಂಡಿಸುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಮಾನ್ಯ ಸಭಾಧ್ಯಕ್ಷರೆ, ಮೂಲ ತಿದ್ದುಪಡಿಯನ್ನು ಮಂಡಿಸುವ ಹೊರತು ಹೇಗೆ ಒಂದು ತಿದ್ದುಪಡಿಗೆ ಒಂದು ತಿದ್ದುಪಡಿಯನ್ನು ಮಂಡಿಸಬಹುದು ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅದು ಒಂದು ಪರಿಣಾಮವಾಗಿ ಬಂದ ವಿಷಯವಾಗಿದೆ. ಆದುದರಿಂದ ನಾನು ಮಂಡಿಸುವ ಈ ಅವಕಾಶವನ್ನು ಕೊಡುತ್ತಿದ್ದೇನೆ.

**ಶ್ರೀ ಎಸ್. ನಾಗಪ್ಪ :** ಮಾನ್ಯರೆ, ನನ್ನ ಗೆಳೆಯ ಶ್ರೀ ಖಾಂಡೇಕರ್ ಇದೀಗ ತಾನೆ ತಿದ್ದುಪಡಿ ಸಂಖ್ಯೆ ೮೮ ಮಂಡಿಸಿದರು. ಅದೆಂದರೆ ೧೯೩೧ರ ಜನಗಣತಿ. . .

**ಶ್ರೀ ಕೆ.ಎಮ್. ಮುನ್ಷಿ :** ನಾನು ಕ್ರಿಯಾಲೋಪಕ್ಕೆ ಎತ್ತುತ್ತಿದ್ದೇನೆ. ಇದು ಕಂಡಿಕೆ ೩ಕ್ಕೆ ಉಲ್ಲೇಖಿಸಿದ್ದಾಗಿದೆ. ಈಗ ನಾವು ಅನುಸೂಚಿಯಲ್ಲಿ ಕಂಡಿಕೆ ೧ರ ಕುರಿತು ಇದ್ದೇವೆ.

**ಶ್ರೀ ಎಸ್. ನಾಗಪ್ಪ :** ಅದನ್ನು ಮಂಡಿಸಲಾಯಿತು.

**ಶ್ರೀ ಕೆ.ಎಮ್. ಮುನ್ಷಿ :** ಅದು ಕಂಡಿಕೆ ೧ಕ್ಕೆ ತಿದ್ದುಪಡಿ. ಸದನವು ಪ್ರಸ್ತುತ ಕಂಡಿಕೆ ೧ ಕುರಿತು ಚರ್ಚಿಸುತ್ತಿದೆ.

**ಶ್ರೀಎಸ್. ನಾಗಪ್ಪ :** ನಾನು ಅದು ಅನುರೂಪದ ತಿದ್ದುಪಡಿ ಎಂದು ಹೇಳುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ನಾವು ಆ ವಿಷಯಕ್ಕೆ ಬಂದಾಗ, ನೀವು ಅದನ್ನು ಮಂಡಿಸಬಹುದು.

**ಶ್ರೀ ಕೆ.ಎಮ್. ಮುನ್ಷಿ :** ಮಾನ್ಯರೆ, ನಾನು ಇನ್ನೊಂದು ತಿದ್ದುಪಡಿ ಮುಂದಿಡುತ್ತೇನೆ. ನನ್ನ ತಿದ್ದುಪಡಿ

ಸಂಖ್ಯೆ ೨ ಕಂಡಿಕೆ ೧೪ಕ್ಕೆ ಸಂಬಂಧಿಸಿದೆ. ಅದು ನಾನು ಮಂಡಿಸಿದ ಮೊದಲನೇ ತಿದ್ದುಪಡಿಯ ರೂಪರೇಖೆಯಲ್ಲಿದೆ.

**ಮಾನ್ಯ ಸಭಾಧ್ಯಕ್ಷರು** : ಅದು ಆನುಷಂಗಿಕವಾದುದು.

**ಶ್ರೀ ಕೆ.ಎಮ್. ಮುನ್ಷಿ** : ಹೌದು, ಅದೇ ಕಲ್ಪನೆ ಹೊತ್ತದ್ದಾಗಿದೆ. ನೀವು ನನಗೆ ಔಪಚಾರಿಕವಾಗಿ ಮಂಡಿಸಲು ಅನುಮತಿಸಿದರೆ ಆ ತಿದ್ದುಪಡಿ, ನಾನು ಮಂಡಿಸಲಿರುವುದು ಹೀಗಿದೆ:

"ಶಬ್ದಗಳು '೭. ಅನುಸೂಚಿತ ಜಾತಿಗಳು' ಅನ್ನು ಅನುಸೂಚಿಯಿಂದ ತೆಗೆದುಹಾಕಿ ಕೆಳಗಿನ ಕಂಡಿಕೆಯನ್ನು ಅನಂತರ ಸೇರಿಸಬೇಕಿದೆ"

'೧೪-ಎ ಭಾರತ ಸರ್ಕಾರದ ಅಧಿನಿಯಮ ೧೯೩೫ಕ್ಕೆ ಅನುಸೂಚಿ ೧೮ರಲ್ಲಿ ವಿವರಿಸಿದಂತೆ ೧೬ ಹಿಂದೂ ಸಮುದಾಯದ ಭಾಗವನ್ನು ಅನುಸೂಚಿತ ಜಾತಿಗಳು ಎಂದು ಉಲ್ಲೇಖಿಸಿದುದು ಕಂಡಿಕೆ ೧೪ಕ್ಕೆ ಅನುಸೂಚಿಯಲ್ಲಿ ನಮೂದಿಸಿದ ಅಲ್ಪಸಂಖ್ಯಾತರಿಗೆ ಒದಗಿಸಿಲಾದ ಅದೇ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಹೊಂದಿರುತ್ತವೆ.'"

ಇದು ಹರಿಜನರಿಗೆ ಆನುಷಂಗಿಕವಾಗಿ ಬಂದುದರಿಂದ ಅಲ್ಪಸಂಖ್ಯಾತರ ಪ್ರವರ್ಗದಿಂದ ತೆಗೆಯಲಾಗುತ್ತಿದೆ ಮತ್ತು ಹಿಂದೂಗಳ ಒಂದು ಭಾಗವಾಗಿ ಒಂದು ಮುಕ್ತಪ್ರವರ್ಗವಾಗಿ ಇರಿಸಲಾಗುತ್ತದೆ. ನಾನು ತಿದ್ದುಪಡಿ ಮಂಡಿಸುತ್ತೇನೆ.

**ಶ್ರೀ ಬಿ. ದಾಸ್** : ಮಾನ್ಯರೆ, ನಾನು ಶ್ರೀ ಕೆ.ಎಮ್. ಮುನ್ಷಿ ಅವರಿಂದ ಮಂಡಿಸಲಾದ ತಿದ್ದುಪಡಿಗೆ ಒಂದು ತಿದ್ದುಪಡಿ ಮಂಡಿಸಲು ಇಚ್ಛಿಸುತ್ತೇನೆ. ಅವರು "೧೯೩೫ರ ಭಾರತ ಸರ್ಕಾರದ ಅಧಿನಿಯಮ ಅನುಸೂಚಿ ೧೮ರಲ್ಲಿ ವಿವರಿಸಿದಂತೆ ಹಿಂದೂ ಸಮುದಾಯದ ಭಾಗವಾಗಿ 'ಅನುಸೂಚಿತ ಜಾತಿಗಳು' ಎಂದು ಉಲ್ಲೇಖಿಸಿದೆ ಎಂದು ಹೇಳಿದರು." ನಾನು ಈ ತಿದ್ದುಪಡಿ ಮಂಡಿಸಲು ಇಚ್ಛಿಸುತ್ತೇನೆ: "೧೯೩೫ರ ಭಾರತ ಸರ್ಕಾರದ ಅಧಿನಿಯಮದ ಅನುಸೂಚಿ ೧೮ರಲ್ಲಿ ನೀಡಿದ ವ್ಯಾಖ್ಯೆಗೆ ಬದಲಾಗಿ ಒಕ್ಕೂಟ ಸಂವಿಧಾನ ಅಧಿನಿಯಮಕ್ಕೆ ಅನುಸೂಚಿಯಲ್ಲಿ ವ್ಯಾಖ್ಯೆ ನೀಡಬೇಕಾದ ಎಂಬ ಶಬ್ದಗಳು."

ನಾನು ಭಾರತ ಸರ್ಕಾರದ ಅಧಿನಿಯಮ ಎಂಬುದನ್ನು ಪುನರಾವರ್ತನೆ ಮಾಡಲು ಇಷ್ಟಪಡಿಸುವುದಿಲ್ಲ. ಸಮಿತಿಯ ಉಲ್ಲೇಖಿತ ಭಾರತ ಸರ್ಕಾರದ ಅಧಿನಿಯಮದ ಅನುಸೂಚಿಯನ್ನು ಪರಾಮರ್ಶಿಸಿದೆ. ನಾವು ಅದನ್ನು ಒಕ್ಕೂಟ ಸಂವಿಧಾನದ ಅಧಿನಿಯಮದ ಅನುಸೂಚಿ ಎಂದು ಅಂಗೀಕರಿಸಬಹುದಾಗಿದೆ. ಇದು ನಾನು ಮಂಡಿಸುವ ತಿದ್ದುಪಡಿ "ಭಾರತ ಸರ್ಕಾರದ ಅಧಿನಿಯಮ ೧೯೩೫" ಎಂಬ ಪದಗಳನ್ನು ಬಿಡಬೇಕು. ಮತ್ತು "ಒಕ್ಕೂಟ ಸಂವಿಧಾನ ಅಧಿನಿಯಮದ ಅನುಸೂಚಿಯಲ್ಲಿ ವಿವರಿಸಬೇಕಾದ" ಎಂದು ಸೇರಿಸಬೇಕಿದೆ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಶ್ರೀ ಬಿ. ದಾಸ್ ಅವರು ಮಂಡಿಸಿದ ಇತ್ತೀಚಿನ ತಿದ್ದುಪಡಿ ಕುರಿತಂತೆ ಒಂದು ಟೀಕೆ ಮಾಡಬಹುದಾಗಿದೆ. ನಾವು ಒಂದು ಅನುಸೂಚಿಯನ್ನು ತಯಾರಿಸಿದ್ದಿದ್ದರೆ, ಆಗ ಅದು ಪ್ರಸ್ತುತವಾಗುತ್ತಿತ್ತು. ಒಂದು ಅನುಸೂಚಿ ಇಲ್ಲದೆ ಒಂದು ಅಸ್ತಿತ್ವದಲ್ಲಿರದ ಅನುಸೂಚಿಗೆ ಒಂದು ವಿಷಯವನ್ನು ಅನ್ವಯಿಸುವುದು ನಿಯಮಾನುಕ್ರಮವಲ್ಲ. ೧೯೩೫ರ ಭಾರತ ಸರ್ಕಾರದ ಅಧಿನಿಯಮ ಉಲ್ಲೇಖ ಸರಿಯಾಗಿಯೇ ಇದೆ. ಏಕೆಂದರೆ ಅದು ಒಂದು ಗಟ್ಟಿ ಆಕರ ಕೊಡುತ್ತದೆ.

ನಾನು ಹೇಳಲಿಚ್ಛಿಸುವ ಅಂಶಗಳು ಮೂರು. ಮೊದಲನೆಯದು, ಈ ಉಪಬಂಧದಲ್ಲಿ 'ಶಾಸನಸಭೆಗಳು' ಎಂಬ ಶಬ್ದವಿದೆ. ಅದು ಈ ಮೀಸಲಾತಿ ಕೆಳಮನೆ ಮತ್ತು ಮೇಲ್ಮನೆಗಳಿಗೆರಡಕ್ಕೂ ಇರಬೇಕು ಎಂಬ ಅರ್ಥವನ್ನು ಕೊಡುತ್ತದೆಯೇ ಎಂದು ತಿಳಿಯಬಯಸುತ್ತೇನೆ. ಮೀಸಲಾತಿ ಕೆಳಮನೆಗೆ ಮಾತ್ರ ಇದೆ ಎಂದಾದರೆ, ನಾವು ಅಳವಡಿಸಿಕೊಂಡಿರುವ ಸಂವಿಧಾನದಡಿ, ಪ್ರಾಂತ್ಯಗಳ ವಿಷಯದಲ್ಲಿ ಮೇಲ್ಮನೆಗಳನ್ನು ಐರಿಶ್ ಮಾದರಿಯಲ್ಲಿ ಚುನಾಯಿಸಬೇಕು, ಅದೇ ಒಕ್ಕೂಟದ ವಿಷಯದಲ್ಲಿ ಅದನ್ನು ಅಮೆರಿಕನ್ ಸೆನೆಟ್ ಮಾದರಿಯ ಮೇಲೆ

ಪ್ರಾಂತೀಯ ಶಾಸನಸಭೆಗಳು ಚುನಾಯಿಸಬೇಕು. ಮೀಸಲಾತಿಯು ಶಾಸನಸಭೆಗಳ ಮೇಲ್ಮನೆಗಳಿಗೆ ಒಂದು ಅನ್ವಯ ಹೊಂದಿರಬೇಕು ಎಂದು ನಾನು ಆಲೋಚಿಸಿಲ್ಲ. ಇದನ್ನು 'ವಿವಿಧ ಶಾಸನ ಸಭೆಗಳು' ಎಂದು ಹೇಳುವ ಮೂಲಕ ಸ್ಪಷ್ಟ ಪಡಿಸಬಹುದು ಎಂದು ನಾನು ಭಾವಿಸುತ್ತೇನೆ.

ಇನ್ನೊಂದು ವಿಷಯ ನಾನು ಎತ್ತಿ ಹೇಳಲಿಚ್ಛಿಸುವುದು ಈ ಖಂಡವನ್ನು ಪೂರ್ವ ಪಂಜಾಬ್ ಮತ್ತು ಪಶ್ಚಿಮ ಬಂಗಾಳಕ್ಕೆ ಅನ್ವಯಮಾಡಬಾರದು ಎಂದು. ವಿಭಜನೆಯ ಫಲವಾಗಿ ಅಲ್ಲಿ ಸ್ಥಿತಿಗಳು ವಿಚಿತ್ರವಾಗಿವೆ. ಅಲ್ಲಿ ಇಂದು ಜನಸಂಖ್ಯೆ ವಿತರಣೆಯನ್ನು ನಿಖರವಾಗಿ ನಾವು ತಿಳಿದಿಲ್ಲ. ನಾವು ಜನಸಂಖ್ಯೆಯ ವಿತರಣೆ ತಿಳಿಯುದ ವರೆಗೆ, ಜನಸಂಖ್ಯೆ ಆಧಾರದ ಮೇಲಿನ ಸ್ಥಾನಗಳ ಮೀಸಲಾತಿಯು ಅನಿರೀಕ್ಷಿತ ಪರಿಣಾಮಗಳನ್ನುಳ್ಳದ್ದಾಗುತ್ತದೆ. ಆದುದರಿಂದ ನಾನು ಈ ಖಂಡವನ್ನು ಅನ್ವಯಮಾಡಬಾರದು ಎಂದು ಅಭಿಪ್ರಾಯ ಪಡುತ್ತೇನೆ. ಒಂದು ಸಾರ್ವತ್ರಿಕ ನಿಯಮವಾಗಿ ಈ ಎರಡೂ ಪ್ರಾಂತ್ಯಗಳು ಪ್ರಸಕ್ತ ವರದಿಯಿಂದ ವಿನಾಯಿತಿ ಪಡೆದಿವೆ ಎಂದು ತಿಳಿಯಬೇಕು ಎಂದು ಭಾವಿಸುತ್ತೇನೆ.

ಮತ್ತೊಂದು ಅಂಶ ನಾನು ಈ ತಿದ್ದುಪಡಿಯನ್ನು ಮಂಡಿಸಿದವರಿಗೆ ಮನದಟ್ಟು ಮಾಡಲಿಚ್ಛಿಸುವುದೇನೆಂದರೆ, ಒಂದು ಚುನಾವಣೆ ಕ್ಷೇತ್ರದಲ್ಲಿ ಮೀಸಲಾತಿ ಒದಗಿಸಲಾಗಿರುವ ಒಂದು ಅಲ್ಪಸಂಖ್ಯಾತ ಸಮುದಾಯವು ಬಹುಸಂಖ್ಯಾತದಲ್ಲಿದ್ದರೆ, ಆ ಚುನಾವಣೆ ಕ್ಷೇತ್ರವನ್ನು ಯಾವುದೇ ಮೀಸಲಾತಿ ಇಲ್ಲದೆ ಒಂದು ಮೀಸಲು ಸ್ಥಾನ ಎಂದು ಭಾವಿಸಬೇಕು. ಒಂದು ವೇಳೆ ಒಂದು ಜಿಲ್ಲೆಯಲ್ಲಿ, ಮುಸ್ಲಿಮರು ಬಹುಸಂಖ್ಯೆಯಲ್ಲಿದ್ದರೆ ಮತ್ತು ಅದೊಂದು ಚುನಾವಣೆ ಕ್ಷೇತ್ರ. ಅಲ್ಲಿ ಒಂದೇ ಅಥವಾ ಎರಡು ಸ್ಥಾನಗಳಿವೆ ಎನ್ನಿ. ಆ ಚುನಾವಣಾ ಕ್ಷೇತ್ರದಲ್ಲಿ ಮೀಸಲಾತಿ ಏಕಿರಬೇಕು ಎಂಬುದಕ್ಕೆ ಕಾರಣ ಕೊಡಲಾಗದು. ಎಲ್ಲ ಕಾರ್ಯಸಾಧ್ಯ ಉದ್ದೇಶಗಳಿಗೆ ಅದನ್ನು ಮೀಸಲು ಸ್ಥಾನಗಳ ಸಂಖ್ಯೆಯಲ್ಲಿ ಸೇರಿಸಬೇಕು. ಅದು ಮಾಡಿದವರಿಗೂ ಅದು ಅಹಿತಕರ ಪರಿಣಾಮಗಳಿಗೆಡೆ ಕೊಡಬಹುದು. ಒಂದು ವೇಳೆ ಇಡೀ ಜಿಲ್ಲೆಯಲ್ಲಿ ಮುಸ್ಲಿಮ್ ಬಹುಸಂಖ್ಯಾತರಾಗಿ ಇದ್ದರೆ ಮತ್ತು ಆ ಜಿಲ್ಲೆಗೆ ಮೂರು ಅಥವಾ ಐದು ಸ್ಥಾನಗಳಿವೆಯಾದರೆ, ನೀವು ಬಹುಸಂಖ್ಯಾತರಿರುವಲ್ಲಿ ಆ ಚುನಾವಣೆ ಕ್ಷೇತ್ರದಲ್ಲಿ ಮುಸ್ಲಿಮ್ ಸ್ಥಾನಗಳನ್ನು ಮೀಸಲಿಡುವಿರಾ? ಅದು ಅಸಂಗತ ಎಂದು ನಾನು ತಿಳಿಯುತ್ತೇನೆ. ನೀವು ಮೀಸಲಿಡದಿದ್ದರೆ, ಆಗ ಅವರ ಸ್ಥಾನಗಳನ್ನು ಮೀಸಲಿರಿಸಿದ ಸ್ಥಾನಗಳಲ್ಲಿ ಎಣಿಸಬೇಕಾಗುವುದಿಲ್ಲ. ಈ ತತ್ತ್ವವನ್ನು ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ಪೂರ್ವ ಪಂಜಾಬ್ ಪ್ರಾಂತ್ಯಗಳಿಗೆ ಅನ್ವಯಿಸುವಾಗ ಉದ್ಭವಿಸುವ ಅನಿರೀಕ್ಷರಿತ ಪರಿಸ್ಥಿತಿಯನ್ನು ಪರಿಗಣಿಸಬೇಕಾಗುತ್ತದೆ. ಆದುದರಿಂದ ನನ್ನ ಸರಳ ಸಲಹೆ ಎಂದರೆ, ಯಾವುದೇ ಚುನಾವಣಾ ಕ್ಷೇತ್ರದಲ್ಲಿ, ಮೀಸಲಾತಿ ಮಾಡಿರಲಾದ ಅಲ್ಪಸಂಖ್ಯಾತ ಸಮುದಾಯವು ಬಹುಸಂಖ್ಯಾತದಲ್ಲಿದ್ದರೆ ಆ ಚುನಾವಣಾ ಕ್ಷೇತ್ರವನ್ನು ಮತದಾರರ ಸಂಖ್ಯಾಬಲದಿಂದ ಈಗಾಗಲೇ ಮೀಸಲಿರಿಸಿದ್ದು ಎಂದು ತಿಳಿಯಬೇಕು. ಬಳಿಕ ಆ ಚುನಾವಣಾ ಕ್ಷೇತ್ರಕ್ಕೆ ಹಂಚಿಕೆಯಾದ ಸ್ಥಾನಗಳ ಸಂಖ್ಯೆಯನ್ನು ಒಟ್ಟು ಮೀಸಲಾತಿಯಿಂದ ಕಳೆಯಬೇಕು. ಇದನ್ನು ವಿವರವಾಗಿ ಪ್ರತಿ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಲೆಕ್ಕ ಹಾಕಬೇಕು ಎನಿಸುತ್ತದೆ. ಆದರೆ ಆ ಅಂಶ ನೆನಪಿಡಬೇಕಾದು.

ಜನಸಂಖ್ಯೆ ಆಧಾರದ ಮೇರೆಗೆ ಮೀಸಲಾತಿಯ ಅಂಶದಿಂದ ಉದ್ಭವಿಸುವ ಹಲವು ಇತರ ವಿಚಾರಗಳಿವೆ. ಆ ಬಗ್ಗೆ ನಾನೀಗ ಹೋಗುವುದಿಲ್ಲ ಮತ್ತು ನಾನು ಇತರ ವಿಷಯಗಳ ಬಗ್ಗೆ ವ್ಯವಹರಿಸುವಾಗ ಅವುಗಳನ್ನು ಕುರಿತು ಚರ್ಚಿಸುತ್ತೇನೆ. ಈ ಮೂರು ಅಂಶಗಳನ್ನು ನಾನು ಸಲಹೆ ಮಾಡುತ್ತೇನೆ: ಅಂದರೆ ಮೀಸಲಾತಿಯನ್ನು ಮೇಲ್ಮನೆಗಳಿಗೆ ಅನ್ವಯಿಸಬೇಕೆ, ಈ ತತ್ತ್ವ ಪಶ್ಚಿಮ ಬಂಗಾಳ ಮತ್ತು ಪೂರ್ವ ಪಂಜಾಬ್‌ಗಳಿಗೆ ಅನ್ವಯವಾಗುತ್ತದೆಯೇ ಮತ್ತು ಎಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ಮಾಡಲಾಗಿದೆಯೋ ಅಲ್ಲಿ ಅವರು ಬಹುಸಂಖ್ಯಾತರಿದ್ದರೆ ಚುನಾವಣಾ ಕ್ಷೇತ್ರಗಳು ಹೇಗೆ ವ್ಯವಹರಿಸಬೇಕು–ಈ ಎಲ್ಲ ವಿಷಯಗಳನ್ನು ಸ್ಪಷ್ಟ ಪಡಿಸಬೇಕು ಅಥವಾ ಕಡೇ ಪಕ್ಷ ಮುಂದಿನ ಪರಿಗಣನೆಗೆ ಮತ್ತು ನಿರ್ಧಾರಕ್ಕೆ ಬಿಡಬೇಕು.

**ಪ್ರೊ. ಶಿಬನ್‌ಲಾಲ್ ಸಕ್ಸೇನ** (ಉ.ಪ್ರ : ಸಾಮಾನ್ಯ) : ಶ್ರೀ ಮುನ್ಷಿಯವರು ಅನುಸೂಚಿಗೆ ಒಂದು ತಿದ್ದುಪಡಿ ಮಂಡಿಸಿದರು. ಆದರೆ ಅನುಸೂಚಿ ಇನ್ನೂ ಮಂಡಿಸಿಲ್ಲ. ಅವರ ತಿದ್ದುಪಡಿಯು ನನ್ನ ತಿದ್ದುಪಡಿ ಮಂಡನೆಯಾದ ಅನಂತರ ಮಾತ್ರ ಬರಬಹುದು.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಮುನ್ಷಿಯವರು ಮಾಡಿದ್ದೆಂದರೆ ಮೊದಲ ಖಂಡದ ನಿಬಂಧನೆಗೆ ಒಂದು ತಿದ್ದುಪಡಿ. ಅವರು ನಿಮ್ಮ ತಿದ್ದುಪಡಿಯನ್ನು ಮುಟ್ಟಿಯೂ ಇಲ್ಲ.

**ರೆವರೆಂಡ್ ಎಸ್.ಜಿ. ಜೆರೋಮ್ ಡಿಸೋಜ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಸರ್ದಾರ್ ಪಟೇಲ್ ಸದನಕ್ಕೆ ಈಗಷ್ಟೆ ಮಂಡಿಸಿದ ನಿಬಂಧನೆಗಳನ್ನು ಅವಲೋಕನಗಳನ್ನು ಕುರಿತು ನಾನು ಕೆಲವು ತುಂಬ ಸಂಕ್ಷಿಪ್ತ ಸಾಮಾನ್ಯ ಅವಲೋಕನಗಳನ್ನು ಮಾಡಲು ಇಚ್ಛಿಸುತ್ತೇವೆ. ಹಾಗೆ ಮಾಡುವ ಮೊದಲು, ನಾನು ಕೂಡಾ ಸ್ವಲ್ಪ ನಿಧಾನವಾಗಿಯಾದರೂ ಅಲ್ಪಸಂಖ್ಯಾತರ ಪ್ರಶ್ನೆಗಳನ್ನು ನಿರ್ವಹಿಸಿದ ರೀತಿಗೆ, ವರದಿಯಲ್ಲಿ ಅಭಿಪ್ರಾಯದ ಒಂದು ಒಮ್ಮತ ಗಳಿಸುವಲ್ಲಿ ತೋರಿದ ಕೌಶಲ್ಯ ಮತ್ತು ಸಮಯೋಚಿತ ಜಾಣ್ಮೆ ಮತ್ತು ಇಲ್ಲಿ ಈ ಪ್ರಶ್ನೆಗಳೊಂದಿಗೆ ವ್ಯವಹರಿಸುವಾಗ ಮಾಡಿದ ಚರ್ಚೆಗಳಲ್ಲಿ ಸರ್ದಾರ್ ಪಟೇಲ್‌ರು ತೋರಿದ ಮಹಾನ್ ದಯಾಪರತೆಗೂ ಮತ್ತು ಅಂದಿನ ಭಾವಕ್ಕೂ ನನ್ನ ಸಂಪೂರ್ಣ ತೃಪ್ತಿಯನ್ನು ವ್ಯಕ್ತ ಪಡಿಸುವೆ.

ಮೀಸಲಾತಿಯ ಈ ಪ್ರಶ್ನೆ, ನಮ್ಮ ನಡುವೆ ಹಲವು ಒಳ್ಳೆಯ ಮನಸ್ಸುಗಳನ್ನು ಒಂದಿಷ್ಟುಗೊಂದಲಕ್ಕೀಡು ಮಾಡಿದೆ ಎಂದು ನಾನು ಬಲ್ಲೆ. ಈಗ ಆ ಪ್ರತ್ಯೇಕ ಮತದಾರರ ಸಮುದಾಯಗಳನ್ನು ಕೈಬಿಡಬೇಕು; ಮತ್ತು ಅವನ್ನು ಬಿಡುವಲ್ಲಿ ಶಂಕೆ ಇದ್ದಲ್ಲಿ ಈ ಬೆಳಗ್ಗೆ ನಾವು ಕೇಳಿದ ಸಮರ್ಪಕವಾದ ಮತ್ತು ಶಕ್ತ ಪ್ರತಿಪಾದನೆ ಎಲ್ಲ ಶಂಕೆಗಳನ್ನು ನಿವಾರಿಸಬೇಕು ಮತ್ತು ಪ್ರತ್ಯೇಕ ಮತದಾರರ ಸಮುದಾಯಗಳು ಹೋಗಬೇಕು ಎಂಬ ಸಾಮಾನ್ಯ ಒಪ್ಪಂದಕ್ಕೆ ಹಿಂದೆ ಮುಂದೆ ನೋಡುವವರನ್ನೂ ಕೂಡಾ ಒಳಪಡಿಸಬೇಕು. ಆದರೆ ಇನ್ನೊಂದೆಡೆ ಅದು ಸಂಪೂರ್ಣ ಸ್ಪಷ್ಟವಾಗಿಲ್ಲ ಮತ್ತು ಇಲ್ಲಿ ಹಲವರಿಗೆ ಮೀಸಲಾತಿಯು ಅವರಿಗೆ ಸಂತೋಷಕರ ವ್ಯವಸ್ಥೆ ಎಂಬುದು ಮನದಟ್ಟು ಆಗಿಲ್ಲ. ಇದೊಂದು ರಾಜಿಸೂತ್ರ ಮತ್ತು ಎಲ್ಲ ರಾಜಿಗಳಂತೆ ಅದರಲ್ಲಿ ಒಂದು ತರ್ಕವೈರುಧ್ಯವಿದೇ. ನಾನು ಮೀಸಲಾತಿಯೆ ತಪ್ಪು ಎಂಬ ಕಾರಣಕ್ಕಾಗಿ ಹೇಳುತ್ತಿಲ್ಲ. ಮೀಸಲಾತಿಯು ಪ್ರಜಾಪ್ರಭುತ್ವ ವಿರೋಧಿ ಎಂಬ ಅನಿಸಿಕೆ ಇದೆ ಮತ್ತು ಅದು ಹಾಗೆಯೇ ಮುಂದಿನ ಹತ್ತು ಅಥವಾ ಕೆಲವು ವರ್ಷಗಳಲ್ಲಿನ ಅವಧಿಯಲ್ಲಿ ಹೇಗಾದರೂ ತೊಡೆದುಹಾಕಲ್ಪಡಬೇಕು. ನಾನು ಇದನ್ನು ಒಪ್ಪುತ್ತಿಲ್ಲ. ಮತದಾನ ತತ್ತ್ವದ ತೃಪ್ತಿಕರ ಅನುಷ್ಠಾನಕ್ಕಾಗಿ ಮೀಸಲಾತಿಯೇ ಒಂದು ಮಾರ್ಗ, ಮಾನ್ಯರೆ, ಅಷ್ಟಲ್ಲದೆ ನಾವಾಗಿಯೇ ಈ ಸದನದಲ್ಲಿ ಮತ್ತು ನಮ್ಮ ಪ್ರಾಂತೀಯ ವೃತ್ತಗಳಲ್ಲಿ ಕಾರ್ಯಾನುಗುಣ ಪ್ರಾತಿನಿಧ್ಯ ಇರುವ ಮೇಲ್ಮನೆಗಳಿಗೆ ಸಿದ್ಧತೆ ಮಾಡುತ್ತಿದ್ದೇವೆ. ಅದರದೇ ಸ್ವಂತ ರೀತಿಯಲ್ಲಿ ಕಾರ್ಯಾನುಗುಣ ಪ್ರಾತಿನಿಧ್ಯ ಎಂದರೆ ಒಂದು ಬಹು ವಿಶೇಷ ವಿಧದ ಮೀಸಲಾತಿಯೇ ಹೊರತು ಬೇರೇನೂ ಅಲ್ಲ. ತಾವು ಸ್ಥಾನಗಳನ್ನು ನಿರ್ದಿಷ್ಟ ಆಸಕ್ತಿಗಾಗಿ ಮೀಸಲಿಡಿ. ಇಲ್ಲಿ ದುರದೃಷ್ಟವೆಂದರೆ, ಮೀಸಲಾತಿಯುನ್ನು ಕೋಮುವಾರು ಆಧಾರದ ಮೇಲೆ ಜಾರಿಗೊಳಿಸಲಾಗುತ್ತಿದೆ. ಎಂಬುದು ಮತ್ತು ಎರಡನೆಯದಾಗಿ, ಮೀಸಲಿರಿಸಿದ ಸ್ಥಾನಕ್ಕೆ ಚುನಾವಣೆಗಳನ್ನು ಯಾರ ಪರವಾಗಿ ಆಯೋಜಿಸಲಾಗುವುದೋ ಅವರಿಂದ ಪ್ರತ್ಯೇಕವಾಗಿ ಅವು ನಡೆಯುತ್ತಿಲ್ಲ. ಆದರೆ ಮತದಾರರ ಸಮುದಾಯಗಳಲ್ಲಿ ಒಂದು ಮಿಶ್ರಣದಿಂದ ಒಂದು ಸಾರ್ವತ್ರಿಕ ಮತದಾರರ ಕ್ಷೇತ್ರದಿಂದ ನಡೆಯುತ್ತಿದೆ. ತೊಡಕು ಅಲ್ಲೇ ಇರುವುದು; ಮತ್ತು ಸದನದಲ್ಲಿ ಈ ಶೀರ್ಷಿಕೆ ಕುರಿತಂತೆ ವ್ಯಕ್ತ ಪಡಿಸಲಾದ ಕೆಲವು ಸಂದೇಹಗಳು ಈ ಕಾರಣದಿಂದಲೇ ಹೊರತು ಯಾವುದೇ ಇತರ ಪರಿಗಣನೆಗಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ, ಆದಾಗ್ಯೂ ಸಾಮಾನ್ಯ ಮತದಾರರ ಸಮುದಾಯಗಳೊಂದಿಗಿನ ಮೀಸಲಾತಿಯ ತತ್ತ್ವ, ಕಳವಳಕಾರಿ ಕೆಲವು ಅಪಾಯಗಳ ನಡುವೆಯೂ ನಡೆದಿರುವ ಅವರ ದಿಟ್ಟ ಪ್ರಯೋಗ

ಎಂದು ನಂಬುತ್ತೇನೆ. ಏನೇ ಆದರೂ ಇದು ಎಲ್ಲರ ತೃಪ್ತಿಗಾಗಿ ನಡೆದ ಪ್ರಯೋಗ; ಈ ಸಮಯದಲ್ಲಿ ಇದು ಯೋಗ್ಯವೆ ಸರಿ. ಅದನ್ನು ಕೈಬಿಡಲಾಗುವುದಿಲ್ಲ. ಏಕೆಂದರೆ ನಾನು ಈ ಸದನದ ಬಹುಮತದ ಪಕ್ಷಕ್ಕೆ ನೆನಪು ಮಾಡುವುದಾದರೆ, ಎಷ್ಟೋ ವರ್ಷಗಳಿಂದ ಕಾಂಗ್ರೆಸ್ ಪಕ್ಷ ಮೀಸಲಾತಿಯೊಂದಿಗೆ ಜಂಟಿಮತದಾರರ ಸಮುದಾಯಗಳು ಇರತಕ್ಕದ್ದು ಎಂಬ ಬೇಡಿಕೆಗೆ ಹೊಂದಿಕೊಂಡಿದೆ. ನನ್ನ ಕೆಲವು ಗೆಳೆಯರು ಮೀಸಲಾತಿಯನ್ನು ಕೈಬಿಡಲು ಬಯಸುತ್ತಾರೆ. ಇದು ನಾವು ಕೊಟ್ಟ ಆಶ್ವಾಸನೆಗೆ ವ್ಯತಿರಿಕ್ತವಾಗಿರುತ್ತದೆ. ಚಾತುರ್ಯದಿಂದಲ್ಲದಿದ್ದರೂ ಸೂಚ್ಯವಾಗಿಯಾದರೂ ನಿರಾಕರಿಸಿದಂತೆಯೇ ಸರಿ. ನಾವು ಈ ಕುರಿತು ಹಿಂದಕ್ಕೆ ಹೋಗಬಾರದೇಕೆ ಎಂಬುವುದಕ್ಕೆ ಇದು ಒಂದು ಕಾರಣ ಮತ್ತು ನಾನು ಮತ್ತೊಮ್ಮೆ ಈ ವಿಷಯದಲ್ಲಿ ಅಲ್ಪಸಂಖ್ಯಾತರ ಭಾವನೆಗಳನ್ನು ವ್ಯಾಖ್ಯಾನಿಸಿದ ರೀತಿಯಿಂದ ಸರ್ದಾರ್ ಪಟೇಲರು ನಮ್ಮಲ್ಲಿ ತೃಪ್ತಿ ಮತ್ತು ಪುನರ್ ಭರವಸೆಗಳನ್ನು ತುಂಬಿದ್ದಾರೆ ಎಂದು ತಿಳಿಸಲು ಹರ್ಷಿಸುತ್ತೇನೆ. ಹಾಗೂ ನಮ್ಮ ವಂದನೆಗಳು ಅವರಿಗೆ ಸಲ್ಲುತ್ತವೆ. ನಾನು ಹೇಳಿದಂತೆ, ಮೀಸಲಾತಿಯನ್ನು ತೆಗೆದುಹಾಕುವ ದಿನವೊಂದು ಬಂದಾಗ ನಾವು ಎಲ್ಲರೂ ಸಂತೋಷವಾಗಿರುತ್ತೇವೆ ಮತ್ತು ಈ ಸದನ ಮತ್ತು ಈ ದೇಶದ ಮುಂದೆ ಎದುರಾಗುವ ಇನ್ನೊಂದು ಸನ್ನಿವೇಶ ಎಂದರೆ ಯಾರಿಗೆ ಮೀಸಲಾತಿ ನೀಡಲಾಗಿದೆಯೇ ಆ ವರ್ಗದ ಸದಸ್ಯರಿಂದ ಸಾರ್ವತ್ರಿಕ ಸ್ಥಾನಗಳಿಗೂ ಸ್ಪರ್ಧಿಸಬಹುದು. ಅದು ಒಂದಷ್ಟು ತೃಪ್ತಿ ತಂದುಕೊಟ್ಟರೆ, ಆ ಆಧಾರದ ಮೇರೆಗೆ ಪ್ರಮುಖ ಮತ್ತು ಸಮ್ಮತವಾದ ಜನರು ಚುನಾಯಿತರಾದರೆ, ಮೀಸಲಾತಿ ಕೈಬಿಡಲು ಒಂದು ನಿಶ್ಚಿತ ಅವಧಿಯ ಕೊನೆಯಲ್ಲಿ ಅಲ್ಪಸಂಖ್ಯಾತರನ್ನು ಪ್ರೋತ್ಸಾಹಿಸಿದಂತಾಗುತ್ತದೆ ಎಂಬ ಭರವಸೆ ನನಗಿದೆ. ಈಗಿನ ವ್ಯವಸ್ಥೆಯಲ್ಲಿ ಅವರ ಪ್ರತಿನಿಧಿಗಳು ಅವರ ಆಶೋತ್ತರಗಳನ್ನು ಸರಿಯಾಗಿ ಯಥಾರೂಪದಲ್ಲಿ ವ್ಯಾಖ್ಯಾನಿಸದೆ ಇರಬಹುದೆಂಬ ಭಯ ನಿವಾರಣೆಯಾಗುತ್ತದೆ. ಹಾಗಾಗಿ ನಾನು ಸದನಕ್ಕೆ ಈ ಮಹಾಪ್ರಯೋಗವನ್ನು ಯಶಸ್ವಿಗೊಳಿಸಲು, ಅದು ಅಲ್ಪಸಂಖ್ಯಾತರನ್ನು ತೃಪ್ತಿಗೊಳಿಸುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತ ಮುಗಿಸುತ್ತಿದ್ದೇನೆ. ಅಲ್ಪಸಂಖ್ಯಾತರ ಪರವಾಗಿಯೇ ಇದನ್ನು ಇಲ್ಲಿ ಮಂಡಿಸಲಾಗಿದೆ. ಅಂದರೆ ಆಯ್ಕೆಯಾದ ಜನ ತಮ್ಮ ನಿಶ್ಚಿತಾಭಿಪ್ರಾಯಗಳನ್ನು ಧೈರ್ಯದಿಂದ ಆದರೆ ಬಹುಸಂಖ್ಯಾತ ಸಮುದಾಯಗಳನ್ನು ಅಸಂತೋಷಗೊಳಿಸದಂತೆ ವ್ಯಕ್ತಪಡಿಸಬೇಕು. ಅಂತಹ ಮನೋಭಾವ ಭಾವನೆಗಳಿಗೆ ಒಂದು ಸುರಕ್ಷಿತ ಅಭಿವ್ಯಕ್ತಿ ಒದಗಿಸಬಲ್ಲುದಾಗಿರುತ್ತದೆ. ಇಲ್ಲದಿದ್ದರೆ ದಮನಗೊಂಡು ಭೂಗತವಾಗಿ ಹೋಗುತ್ತದೆ. ಅದು ಪ್ರಜಾಪ್ರಭುತ್ವದ ಒಂದು ಪರಿಣಾಮಕಾರಿ ರಕ್ಷಣೆಯನ್ನು ಸಾಬೀತು ಮಾಡಲೂಬೇಕು.

ಸಂಸದೀಯ ಮಾದರಿಯ ಪ್ರಜಾಪ್ರಭುತ್ವ ಯಶಸ್ವಿಯಾಗಿದೆ ಮತ್ತು ಇಂಗ್ಲೆಂಡ್‌ನಲ್ಲಿ ಗಮನಾರ್ಹವಾಗಿ ಚೆನ್ನಾಗಿ ಯಶಸ್ವಿಯಾಗಿದೆ ಎಂದಾದರೂ, ಇನ್ನೆಲ್ಲಿಯೋ ವಿಫಲವಾಗಿದೆ ಎಂಬುದನ್ನು ನಾವು ಬಲ್ಲೆವು. ಏಕೆಂದರೆ ಬಹುತೇಕ ಪಕ್ಷಗಳು ಅಥವಾ ಸಮೂಹಗಳು ಚುನಾವಣೆಗಳ ಯಂತ್ರವನ್ನು ಹೇಗೆ ನಿಯಂತ್ರಿಸಬೇಕು ಎಂದು ತಿಳಿದಿವೆ. ಕೆಲವರು, ಐರೋಪ್ಯ ದೇಶಗಳಲ್ಲಿ ಅಂತಹ ವಿಧಾನಗಳಿಗೆದುರಾಗಿ ಅವರಿಂದ ಭಯ ಹುಟ್ಟಿಸುವ ಪ್ರತಿಕ್ರಿಯೆಗಳು ವ್ಯಕ್ತವಾಗುವುದು ಮತ್ತು ಫ್ಯಾಸಿಸಂ ಎಂಬ ಅಪಾಯಕಾರಿ ದೈತ್ಯ ತಲೆಯೆತ್ತಿತು. ಆದರೆ ಫ್ಯಾಸಿಸಂ ಕೂಡ, ಅಪಾಯಕಾರಿಯಾಗಿದ್ದು, ವೈಯಕ್ತಿಕ ಅಥವಾ ಅಲ್ಪಸಂಖ್ಯಾತ ಅಭಿಪ್ರಾಯದ ಸಾಧ್ಯತೆಯನ್ನು ನಿಗ್ರಹಿಸುವ ತೊಡಕನ್ನು ನಿವಾರಿಸಲು ಒಂದು ಯೋಜನೆ ಆಲೋಚಿಸಿತು. ಅದು ವಾಸ್ತವವಾಗಿ ಬರುತ್ತದೆ, ಅದಕ್ಕೆ ನಿಗಮಿತ ಸ್ಥಿತಿ ಎಂದು ಹೆಸರಿಡಲಾಯಿತು. ಅದು, ಫ್ಯಾಸಿಸಂನ ಸಾಂಗತ್ಯದಿಂದ ಅಯೋಗ್ಯವೆಂಬ ಕುಖ್ಯಾತಿಗೆ ಪಕ್ಕಾಯಿತು. ಈ ವಿಷಯಗಳನ್ನು ಮನಸಿನಲ್ಲಿಟ್ಟುಕೊಂಡರೆ ಮತ್ತು ಮೀಸಲಾತಿಯೊಂದಿಗೆ ಜಂಟಿ ಮತದಾರರ ಸಮುದಾಯಗಳ ಯೋಜನೆಗೆ ಒಂದು ಬಲುಯುತ ಅವಕಾಶ ನೀಡಿದಲ್ಲಿ, ನಮ್ಮ ದೇಶದ ಈ ದಿಟ್ಟ ಪ್ರಯೋಗ ಪ್ರಜಾಪ್ರಭುತ್ವವನ್ನು ಅದರ ಸ್ಪಷ್ಟ ಅಪಾಯಗಳಿಂದ ಕಾಪಾಡಬಹುದು ಮತ್ತು ಬಹುಶಃ ಎಲ್ಲೆಡೆ ಒಪ್ಪುವಂತೆ ಅಲ್ಪಸಂಖ್ಯಾತರ ಸಮಸ್ಯೆಗಳಿಗೆ ಒಂದು ಪರಿಹಾರ ಕೊಡುವಲ್ಲಿ ಒಂದು

ಉದಾಹರಣೆಯಾಗಿರುತ್ತದೆ. ನಾನು ಸೂಚಿಸಿದ ಅರ್ಥದಲ್ಲಿ, ಸಂಪೂರ್ಣ ಯಶಸ್ಸಿಗೆ ಅವಕಾಶಗಳು ತುಂಬ ಯಥೇಚ್ಛವಿಲ್ಲ, ಎಂದು ಚೆನ್ನಾಗಿ ತಿಳಿದು ಹೇಳುತ್ತಿದ್ದೇನೆ ಆದರೆ ಇದು ಅಲ್ಪಸಂಖ್ಯಾತರಿಗೆ ಮಾಡಲಾದ ಅಹಿತಕರ ಮತ್ತು ಬಲವಂತದ ರಿಯಾಯಿತಿಯಾಗಿ ನೋಡುವುದಿಲ್ಲ ಎಂದೂ, ತಮ್ಮಲ್ಲಿ ಯಾವುದಕ್ಕೆ ಮನವಿ ಮಾಡಿಕೊಂಡಿದ್ದಾರೆಯೋ ಆತೃಪ್ತಿಯನ್ನು ಆ ಅಲ್ಪಸಂಖ್ಯಾತರಿಗೆ ಕೊಡುವಲ್ಲಿ ಕೆಲಸ ಮಾಡಲಾಗುತ್ತದೆ ಎಂದು ನಾನೂ ಆಶಿಸುತ್ತೇನೆ.

**ಪಂಡಿತ್ ಚತುರ್ಭುಜ ಪಾಠಕ್** (ಮಧ್ಯಭಾರತ ರಾಜ್ಯಗಳು) : *[ಮಾನ್ಯ ಸಭಾಧ್ಯಕ್ಷರೆ, ನನ್ನ ಸಹೋದ್ಯೋಗಿ ಶ್ರೀ ಖಾಂಡೇಕರ್ ತಮ್ಮ ತಿದ್ದುಪಡಿಯಲ್ಲಿ ೧೯೩೧ರ ಜನಗಣತಿಗನುಗುಣವಾಗಿ ಅವರಿಗೆ (ಅನುಸೂಚಿತ ಜಾತಿಗಳು) ಪ್ರಾತಿನಿಧ್ಯ ಕೊಡಬೇಕೆಂದು ಆಶಿಸಿದ್ದಾರೆ. ಈ ಸಂಬಂಧವಾಗಿ ನಾನು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ ೧೯೪೧ರ ಜನಗಣತಿಗೆ ಬದಲಾಗಿ ನಾವು ೧೯೩೧ರ ಜನಗಣತಿ ಆಧಾರದ ಮೇರೆಗೆ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಕೊಟ್ಟರೆ, ಅದು ಇತರ ಅಲ್ಪಸಂಖ್ಯಾತರ ಮೇಲೆ ಅದರ ಪರೋಕ್ಷ ಪರಿಣಾಮಗಳನ್ನು ಬೀರುತ್ತದೆ, ಅವರು ಜನಗಣತಿ ತೆಗೆದುಕೊಳ್ಳುವಲ್ಲಿ ತಪ್ಪುಗಳಾಗಿವೆ ಎಂದು ಹೇಳಿದ್ದಾರೆ. ಏಕೆಂದರೆ ಕೆಲವು ಸ್ಥಳಗಳಲ್ಲಿ ಅವರು ಮುಸ್ಲಿಮರೆಂದೂ ಮತ್ತು ಇತರ ಸ್ಥಳಗಳಲ್ಲಿ ಜಾತಿ ಹಿಂದೂಗಳೆಂದೂ ನೋಂದಾಯಿತರಾಗಿದ್ದಾರೆ. ಮುಸ್ಲಿಮರು ಈ ರೀತಿಯಲ್ಲಿ ತಮ್ಮ ಸಂಖ್ಯೆ ಹೆಚ್ಚಿಸಿಕೊಂಡಿರುವ ಕಾರಣ, ಅವರು ೧೯೪೧ರ ಜನಗಣನೆಗನುಗುಣವಾಗಿ ತಮ್ಮ ಪ್ರಾತಿನಿಧ್ಯ ಹೆಚ್ಚಿಸಿಕೊಳ್ಳುವುದಕ್ಕೆ ಇಷ್ಟ ಪಡುತ್ತಾರೆ. ನಾಲ್ಕು ವರ್ಷಗಳ ಅನಂತರದಲ್ಲಿ ಮುಂಬರುವ ಜನಗಣತಿ ಸರಿ ಇದ್ದರೆ ಮತ್ತು ಅದಕ್ಕನುಗುಣವಾಗಿ ಪರಿಶಿಷ್ಟ ಜಾತಿಗಳ ಸಂಖ್ಯೆ ಹೆಚ್ಚಿದರೆ, ಶ್ರೀ ಖಾಂಡೇಕರ್ ಅವರು ಅವರಿಗೆ (ಹರಿಜನರಿಗೆ) ಪ್ರಾತಿನಿಧ್ಯವನ್ನು ೧೯೩೧ರ ಜನಗಣತಿಗನುಗುಣವಾಗಿಯಲ್ಲ ಅದರೆ ೧೯೫೧ರ ಜನಗಣತಿಯನುಸಾರ ಕೊಡಬೇಕೆಂದು ಸಲಹೆ ಮಾಡುವುದಕ್ಕೆ ಒಲವು ತೋರುತ್ತಾರೆ. ಇದು ಹೇಗೆ ಸೂಕ್ತ ಎಂಬುದು ನನಗೆ ತಿಳಿಯದು.]*

**ಶ್ರೀ ಎಚ್.ಜೆ. ಖಾಂಡೇಕರ್** : *[ನಾನಾದರೂ ಸ್ಥಾನಗಳ ಹಂಚಿಕೆ ಮಾಡುವ ಒಂದು ಜನಗಣತಿಯನ್ನು ತೆಗೆದುಕೊಳ್ಳಬೇಕು ಅಥವಾ ೧೯೫೧ರ ಜನಗಣತಿವರೆಗೆ ಹಂಚಿಕೆಗಳನ್ನು ಮುಂದೂಡಬೇಕು ಇಲ್ಲವೇ ೧೯೩೧ರ ಜನಗಣತಿಗನುಗುಣವಾಗಿ ನಮ್ಮ ಸಂಖ್ಯಾಬಲವನ್ನು ನಿಶ್ಚಯಿಸಬೇಕು ಎಂದು ಸಲಹೆ ಮಾಡುತ್ತೇನೆ ನನ್ನ ಸಮುದಾಯಕ್ಕೆ ನಾನು ೧೯೫೧ರ ಜನಗಣತಿ ಆಧಾರದ ಮೇರೆಗೆ ಪ್ರಾತಿನಿಧ್ಯ ಸಮ್ಮತಿಸುತ್ತೇನೆ ಅಥವಾ ಈಗ ತೆಗೆದುಕೊಳ್ಳಬಹುದಾದ ಒಂದನ್ನು ಒಪ್ಪುತ್ತೇನೆ. ಆದರೆ ೧೯೪೧ರ ಜನಗಣತಿ ಸಂಪೂರ್ಣ ತಪ್ಪು. ಆ ಆಧಾರದ ಮೇರೆಗೆ ಯಾವುದೇ ವಿಭಾಗಿಸುವುದು ಹರಿಜನರಿಗೆ ಎದ್ದು ಕಾಣುವ ಅನ್ಯಾಯ]*

**ಪಂಡಿತ್ ಚತುರ್ಭುಜ ಪಾಠಕ್** : *[ಶ್ರೀ ಖಾಂಡೇಕರ್‌ರು ಅಸ್ಪೃಶ್ಯರ ಪೈಕಿ ಜನನ ದರ ಸಾಕಷ್ಟು ಹೆಚ್ಚು, ಆದರೆ ಜನಗಣತಿಯಲ್ಲಿ ಅವರ ಸಂಖ್ಯೆಯನ್ನು ಅಧಿಕ ಎಂದು ದಾಖಲಿಸಿಲ್ಲ ಎಂದು ಹೇಳಿರುವರು, ಇದಕ್ಕೆ ಕಾರಣ ಸಂತೋಷದಿಂದಲೇ ಅವರನ್ನು ಜಾತಿ ಹಿಂದೂಗಳ ಪೈಕಿ ಲೆಕ್ಕಹಾಕಲಾಗಿರುವುದಾಗಿದೆ. ಶ್ರೀ ಖಾಂಡೇಕರ್ ಇದನ್ನು ಒಪ್ಪಿದ್ದಾರೆ. ಒಳ್ಳೆಯದೇ. ಜಾತಿ ಹಿಂದೂಗಳು ತಾವಾಗಿಯೇ ಹರಿಜನರನ್ನು ಚೆನ್ನಾಗಿ ಕಾಣಲು ಮತ್ತು ಜಾತಿ ಹಿಂದೂಗಳಾಗಿ ನೋಡಲು ಮನವಿ ಮಾಡಿದ್ದಾರೆ. ಶ್ರೀ ಖಾಂಡೇಕರ್ ಅದಕ್ಕೆ ಯಾವ ಆಕ್ಷೇಪಣೆ ಕೋರಬಾರದು]*

**ಶ್ರೀ ಎಚ್.ಜೆ. ಖಾಂಡೇಕರ್** : *[ಹರಿಜನರನ್ನು ಜಾತಿ ಹಿಂದೂಗಳ ನಡುವೆ ಜಾತಿ ಹಿಂದೂಗಳ ಸಂಖ್ಯೆಯನ್ನು ಹೆಚ್ಚಿಸಲು ಮಾತ್ರ ಲೆಕ್ಕಹಾಕಲಾಗಿದೆ. ಈ ವಿಧಾನ ಹರಿಜನರ ಸಾಮಾಜಿಕ ಜೀವನದಲ್ಲಿ ಯಾವೊಂದು ಬದಲಾವಣೆಗೂ ಕಾರಣವಾಗಿಲ್ಲ. ಆ ಹರಿಜನರು ಅಂದರೆ ಜಾತಿ ಹಿಂದೂಗಳ ನಡುವೆ ವರ್ಗೀಕರಿಸಲಾಗದವರು ಇನ್ನೂ ಅದೇ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಅವರ ಮಟ್ಟ ಜಾತಿ ಹಿಂದೂಗಳ ಸ್ತರದಂತೆ ಇಲ್ಲ.]*

**ಶ್ರೀ ಪಂಡಿತ್ ಚತುರ್ಭುಜ ಪಾಠಕ್** : *[ಜಾತಿ ಹಿಂದೂಗಳ ನಡುವೆ ಅಸ್ಪೃಶ್ಯರನ್ನು ಲೆಕ್ಕ ಹಾಕಿದಾಗ

ಅವರು (ಒಮ್ಮೆಲೇ) ಜಾತಿ ಹಿಂದೂಗಳ ಮಟ್ಟ ಗಳಿಸುತ್ತಾರೆ ಮತ್ತು ಅವರು ಅದೇ ಸ್ಥಿತಿಯಿಂದ ಜಾತಿ ಹಿಂದೂಗಳ ಎಲ್ಲ ಹಕ್ಕುಗಳನ್ನು ಪಡೆಯುತ್ತಾರೆ ಎನ್ನಲಾಗದು.]*

೧೯೩೧ರ ಜನಗಣತಿ ಆಧಾರ ಮೇರೆಗೆ ಪ್ರಾತಿನಿಧ್ಯ ಅಳವಡಿಸಿಕೊಳ್ಳುವುದು ಎಂಬ ಶ್ರೀ ಖಾಂಡೇಕರರ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ಸಲ್ಲಿಸಲಾದ ವರದಿಯಲ್ಲಿ ಕೂಡ ಸಂಖ್ಯೆಯ ನಮೂದು ಮಾಡಿಲ್ಲ. ಅಲ್ಲಿ ಬರೆದಿರುವುದೆಂದರೆ, "ಅವರ ಜನಸಂಖ್ಯೆಯ ಆಧಾರದ ಮೇರೆಗೆ," ಅಂದರೆ, ಅವರು ಅವರ ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ಪಡೆಯುವರು. ನಾನು ವರದಿಯನ್ನು ಬೆಂಬಲಿಸುತ್ತೇನೆ.]*

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಇದಕ್ಕೆ ಕೆಲವು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಒಂದು ಶ್ರೀ ಮುನ್ಷಿಯವರದು ಅದರಲ್ಲಿ ಶಬ್ದ 'ಅನುಸೂಚಿ' ಶಬ್ದ ನಂತರ ಅವರು "ಮತ್ತು ಇದರ ಬಗ್ಗೆ ಕಂಡಿಕೆ ೧ಎ ನಲ್ಲಿ ಉಲ್ಲೇಖಿಸಿರುವ ಹಿಂದೂ ಸಮುದಾಯದ ಪಂಗಡ" ಎಂದು ಹೇಳಬಯಸುತ್ತಾರೆ. ಇದನ್ನು ಸ್ಪಷ್ಟತೆಗಾಗಿ ಮಾತ್ರ ಉದ್ದೇಶಿಸಲಾಗಿದೆ ಮತ್ತು ಅದು ಗಣನೀಯವಾದ ಯಾವ ಬದಲಾವಣೆಯನ್ನೂ ಮಾಡಿಲ್ಲ. ಆದುದರಿಂದ ಆ ತಿದ್ದುಪಡಿಯನ್ನು ಒಪ್ಪಲು ನಾನು ಉದ್ದೇಶಿಸಿದ್ದೇನೆ.

ಶ್ರೀ ಖಾಂಡೇಕರ್‌ರವರ ತಿದ್ದುಪಡಿಗೆ ನಾವು ಒಪ್ಪಬೇಕಿಲ್ಲ ಎನಿಸುತ್ತದೆ. ಏಕೆಂದರೆ ಅನುಸೂಚಿತ ಜಾತಿಗಳಿಗೆ ವಿಶೇಷ ವಿನಾಯಿತಿ ಮಾಡುವುದು ಸೂಕ್ತವಲ್ಲ. ಏಕೆಂದರೆ, ಅನುಸೂಚಿತ ಜಾತಿಯವರಿಗೆ ಒಂದು ವಿಶೇಷ ಅಪವಾದವನ್ನು ಸೃಷ್ಟಿಸುವುದು ಸೂಕ್ತವಲ್ಲ. ಅವರ ಮೀಸಲಾತಿ ಒಂದು ಜನಗಣತಿಯ ಆಧಾರದ ಮೇಲೆ ಇರಬೇಕು. ಮಿಕ್ಕ ಅಲ್ಪಸಂಖ್ಯಾತರಿಗೆ ಬೇರೊಂದು ಜನಗಣತಿಯ ಆಧಾರದ ಮೇಲೆ ಮೀಸಲಾತಿಯನ್ನು ನಿರ್ಧರಿಸಿ ಪೃಥಕ್ಕರಿಸಿ ನಿರ್ಧರಿಸುವುದು ಸೂಕ್ತವಲ್ಲ. ಇದು ಅಸಮಾಧಾನ ಹುಟ್ಟಿಸುವ ಭೇದ. ಅವರು ಅದನ್ನು ಏಕೆ ಬಯಸುತ್ತಾರೆ ಎಂದು ನನಗೆ ತಿಳಿಯದಾಗಿದೆ. ಬಹುಶಃ ಅವರು ೧೯೩೧ರಲ್ಲಿ ಸೇರಿಸಲಾದ ಅನುಸೂಚಿತ ಜಾತಿಗಳಿಂದ ಕೆಲವರನ್ನು ಹೊರತುಪಡಿಸಲು ಬಯಸುತ್ತಾರೆ. ಈ ಹಂತದಲ್ಲಿ ಅದು ಸೂಕ್ತ ಎಂದು ನನಗೆ ಅನಿಸುವುದಿಲ್ಲ ನಾನು ಮಂಡಿಸಿದ ನಿರ್ಣಯದಲ್ಲಿ ಯಾವುದೇ ಜನಗಣತಿಯ ನಮೂದು ಇಲ್ಲ. ನಾವು 'ಅವರ ಜನಸಂಖ್ಯೆ ಆಧಾರ ಮೇರೆಗೆ' ಎಂದಷ್ಟೆ ಹೇಳಿದ್ದೇವೆ. ಆದುದರಿಂದ ಅದನ್ನು ಹಾಗೆಯೇ ಇಡಬೇಕು. ಯಾವುದೇ ಸಮುದಾಯಕ್ಕೆ ಯಾವ ಅನ್ಯಾಯವನ್ನು ಮಾಡಲಾಗುತ್ತಿಲ್ಲ ಮತ್ತು ಏಕರೂಪತೆಯು ಕೂಡ ಅಪೇಕ್ಷಣೀಯ ಮತ್ತು ಆವಶ್ಯಕ. ಬಳಿಕ ಶ್ರೀ ಸಂತಾನಮ್ ಒಂದು ತಿದ್ದುಪಡಿ ಮಂಡಿಸಿ ಎರಡೋ ಮೂರೋ ಸಲಹೆಗಳು ಮಾಡಿರುತ್ತಾರೆ. ಒಂದು ವಿವಿಧ ಶಾಸನಸಭೆಗಳಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ಕುರಿತು ಇದೆ. ಅವರು ಅದು 'ವಿವಿಧ ಶಾಸನಸಭೆಗಳು' ಎಂದು ಇರಬೇಕು ಎಂದು ಹೇಳುತ್ತಾರೆ ಆ ತಿದ್ದುಪಡಿ ಒಪ್ಪಲು ನನ್ನದೇನೂ ಆಕ್ಷೇಪಣೆ ಇಲ್ಲ.

ಅವರು ಖಂಡ ೩ರಲ್ಲಿ ಪೂರ್ವ ಪಂಜಾಬ್ ತೆಗೆಯಬೇಕು ಎಂಬ ಇನ್ನೊಂದು ಅಂಶ ಹೇಳಿದ್ದಾರೆ.

**ಶ್ರೀ ಕೆ. ಸಂತಾನಮ್ :** ಮತ್ತು ಪಶ್ಚಿಮ ಬಂಗಾಳ ಕೂಡಾ

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಅವನ್ನು ಖಂಡ ೩ರಲ್ಲಿ ನಿರ್ದಿಷ್ಟವಾಗಿ ತೆಗೆದು ಹಾಕಿರುವುದರಿಂದ ಆ ತಿದ್ದುಪಡಿಯನ್ನು ಒಪ್ಪುವ ಆವಶ್ಯಕತೆ ಇಲ್ಲ ಎಂದು ಎನಿಸುತ್ತದೆ.

ಅವರ ಮೂರನೆಯ ಸಲಹೆ ಎಂದರೆ ಒಂದು ಚುನಾವಣಾ ಕ್ಷೇತ್ರದಲ್ಲಿ ಒಂದು ಅಲ್ಪಸಂಖ್ಯಾತ ಸಮುದಾಯ ಬಹುಸಂಖ್ಯಾತದಲ್ಲಿದ್ದರೆ ಅಲ್ಲಿ ಮೀಸಲಿರಿಸಿದ ಸ್ಥಾನಗಳಿರಬೇಕು ಎಂಬ ಸಲಹೆ ಸೂಕ್ತವೆಂದು ನಾನು ಪರಿಗಣಿಸುವುದಿಲ್ಲ. ಸ್ಥಾನಗಳು ಜನಸಂಖ್ಯೆ ಆಧಾರದ ಮೇರೆಗೆ ಇಡಿಯಾಗಿ ಮೀಸಲಿರಿಸಿವೆ ಮತ್ತು ಒಂದು ನಿರ್ದಿಷ್ಟ ಚುನಾವಣೆ ಕ್ಷೇತ್ರದ ಮೇರೆಯಲ್ಲ. ಆದುದರಿಂದ ಅದನ್ನು ಒಪ್ಪಲು ನಾನು ಉದ್ದೇಶಿಲ್ಲ.

ಒಟ್ಟಾರೆ ನಾನು ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಹಾಗೂ ಶ್ರೀ ಸಂತಾನಮ್ ರವರ "ಶಾಸನಸಭೆಗಳು" ಪದಗಳನ್ನು ಸೇರಿಸುವ ಬಗ್ಗೆ ಸಲಹೆಯನ್ನು ಒಪ್ಪಲು ಉದ್ದೇಶಿಸಿದ್ದೇನೆ. ಸದನದ ಒಪ್ಪಿಗೆಗೆ ನಾನು ನಿರ್ಣಯವನ್ನು ಶಿಫಾರಸು ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ಸರ್ದಾರ್ ಪಟೇಲ್ ಒಪ್ಪಿರುವ ಮೊದಲನೆ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"೧೯೪೭ರ ಆಗಸ್ಟ್ ೨೫ರ ದಿನಾಂಕ ಪಟ್ಟಿ ೧ರಲ್ಲಿ ತಿದ್ದುಪಡಿ ಸಂಖ್ಯೆ ೧೯ರಲ್ಲಿ 'ಸ್ಥಾನ' ಎಂಬ ಶಬ್ದಕ್ಕೆ 'ಪ್ರಾತಿನಿಧ್ಯ' ಎಂಬ ಶಬ್ದವನ್ನು ಪ್ರತಿಯೋಜಿಸಬೇಕು. ಕೆಳಗಿನ ಶಬ್ದಗಳನ್ನು ಪ್ರತಿಯೋಜಿಸಬೇಕು:

'ಅನುಸೂಚಿ' ಶಬ್ದದ ಅನಂತರ ಮತ್ತು 'ಕಂಡಿಕೆ ೧ಎ ನಲ್ಲಿ ಇದರ ಬಗ್ಗೆ ಉಲ್ಲೇಖಿಸಿದ ಹಿಂದೂ ಸಮುದಾಯದ ಪಂಗಡ' ಎಂದು ಸೇರಿಸಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಎಚ್.ವಿ. ಕಾಮತ್ :** ಇದಕ್ಕೆ ಶ್ರೀ ಬಿ. ದಾಸ್ ರವರ ತಿದ್ದುಪಡಿ ಏನು?

**ಮಾನ್ಯ ಸಭಾಧ್ಯಕ್ಷರು :** ಅವರ ತಿದ್ದುಪಡಿಯು 'ಭಾರತದ ಸರ್ಕಾರ ಅಧಿನಿಯಮ, ೧೯೩೫' ಶಬ್ದಗಳಕ್ಕೆ 'ಒಕ್ಕೂಟ ಸಂವಿಧಾನ ಅಧಿನಿಯಮ' ಎಂಬ ಶಬ್ದಗಳನ್ನು ಪ್ರತಿಯೋಜಿಸಬೇಕು ಎಂದು ಇದೆ. ಇದು ಒಂದು ಶಾಬ್ದಿಕ ತಿದ್ದುಪಡಿ ಮತ್ತು ವಾಸ್ತವದಲ್ಲಿ ಕಾಯಿದೆಯ ಕರಡು ಬರೆಯುವಾಗ ಅದನ್ನು ಸರಿಯಾದ ರೀತಿಯಲ್ಲಿ ವಿವರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ. ಆದರೂ ಅವರು ಅದನ್ನು ಒತ್ತಾಯಿಸುತ್ತಾರೆಯೆ?

**ಶ್ರೀ ಎನ್. ಗೋಪಾಲ ಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ನೀವು 'ಒಕ್ಕೂಟ ಸಂವಿಧಾನ ಅಧಿನಿಯಮ' ಎಂದು ಹೇಳಲಾಗದು. ಈಗ ಇರುವಂತೆ ಅನುಸೂಚಿ ಇಲ್ಲ. ಸರಿಯಾದ ವಿವರಣೆ ಶ್ರೀ ಮುನ್ಷಿಯವರದು.

**ಮಾನ್ಯ ಸಭಾಧ್ಯಕ್ಷರು :** ಸದಸ್ಯರು ಇಲ್ಲಿ ಇಲ್ಲದಿರುವುದರಿಂದ ನಾನು ಈ ತಿದ್ದುಪಡಿಯನ್ನು ಸದನದ ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"೧೯೩೫ರ ಭಾರತ ಸರ್ಕಾರದ ಅಧಿನಿಯಮದ ಅನುಸೂಚಿ ೧ರಲ್ಲಿ ನೀಡಿದ ವ್ಯಾಖ್ಯೆಗೆ ಬದಲಾಗಿ ಒಕ್ಕೂಟ ಸಂವಿಧಾನ ಅಧಿನಿಯಮಕ್ಕೆ ಅನುಸೂಚಿಯಲ್ಲಿ ವ್ಯಾಖ್ಯೆ ನೀಡಬೇಕಾದ ಎಂಬ ಶಬ್ದಗಳು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿನದು ಶ್ರೀ ಖಾಂಡೇಕರ್ ರವರ ತಿದ್ದುಪಡಿ.

**ಶ್ರೀ ಆರ್. ಜೆ. ಖಾಂಡೇಕರ್ :** ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ.

ತಿದ್ದುಪಡಿಯನ್ನು ಸಭೆಯ ಅನುಮತಿಯಿಂದ ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿನದು ಶ್ರೀ ಮುನಿಸ್ವಾಮಿ ಪಿಳ್ಳೈ ಅವರ ತಿದ್ದುಪಡಿ ಅದು 'ಹತ್ತು ವರ್ಷಗಳು' ಪದಕ್ಕೆ ಬದಲಾಗಿ '೧೨ ವರ್ಷಗಳು' ಎಂದು ಪ್ರತಿಯೋಜಿಸಬೇಕು.

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ :** ನಾನು ಅದನ್ನು ಹಿಂತೆಗೆದುಕೊಂಡಿದ್ದೇನೆ.

ಸಭೆಯ ಅನುಮತಿಯಿಂದ ಈ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

"ತಿದ್ದುಪಡಿ ಮಾಡಿದ ಎರಡು ನಿಬಂಧನೆಗಳನ್ನು ಅಂಗೀಕರಿಸಬೇಕಿದೆ."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ ನಾವು ಅನುಸೂಚಿಯನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಕಂಡಿಕೆ ೧ರ ಅಡಿ ಹಾಕಲಾದ ಅನುಸೂಚಿಯನ್ನು ಸದನದ ಸಮ್ಮತಿಗೆ ನಾನು ಮಂಡಿಸುತ್ತಿದ್ದೇನೆ, ಮಾಡುವಲ್ಲಿ ಮೊದಲು ಅದನ್ನು ಓದುತ್ತೇನೆ.

**ಅನುಸೂಚಿ**

ಸಮೂಹ: ಎ: ರಾಜ್ಯಗಳನ್ನು ಬಿಟ್ಟು ಭಾರತೀಯ ಆಧಿಪತ್ಯದಲ್ಲಿ ಶೇ.½ಕ್ಕಿಂತ ಕಡಿಮೆ ಜನಸಂಖ್ಯೆ.

೧. ಆಂಗ್ಲೋ ಇಂಡಿಯನ್ನರು.

೨. ಪಾರಸಿಕರು.

೩. ಅಸ್ಸಾಮಿನಲ್ಲಿ ಬಯಲು ಪ್ರದೇಶ ಬುಡಕಟ್ಟುಜನ (ಚಹಾ ತೋಟದ ಬುಡಕಟ್ಟು ಜನರಲ್ಲಿದೆ).

ಬಿ: ಜನಸಂಖ್ಯೆ ಶೇ. ೧ ಮತ್ತು ½ಕ್ಕಿಂತ ಹೆಚ್ಚಿಲ್ಲದವರು–

೪. ಭಾರತೀಯ ಕ್ರೈಸ್ತರು.

೫. ಸಿಖ್ಖರು.

ಸಿ: ಜನಸಂಖ್ಯೆ ಶೇ. ೧ ಮತ್ತು ½ ಮೀರಿ–

೬. ಮುಸ್ಲಿಮರು.

೭. ಅನುಸೂಚಿತ ಜಾತಿಗಳು.

ಅನುಸೂಚಿಯು ಸಮುದಾಯಗಳ ಸಂಖ್ಯೆ ಆಧಾರದ ಮೇರೆಗೆ ಪ್ರಸ್ತುತ ಉಪಬಂಧಗಳು ಮುಂದಿನ ಪಂಗಡಗಳಿಗೆ ಹೊಂದುವಂತೆ ಇದೆ. ಆದುದರಿಂದ ಇದೊಂದು ಔಪಚಾರಿಕ ವಿಷಯವಷ್ಟೆ. ಇದರ ಬಗೆಗೆ ಯಾವುದೇ ವಿವಾದವಿಲ್ಲ. ಆದುದರಿಂದ ನಾನು ಈ ಅನುಸೂಚಿಯನ್ನು ಅಂಗೀಕಾರಕ್ಕೆ ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇದಕ್ಕೆ ಒಂದೇ ಒಂದು ತಿದ್ದುಪಡಿ ಇದೆ ಮತ್ತು ಅದು ಪ್ರೊ. ಶಿಬನ್‌ಲಾಲ್ ಸಕ್ಸೇನರಿಂದ ಆಗಿದೆ. ಅದು ಇದೀಗ ತಾನೆ ನಾವು ಅಂಗೀಕರಿಸಿದ ತಿದ್ದುಪಡಿಯಿಂದ ಒಳಗೊಂಡಿದೆ. ಆದರೆ ಅದನ್ನು ಔಪಚಾರಿಕವಾಗಿ ಕೈಬಿಡಬೇಕಿದೆ. ಆದುದರಿಂದ ಅವರು ಅದನ್ನು ಮಂಡಿಸಬಹುದು..

**ಪ್ರೊ. ಶಿಬನ್‌ಲಾಲ್ ಸಕ್ಸೇನ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿ ಸಂಖ್ಯೆ ೮೫. ಅದು ಅನುಸೂಚಿಯಿಂದ ಅನುಸೂಚಿತ ಜಾತಿಗಳನ್ನು ಕೈಬಿಡಬೇಕು ಎಂದು ಹೇಳುತ್ತದೆ. ಈ ತಿದ್ದುಪಡಿಯ ಉದ್ದೇಶವು ಅನುಸೂಚಿತ ಜಾತಿಗಳನ್ನು ಪ್ರತ್ಯೇಕ ಅಲ್ಪಸಂಖ್ಯಾತ ಎಂದು ವರ್ಗೀಕರಿಸಬಾರದು, ಆದರೆ ಹಿಂದೂ ಸಮುದಾಯದ ಒಂದು ಸಮಗ್ರ ಭಾಗವಾಗಿ ನೋಡಬೇಕು. ನನ್ನ ತಿದ್ದುಪಡಿ ಹೀಗಿದೆ:

"ಕಂಡಿಕೆ ೧೭ರ ಅನುಸೂಚಿಯ ವರ್ಗ ಸಿ ಇಂದ ಶಬ್ದಗಳು '೭ ಅನುಸೂಚಿತ ಜಾತಿಗಳು' ಎಂಬುದನ್ನು ತೆಗೆದು ಹಾಕಬೇಕು."

ಒಂದು ಮುಖ್ಯ ಘೋಷಣೆಯತ್ತ ಸಭೆಯ ಗಮನ ಸೆಳೆಯಲು ಇಚ್ಛಿಸುತ್ತೇನೆ, ಅದು ಹೀಗಿದೆ. ಶ್ರೀ ಜಿನ್ನಾರವರು ಆಗಿಂದಾಗ್ಗೆ ಅಲ್ಪಸಂಖ್ಯಾತರಲ್ಲಿ ಅನುಸೂಚಿತ ಜಾತಿಗಳನ್ನು ಸೇರಿಸಲು ಯತ್ನಿಸುತ್ತಿದ್ದರು ಎಂಬುದನ್ನು ನೆನಪು ಮಾಡಿಕೊಳ್ಳಲಾಗುತ್ತದೆ ಮತ್ತು ೧೯೪೬ರ ಜೂನ್ ೨೬ರಂದು ಮೌಲಾನಾ ಅಬುಲ್ ಕಲಾಂ ಆಜಾದ್ ಲಾರ್ಡ್ ವೇವೆಲ್‌ರಿಗೆ ಬರೆದ ಒಂದು ಪತ್ರಕ್ಕೆ ವೇವೆಲ್‌ರು ತಮ್ಮ ಉತ್ತರದಲ್ಲಿ ಹೇಳಿದುದು ಹೀಗೆ ವರದಿಯಾಗಿದೆ:

"............ಅಲ್ಪಸಂಖ್ಯಾತರಿಗೆ ಹಂಚಿಕೆಯಾದ ಸ್ಥಾನಗಳ ಪೈಕಿ ಯಾವುದಾದರೂ ಖಾಲಿಯಾದರೆ, ಆ ಜಾಗ ತುಂಬುವ ಮುನ್ನ ನಾನು ಸಹಜವಾಗಿ ಎರಡೂ ಮುಖ್ಯ ಪಕ್ಷಗಳೊಡನೆ ಸಮಾಲೋಚಿಸುತ್ತೇನೆ"

ಶ್ರೀ ಜಿನ್ನಾ ಹೀಗೆ ಅಲ್ಪಸಂಖ್ಯಾತರ ನಡುವೆ ಅನುಸೂಚಿತ ಜಾತಿಗಳನ್ನು ಸೇರಿಸಿದರು. ಆದರೆ ನಮಗೆ ಸಂಬಂಧಿಸಿದಂತೆ ನಾವು ಅನುಸೂಚಿತ ಜಾತಿಗಳು ಹಿಂದೂಗಳಿಗೆ ಸೇರಿದವರೆಂದೂ ಅವರು ಒಂದು ಅಲ್ಪಸಂಖ್ಯಾತರಲ್ಲವೆಂದೂ, ಅವರೂ ಕೂಡ ಯಾವಾಗಲೂ ನಮ್ಮ ಭಾಗವಾಗಿ ರೂಪುಗೊಂಡವರೆಂದೂ ಪರಿಗಣಿಸುತ್ತೇವೆ. ನನ್ನ ಉದ್ದೇಶವನ್ನು ಪೂರೈಸುವ ತಮ್ಮ ತಿದ್ದುಪಡಿಯನ್ನು ಶ್ರೀ ಮುನ್ಷಿಯವರು ತಂದುದಕ್ಕೆ

ನಾನು ಹರ್ಷಿಸುತ್ತೇನೆ ಮತ್ತು ಹಾಗಾಗಿ ನಾನು ನನ್ನ ತಿದ್ದುಪಡಿಯನ್ನು ಅವರ ಪರವಾಗಿ ಹಿಂದಕ್ಕೆ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯರೆ, ಪ್ರೊ. ಶಿಬನ್‌ಲಾಲ್ ಸಕ್ಸೇನರಿಂದ ತಿದ್ದುಪಡಿ ಸಂಖ್ಯೆ ೮೫ ಮಂಡನೆಯಾಗಿರುವುದರಿಂದ, ನಾನು ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಮಂಡಿಸುತ್ತೇನೆ:

"ಪಟ್ಟಿ ೩ರ ತಿದ್ದುಪಡಿ ಸಂಖ್ಯೆ ೮೫ ದಿನಾಂಕ ೨೬ನೇ ಆಗಸ್ಟ್ ೧೯೪೭ರಲ್ಲಿ ಶಬ್ದಗಳು '೭ ಅನುಸೂಚಿತ ಜಾತಿಗಳು' ಎಂಬುದನ್ನು ತೆಗೆದುಹಾಕಿ ಕೆಳಗಿನ ಕಂಡಿಕೆಯನ್ನು ಕಂಡಿಕೆಯ ನಂತರ ಸೇರಿಸಬೇಕು–

'೧–ಎ. ೧೯೩೫ರ ಭಾರತ ಸರ್ಕಾರದ ಅಧಿನಿಯಮದ ಅನುಸೂಚಿಯಲ್ಲಿ ವಿವರಿಸಿದಂತೆ ಅನುಸೂಚಿತ ಜಾತಿಗಳು ಎಂದು ಉಲ್ಲೇಖಿಸಿದ ಹಿಂದೂ ಸಮುದಾಯದ ಭಾಗವು ಕಂಡಿಕೆ ೧ಕ್ಕೆ ಅನುಸೂಚಿಯಲ್ಲಿ ನಮೂದಿಸಲಾದ ಅಲ್ಪಸಂಖ್ಯಾತರಿಗೆ ಒದಗಿಸಿದ ಅದೇ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಹೊಂದಿರುವರು.'"

**ಶ್ರೀ ಲಕ್ಷ್ಮೀನಾರಾಯಣ ಸಾಹು** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ಈ ಅನುಸೂಚಿ ಕುರಿತಂತೆ ನಾನು ಆದಿವಾಸಿಗಳ ಬಗೆಗೆ ಒಂದು ವಿಷಯ ಹೇಳಲು ಇಚ್ಛಿಸುತ್ತೇನೆ. ಈ ಅನುಸೂಚಿಯಲ್ಲಿ ಆದಿವಾಸಿಗಳೂ ಕೂಡ ಒಂದು ಜಾಗ ಕಂಡುಕೊಳ್ಳುವಂತೆ ಇಲ್ಲಿ ಏನಾದರೂ ಉಪಬಂಧ ಇರಬೇಕು. ನಿಜಾಂಶ ಎಂದರೆ ಎರಡೂವರೆ ಕೋಟಿ ಆದಿವಾಸಿಗಳು.......

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಆದಿವಾಸಿಗಳು ಮತ್ತು ಇತರ ಬುಡಕಟ್ಟುಗಳ ಪ್ರಶ್ನೆ ಕುರಿತಂತೆ ಒಂದು ಪ್ರತ್ಯೇಕ ಸಮಿತಿಯು ಇದ್ದು ಅದರ ವರದಿಯು ಬರುತ್ತದೆ–ನಾವು ವರದಿಯನ್ನು ಪರಿಗಣಿಸಿದಾಗ ಈ ಪ್ರಶ್ನೆ ಕುರಿತಂತೆ ಗಮನಿಸಲಾಗುತ್ತಿದೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** : ಆದರೆ ನಾವು ಇಲ್ಲಿ ಏನಾದರೂ ಅವಕಾಶ ಮಾಡಲಾಗುವುದಿಲ್ಲವೆ?

**ಮಾನ್ಯ ಸಭಾಧ್ಯಕ್ಷರು** : ಆದಿವಾಸಿಗಳು ಮತ್ತು ಇತರ ಬುಡಕಟ್ಟುಗಳಿಗೆ ಒಂದು ಪ್ರತ್ಯೇಕ ಸಮಿತಿ ನೇಮಕ ಮಾಡಲಾಗಿದೆ ಮತ್ತು ಆ ಸಮಿತಿಯ ವರದಿಯಲ್ಲಿ ಏನಾದರೂ ಅಂತಹ ಶಿಫಾರಸ್ಸು ಇದ್ದರೆ ಆಗ ಆ ವರದಿಯನ್ನು ಪರಿಗಣಿಸುವಾಗ ನಾವು ಅದನ್ನು ಗಮನಿಸಲು ಎತ್ತಿಕೊಳ್ಳಲಾಗುತ್ತದೆ.

**ಶ್ರೀ ಜೈಪಾಲ್ ಸಿಂಗ್** : ಮಾನ್ಯರೆ, ಸಮಿತಿಗಳ ಅಂತಿಮ ವರದಿ ಸ್ವೀಕರಿಸುವ ವರೆಗೆ "ಎ–೩ ಅಸ್ಸಾಮ್ ನಲ್ಲಿ ಬಯಲು ಪ್ರದೇಶಗಳ ಬುಡಕಟ್ಟು ಜನ" ಕುರಿತ ವಿಷಯ ಬಾಬನ್ನು ಬಿಟ್ಟಿರಬೇಕು ಎಂಬುದು ಅಭಿಪ್ರಾಯವಾಗಿರಲಿಲ್ಲವೆ ಎಂದು ತಿಳಿಯಲು ನಾನು ಬಯಸುವೆ. ಎ–೩ ಬಾಬನ್ನು ಚರ್ಚಿಸದಿರಲು ಸಲಹಾ ಸಮಿತಿಯಲ್ಲಿ ಇದನ್ನು ನಿರ್ಧರಿಸಲಾಗಿತ್ತು ಎಂದು ನಾನು ತಿಳಿದಿದ್ದೆ. ಆದರೆ ಇಲ್ಲಿ ವಿಷಯ ಸೇರಿಸಬೇಕು ಎಂದು ನಾನು ಭಾವಿಸಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ತಾವು ಏನು ಹೇಳಿದಿರೊ ಅದನ್ನು ತಿಳಿಯಲು ನನ್ನಿಂದ ಆಗುತ್ತಿಲ್ಲ.

**ಶ್ರೀ ಜೈಪಾಲ್ ಸಿಂಗ್** : ಸಮಿತಿಯ ವರದಿಯು ನಾಳೆ ಅಪರಾಹ್ನಕ್ಕೆ ಮೊದಲೇ ನಮ್ಮ ಮುಂದೆ ಇರುತ್ತದೆ. ಅದನ್ನು ಉಳಿಸಿಕೊಂಡು ಈ ಬಾಬು ಎ–೩ನ್ನು ಮಾತ್ರ ಬಿಟ್ಟಿರಬಹುದು ಎಂದು ಸಲಹೆ ಮಾಡುತ್ತೇನೆ ಹಾಗೂ ವಾಕ್ಯ ರಚನೆಯನ್ನು ಮುಟ್ಟಬಾರದು. ಈಗ ಚರ್ಚಿಸಬಾರದು. ಆ ಕುರಿತು ಅನಂತರ ಅಂದರೆ ನಾಳೆ ನಾವು ನೋಡೋಣ.

**ಮಾನ್ಯ ಸಭಾಧ್ಯಕ್ಷರು** : ಆದುದರಿಂದ ನೀವು 'ಎ–೩ 'ಅಸ್ಸಾಮಿನಲ್ಲಿ ಬಯಲು ಪ್ರದೇಶದ ಬುಡಕಟ್ಟು ಜನ' ಇದನ್ನು ಪಟ್ಟಿಯಿಂದ ತೆಗೆದುಬಿಡಿ ಎಂದು ಹೇಳುತ್ತಿದ್ದೀರಿ.

**ಶ್ರೀ ಜೈಪಾಲ್ ಸಿಂಗ್** : ಹೌದು ಈಗ ತೆಗೆದುಹಾಕಿದರೆ. ನಾಳೆ ವಾಕ್ಯರಚನೆ ಕುರಿತು ನಿರ್ಧರಿಸುವುದಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಅದು ಬುಡಕಟ್ಟು ಜನರ ಸಮಿತಿಯ ವರದಿ ಬಂದಾಗ ಚರ್ಚೆಗೆ ಬರಲಿದೆ. ಸದ್ಯ, ಅವನ್ನು ಅಷ್ಟಕ್ಕೇ ಬಿಡಲಾಗಿದೆ.

**ಗೌರವಾನ್ವಿತ ಶ್ರೀಯುತ ಗೋಪಿನಾಥ್ ಬರ್ಡೋಲೋಯಿ** (ಅಸ್ಸಾಮ್ : ಸಾಮಾನ್ಯ) : ಮಾನ್ಯರೆ, ಶ್ರೀ ಜೈಪಾಲ್ ಸಿಂಗ್ ಒಂದು ತಪ್ಪು ಮಾಡುತ್ತಿದ್ದಾರೆ ಎಂದು ನನಗೆ ಆತಂಕವಾಗುತ್ತಿದೆ. ಅಸ್ಸಾಮ್‌ನಲ್ಲಿ ಬಯಲುಪ್ರದೇಶದ ಬುಡಕಟ್ಟು ಜನರನ್ನು ಒಂದು ಅಲ್ಪಸಂಖ್ಯಾತ ಎಂಬ ಗುರುತಿಸಬೇಕೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಅದು ಅಲ್ಪಸಂಖ್ಯಾತ ಸಮಿತಿಯಿಂದ ನಿರ್ಧರಿಸಲಾಗಿದೆ ಮತ್ತು ಅದನ್ನೆ ನಾವೀಗ ಪರಿಶೀಲಿಸುತ್ತಿದ್ದೇವೆ. ಆದರೆ ಅವರಿಗೆ ಕೊಡಬೇಕಾಗಿರುವ ಯಾವೆಲ್ಲ ರಿಯಾಯಿತಿಗಳು ಬಿಟ್ಟುಹೋಗಿವೆಯೋ ಅವನ್ನು ಗಮನಿಸಲು ಸಲಹಾ ಸಮಿತಿಯಿಂದ ವರದಿ ಸ್ವೀಕರಿಸಬೇಕಿದೆ ಮತ್ತು ಆ ವರದಿಯು ನಾಳೆ ಅಥವಾ ಕೆಲ ಸಮಯದ ಅನಂತರ ನಮ್ಮ ಮುಂದೆ ಬರುತ್ತಿದೆ.

**ಶ್ರೀಯುತ ಓಮಿಯೋ ಕುಮಾರ್ ದಾಸ್** (ಅಸ್ಸಾಮ್ : ಸಾಮಾನ್ಯ) : ಮಾನ್ಯರೆ, ನಾನು ತಿದ್ದುಪಡಿ ಸಂಖ್ಯೆ ೫೭ ಪ್ರಸ್ತಾವಿಸಲಿದ್ದು ಅದು ಹೀಗಿದೆ :

"ಪ್ಯಾರಾ ೧೭ರ ಅನುಸೂಚಿಯಲ್ಲಿ 'ಅಸ್ಸಾಂನ ಬಯಲು ಪ್ರದೇಶದ ಬುಡಕಟ್ಟು ಜನ' ಶಬ್ದಗಳಿಗೆ 'ಚಹಾ ತೋಟದ ಬುಡಕಟ್ಟುಗಳನ್ನು' ಹೊರತು ಪಡಿಸಿ ಅಸ್ಸಾಮ್‌ನ ಬಯಲು ಪ್ರದೇಶದ ಬುಡಕಟ್ಟು ಜನ' ಎಂಬ ಶಬ್ದಗಳನ್ನು ಪ್ರತಿಯೋಜಿಸಬೇಕು."

ಇದನ್ನು ಈಗ ನಾನು ಮಂಡಿಸಬೇಕೆ ಅಥವಾ ಇದು ಈಗಾಗಲೇ ಸಮ್ಮತಿ ಪಡೆದಿದೆ ಎಂದು ತಿಳಿಯಬೇಕೆ?

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : " 'ಅಸ್ಸಾಂನ ಬಯಲು ಪ್ರದೇಶದ ಬುಡಕಟ್ಟು ಜನರು' ಶಬ್ದಗಳಿಗೆ ಬದಲಾಗಿ 'ಚಹಾ ತೋಟದ ಬುಡಕಟ್ಟುಗಳನ್ನು ಹೊರತು ಪಡಿಸಿ ಅಸ್ಸಾಮ್‌ನ ಬಯಲು ಪ್ರದೇಶದ ಬುಡಕಟ್ಟು ಜನ' ಎಂದು ಬದಲಿಸಲಾಗಿದೆ" ಎಂಬುದನ್ನು ಸಮ್ಮತಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು** : ಹೌದು ಅವರು ಅದನ್ನು ಒಪ್ಪಿರುತ್ತಾರೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** : ಒಮ್ಮೆ ಅದು ಸೇರಿದೆ ಎಂದರೆ ಅನುಸೂಚಿಯಲ್ಲಿ ಆದಿವಾಸಿಗಳನ್ನು ಕೂಡ ಸೇರಿಸಬೇಕು ಎಂದು ನಾನು ಹೇಳಬಾರದೆ? ಮಾನ್ಯರೆ, ಒರಿಸ್ಸಾದ ಗುಡ್ಡಗಾಡಿನ ಬುಡಕಟ್ಟುಗಳು ಹದಿನೈದು ಲಕ್ಷ ಸಂಖ್ಯೆ. ಒಟ್ಟು ಜನಸಂಖ್ಯೆಯ ಆರನೆಯ ಒಂದು ಭಾಗ.

**ಮಾನ್ಯ ಸಭಾಧ್ಯಕ್ಷರು** : ಆದರೆ ನೀವು ಅಂತಹ ಯಾವುದೇ ತಿದ್ದುಪಡಿಯ ಸೂಚನೆ ಕೊಟ್ಟಿಲ್ಲ. ಬಹುಶಃ ಪ್ರತಿಯೊಬ್ಬರೂ ನೇಮಕ ಮಾಡಲಾಗಿರುವ ಉಪಸಮಿತಿಯ ವರದಿಯೊಂದಿಗೆ ಈ ವಿಷಯ ಹೇಗೇ ಆಗಲಿ ಬರುವುದೆಂದು ಆಲೋಚಿಸಿರಬಹುದು. ಆದುದರಿಂದ ಈ ವಿಷಯದ ಬಗೆಗೆ ಯಾರೊಬ್ಬರೂ ಯಾವುದೇ ತಿದ್ದುಪಡಿಯ ಸೂಚನೆ ಕೊಟ್ಟಿರುವುದಿಲ್ಲ. ನಾನು ಇದನ್ನು ಉಪಸಮಿತಿಯ ಶಿಫಾರಸುಗಳನ್ನು ಸ್ವೀಕರಿಸಿದಾಗ ತೆಗೆದುಕೊಳ್ಳುತ್ತೇವೆ ಮತ್ತು ಇಲ್ಲಿ ನಿರ್ಧರಿಸಲಾದುದಕ್ಕೆ ಅದು ವ್ಯತಿರಿಕ್ತವಾಗದೆ ಹೋದರೆ, ಅಷ್ಟರಮಟ್ಟಿಗೆ ಅದು ಒಂದು ತಿದ್ದುಪಡಿಯಾಗುತ್ತದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಉಪಸಮಿತಿಯ ವರದಿ ಬಂದಾಗ ಆ ವರದಿಗನುಗುಣವಾಗಿ ಬುಡಕಟ್ಟು ಜನರ ರಕ್ಷಣೆಗಳನ್ನು ಸೇರಿಸಲಾಗುತ್ತದೆ. ಇಲ್ಲಿ ನಾವು ಅವರ ಸಂಖ್ಯೆಗನುಗುಣವಾಗಿ ಅಲ್ಪಸಂಖ್ಯಾತರ ವಿವಿಧ ವರ್ಗಗಳ ಒಂದು ಪಟ್ಟಿ ಹೊಂದಿರುತ್ತೇವೆ. ಆದುದರಿಂದ ಅನುಸೂಚಿಗೆ ಸಂಬಂಧಿಸಿದಂತೆ ಶಂಕಿಸಲು ಕಾರಣವಿಲ್ಲ. ಉಪಸಮಿತಿಯು ಶಿಫಾರಸ್ಸು ಮಾಡುವ ರಕ್ಷಣೆಗಳನ್ನು ಒದಗಿಸಲಾಗುತ್ತದೆ.

**ಶ್ರೀ ಜೈಪಾಲ್ ಸಿಂಗ್** : ಮಾನ್ಯರೆ, ಒಂದು ಕ್ರಿಯಾಲೋಪ, ನಾವೀಗ ಅಲ್ಪಸಂಖ್ಯಾತರ ಪ್ರಶ್ನೆಯನ್ನು ಕುರಿತು ಚರ್ಚಿಸುತ್ತಿದ್ದೇವೆ. ಈ ವರದಿಯನ್ನು ಸಲಹಾ ಸಮಿತಿ ಕಳುಹಿಸಿದೆಯೆ ಅಥವಾ ಅಲ್ಪಸಂಖ್ಯಾತರ ಸಮಿತಿ ಕಳುಹಿಸಿರುವುದೆ, ತಿಳಿಯಬಹುದೆ? ಅಥವಾ ಸದಸ್ಯರೆ ಯುಕ್ತವಾಗಿ ಕಳುಹಿಸಿರುವುದೆ? ಈ ನಿರ್ದಿಷ್ಟ

ಬಾಬನ್ನು ಹಿಡಿದಿಟ್ಟುಕೊಳ್ಳಲಾಗಿತ್ತು. ಬುಡಕಟ್ಟು ಜನಾಂಗದ ಸಮಿತಿಗಳ ವರದಿಗಳು ಬರುವವರೆಗೆ, ಇದನ್ನು ಚರ್ಚೆಗೆ ತೆಗೆದುಕೊಳ್ಳಬಾರದೆಂಬುದಾಗಿ ಒಪ್ಪಿಗೆಯಾಗಿತ್ತು.

**ಶ್ರೀ ಕೆ.ಎಮ್. ಮುನ್ಷಿ** : ಇದರ ಬಗೆಗೆ ನಾನೊಂದು ಮಾತು ಹೇಳಲೇ? ಈ ವಿಷಯ ಕುರಿತಂತೆ ತುಸು ಗೊಂದಲವಿರುವಂತೆ ತೋರುತ್ತದೆ. ನೀವು ವರದಿಯನ್ನೆ ನೋಡಿದರೆ, ಸ್ಥಿತಿ ಸ್ಪಷ್ಟವಾಗುತ್ತದೆ. ವರದಿಯ ೮ನೇ ಕಂಡಿಕೆಯಲ್ಲಿ "ಈ ಬುಡಕಟ್ಟು ಜನರ ವಿಷಯವನ್ನು, ಹೊರತು ಪಡಿಸಿದ ಮತ್ತು ಭಾಗಶಃ ಹೊರತು ಪಡಿಸಿದ ಪ್ರದೇಶಗಳ ಉಪಸಮಿತಿಯ ವರದಿಯನ್ನು ಸ್ವೀಕರಿಸಿದ ಅನಂತರ ಎತ್ತಿಕೊಳ್ಳಲಾಗುವುದು" ಎಂದು ಹೇಳಲಾಗಿದೆ, ಆದರೆ ಅದೇ ಸಮಯಕ್ಕೆ ಕಂಡಿಕೆ ೫ ನೋಡಿ, ಅದು ಕೆಲವು ಹಕ್ಕುಗಳಿಗೆ ಅರ್ಹರಾಗುವಂತೆ ಮಾಡಲಾಗುವ ಅಲ್ಪಸಂಖ್ಯಾತರ ಪಟ್ಟಿ ಮಾಡಿದೆ. ಆದುದರಿಂದ ವರ್ಗ 'ಎ' ನಲ್ಲಿ 'ಅಸ್ಸಾಮ್‌ನಲ್ಲಿ ಬಯಲು ಪ್ರದೇಶ ಬುಡಕಟ್ಟು ಜನ' ಎಂಬ ಶಬ್ದಗಳನ್ನು ಕಾಣುವಿರಿ. ಆದುದರಿಂದ, ಅನುಸೂಚಿಯಲ್ಲಿ ಮುಂದೂಡಲ್ಪಟ್ಟಿದ್ದು ಬಯಲು ಪ್ರದೇಶದ ಬುಡಕಟ್ಟು ಜನ ಎಂಬುದರ ಸೇರ್ಪಡೆಯಲ್ಲ; ಆದರೆ ರಕ್ಷಣೆಗಳು ಎಂಬುದು. ಅದನ್ನು ಸದನವು ಈ ಹೊರತು ಪಡಿಸಿದ ಪ್ರದೇಶಗಳ ಸಮಿತಿ ವರದಿ ಸ್ವೀಕರಿಸಿದ ಅನಂತರ ವಿಸ್ತರಿಸಬೇಕು ಇಲ್ಲವೇ ಬದಲಿಸಬೇಕು, ಈಗ ಮಾಡಬೇಕಾದ್ದು ಏನು ಎಂದರೆ 'ಅಸ್ಸಾಮ್‌ನಲ್ಲಿ ಬಯಲು ಪ್ರದೇಶದ ಬುಡಕಟ್ಟು ಜನ ಎಂಬುದನ್ನು ಸೇರಿಸಿ' ಅನುಸೂಚಿಯನ್ನು ಪೂರಯಿಸಬೇಕು. ರಕ್ಷಣೆಗಳೇನು ಇರಬೇಕು ಎಂಬುದನ್ನು ಅದು ನಿರ್ಧರಿಸುವುದಾದರೆ ಅದು ನಿರ್ಬಂಧವಲ್ಲ. ಅದು ವಾಸ್ತವ – ಯಾವುದೂ ಅಸಂಗತವಲ್ಲ.

**ಗೌರವಾನ್ವಿತ ರೆವರೆಂಡ್ ಜೆ.ಜೆ.ಎಂ. ನಿಕೊಲಸ್ ರಾಯ್** (ಅಸ್ಸಾಮ್ : ಸಾಮಾನ್ಯ) : ನಾನು ಸ್ಪಷ್ಟನೆಗಾಗಿ ಒಂದು ಪ್ರಶ್ನೆ ಕೇಳಬಯಸುತ್ತೇನೆ, ವರ್ಗ ಎ ನಲ್ಲಿ, ೩ನೇ ಬಾಬಿನಲ್ಲಿ 'ತೋಟ ಬುಡಕಟ್ಟುಗಳು ಬಿಟ್ಟು ಅಸ್ಸಾಂನಲ್ಲಿ ಬಯಲು ಪ್ರದೇಶ ಬುಡಕಟ್ಟುಗಳು' ಎಂದು ಹೇಳಿದೆ. 'ತೋಟ ಬುಡಕಟ್ಟುಗಳು ಬಿಟ್ಟು' ಎಂಬ ಶಬ್ದ ಅಸ್ಸಾಮಿನಲ್ಲಿ ಭೂಮಿ ಮತ್ತು ಆಸ್ತಿ ಹೊಂದಿ ವಾಸ್ತವ್ಯ ಹೂಡಿದ ಆ ಬುಡಕಟ್ಟು ಜನರಲ್ಲವೆಂದೂ ತೋಟಗಳಲ್ಲಿ ಒಂದು ಕಾರ್ಮಿಕ ಸಮುದಾಯವಾಗಿ ಕೆಲಸ ಮಾಡುತ್ತಿರುವ ತೋಟದ ಜನ ಎಂದೂ ಅರ್ಥಮಾಡಿಕೊಂಡಿದ್ದೇನೆ ಇದೇ ಅದರ ಅರ್ಥವೇ?

**ಮಾನ್ಯ ಸಭಾಧ್ಯಕ್ಷರು** : ಅದೇ ಅರ್ಥ ಎಂದು ನಾನು ತಿಳಿದಿದ್ದೇನೆ.

**ಡಾ. ಪಿ.ಎಸ್. ದೇಶಮುಖ್** : ನನ್ನ ಹೆಸರಿನಲ್ಲಿ ಒಂದು ತಿದ್ದುಪಡಿ ಕೆಳಗೆಕಂಡಂತೆ ಇದೆ.

"ಕಂಡಿಕೆ ೧೮ರ ಅನುಸೂಚಿಗೆ ಕೆಳಗಿನದನ್ನು ಸೇರಿಸಬೇಕು:

'ವರ್ಗ ಡಿ–ವಿವಿಧ ಪ್ರಾಂತ್ಯಗಳಲ್ಲಿ ಶೈಕ್ಷಣಿಕವಾಗಿ ಮುನ್ನಡೆ ಸಾಧಿಸಿದ ಮತ್ತು ಸಿರಿವಂತ ಅಲ್ಪಸಂಖ್ಯಾತ ಜಾತಿಗಳು ಮತ್ತು ಸಮುದಾಯಗಳು.

ಟಿಪ್ಪಣಿ ೧–ಈ ಅಲ್ಪಸಂಖ್ಯಾತರಿಗೆ ಸೇರಿದ ವ್ಯಕ್ತಿಗಳಿಗೆ, ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಹಕ್ಕು ಇಲ್ಲ ಎಂದು ಉಪಬಂಧಿಸತಕ್ಕದು.

ಟಿಪ್ಪಣಿ ೨–ಈ ಅಲ್ಪಸಂಖ್ಯಾತರ ಒಂದು ಪಟ್ಟಿ ಹಾಲಿ ಪ್ರಾಂತ್ಯಗಳ ಪ್ರತಿ ಶಾಸನಸಭೆ ನಿರ್ಧರಿಸಿದಂತೆ ಇರತಕ್ಕದ್ದು."

ನನ್ನ ತಿದ್ದುಪಡಿಯ ಮುಖ್ಯ ಉದ್ದೇಶ, ಬಹು ಸಣ್ಣ ಅಲ್ಪಸಂಖ್ಯಾತರ ಅಂದರೆ ಒಮ್ಮೆ ವಯಸ್ಕರ ಮತದಾನ ಪದ್ಧತಿ ಜಾರಿಗೊಂಡ ಬಳಿಕ ತಮ್ಮ ಸ್ವಂತಿಕೆ ಕಾಯ್ದುಕೊಳ್ಳಲು ಯಾರಿಗೆ ಕಷ್ಟಕ್ಕೆ ಈಡಾಗುವರೋ ಅಂಥವರ ಹಿತಾಸಕ್ತಿ ಕಾಪಾಡುವುದಾಗಿದೆ. ಅಂದರೆ ನನ್ನ ಅರ್ಥ ಹೆಚ್ಚು ವಿದ್ಯಾವಂತ ಜಾತಿ ಮತ್ತು ಇಡೀ ದೇಶದ ಸಿರಿಯ ಬಹುಭಾಗವನ್ನೂ ಸ್ವಂತವಾಗಿಸಿಕೊಂಡಿರುವ ಜಾತಿಗಳು ಮತ್ತು ಸಮುದಾಯಗಳು, ಪ್ರಸ್ತುತ ಅವರಿಬ್ಬರು ಬಹುಶಕ್ತರು. ಮೊದಲನೆಯವರು, ಸರ್ಕಾರಿ ಸೇವೆಗಳು ಮತ್ತು ಉನ್ನತ ನೇಮಕಾತಿಗಳ ಸ್ವಾಮ್ಯ ಪಡೆದವರು. ಅವರು ವೇದಿಕೆಯ ಯಜಮಾನರು ಮತ್ತು ಪತ್ರಿಕೋದ್ಯಮ ಅವರ ಪಾಲಿನ ಒಂದು ಸುಂದರ ಸೇವಕಿ. ಗಮನಾರ್ಹರೆನ್ನುವಂತೆ ಅವರು ತೋರಿಬರುವ ಜನ ಮತ್ತು ಅವರು ಬಯಸಿದರೆ ಅಂಗೈಯೊಳಗೆ

ಎಲ್ಲವೂ ಕೂಡುತ್ತದೆ. ವಿದ್ಯಾಭ್ಯಾಸ ಅವರಿಗೆ ಬ್ರಿಟಿಷರ ಹಿತಾಸಕ್ತಿ ಕಾಯುವ ಸೇವೆ ಸಲ್ಲಿಸಲು ಅಪರಿಮಿತ ಅವಕಾಶಗಳನ್ನು ಕೊಟ್ಟಿತು. ಅಂತೆಯೇ ಅವರು ತಮ್ಮ ಕರ್ತವ್ಯಗಳನ್ನು ನಿಷ್ಠರಾಗಿ ನಿರ್ವಹಿಸಿದರು ತಮ್ಮ ಮುಂಚಿನ ಧಣಿಗಳ ಸಂಪೂರ್ಣ ತೃಪ್ತಿಗೂ ಸಹ ಹಣ ಲೇವಾದೇವಿ ಮತ್ತು ವ್ಯಾಪಾರದಿಂದ ಜೀವಿಸಿದ ಸಮುದಾಯಗಳು ಕೂಡ ಬ್ರಿಟಿಷ್ ಆಡಳಿತಗಾರರಿಗೆ ಯುದ್ಧದ ಬಲಗಳನ್ನು ಮತ್ತು ಶಾಂತಿಯ ಎಲ್ಲ ಅಗತ್ಯಗಳನ್ನೂ ಒದಗಿಸಿದುವು. ಈ ಮಂದಿ ಭಾರತದಲ್ಲಿ ಕೇವಲ ಅದೃಷ್ಟವಂತರಾಗಿ ಈಗ ತೋರಿ ಬರುವುದೆಂದರೆ ಯಾರೂ ಆಶ್ಚರ್ಯ ಪಡಬೇಕಿಲ್ಲ. ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ಕಾಯ್ದುಕೊಂಡು ಸುಸ್ಥಿರಗೊಳಿಸಿದ ಕೀರ್ತಿ ಎಲ್ಲ ಅವರಿಗೇ ಸಲ್ಲಬೇಕು. ಅದು ೧೯೪೨ರ ಕ್ರಾಂತಿಗೆ ಸೇರಲು ಅವರಿಗೆ ಹೊಂದಿಕೆಯಾಗದೆ ತಮ್ಮ ಜೀವನಕ್ಕೆ ಗಂಡಾಂತರ ತಂದುಕೊಳ್ಳಲಿಲ್ಲ. ಕೆಲವರು ಶಾಂತರಾಗಿಯೇ ಜೈಲಿಗೆ ಹೋದರು. ಇತರರು ಯಾರು ಬ್ರಿಟಿಷರನ್ನು ಕಡಿಮೆ ಪ್ರೀತಿಸಿದರೋ ಅವರು ತಮ್ಮ ಪ್ರಾಣಗಳು ಒಳಗೊಂಡಂತೆ ತಮ್ಮಲ್ಲಿ ಏನಿದ್ದವೋ ಎಲ್ಲವನ್ನೂ ತ್ಯಾಗ ಮಾಡಿದರು. ಈಗ ಅವರು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲಾಗುತ್ತಿಲ್ಲ ಮತ್ತು ತಮ್ಮ ತ್ಯಾಗಗಳನ್ನು ಗುರುತಿಸಿಲ್ಲ ಎಂದು ಭಾವಿಸುವವರು. ಆದುದರಿಂದ ಅವರ ಅಭಿಪ್ರಾಯದಲ್ಲಿ ಬರಿಯ, ಒಣಕರುಣೆಗಿಂತ ಅತ್ಯುತ್ತಮವಾದುದು ಬೇರೇನೂ ಇಲ್ಲ. ಹೀಗಿರುವಲ್ಲಿ ಹೆಚ್ಚು ಓದಿಕೊಂಡವರು ಮತ್ತು ಸಿರಿವಂತರು ಇಲ್ಲಿಂದ ಮುಂದೆ ಇಷ್ಟ ಪಡದೆ ಬಹುಶಃ ಕಿರುಕುಳಗಳಿಗೀಡಾಗುವರು. ಹಾಗಾಗಿ ನಾವು ಎಚ್ಚರದಿಂದಿರುವುದು ಅಗತ್ಯವೆನಿಸುತ್ತದೆ. ಸಂವಿಧಾನದಲ್ಲಿ ಅವರ ಆಸಕ್ತಿಗಳನ್ನು ರಕ್ಷಿಸಲು ಒಂದು ಏರ್ಪಾಡು ಮಾಡಬೇಕಾಗುತ್ತೆ. ಈ ಸಮುದಾಯಗಳು, ಸದ್ಯ, ಶಿಕ್ಷಣದಲ್ಲಿ ಇಲ್ಲವೆ ಸಿರಿಯಲ್ಲಿ ಮೇಲುಗೈ ಸಾಧಿಸುವುದು ಖಚಿತ. ಆದರೆ ಅವರ ಲೆಕ್ಕಾಚಾರಗಳು ತಪ್ಪಾಗಬಹುದು ಎಂದು ಎಚ್ಚರಿಸಲು ಇಷ್ಟ ಪಡುತ್ತೇನೆ. ನಾನು ಬಲ್ಲೆ. ಅವರು ನನ್ನ ಉದ್ದೇಶಗಳನ್ನು ಕೂಡ ಪ್ರಶ್ನಿಸಬಹುದು. ಆದರೆ ನಾನು ಅವರಿಗೆ ಒಳ್ಳೆಯದನ್ನು ಬಯಸುತ್ತೇನೆ.

**ಶ್ರೀ ಎಚ್.ವಿ. ಕಾಮತ್ :** ತುಂಬ ಓದಿಕೊಂಡವರು ಮತ್ತು ಸಿರಿವಂತರು ಎಂಬ ಶಬ್ದಗಳನ್ನು ವಿವರಿಸಿರಿ ಎಂದು ನಾನು ಕೇಳಬಹುದೆ?

**ಡಾ. ಪಿ.ಎಸ್. ದೇಶ್‌ಮುಖ್ :** ನನ್ನ ಗೌರವಾನ್ವಿತ ಗೆಳೆಯರಿಂದ ತಿದ್ದುಪಡಿ ಅಂಗೀಕಾರವಾದ ಮೇಲೆ ನಾನು ಅದನ್ನು ಮಾಡುತ್ತೇನೆ. ಅವರು ನನ್ನ ಉದ್ದೇಶಗಳನ್ನು ಪ್ರಶ್ನಿಸುವ ಸಾಧ್ಯತೆ ಇದೆ ಎಂದು ನಾನು ಬಲ್ಲೆ. ಆದರೆ ಅವರನ್ನು ಏಕೆ ಇತರ ಸ್ಥಾನಗಳಿಗಾಗಿ ಸ್ಪರ್ಧಿಸಲು ಅನುಮತಿಸಬಾರದೆಂದರೆ, ಅವರು ಕೆಟ್ಟ ಪರಾವಲಂಬೀಯ ಜಾತಿಗಳಿಗೆ ಸೇರಿದವರು ಮತ್ತು ನಾವು ಉದ್ದೇಶಿಸಿರುವ ವಾಸ್ತವ ಪ್ರಜಾಪ್ರಭುತ್ವದಲ್ಲಿ ಇತರರ ಹಕ್ಕುಗಳಲ್ಲಿ ಪ್ರಾಮುಖ್ಯ ಪಡೆಯಲು, ಅನಿಯಂತ್ರಿತ ಮತ್ತು ಅನಿರ್ಬಂಧಿತ ಹಕ್ಕು ಹೊಂದಿರಬೇಕೆಂಬುದು ಸೂಕ್ತವಲ್ಲ. ನನ್ನ ಮಿತ್ರ ಶ್ರೀ ತ್ಯಾಗಿ ಅವರ ಮಾತುಗಳಲ್ಲಿ ಅವರಿಗೆ ವಿನಾಶದಿಂದ ಹೇಗೆ ರಕ್ಷಣೆ ಕೊಡುತ್ತೀರಿ? ಏಕೈಕ ಮಾರ್ಗವೆಂದರೆ ಅವರಿಗೆ ಮೀಸಲಿರಿಸಿದ ಸ್ಥಾನಗಳನ್ನು ಕೊಡುವುದು ಹಾಗೂ ಇತರ ಮೀಸಲಿರಿಸದ ಸ್ಥಾನಗಳಿಂದ ಅವರನ್ನು ದೂರವಿಡುವುದು ಎಂದು ನನಗನಿಸುತ್ತದೆ. ಆದರೆ ಮಾನ್ಯರೆ, ನಾನು ವ್ಯಕ್ತಪಡಿಸುವ ಮೃದು ಭಾವನೆಗಳು ಮತ್ತು ಇಂದು ಸಂವಿಧಾನ ರಚಿಸುತ್ತಿರುವ ಬಗೆ ನೋಡಿದಾಗ, ಈ ಸಂವಿಧಾನ ನಾನು ಬಯಸುವ ಸಮಾಜವಾದೀ ಒಲವು ಹೊಂದಬೇಕು ಎಂಬುದು ಸದನದಲ್ಲಿ ಜನ ಪ್ರಿಯವಲ್ಲ ಎಂದು ನಾನು ಬಲ್ಲೆ. ಇಂತಹ ಸಂದರ್ಭಗಳಡಿ, ಸಂವಿಧಾನ ರೂಪಿಸುವವರ ಪುನರ್ ಪರಿಶೀಲನೆಗಾಗಿ ಈ ರೀತಿ ಪರಾಮರ್ಶೆ ಮಾಡಲು ಮಾತ್ರ ಇಷ್ಟ ಪಡುತ್ತೇನೆ. ನನಗೆ ನನ್ನ ತಿದ್ದುಪಡಿ ಮಂಡಿಸಲು ಯಾವ ಅಪೇಕ್ಷೆಯೂ ಇಲ್ಲ.

**ಮಾನ್ಯ ಸಭಾಧ್ಯಕ್ಷರು :** ಡಾ ದೇಶ್‌ಮುಖ್ ರವರು ವಾಸ್ತವವಾಗಿ ತಮ್ಮ ತಿದ್ದುಪಡಿಯನ್ನು ಗಂಭೀರವಾಗಿ ಮಂಡಿಸುವರೆಂದು ನಾನು ತಿಳಿದಿರಲಿಲ್ಲ. ಅವರೇ ಸ್ವತಃ ಸಿರಿವಂತ ಮತ್ತು ಸುಶಿಕ್ಷಿತ ವರ್ಗಕ್ಕೆ ಸೇರಿದವರಾಗಿದ್ದರೂ ಅವರಿಗೆ ರಕ್ಷಣೆ ಬೇಕಿಲ್ಲವೆನಿಸುತ್ತೆ. ಅವರನ್ನು ತಿದ್ದುಪಡಿ ಮಂಡನೆಗೆ ಕರೆಯಲು ಆಕಸ್ಮಿಕವಾಗಿ ಬಿಟ್ಟುಬಿಟ್ಟೆ.

ಬಾಬನ್ನು ಹಿಡಿದಿಟ್ಟುಕೊಳ್ಳಲಾಗಿತ್ತು. ಬುಡಕಟ್ಟು ಜನಾಂಗದ ಸಮಿತಿಗಳ ವರದಿಗಳು ಬರುವವರೆಗೆ, ಇದನ್ನು ಚರ್ಚೆಗೆ ತೆಗೆದುಕೊಳ್ಳಬಾರದೆಂಬುದಾಗಿ ಒಪ್ಪಿಗೆಯಾಗಿತ್ತು.

**ಶ್ರೀ ಕೆ.ಎಮ್. ಮುನ್ಷಿ** : ಇದರ ಬಗೆಗೆ ನಾನೊಂದು ಮಾತು ಹೇಳಲೇ? ಈ ವಿಷಯ ಕುರಿತಂತೆ ತುಸು ಗೊಂದಲವಿರುವಂತೆ ತೋರುತ್ತದೆ. ನೀವು ವರದಿಯನ್ನೆ ನೋಡಿದರೆ, ಸ್ಥಿತಿ ಸ್ಪಷ್ಟವಾಗುತ್ತದೆ. ವರದಿಯ ೮ನೇ ಕಂಡಿಕೆಯಲ್ಲಿ "ಈ ಬುಡಕಟ್ಟು ಜನರ ವಿಷಯವನ್ನು, ಹೊರತು ಪಡಿಸಿದ ಮತ್ತು ಭಾಗಶಃ ಹೊರತು ಪಡಿಸಿದ ಪ್ರದೇಶಗಳ ಉಪಸಮಿತಿಯ ವರದಿಯನ್ನು ಸ್ವೀಕರಿಸಿದ ಅನಂತರ ಎತ್ತಿಕೊಳ್ಳಲಾಗುವುದು" ಎಂದು ಹೇಳಲಾಗಿದೆ, ಆದರೆ ಅದೇ ಸಮಯಕ್ಕೆ ಕಂಡಿಕೆ ೫ ನೋಡಿ, ಅದು ಕೆಲವು ಹಕ್ಕುಗಳಿಗೆ ಅರ್ಹರಾಗುವಂತೆ ಮಾಡಲಾಗುವ ಅಲ್ಪಸಂಖ್ಯಾತರ ಪಟ್ಟಿ ಮಾಡಿದೆ. ಆದುದರಿಂದ ವರ್ಗ 'ಎ' ನಲ್ಲಿ 'ಅಸ್ಸಾಮ್‌ನಲ್ಲಿ ಬಯಲು ಪ್ರದೇಶ ಬುಡಕಟ್ಟು ಜನ' ಎಂಬ ಶಬ್ದಗಳನ್ನು ಕಾಣುವಿರಿ. ಆದುದರಿಂದ, ಅನುಸೂಚಿಯಲ್ಲಿ ಮುಂದೂಡಲ್ಪಟ್ಟಿದ್ದು ಬಯಲು ಪ್ರದೇಶದ ಬುಡಕಟ್ಟು ಜನ ಎಂಬುದರ ಸೇರ್ಪಡೆಯಲ್ಲ; ಆದರೆ ರಕ್ಷಣೆಗಳು ಎಂಬುದು. ಅದನ್ನು ಸದನವು ಈ ಹೊರತು ಪಡಿಸಿದ ಪ್ರದೇಶಗಳ ಸಮಿತಿ ವರದಿ ಸ್ವೀಕರಿಸಿದ ಅನಂತರ ವಿಸ್ತರಿಸಬೇಕು ಇಲ್ಲವೇ ಬದಲಿಸಬೇಕು, ಈಗ ಮಾಡಬೇಕಾದ್ದು ಏನು ಎಂದರೆ 'ಅಸ್ಸಾಮ್‌ನಲ್ಲಿ ಬಯಲು ಪ್ರದೇಶದ ಬುಡಕಟ್ಟು ಜನ ಎಂಬುದನ್ನು ಸೇರಿಸಿ' ಅನುಸೂಚಿಯನ್ನು ಪೂರಯಿಸಬೇಕು. ರಕ್ಷಣೆಗಳೇನು ಇರಬೇಕು ಎಂಬುದನ್ನು ಅದು ನಿರ್ಧರಿಸುವುದಾದರೆ ಅದು ನಿರ್ಬಂಧವಲ್ಲ. ಅದು ವಾಸ್ತವ – ಯಾವುದೂ ಅಸಂಗತವಲ್ಲ.

**ಗೌರವಾನ್ವಿತ ರೆವರೆಂಡ್ ಜೆ.ಜೆ.ಎಂ. ನಿಕೊಲಸ್ ರಾಯ್** (ಅಸ್ಸಾಮ್ : ಸಾಮಾನ್ಯ) : ನಾನು ಸ್ಪಷ್ಟನೆಗಾಗಿ ಒಂದು ಪ್ರಶ್ನೆ ಕೇಳಬಯಸುತ್ತೇನೆ, ವರ್ಗ ಎ ನಲ್ಲಿ, ೩ನೇ ಬಾಬಿನಲ್ಲಿ 'ತೋಟ ಬುಡಕಟ್ಟುಗಳು ಬಿಟ್ಟು ಅಸ್ಸಾಂನಲ್ಲಿ ಬಯಲು ಪ್ರದೇಶ ಬುಡಕಟ್ಟುಗಳು' ಎಂದು ಹೇಳಿದೆ. 'ತೋಟ ಬುಡಕಟ್ಟುಗಳು ಬಿಟ್ಟು' ಎಂಬ ಶಬ್ದ ಅಸ್ಸಾಮಿನಲ್ಲಿ ಭೂಮಿ ಮತ್ತು ಆಸ್ತಿ ಹೊಂದಿ ವಾಸ್ತವ್ಯ ಹೂಡಿದ ಆ ಬುಡಕಟ್ಟು ಜನರಲ್ಲವೆಂದೂ ತೋಟಗಳಲ್ಲಿ ಒಂದು ಕಾರ್ಮಿಕ ಸಮುದಾಯವಾಗಿ ಕೆಲಸ ಮಾಡುತ್ತಿರುವ ತೋಟದ ಜನ ಎಂದೂ ಅರ್ಥಮಾಡಿಕೊಂಡಿದ್ದೇನೆ ಇದೇ ಅದರ ಅರ್ಥವೇ?

**ಮಾನ್ಯ ಸಭಾಧ್ಯಕ್ಷರು** : ಅದೇ ಅರ್ಥ ಎಂದು ನಾನು ತಿಳಿದಿದ್ದೇನೆ.

**ಡಾ. ಪಿ.ಎಸ್. ದೇಶಮುಖ್** : ನನ್ನ ಹೆಸರಿನಲ್ಲಿ ಒಂದು ತಿದ್ದುಪಡಿ ಕೆಳಗೆಕಂಡಂತೆ ಇದೆ.

"ಕಂಡಿಕೆ ೧೮ರ ಅನುಸೂಚಿಗೆ ಕೆಳಗಿನದನ್ನು ಸೇರಿಸಬೇಕು:

'ವರ್ಗ ಡಿ–ವಿವಿಧ ಪ್ರಾಂತ್ಯಗಳಲ್ಲಿ ಶೈಕ್ಷಣಿಕವಾಗಿ ಮುನ್ನಡೆ ಸಾಧಿಸಿದ ಮತ್ತು ಸಿರಿವಂತ ಅಲ್ಪಸಂಖ್ಯಾತ ಜಾತಿಗಳು ಮತ್ತು ಸಮುದಾಯಗಳು.

ಟಿಪ್ಪಣಿ ೧–ಈ ಅಲ್ಪಸಂಖ್ಯಾತರಿಗೆ ಸೇರಿದ ವ್ಯಕ್ತಿಗಳಿಗೆ, ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಹಕ್ಕು ಇಲ್ಲ ಎಂದು ಉಪಬಂಧಿಸತಕ್ಕದು.

ಟಿಪ್ಪಣಿ ೨–ಈ ಅಲ್ಪಸಂಖ್ಯಾತರ ಒಂದು ಪಟ್ಟಿ ಹಾಲಿ ಪ್ರಾಂತ್ಯಗಳ ಪ್ರತಿ ಶಾಸನಸಭೆ ನಿರ್ಧರಿಸಿದಂತೆ ಇರತಕ್ಕದ್ದು."

ನನ್ನ ತಿದ್ದುಪಡಿಯ ಮುಖ್ಯ ಉದ್ದೇಶ, ಬಹು ಸಣ್ಣ ಅಲ್ಪಸಂಖ್ಯಾತರ ಅಂದರೆ ಒಮ್ಮೆ ವಯಸ್ಕರ ಮತದಾನ ಪದ್ಧತಿ ಜಾರಿಗೊಂಡ ಬಳಿಕ ತಮ್ಮ ಸ್ವಂತಿಕೆ ಕಾಯ್ದುಕೊಳ್ಳಲು ಯಾರಿಗೆ ಕಷ್ಟಕ್ಕೆ ಈಡಾಗುವರೋ ಅಂಥವರ ಹಿತಾಸಕ್ತಿ ಕಾಪಾಡುವುದಾಗಿದೆ. ಅಂದರೆ ನನ್ನ ಅರ್ಥ ಹೆಚ್ಚು ವಿದ್ಯಾವಂತ ಜಾತಿ ಮತ್ತು ಇಡೀ ದೇಶದ ಸಿರಿಯ ಬಹುಭಾಗವನ್ನೂ ಸ್ವಂತವಾಗಿಸಿಕೊಂಡಿರುವ ಜಾತಿಗಳು ಮತ್ತು ಸಮುದಾಯಗಳು, ಪ್ರಸ್ತುತ ಅವರಿಬ್ಬರು ಬಹುಶಕ್ತರು. ಮೊದಲನೆಯವರು, ಸರ್ಕಾರಿ ಸೇವೆಗಳು ಮತ್ತು ಉನ್ನತ ನೇಮಕಾತಿಗಳ ಸ್ವಾಮ್ಯ ಪಡೆದವರು. ಅವರು ವೇದಿಕೆಯ ಯಜಮಾನರು ಮತ್ತು ಪತ್ರಿಕೋದ್ಯಮ ಅವರ ಪಾಲಿನ ಒಂದು ಸುಂದರ ಸೇವಕಿ. ಗಮನಾರ್ಹರೆನ್ನುವಂತೆ ಅವರು ತೋರಿಬರುವ ಜನ ಮತ್ತು ಅವರು ಬಯಸಿದರೆ ಅಂಗೈಯೊಳಗೆ

ಎಲ್ಲವೂ ಕೂಡುತ್ತದೆ. ವಿದ್ಯಾಭ್ಯಾಸ ಅವರಿಗೆ ಬ್ರಿಟಿಷರ ಹಿತಾಸಕ್ತಿ ಕಾಯುವ ಸೇವೆ ಸಲ್ಲಿಸಲು ಅಪರಿಮಿತ ಅವಕಾಶಗಳನ್ನು ಕೊಟ್ಟಿತು. ಅಂತೆಯೇ ಅವರು ತಮ್ಮ ಕರ್ತವ್ಯಗಳನ್ನು ನಿಷ್ಠರಾಗಿ ನಿರ್ವಹಿಸಿದರು ತಮ್ಮ ಮುಂಚಿನ ಧಣಿಗಳ ಸಂಪೂರ್ಣ ತೃಪ್ತಿಗೂ ಸಹ ಹಣ ಲೇವಾದೇವಿ ಮತ್ತು ವ್ಯಾಪಾರದಿಂದ ಜೀವಿಸಿದ ಸಮುದಾಯಗಳು ಕೂಡ ಬ್ರಿಟಿಷ್ ಆಡಳಿತಗಾರರಿಗೆ ಯುದ್ಧದ ಬಲಗಳನ್ನು ಮತ್ತು ಶಾಂತಿಯ ಎಲ್ಲ ಅಗತ್ಯಗಳನ್ನೂ ಒದಗಿಸಿದುವು. ಈ ಮಂದಿ ಭಾರತದಲ್ಲಿ ಕೇವಲ ಅದೃಷ್ಟವಂತರಾಗಿ ಈಗ ತೋರಿ ಬರುವುದೆಂದರೆ ಯಾರೂ ಆಶ್ಚರ್ಯ ಪಡಬೇಕಿಲ್ಲ. ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ಕಾಯ್ದುಕೊಂಡು ಸುಸ್ಥಿರಗೊಳಿಸಿದ ಕೀರ್ತಿ ಎಲ್ಲ ಅವರಿಗೇ ಸಲ್ಲಬೇಕು. ಅದು ೧೯೪೨ರ ಕ್ರಾಂತಿಗೆ ಸೇರಲು ಅವರಿಗೆ ಹೊಂದಿಕೆಯಾಗದೆ ತಮ್ಮ ಜೀವನಕ್ಕೆ ಗಂಡಾಂತರ ತಂದುಕೊಳ್ಳಲಿಲ್ಲ. ಕೆಲವರು ಶಾಂತರಾಗಿಯೇ ಜೈಲಿಗೆ ಹೋದರು. ಇತರರು ಯಾರು ಬ್ರಿಟಿಷರನ್ನು ಕಡಿಮೆ ಪ್ರೀತಿಸಿದರೋ ಅವರು ತಮ್ಮ ಪ್ರಾಣಗಳು ಒಳಗೊಂಡಂತೆ ತಮ್ಮಲ್ಲಿ ಏನಿದ್ದವೋ ಎಲ್ಲವನ್ನೂ ತ್ಯಾಗ ಮಾಡಿದರು. ಈಗ ಅವರು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲಾಗುತ್ತಿಲ್ಲ ಮತ್ತು ತಮ್ಮ ತ್ಯಾಗಗಳನ್ನು ಗುರುತಿಸಿಲ್ಲ ಎಂದು ಭಾವಿಸುವವರು. ಆದುದರಿಂದ ಅವರ ಅಭಿಪ್ರಾಯದಲ್ಲಿ ಬರಿಯ, ಒಣಕರುಣೆಗಿಂತ ಅತ್ಯುತ್ತಮವಾದುದು ಬೇರೇನೂ ಇಲ್ಲ. ಹೀಗಿರುವಲ್ಲಿ ಹೆಚ್ಚು ಓದಿಕೊಂಡವರು ಮತ್ತು ಸಿರಿವಂತರು ಇಲ್ಲಿಂದ ಮುಂದೆ ಇಷ್ಟ ಪಡದೆ ಬಹುಶಃ ಕಿರುಕುಳಗಳಿಗೀಡಾಗುವರು. ಹಾಗಾಗಿ ನಾವು ಎಚ್ಚರದಿಂದಿರುವುದು ಅಗತ್ಯವೆನಿಸುತ್ತದೆ. ಸಂವಿಧಾನದಲ್ಲಿ ಅವರ ಆಸಕ್ತಿಗಳನ್ನು ರಕ್ಷಿಸಲು ಒಂದು ಏರ್ಪಾಡು ಮಾಡಬೇಕಾಗುತ್ತೆ. ಈ ಸಮುದಾಯಗಳು, ಸದ್ಯ, ಶಿಕ್ಷಣದಲ್ಲಿ ಇಲ್ಲವೆ ಸಿರಿಯಲ್ಲಿ ಮೇಲುಗೈ ಸಾಧಿಸುವುದು ಖಚಿತ. ಆದರೆ ಅವರ ಲೆಕ್ಕಾಚಾರಗಳು ತಪ್ಪಾಗಬಹುದು ಎಂದು ಎಚ್ಚರಿಸಲು ಇಷ್ಟ ಪಡುತ್ತೇನೆ. ನಾನು ಬಲ್ಲೆ. ಅವರು ನನ್ನ ಉದ್ದೇಶಗಳನ್ನು ಕೂಡ ಪ್ರಶ್ನಿಸಬಹುದು. ಆದರೆ ನಾನು ಅವರಿಗೆ ಒಳ್ಳೆಯದನ್ನು ಬಯಸುತ್ತೇನೆ.

**ಶ್ರೀ ಎಚ್.ವಿ. ಕಾಮತ್ :** ತುಂಬ ಓದಿಕೊಂಡವರು ಮತ್ತು ಸಿರಿವಂತರು ಎಂಬ ಶಬ್ದಗಳನ್ನು ವಿವರಿಸಿರಿ ಎಂದು ನಾನು ಕೇಳಬಹುದೆ?

**ಡಾ. ಪಿ.ಎಸ್. ದೇಶ್‌ಮುಖ್ :** ನನ್ನ ಗೌರವಾನ್ವಿತ ಗೆಳೆಯರಿಂದ ತಿದ್ದುಪಡಿ ಅಂಗೀಕಾರವಾದ ಮೇಲೆ ನಾನು ಅದನ್ನು ಮಾಡುತ್ತೇನೆ. ಅವರು ನನ್ನ ಉದ್ದೇಶಗಳನ್ನು ಪ್ರಶ್ನಿಸುವ ಸಾಧ್ಯತೆ ಇದೆ ಎಂದು ನಾನು ಬಲ್ಲೆ. ಆದರೆ ಅವರನ್ನು ಏಕೆ ಇತರ ಸ್ಥಾನಗಳಿಗಾಗಿ ಸ್ಪರ್ಧಿಸಲು ಅನುಮತಿಸಬಾರದೆಂದರೆ, ಅವರು ಕೆಟ್ಟ ಪರಾವಲಂಬೀಯ ಜಾತಿಗಳಿಗೆ ಸೇರಿದವರು ಮತ್ತು ನಾವು ಉದ್ದೇಶಿಸಿರುವ ವಾಸ್ತವ ಪ್ರಜಾಪ್ರಭುತ್ವದಲ್ಲಿ ಇತರರ ಹಕ್ಕುಗಳಲ್ಲಿ ಪ್ರಾಮುಖ್ಯ ಪಡೆಯಲು, ಅನಿಯಂತ್ರಿತ ಮತ್ತು ಅನಿರ್ಬಂಧಿತ ಹಕ್ಕು ಹೊಂದಿರಬೇಕೆಂಬುದು ಸೂಕ್ತವಲ್ಲ. ನನ್ನ ಮಿತ್ರ ಶ್ರೀ ತ್ಯಾಗಿ ಅವರ ಮಾತುಗಳಲ್ಲಿ ಅವರಿಗೆ ವಿನಾಶದಿಂದ ಹೇಗೆ ರಕ್ಷಣೆ ಕೊಡುತ್ತೀರಿ? ಏಕೈಕ ಮಾರ್ಗವೆಂದರೆ ಅವರಿಗೆ ಮೀಸಲಿರಿಸಿದ ಸ್ಥಾನಗಳನ್ನು ಕೊಡುವುದು ಹಾಗೂ ಇತರ ಮೀಸಲಿರಿಸದ ಸ್ಥಾನಗಳಿಂದ ಅವರನ್ನು ದೂರವಿಡುವುದು ಎಂದು ನನಗನಿಸುತ್ತದೆ. ಆದರೆ ಮಾನ್ಯರೆ, ನಾನು ವ್ಯಕ್ತಪಡಿಸುವ ಮೃದು ಭಾವನೆಗಳು ಮತ್ತು ಇಂದು ಸಂವಿಧಾನ ರಚಿಸುತ್ತಿರುವ ಬಗೆ ನೋಡಿದಾಗ, ಈ ಸಂವಿಧಾನ ನಾನು ಬಯಸುವ ಸಮಾಜವಾದೀ ಒಲವು ಹೊಂದಬೇಕು ಎಂಬುದು ಸದನದಲ್ಲಿ ಜನ ಪ್ರಿಯವಲ್ಲ ಎಂದು ನಾನು ಬಲ್ಲೆ. ಇಂತಹ ಸಂದರ್ಭಗಳಡಿ, ಸಂವಿಧಾನ ರೂಪಿಸುವವರ ಪುನರ್ ಪರಿಶೀಲನೆಗಾಗಿ ಈ ರೀತಿ ಪರಾಮರ್ಶೆ ಮಾಡಲು ಮಾತ್ರ ಇಷ್ಟ ಪಡುತ್ತೇನೆ. ನನಗೆ ನನ್ನ ತಿದ್ದುಪಡಿ ಮಂಡಿಸಲು ಯಾವ ಅಪೇಕ್ಷೆಯೂ ಇಲ್ಲ.

**ಮಾನ್ಯ ಸಭಾಧ್ಯಕ್ಷರು :** ಡಾ ದೇಶ್‌ಮುಖ್ ರವರು ವಾಸ್ತವವಾಗಿ ತಮ್ಮ ತಿದ್ದುಪಡಿಯನ್ನು ಗಂಭೀರವಾಗಿ ಮಂಡಿಸುವರೆಂದು ನಾನು ತಿಳಿದಿರಲಿಲ್ಲ. ಅವರೇ ಸ್ವತಃ ಸಿರಿವಂತ ಮತ್ತು ಸುಶಿಕ್ಷಿತ ವರ್ಗಕ್ಕೆ ಸೇರಿದವರಾಗಿದ್ದರೂ ಅವರಿಗೆ ರಕ್ಷಣೆ ಬೇಕಿಲ್ಲವೆನಿಸುತ್ತೆ. ಅವರನ್ನು ತಿದ್ದುಪಡಿ ಮಂಡನೆಗೆ ಕರೆಯಲು ಆಕಸ್ಮಿಕವಾಗಿ ಬಿಟ್ಟುಬಿಟ್ಟೆ.

ಆದರೆ ನಾನು ಒಂದು ಆಕಸ್ಮಿಕ ತಪ್ಪು ಎಂದು ಪರಿಗಣಿಸಿದ್ದು ನಿಜವಾಗಿ ಸರಿಯಾದುದೇ ಆಗಿದೆ (ನಗು) ಹೇಗೇ ಇರಲಿ, ನಾನು ಸ್ವೀಕರಿಸಿದ ತಿದ್ದುಪಡಿಗಳ ಸೂಚನೆಗಳು ಇಷ್ಟೇ ಆಗಿವೆ. ಸರ್ದಾರ್ ವಲ್ಲಭಭಾಯಿ ಪಟೇಲ್ ರವರು ಇಷ್ಟಪಟ್ಟರೆ ಏನಾದರೂ ಹೇಳಬಹುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಈ ಕುರಿತು ನಾನು ಯಾವುದೇ ಚರ್ಚೆ ನಿರೀಕ್ಷಿಸಿರಲಿಲ್ಲ; ಏನೇ ಇರಲಿ ಅದು ಸಂಭವಿಸಿದೆ. ನಾನೀಗಾಗಲೇ ಶ್ರೀ ಶಿಬನ್‌ಲಾಲ್ ಸಕ್ಸೇನ ರವರು ಮಂಡಿಸಿದ ತಿದ್ದುಪಡಿಯನ್ನು ಸಮ್ಮತಿಸಿದ್ದೇನೆ ಮತ್ತು ಈಗ ಸದನದ ಸಮ್ಮತಿಗೆ ಅನುಸೂಚಿಯನ್ನು ಶಿಫಾರಸು ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ಸರ್ದಾರ್ ವಲ್ಲಭಭಾಯಿ ಪಟೇಲರು ಒಪ್ಪಿರುವ ಶ್ರೀ ಶಿಬನ್‌ಲಾಲ್ ಸಕ್ಸೇನರ ತಿದ್ದುಪಡಿಯನ್ನು ಮುಂದಿಡುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾನೀಗ ಶ್ರೀ ಶಿಬನ್‌ಲಾಲ್ ಸಕ್ಸೇನಾರ ತಿದ್ದುಪಡಿಗೆ ಶ್ರೀ ಮುನ್ಷಿಯವರ ತಿದ್ದುಪಡಿ ಮುಂದಿಡುತ್ತೇನೆ.

ತಿದ್ದುಪಡಿ ಅಂಗೀಕರಿಸಲ್ಪಟ್ಟಿತು.

**ಮಾನ್ಯ ಸಭಾಧ್ಯಕ್ಷರು :** ನಾವೀಗ ಖಂಡ ೨ಕ್ಕೆ ಹೋಗೋಣ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :**

"ಆಂಗ್ಲೋ ಇಂಡಿಯನ್ನರು: (ಎ) ಆಂಗ್ಲೋ ಇಂಡಿಯನ್ನರಿಗೆ ಸ್ಥಾನಗಳ ಮೀಸಲಾತಿ ಇರುವುದಿಲ್ಲ. ಆದರೆ ಒಕ್ಕೂಟದ ಅಧ್ಯಕ್ಷರು ಮತ್ತು ಪ್ರಾಂತ್ಯಗಳ ರಾಜ್ಯಪಾಲರು ಕೇಂದ್ರದಲ್ಲಿ ಮತ್ತು ಪ್ರಾಂತ್ಯಗಳಲ್ಲಿ ಕ್ರಮವಾಗಿ ತಮ್ಮ ಪ್ರತಿನಿಧಿಗಳನ್ನು, ಅವರು ಸಾರ್ವತ್ರಿಕ ಚುನಾವಣೆಯ ಫಲವಾಗಿ ಶಾಸನಸಭೆಗಳಲ್ಲಿ ತಕ್ಕಷ್ಟು ಪ್ರಾತಿನಿಧ್ಯ ಗಳಿಸುವಲ್ಲಿ ವಿಫಲರಾದರೆ ನೇಮಕ ಮಾಡಲು ಅಧಿಕಾರ ಹೊಂದಿರುತ್ತಾರೆ."

ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಸಂಬಂಧಿಸಿದಂತೆ ಈ ಪರಿಹಾರ ಸಮ್ಮತ ಮತ್ತು ಇದಕ್ಕೆ ಯಾರೂ ತಿದ್ದುಪಡಿಯನ್ನು ಮಂಡಿಸಬಹುದು ಎಂದು ನನಗನಿಸುತ್ತಿಲ್ಲ ಏಕೆಂದರೆ, ಸಮುದಾಯ ಈ ಪ್ರಸ್ತಾವದೊಂದಿಗೆ ತೃಪ್ತಿ ಹೊಂದಿದೆ ಮತ್ತು ಸಲಹಾ ಸಮಿತಿಯು ಇದನ್ನು ಸರ್ವಾನುಮತದಿಂದ ಒಪ್ಪಿದೆ. ನಾನು ಸದನದ ಒಪ್ಪಿಗೆಗೆ ಇದನ್ನು ಶಿಫಾರಸ್ಸು ಮಾಡುತ್ತೇನೆ.

**ಶ್ರೀ ಕೆ. ಸಂತಾನಮ್ :** ಸ್ಪಷ್ಟಗೊಳಿಸಬೇಕಾದ ನನ್ನ ಒಂದೆರಡು ಅನುಮಾನಗಳು ಇವೆ. ಇಲ್ಲಿ ಶಾಸನ ಸಭೆಗಳು ಎಂದರೆ ವಿಧಾನಸಭೆಗಳು ಎಂದು ತಿಳಿದಿದ್ದೇನೆ ಆಗ ಪ್ರತಿ ಪ್ರಾಂತ್ಯದಲ್ಲಿ ರಾಜ್ಯಪಾಲರು ಆಂಗ್ಲೋ ಇಂಡಿಯನ್ನರ ಪ್ರತಿನಿಧಿಗಳನ್ನು ನೇಮಕ ಮಾಡುತ್ತಾರೆ ಎಂದು ಅರ್ಥವೇ?

**ಗೌರವನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಅಲ್ಲಿ ಏನು ಹೇಳಿದೆಯೋ ಅದೇ ಅರ್ಥ,

**ಮಾನ್ಯ ಸಭಾಧ್ಯಕ್ಷರು :** ನಾನು ಇದನ್ನೀಗ ಮತಕ್ಕೆ ಹಾಕುತ್ತೇನೆ

ಖಂಡ ೨ ಅನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಇದು ನನಗೆ ನೆನಪಿಗೆ ತರುತ್ತದೆ. ನಾನು ಮೊದಲ ಖಂಡವನ್ನು ಮತಕ್ಕೆ ಹಾಕಿದಾಗ 'ಪ್ರಾಂತೀಯ ವಿಧಾನ ಸಭೆ' ಎಂದು ಹೇಳದೆ ಒಂದು ತಪ್ಪು ಮಾಡಿದೆ. ನಾನು ಪ್ರಾಂತೀಯ ಶಾಸನಸಭೆ ಎಂದು ನಮೂದಿಸಿದೆ. ಸದನ ಅದನ್ನು ಒಪ್ಪಿದರೆ ನಾನದನ್ನು ಅಂತೆಯೇ ನಮೂದಿಸುತ್ತೇನೆ.

ನಾವು ಮುಂದಿನ ವಿಷಯಕ್ಕೆ ಹೋಗೋಣ

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ನಾನು ಮಂಡಿಸುತ್ತಿದ್ದೇನೆ:

"ಪಾರಸಿಗಳು–(ಬಿ) : ಪಾರಸಿ ಸಮುದಾಯದ ಪರವಾಗಿ ಯಾವುದೇ ಶಾಸನಬದ್ಧ ಮೀಸಲಾತಿ ಇರುವುದಿಲ್ಲ,

ಆದರೆ ಅವರು ಅಧಿಕೃತ ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಉಳಿದು ಮುಂದುವರಿಯುವರು.

ಆದರೆ ಮೇಲಿನ ಖಂಡ ೧–ರ ಪರಂತುಕ ೨ರಲ್ಲಿ ನಿಗದಿ ಪಡಿಸಿದ ಅವಧಿಯಲ್ಲಿ ಚುನಾವಣೆಗಳ ಫಲವಾಗಿ ಪಾರಸಿ ಸಮುದಾಯ ಸೂಕ್ತ ಪ್ರಾತಿನಿಧ್ಯ ಗಳಿಸದಿದ್ದರೆ, ಮೀಸಲಿರಿಸಿದ ಸ್ಥಾನಗಳಿಗೆ ಅವರ ಹಕ್ಕುಗಳನ್ನು ಪುನಃ ಪರಿಗಣಿಸಲಾಗುತ್ತದೆ ಮತ್ತು ಒದಗಿಸಲಾದ ತಕ್ಕಷ್ಟು ಪ್ರಾತಿನಿಧ್ಯ ಸಂವಿಧಾನದ ವೈಶಿಷ್ಟ್ಯವಾಗಿ, ಅಲ್ಪಸಂಖ್ಯಾತರ ಪ್ರತ್ಯೇಕ ಪ್ರಾತಿನಿಧ್ಯ ಮುಂದುವರಿಯುವುದಾದರೆ, ಸಮರ್ಪಕ ಪ್ರಾತಿನಿಧ್ಯವನ್ನು ಒದಗಿಸಲಾಗುವುದು."

ಇದೂ ಸಹ ಪಾರಸಿ ಸಮುದಾಯದ ಮತ್ತು ಸಲಹಾ ಸಮಿತಿಯ ನಡುವೆ ಒಪ್ಪಲಾದ ವಿಷಯವಾಗಿವೆ. ಆದುದರಿಂದ ನಾನು ಇದನ್ನು ಒಪ್ಪಬೇಕು ಎಂದು ಶಿಫಾರಸ್ಸು ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಇದನ್ನು ಕುರಿತಂತೆ ಯಾವ ಚರ್ಚೆಯ ಅಗತ್ಯವಿಲ್ಲ ಎಂದು ನಾನು ತಿಳಿದಿದ್ದೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ನಾನು ಮಂಡಿಸುತ್ತಿದ್ದೇನೆ:

"೩.(ಎ) ಭಾರತೀಯ ಕ್ರೈಸ್ತರು–(ಎ) ಕೇಂದ್ರ ಶಾಸನಸಭೆಗಳಲ್ಲಿ ಮತ್ತು ಮದ್ರಾಸ್ ಮತ್ತು ಬಾಂಬೆ ಪ್ರಾಂತೀಯ ಶಾನಸಭೆಗಳಲ್ಲಿ ಅವರ ಜನಸಂಖ್ಯೆಗನುಗುಣವಾಗಿ ಅನುದಾನದಲ್ಲಿ ಮೀಸಲಿರಿಸಿದ ಪ್ರಾತಿನಿಧ್ಯ ಇರತಕ್ಕದ್ದು. ಇತರ ಪ್ರಾಂತ್ಯಗಳಲ್ಲಿ ಅವರು ಸಾರ್ವತ್ರಿಕ ಸ್ಥಾನಗಳಿಂದ ಚುನಾವಣೆಗೆ ನಿಲ್ಲಲು ಹಕ್ಕು ಹೊಂದಿರುತ್ತಾರೆ."

ಇದು ಕೂಡ ಕ್ರೈಸ್ತ ಸಮುದಾಯ ಮತ್ತು ಸಲಹಾ ಸಮಿತಿಯ ನಡುವೆ ಒಪ್ಪಲಾದ ವಿಷಯವಾಗಿದೆ. ಆದುದರಿಂದ ನಾನು ಸದನದ ಒಪ್ಪಿಗೆಗೆ ಶಿಫಾರಸು ಮಾಡುತ್ತೇನೆ.

**ಶ್ರೀ ಬಿ. ಗೋಪಾಲರೆಡ್ಡಿ** (ಮದ್ರಾಸ್ : ಸಾಮಾನ್ಯ) : ಅದು ಪರಿಷತ್ತುಗಳನ್ನು ಒಳಗೊಳ್ಳುತ್ತದೆ ಎಂದು ನಾನು ನಂಬುತ್ತೇನೆ. ಮದ್ರಾಸ್‌ನಲ್ಲಿ ನಾವು ಪರಿಷತ್ತಿನಲ್ಲಿ ೩ ಮೀಸಲಿರಿಸಿದ ಸ್ಥಾನಗಳನ್ನು ಹೊಂದಿದ್ದೇವೆ.

**ಮಾನ್ಯ ಸಭಾಧ್ಯಕ್ಷರು :** ಹೌದು, ಅದು ವಿಧಾನಸಭೆ ಮತ್ತು ವಿಧಾನ ಪರಿಷತ್ತು ಎಂಬರ್ಥ ಕೊಡುತ್ತದೆ ಎಂದು ತಿಳಿದಿದ್ದೇನೆ. ನಾನು ಸದನದಲ್ಲಿ ಇದನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಪಂಜಾಬ್ ಪ್ರಶ್ನೆಯನ್ನು ನಾನು ಪಂಜಾಬಿನ ಸ್ಥಿತಿಗಳು ಸೂಕ್ತವಾಗಿ ದೃಢೀಕರಣವಾಗಿ ಮತ್ತು ಇತ್ಯರ್ಥಗೊಳ್ಳುವವರೆಗೆ ಮುಂದೂಡುವುದಕ್ಕೆ ಪ್ರಸ್ತಾವಿಸುತ್ತೇನೆ. ಈ ವಿಷಯವನ್ನು ಮುಂದೂಡಿ ಸದನ ಅದನ್ನೊಪ್ಪುವುದಕ್ಕೆ ಸಲಹೆ ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಪೂರ್ವ ಪಂಜಾಬಿನಲ್ಲಿನ ಅಲ್ಪಸಂಖ್ಯಾತರ ಹಕ್ಕುಗಳ ಪ್ರಶ್ನೆಯನ್ನು ಪ್ರತ್ಯೇಕವಾಗಿ ಗಮನಿಸಲಾಗುತ್ತದೆ, 'ಪಶ್ಚಿಮ ಬಂಗಾಳ' ಎಂದು ಹೇಳಲು ಒಂದು ತಿದ್ದುಪಡಿಯೂ ಇದ್ದು ಅದನ್ನು ಕೂಡ ಅದಕ್ಕೆ ಸೇರಿಸಬೇಕು ಎಂದು ನನಗನಿಸುತ್ತದೆ. ಅದನ್ನು ಕೂಡ ಸೇರಿಸಬೇಕೇ?

**ಶ್ರೀ ಕೆ.ಎಮ್. ಮುನ್ಷಿ :** ಪಂಡಿತ್ ಠಾಕೂರ್‌ದಾಸ್ ಭಾರ್ಗವರ ತಿದ್ದುಪಡಿ ಸಂಖ್ಯೆ ೨೪ ಪೂರ್ವ ಪಂಜಾಬಿಗೆ ಸಂಬಂಧಿಸಿದ್ದಾಗಿದೆ. ಅದಕ್ಕೆ ನಾನು ಗೌರವಾನ್ವಿತ ಮಂಡನೆಕಾರರ ಉದ್ದೇಶವನ್ನು ಒಯ್ಯಲು (ಸಂಖ್ಯೆ. ೩) ತಿದ್ದುಪಡಿಯನ್ನು ಜಾರಿಗೆ ತರಲು ಪ್ರಸ್ತಾವಿಸಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ನಾವು ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಈ ಹಂತದಲ್ಲಿ ತೆಗೆದುಕೊಳ್ಳೋಣ.

**ಪಂಡಿತ್ ಠಾಕೂರ್‌ದಾಸ್ ಭಾರ್ಗವ :** ಖಂಡ ೩ರ (ಸಿ)ಗೆ ನನ್ನ ತಿದ್ದುಪಡಿಯನ್ನು ನಾನು ಮಂಡಿಸುತ್ತಿದ್ದೇನೆ. ಅದು ಹೀಗಿದೆ.

"ಕಂಡಿಕೆ ೩ರ ಉಪಕಂಡಿಕೆ (ಸಿ)ನಲ್ಲಿ 'ಸ್ಥಾನಗಳು' ಶಬ್ದಕ್ಕೆ 'ಪ್ರಾತಿನಿಧ್ಯ' ಶಬ್ದವನ್ನು ಪ್ರತಿಯೋಜಿಸಬೇಕು."

**ಶ್ರೀ ಕೆ.ಎಮ್. ಮುನ್ಷಿ :** ಮಾನ್ಯರೆ, ನಾನು ಈ ಕೆಳಗಿನಂತೆ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"ದಿನಾಂಕ ೨೫ನೇ ಆಗಸ್ಟ್ ೧೯೪೭ರ ಪಟ್ಟಿ ೧ರ ತಿದ್ದುಪಡಿ ಸಂಖ್ಯೆ ೨ರಲ್ಲಿ ಖಂಡ ೩ರ ಶಬ್ದಗಳು (ಸಿ)ಗೆ

'ಸ್ಥಾನಗಳು' ಶಬ್ದಕ್ಕೆ 'ಪ್ರಾತಿನಿಧ್ಯ' ಶಬ್ದವನ್ನು ಪ್ರತಿಯೋಜಿಸಬೇಕು.

ಕಂಡಿಕೆ ೩ರ (ಬಿ) ಕೊನೆಗೆ ಸಿಖ್ಖರು (ಬಿ) ಇತ್ಯಾದಿ ಎಂದು ಆರಂಭವಾಗುವ ಶಬ್ದಗಳನ್ನು ತೆಗೆದು ಕೆಳಗಿನದನ್ನು ಪ್ರತಿಯೋಜಿಸಬೇಕು.

'ಪೂರ್ವ ಪಂಜಾಬ್(ಬಿ). ಪೂರ್ವ ಪಂಜಾಬಿನ ವಿಶೇಷ ಸನ್ನಿವೇಶದ ದೃಷ್ಟಿಯಿಂದ ಅದಕ್ಕೆ ಸಂಬಂಧಿಸಿದ ಇಡೀ ಪ್ರಶ್ನೆಯನ್ನು ಮುಂದೆ ಗಮನಿಸಲಾಗುವುದು.'"

ನನ್ನ ತಿದ್ದುಪಡಿ ಸಮ್ಮತವಾದರೆ, ಖಂಡ ಕೆಳಗಿನಂತೆ ಇರುತ್ತದೆ:

"ಸಿಖ್ಖರು (ಬಿ): ಪೂರ್ವ ಪಂಜಾಬಿನ ವಿಶೇಷ ಸನ್ನಿವೇಶದ ದೃಷ್ಟಿಯಿಂದ ಸಂಬಂಧಿಸಿದ ಇಡೀ ಪ್ರಶ್ನೆಯನ್ನು ಮುಂದೆ ಗಮನಿಸಲಾಗುತ್ತದೆ."

ಇದು ಪ್ರಸ್ತುತ ಕಂಡಿಕೆಯ ಸ್ಥಾನದಲ್ಲಿ ಪ್ರತಿಯೋಜಿಸಲ್ಪಡುತ್ತದೆ.

**ಶ್ರೀ ಎಸ್.ಎಂ. ರಿಜ್ವಾನ್ ಅಲ್ಲಾಹ್** (ಉ.ಪ್ರ. : ಸಾಮಾನ್ಯ) : ಮಾನ್ಯರೆ, ಈ ತಿದ್ದುಪಡಿ ಮೇಲೆ ಒಂದು ಕ್ರಿಯಾಲೋಪ ಎತ್ತಲು ನಾನು ಕೇಳಿಕೊಳ್ಳುತ್ತೇನೆ. ಇದು ಅಲ್ಪಸಂಖ್ಯಾತರ ಸಮಿತಿಯ ಒಂದು ವರದಿ. ವಿವಿಧ ಅಲ್ಪಸಂಖ್ಯಾತರನ್ನು ಕುರಿತು ಈ ವರದಿಯಲ್ಲಿ ವಿವಿಧ ನಿಬಂಧನೆಗಳನ್ನು ಹಾಕಲಾಗಿದೆ. ಸಿಖ್ಖರಿಗೆ ಸಂಬಂಧಿಸಿದಂತೆ, ಅಲ್ಪಸಂಖ್ಯಾತರ ಸಮಿತಿ ವರದಿಯಲ್ಲಿ ಯಾವ ನಿರ್ಧಾರವನ್ನೂ ತೆಗೆದುಕೊಂಡಿಲ್ಲ. ಈ ವರದಿಯಲ್ಲಿ ಸಿಖ್ಖರನ್ನು ಕುರಿತಂತೆ ವಿಷಯವನ್ನು ಮುಂದೆ ನಿರ್ಧರಿಸಲಾಗುತ್ತದೆ ಎಂದು ಹೇಳಲಾಗಿದೆ. ಈಗ ಸಿಖ್ಖರ ಬದಲಿಗೆ ಒಂದು ಪ್ರಾಂತ್ಯವನ್ನು ಸ್ಥಾನಪಲ್ಲಟಗೊಳಿಸಲು ಒಂದು ತಿದ್ದುಪಡಿಯನ್ನು ಮಂಡಿಸಲಾಗಿದೆ ಮತ್ತು ಹಾಗಾಗಿ ಒಂದು ಅಲ್ಪಸಂಖ್ಯಾತರ ಸ್ಥಾನದಲ್ಲಿ ರಾಜ್ಯ ಪ್ರದೇಶ ಕುರಿತು ಒಂದು ವಿವಾದ ತರಲಾಗಿದೆ. ಇದು ಅಲ್ಪಸಂಖ್ಯಾತರ ಒಂದು ವರದಿ; ಮತ್ತು ಯಾವುದೇ ಪ್ರಾಂತ್ಯದೊಂದಿಗೆ ಇದು ಸಂಬಂಧಿಸಿಲ್ಲ ಆದುದರಿಂದ ತಿದ್ದುಪಡಿ ಕ್ರಮವಾಗಿಲ್ಲ.

**ಮಾನ್ಯ ಸಭಾಧ್ಯಕ್ಷರು** : ನಿಜವಾಗಿ ಕ್ರಿಯಾಲೋಪ ಉದ್ಭವಿಸುತ್ತದೆ ಎಂದು ನನಗನಿಸುವುದಿಲ್ಲ ಹಾಗೆ ನೋಡಿದರೆ ಆ ಪ್ರಾಂತ್ಯದಲ್ಲಿ ಇತರ ಅಲ್ಪಸಂಖ್ಯಾತರಿದ್ದಾರೆ ಮತ್ತು ಅಲ್ಪಸಂಖ್ಯಾತರ ಸಂಬಂಧದ ಇಡೀ ಪ್ರಶ್ನೆ ತಡೆಹಿಡಿದಿದ್ದು ಅದು ಕ್ರಮವಾಗಿಯೇ ಇದೆ.

ನಾನು ಈಗ ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಮುಂದಿಡುತ್ತೇನೆ :

"ಕಂಡಿಕೆ ೩ರ(ಬಿ), 'ಸಿಖ್ಖರು(ಬಿ)' ನೊಂದಿಗೆ ಆರಂಭವಾಗುವ ಶಬ್ದಗಳನ್ನು ತೆಗೆದುಹಾಕಿ. ಸಿಖ್ಖರಿಗೆ ಅಲ್ಪಸಂಖ್ಯಾತರ ಹಕ್ಕುಗಳ ಪ್ರಶ್ನೆಯನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುತ್ತದೆ ಮತ್ತು ಕೆಳಗಿರುವುದನ್ನು ಪ್ರತಿಯೋಜಿಸಿರಿ."

'ಪೂರ್ವ ಪಂಜಾಬ್ (ಬಿ): ಪೂರ್ವ ಪಂಜಾಬ್‌ನ ವಿಶೇಷ ಸನ್ನಿವೇಶದ ದೃಷ್ಟಿಯಿಂದ ಅದಕ್ಕೆ ಸಂಬಂಧಿಸಿದ ಇಡೀ ಪ್ರಶ್ನೆಯನ್ನು ಮುಂದೆ ಪರಿಗಣಿಸಲಾಗುತ್ತದೆ.'"

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :**

ಮುಸ್ಲಿಮರು ಮತ್ತು ಅನುಸೂಚಿತ ಜಾತಿಗಳು: (ಸಿ) ಅವರ ಜನಸಂಖ್ಯೆ ಆಧಾರದ ಮೇರೆಗೆ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ಮುಸ್ಲಿಮರು ಮತ್ತು ಅನುಸೂಚಿತ ಜಾತಿಗಳಿಗೆ ಸ್ಥಾನಗಳ ಮೀಸಲಾತಿ ಇರತಕ್ಕದ್ದು.

ನಾನು ಮೇಲಿನ ಖಂಡವನ್ನು ಸದನದ ಸಮ್ಮತಿಗೆ ಮಂಡಿಸುತ್ತೇನೆ.

**ಪ್ರೊ. ಶಿಬನ್‌ಲಾಲ್ ಸಕ್ಸೇನ** : ಮಾನ್ಯ ಸಭಾಧ್ಯಕ್ಷರೆ, ಶ್ರೀ ಮುನ್ಷಿ ಅವರ ಮತ್ತು ನನ್ನ ಖಂಡ ೧ಕ್ಕೆ ತಿದ್ದುಪಡಿಗಳನ್ನು ಸಮ್ಮತಿಸಲಾಗಿರುವುದರಿಂದ ಕಂಡಿಕೆ ೩ರಲ್ಲಿ ಶಬ್ದಗಳು "ಮತ್ತು ಅನುಸೂಚಿತ ಜಾತಿಗಳು" ಎಲ್ಲೆಲ್ಲಿ ಬಂದಿವೆಯೋ ಅಲ್ಲಿ ಅವುಗಳನ್ನು ಬಿಡುವುದು ಆವಶ್ಯಕ.

**ಮಾನ್ಯ ಸಭಾಧ್ಯಕ್ಷರು** : ನಾನು ಅದನ್ನು ಒಂದು ತತ್ಪರಿಣಾಮದ ತಿದ್ದುಪಡಿ ಎಂದು ತೆಗೆದುಕೊಳ್ಳುತ್ತೇನೆ ನಾವೀಗಾಗಲೇ ಇನ್ನೆಲ್ಲಿಯೋ ಅನುಸೂಚಿತ ಜಾತಿಯ ವ್ಯಾಖ್ಯೆಯನ್ನು ಒಪ್ಪಿದ್ದೇವೆ ಮತ್ತು ಅದನ್ನೇ ಇಲ್ಲಿ ಅಳವಡಿಸಲಾಗುತ್ತೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ತಿದ್ದುಪಡಿಯನ್ನು ಮಾತ್ರ ಮತಕ್ಕೆ ಹಾಕಿದ್ದೇನೆ. ತಿದ್ದುಪಡಿಯಾದ ಖಂಡವನ್ನು ಈಗ ಮತಕ್ಕೆ ಹಾಕಲಾಗಿದೆ.

ಖಂಡವನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಗಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :**

"ಅಲ್ಪಸಂಖ್ಯಾತರಿಗೆ ಹೆಚ್ಚುವರಿ ಹಕ್ಕುಗಳು ಮೀಸಲು ಸ್ಥಾನಗಳನ್ನು ಪಡೆದಿರುವ ಅಲ್ಪಸಂಖ್ಯಾತ ಸಮುದಾಯದ ಸದಸ್ಯರಿಗೆ ಮೀಸಲಿಟ್ಟಿರದ ಸ್ಥಾನಗಳಿಗೆ ಸ್ಪರ್ಧಿಸುವ ಹಕ್ಕುಂಟು."

ಈ ಬಾಬಿನ ಬಗ್ಗೆ ಸಲಹಾ ಸಮಿತಿ ಮತ್ತು ಅಲ್ಪಸಂಖ್ಯಾತರ ನಡುವೆ ಬಿಸಿಬಿಸಿ ವಾದವಿವಾದಗಳು ಎದ್ದಿದ್ದವು. ಸುದೀರ್ಘ ಚರ್ಚೆಯ ಅನಂತರ, ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು. ಇಕ್ಕೆಡೆಗಳಲ್ಲೂ ಈ ಪ್ರಸ್ತಾವ ಅಂಗೀಕರಿಸಲ್ಪಟ್ಟಿರುವುದರಿಂದ, ಇದೇ ವಿಷಯವನ್ನು ಮತ್ತೆ ಚರ್ಚೆಗೆ ತೆರೆದಿಡುವುದು ವಿವೇಕವಲ್ಲ. ಇಷ್ಟಕ್ಕೂ ಈ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ, ಇದನ್ನು ಯಥಾರೂಪದಲ್ಲಿ ಅಂಗೀಕರಿಸುವುದು ಉತ್ತಮ. ಸದನದ ಅಂಗೀಕಾರಕ್ಕಾಗಿ ನಾನು ಈ ಪ್ರಸ್ತಾವವನ್ನು ಮಂಡಿಸುತ್ತೇನೆ.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಸರ್ದಾರ್ ಸಾಹೇಬರು ಈಗಷ್ಟೆ ಹೇಳಿರುವಂತೆ, ಅಲ್ಪಸಂಖ್ಯಾತರು ಮತ್ತು ಸಲಹಾಸಮಿತಿಗಳ ನಡುವೆ ೪ನೇ ಖಂಡವನ್ನು ಕುರಿತಂತೆ ಸಾಕಷ್ಟು ಚರ್ಚೆ ನಡೆದಿದೆ. ಅಲ್ಪಸಂಖ್ಯಾತರ ಮಟ್ಟಿಗೆ ಹೇಳುವುದಾದರೆ, ವಾಸ್ತವವಾಗಿ ಆ ರೀತಿಯಲ್ಲಿ ಕರೆಯಲಾಗದ ಅನೇಕ ಅಲ್ಪಸಂಖ್ಯಾತರಿದ್ದಾರೆ. ಉದಾಹರಣೆಗೆ ಹರಿಜನರು. ವಾಸ್ತವವಾಗಿ ಅವರು ಹಿಂದೂಗಳೆ. ಅವರು ಮುಸ್ಲಿಮರಂತೆ, ಕ್ರೈಸ್ತರಂತೆ ಅಲ್ಪಸಂಖ್ಯಾತರಲ್ಲ. ಆದುದರಿಂದ ಅವರನ್ನು ಒಂದು ಬಗೆಯಲ್ಲೂ, ಮಿಕ್ಕವರನ್ನು ಮತ್ತೊಂದು ಬಗೆಯಲ್ಲೂ ಪರಿಗಣಿಸಬೇಕು. ಹರಿಜನರು ಅತಿಯಾದ ತುಳಿಕ್ಕೆ ಒಳಗಾದವರು. ಈ ವಿಷಯವೂ ಸಹ ಪ್ರತ್ಯೇಕವಾದ ಪರಿಗಣನೆಗೆ ಒಳಪಡಬೇಕು ಈ ಸಂದರ್ಭದಲ್ಲಿ ನಾನೊಂದು ಮಾತು ಹೇಳಬೇಕಿದೆ. ಸರ್ದಾರ್ ಸಾಹೇಬರು, ಇಂದು ಮತಕ್ಕೆ ಹಾಕದೆ ನಾಳೆಗೆ ಮುಂದೂಡಿದರೆ, ಹೆಚ್ಚು ಸೂಕ್ತವೆನಿಸುತ್ತದೆ. ಏಕೆಂದರೆ, ಅದರ ಬಗ್ಗೆ ಅನೇಕರು ಆಲೋಚಿಸಬೇಕೆಂದಿದ್ದಾರೆ ಮತ್ತು ಅವರೆಲ್ಲ ತಮ್ಮ ತಮ್ಮಲ್ಲೆ ಚರ್ಚಿಸುತ್ತಿದ್ದಾರೆ. ಸದನದ ಎಲ್ಲ ಸದಸ್ಯರಿಗೂ ಅಲ್ಪ ಸಂಖ್ಯಾತರಿಗೂ ತೃಪ್ತಿತರುವಂತೆ ವಿಷಯವನ್ನು ಇತ್ಯರ್ಥಗೊಳಿಸಬೇಕೆಂಬುದು ನನ್ನ ಅಭಿಪ್ರಾಯ. ಆದುದರಿಂದ ಇದನ್ನು ನಾಳೆಗೆ ಮುಂದೂಡುವಂತೆ, ಸರ್ದಾರ್ ಸಾಹೇಬರನ್ನು ವಿನಂತಿಸುತ್ತೇನೆ. ಇಂದು ಪರಿಶೀಲಿಸಬಹುದಾದ ಅನೇಕ ಶಿಫಾರಸುಗಳಿವೆ]*

**ಶ್ರೀ ಆರ್.ವಿ. ಧುಲೇಕರ್** (ಉತ್ತರ ಪ್ರದೇಶ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಇದೊಂದು ಸಂಕೀರ್ಣ, ವಿವಾದಾಸ್ಪದ ವಿಷಯ. ಇದನ್ನು ಸೂಕ್ತವಾಗಿ ಪರಿಶೀಲಿಸುವುದಕ್ಕೆ ನಮಗೆ ಸಾಧ್ಯವಾಗುವಂತೆ, ನಾಳೆಗೆ ಮುಂದೂಡುವಂತೆ ನಾನು ಸಹ ಕೋರುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಈ ಬಾಬನ್ನು ನಾಳೆಗೆ ಮುಂದೂಡುವಂತೆ ಒಂದು ಸಲಹೆ ಬಂದಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ಈ ವಿಷಯವನ್ನು ಕುರಿತು ಅಲ್ಪಸಂಖ್ಯಾತರ ಸಮಿತಿ ಮತ್ತು ಸಲಹಾ ಸಮಿತಿಯ ನಡುವೆ ನಡೆದ ಪೂರ್ಣಪ್ರಮಾಣದ ಚರ್ಚೆಯ ಬಗ್ಗೆ ನಾನಾಗಲೆ ಸದನಕ್ಕೆ ತಿಳಿಸಿದ್ದೇನೆ. ಇಷ್ಟಾದರೂ ನನ್ನ ಗೆಳೆಯರು ನಾಳೆಗೆ ಮುಂದೂಡಲು ಬಯಸಿದರೆ, ನಾನು ಅದನ್ನು

ತಡೆಯುವುದು ಅನಿವಾರ್ಯ. ಕಾರಣವೇನೆಂದರೆ, ಅದರಿಂದೇನೂ ಪ್ರಯೋಜನವಾಗದು. ಎರಡು ದಿನ ಪೂರ್ಣ ಪ್ರಮಾಣದ ಚರ್ಚೆಗಳಾದವು. ಚರ್ಚೆಗಳ ನಂತರ, ಈಗ ಮುಂದಿಡುತ್ತಿರುವ ನಿರ್ಣಯುವನ್ನು ಅಂಗೀಕರಿಸಲಾಯಿತು. ಇದನ್ನು ಮುಂದೂಡುವುದರಿಂದ ಯಾವುದೇ ಫಾಯಿದೆ ಇಲ್ಲ. ಹಾಗೊಮ್ಮೆ ಇದ್ದುದಾದರೆ ನಾನು ಸಮ್ಮತಿಸುತ್ತಿದ್ದೆ. ಆದರೆ ಮುಂದೂಡಿಕೆ ನಿಷ್ಪ್ರಯೋಜಕ. ಇದು ಎರಡು ಸಮಿತಿಗಳಿಂದ ಅಂಗೀಕರಿಸಲ್ಪಟ್ಟಿದೆ. ಕೇವಲ ಅಲ್ಪಮತಗಳ ಅಂತರದಲ್ಲಿ ಅಲ್ಲ. ಆದ್ದರಿಂದ ನನಗೆ ಯಾವುದೇ ಅನುಕೂಲ ಕಾಣುತ್ತಿಲ್ಲ. ಮುಂದೂಡುವುದೆಂದರೆ ಸಮಯ ವ್ಯರ್ಥ ಅಷ್ಟೇ. ಆದ್ದರಿಂದ ಇದನ್ನು ಅಂಗೀಕರಿಸಬೇಕೆಂದು ನಾನು ಮಂಡಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಏನೇ ಆಗಲಿ, ನೀವು ನಾಲ್ಕೂವರೆ ಗಂಟೆಗೆ ಸಭೆ ಮುಕ್ತಾಯಗೊಳಿಸಬೇಕು. ಅದು ತಂತಾನೆ ನಾಳೆಗೆ ಮುಂದೂಡಲ್ಪಡಬೇಕಾಗುತ್ತದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ನಾವು ಸಧನದ ಅಪೇಕ್ಷೆ ಮತ್ತು ಅಧ್ಯಕ್ಷ ಪೀಠದ ನಿರ್ಣಯಕ್ಕೆ ಬದ್ಧರು. ಆದರೆ ಇದನ್ನು ಮತಕ್ಕೆ ಹಾಕುವುದಿದ್ದಲ್ಲಿ ಅದನ್ನು ಕೂಡಲೇ ಮಾಡಲಾಗುತ್ತದೆ

**ಮಾನ್ಯ ಸಭಾಧ್ಯಕ್ಷರು :** ಆದರೆ ಕೆಲವರು ಸದಸ್ಯರು ಮತ್ತಷ್ಟು ಚರ್ಚೆ ಇರಬೇಕು ಎಂಬ ಅಭಿಲಾಷೆ ವ್ಯಕ್ತ ಪಡಿಸಿರುವುದರಿಂದ ನಾನು ಅವರನ್ನು ನಿರುತ್ಸಾಹಗೊಳಿಸಲು ಇಷ್ಟ ಪಡುವುದಿಲ್ಲ. ಅವರು ಅದರ ಬಗೆಗೆ ಮಾತನಾಡಲು ಇಚ್ಛಿಸುತ್ತಾರೆ. ನಮಗೆ ಒಂದು ಸಂಪುಟ ಸಭೆ ಇದೆ. ನಮ್ಮಲ್ಲಿ ಕೆಲವರು ಅಲ್ಲಿಗೆ ಐದು ಘಂಟೆಗೆ ಹೋಗಬೇಕಿದೆ. ಸದನವನ್ನು ನಾಳೆ ಬೆಳಗ್ಗೆ ೧೦ ಗಂಟೆಯ ವರೆಗೆ ಮುಂದೂಡಲಾಗಿದೆ.

ಅನಂತರ ೨೮ನೇ ಆಗಸ್ಟ್ ೧೯೪೭ರ ಗುರುವಾರ ಬೆಳಗ್ಗೆ ಹತ್ತು ಗಂಟೆಗೆ ಸಭೆಯನ್ನು ಮುಂದೂಡಲಾಗಿದೆ

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.]*

ಸಂಖ್ಯೆ: ಸಿ ಎ/೨೪/ಕಾಮ್./೪೭.

**ಭಾರತದ ಸಂವಿಧಾನ ರಚನಾಸಭೆ**

ಕೌನ್ಸಿಲ್ ಹೌಸ್

ನವದೆಹಲಿ, ೮ನೇ ಆಗಸ್ಟ್ ೧೯೪೭.

ಇಂದ,

ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್
ಅಧ್ಯಕ್ಷರು, ಅಲ್ಪಸಂಖ್ಯಾತರ ಸಲಹಾ ಸಮಿತಿ
ಕುರಿತ ಮೂಲಭೂತ ಹಕ್ಕುಗಳು, ಇತ್ಯಾದಿ

ಗೆ,

ಸಭಾಧ್ಯಕ್ಷರು
ಭಾರತದ ಸಂವಿಧಾನ ರಚನಾಸಭೆ

ಮಾನ್ಯರೆ,

೧೯೪೭ರ ಜನವರಿ ೨೪ರಂದು ಸಂವಿಧಾನ ರಚನಾಸಭೆಯಿಂದ ನೇಮಕಗೊಂಡ ಮತ್ತು ತಮ್ಮಿಂದ ತರುವಾಯ ನಾಮ ನಿರ್ದೇಶಿತವಾದ ಸಲಹಾ ಸಮಿತಿ ಸದಸ್ಯರ ಪರವಾಗಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಕುರಿತ ಈ ವರದಿಯನ್ನು ನಿವೇದಿಸುವ ಗೌರವ ನನ್ನ ಪಾಲಿಗೆ ಸಂದಿದೆ. ಇದನ್ನು ನನ್ನ ಪತ್ರ ಸಂಖ್ಯೆ ಸಿ–ಎ/೨೪/ ಕಾಮ್/೪೭ ದಿನಾಂಕ ೨೩ನೇ ಏಪ್ರಿಲ್ ೧೯೪೭ದೊಂದಿಗೆ ಕಳುಹಿಸಿಕೊಡಲಾದುದಕ್ಕೆ ಮತ್ತು ಏಪ್ರಿಲ್ ಅಧಿವೇಶನ ಕಾಲದಲ್ಲಿ ವಿಧಾಯಕ ಸಭೆಯೊಂದಿಗೆ ವ್ಯವಹರಿಸಿದುದಕ್ಕೆ ಪೂರಕವಾಗಿ ಪರಿಗಣಿಸಬೇಕಿದೆ. ಆ ವರದಿಯು ನ್ಯಾಯಸಮ್ಮತ ಮೂಲಭೂತ ಹಕ್ಕುಗಳನ್ನು ಕುರಿತದ್ದಾಗಿದೆ. ಈ ಹಕ್ಕುಗಳು ಸಾಮಾನ್ಯವಾಗಿ ಎಲ್ಲ ನಾಗರಿಕರಿಗೆ ಅನ್ವಯವಾಗುವುದೇ ಅಥವಾ ನಿರ್ದಿಷ್ಟವಾಗಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಅನ್ವಯವಾಗುವುದೇ ಎಂಬುವುದು ಸಾಮಾಜಿಕ ಜೀವನದ ಒಂದು ವ್ಯಾಪಕ ಕ್ಷೇತ್ರವಾರು ಅಲ್ಪಸಂಖ್ಯಾತರಿಗೆ ಅತ್ಯಂತ ಮೌಲಿಕ ರಕ್ಷಣೆ ಕೊಡುತ್ತದೆ. ಪ್ರಸ್ತುತ ವರದಿಯು ರಾಜಕೀಯ ರಕ್ಷಣೆಗಳೆಂದು ವ್ಯಾಪಕವಾಗಿ ಯಾವುದನ್ನು ವಿವರಿಸಬಹುದೋ ಅಂತಹುದೆಲ್ಲವನ್ನು ಕುರಿತದ್ದು ಮತ್ತು ಅದು ಕೆಳಗಿನ ಅಂಶಗಳನ್ನು ಒಳಗೊಳ್ಳುತ್ತದೆ.

(i) ಶಾಸನಸಭೆಗಳಲ್ಲಿ ಪ್ರಾತಿನಿಧ್ಯ; ಜಂಟಿ ವಿರುದ್ಧ ಪ್ರತ್ಯೇಕ ಮತದಾರರ ಸೌಲಭ್ಯಗಳು ಮತ್ತು ಹೆಚ್ಚಿನ ಸೌಲಭ್ಯಗಳು.

(ii) ಸಂಪುಟಗಳಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ.

(iii) ಸಾರ್ವಜನಿಕ ಸೇವೆಗಳಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ.

(iv) ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ಭರವಸೆಗೆ ಆಡಳಿತಾತ್ಮಕ ಯಂತ್ರ.

೨. ನಮ್ಮ ಶಿಫಾರಸುಗಳು ಅಲ್ಪಸಂಖ್ಯಾತರನ್ನು ಕುರಿತ ಉಪಸಮಿತಿ ಹಾಗೂ ಮುಖ್ಯ ಸಲಹಾ ಸಮಿತಿ

ಎರಡರಲ್ಲೂ ನಡೆದ ಪ್ರತ್ಯೇಕ ಚರ್ಚೆಯನ್ನು ಆಧರಿಸಿವೆ. ವಿಷಯಗಳು ಮೇಲು ನೋಟದಿಂದಲೆ ತಿಳಿಸುವಂತೆ ಅವುಗಳನ್ನು ಕುರಿತು ಸಂಪೂರ್ಣ ಒಮ್ಮತ ನಿರೀಕ್ಷೆ ಕಷ್ಟವಾಗಿತ್ತು. ಹೇಗೇ ಇರಲಿ ನಾನು ನಮ್ಮ ಶಿಫಾರಸುಗಳು ಎಲ್ಲೆಲ್ಲಿ ಸರ್ವಾನುಮತವಿರಲಿಲ್ಲವೋ ಅಲ್ಲೆಲ್ಲ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಸಾಕಷ್ಟು ಸದಸ್ಯರನ್ನೊಳಗೊಂಡ ಬಹುದೊಡ್ಡ ಬಹುಸಂಖ್ಯಾತರಿಂದ ಆಯ್ಕೆ ಮಾಡಲಾಯಿತು ಎಂದು ನಿಮಗೆ ತಿಳಿಸಲು ಹರ್ಷಿಸುತ್ತೇನೆ.

ಜಂಟಿ ವಿರುದ್ಧ ಪ್ರತ್ಯೇಕ ಮತದಾರರ ಸಮುದಾಯಗಳು ಮತ್ತು ಸೌಲಭ್ಯಗಳು.

೩. ನಿಭಾಯಿಸಲಾದ ಮೊದಲ ಪ್ರಶ್ನೆಯೇ ಪ್ರತ್ಯೇಕ ಮತದಾರರ ಸಮುದಾಯಗಳದ್ದು; ನಾವು ಇದು ಅಲ್ಪಸಂಖ್ಯಾತರಿಗೆ ಮತ್ತು ಇಡಿಯಾಗಿ ದೇಶದ ರಾಜಕೀಯ ಜೀವನ ಎರಡಕ್ಕೂ ನಿರ್ಣಾಯಕವಾಗಿದೆ ಎಂದು ಪರಿಗಣಿಸಿದೆವು. ಸ್ತಬ್ಧಗೊಳಿಸಿದ ಬಹುಮತದಿಂದ ನಾವು ಪ್ರತ್ಯೇಕ ಮತದಾರರ ಸಮುದಾಯಗಳ ವ್ಯವಸ್ಥೆಯನ್ನು ಹೊಸ ಸಂವಿಧಾನದಲ್ಲಿ ರದ್ದುಗೊಳಿಸಬೇಕೆಂಬ ತೀರ್ಮಾನಕ್ಕೆ ಬಂದೆವು. ನಮ್ಮ ನ್ಯಾಯ ತೀರ್ಮಾನದಲ್ಲಿ ಈ ವ್ಯವಸ್ಥೆಯು ಹಿಂದೆ ಕೋಮುಭೇದಗಳನ್ನು ಒಂದು ಅಪಾಯಕಾರಿ ಮಟ್ಟಕ್ಕೆ ಒಯ್ದು ಆರೋಗ್ಯಕರ ರಾಷ್ಟ್ರೀಯ ಜೀವನದ ಅಭಿವೃದ್ಧಿಗೆ ಮುಖ್ಯ ಅಡಚಣೆ ಉಂಟುಮಾಡುವ ಘಟಕಗಳಲ್ಲಿ ಒಂದು ಎಂದು ಸಾಬೀತು ಮಾಡಿದೆ. ದೇಶದಲ್ಲಿ ಹೊಸ ರಾಜಕೀಯ ಬೆಳವಣಿಗೆಗಳಲ್ಲಿ ಈ ಅಪಾಯಗಳನ್ನು ತಪ್ಪಿಸುವುದು ವಿಶೇಷವಾಗಿ ಅವಶ್ಯ ಎಂದು ತೋರುತ್ತಿದೆ ಮತ್ತು ಈ ದೃಷ್ಟಿಯಿಂದ ಪ್ರತ್ಯೇಕ ಮತದಾರರ ಸಮುದಾಯಗಳ ವಿರುದ್ಧ ವಾದಗಳು ನಮಗೆ ಸಂಪೂರ್ಣ ನಿರ್ಣಾಯಕ ಎಂದು ತೋರುತ್ತದೆ.

೪. ಅಂತೆಯೇ ನಾವು ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಎಲ್ಲ ಚುನಾವಣೆಗಳನ್ನು ಜಂಟಿ ಮತದಾರರ ಸಮುದಾಯಗಳ ಆಧಾರದ ಮೇರೆಗೆ ನಡೆಸಬೇಕು ಎಂದು ಶಿಫಾರಸ್ಸು ಮಾಡುತ್ತೇವೆ. ಅಲ್ಪಸಂಖ್ಯಾತರು ಶಾಸನಸಭೆಯಲ್ಲಿ ಅವರ ಪ್ರಾತಿನಿಧ್ಯದ ಪರಿಣಾಮದ ಮೇಲೆ ಅನಿರ್ಬಂಧಿತ ಜಂಟಿ ಮತದಾರರ ಸಮುದಾಯಗಳು ವ್ಯವಸ್ಥೆಯ ಪರಿಣಾಮದಿಂದ ಆತಂಕಕ್ಕೊಳಗಾಗಬಾರದೆಂದು ನಾವು ಒಂದು ಸಾಮಾನ್ಯ ನಿಯಮವಾಗಿ, ಗುರುತಿಸಿದ ವಿವಿಧ ಅಲ್ಪಸಂಖ್ಯಾತರ ಸ್ಥಾನಗಳನ್ನು ವಿವಿಧ ಶಾಸನಸಭೆಗಳಲ್ಲಿ ಅವರ ಜನಸಂಖ್ಯೆಯ ಆಧಾರದ ಮೇರೆಗೆ ಮೀಸಲಿಡತಕ್ಕದ್ದು ಎಂದು ಶಿಫಾರಸು ಮಾಡುತ್ತೇವೆ. ಮೀಸಲಾತಿಯು ಆರಂಭದಲ್ಲಿ ೧೦ ವರ್ಷಗಳ ಅವಧಿಗೆ ಇರತಕ್ಕದ್ದು, ಆ ಅವಧಿಯ ಅಂತ್ಯದಲ್ಲಿ ಸ್ಥಿತಿಯನ್ನು ಪುನಃ ಗಮನಿಸಬೇಕು. ನಾವು ಮೀಸಲು ಸ್ಥಾನಗಳನ್ನು ಹೊಂದಿರುವ ಅಲ್ಪಸಂಖ್ಯಾತ ಸಮುದಾಯದ ಸದಸ್ಯರು ಮೀಸಲಿರಿಸದ ಸ್ಥಾನಗಳಿಗೂ ಸ್ಪರ್ಧಿಸುವ ಹಕ್ಕು ಹೊಂದಿರುತ್ತಾರೆ ಎಂದೂ ಕೂಡಾ ಶಿಫಾರಸು ಮಾಡುತ್ತೇವೆ. ಒಂದು ಸಾಮಾನ್ಯ ತತ್ತ್ವವಾಗಿ ನಾವು ಯಾವುದೇ ಅಲ್ಪಸಂಖ್ಯಾತ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯಗಳಿಗೆ ವಿರುದ್ಧವಿರುತ್ತೇವೆ.

೫. ಸಮಿತಿಯು ಎರಡು ಕಾರಣಗಳಿಗಾಗಿ ಮೇಲಿನ ತತ್ತ್ವಗಳನ್ನು ವಿಶಿಷ್ಟ ಅಲ್ಪಸಂಖ್ಯಾತರಿಗೆ ಅನ್ವಯಿಸುವುದನ್ನು ಕುರಿತು ವಿವರವಾಗಿ ಪರಿಗಣಿಸಿದೆ. ಮೊದಲಿಗೆ ಅಲ್ಪಸಂಖ್ಯಾತರು ತಮ್ಮ ಹಿತದೃಷ್ಟಿಯಿಂದಲೆ ಶಾಸನಸಭೆಗಳಲ್ಲಿ, ಸ್ಥಾನಗಳ ಶಾಸನ ಬದ್ಧ ಮೀಸಲಾತಿಯ ಅಗತ್ಯವನ್ನು ಕುರಿತಂತೆ ಏಕರೂಪಿ ಅಭಿಪ್ರಾಯವನ್ನು ತಳೆಯುವುದು ಸಾಧ್ಯವಿಲ್ಲವೆಂಬುದು ನಮಗೆ ಗೊತ್ತು. ಅತ್ಯಲ್ಪ ಸಂಖ್ಯಾತರಾದ ಆಂಗ್ಲೊ ಇಂಡಿಯನ್ನರ ವಿಷಯದಲ್ಲಿ ಮೇಲಿನ ನಿಯಮಗಳನ್ನು ಕಟ್ಟು ನಿಟ್ಟಾಗಿ ಅಳವಡಿಸಲು ಎಚ್ಚರಿಕೆವಹಿಸಿ ಪರೀಕ್ಷಿಸಬೇಕಿರುವುದು ಎರಡನೇ ಕಾರಣ. ನಾವು ಅಂತೆಯೇ ಅಲ್ಪಸಂಖ್ಯಾತರನ್ನು ಮೂರು ವರ್ಗಗಳಾಗಿ ವರ್ಗೀಕರಿಸಿದೆವು 'ಎ' – ರಾಜ್ಯಗಳನ್ನು ಹೊರತು ಪಡಿಸಿ ಭಾರತೀಯ ಪ್ರಭುತ್ವದಲ್ಲಿ ಶೇ. ½ಕ್ಕಿಂತ ಕಡಿಮೆ ಜನಸಂಖ್ಯೆ ಉಳ್ಳ ವರ್ಗ, ವರ್ಗ 'ಬಿ'ಯು ಶೇ.½ಕ್ಕಿಂತ ಹೆಚ್ಚಿರುವ ಆದರೆ ಶೇ.½ ಮೀರದ ಜನಸಂಖ್ಯೆ ಉಳ್ಳವರ್ಗ ಮತ್ತು ವರ್ಗ 'ಸಿ' ಶೇ. ೧½ಗಿಂತ ಹೆಚ್ಚಿನ ಜನಸಂಖ್ಯೆ ಉಳ್ಳ ವರ್ಗ. ಈ ಮೂರು ವರ್ಗಗಳು ಕೆಳಗಿನಂತಿವೆ.

ವರ್ಗ 'ಎ'–

೧. ಆಂಗ್ಲೋ ಇಂಡಿಯನ್ನರು.

೨. ಪಾರಸಿಗಳು.

೩. ಅಸ್ಸಾಮ್‌ನಲ್ಲಿ ಬಯಲು ಪ್ರದೇಶದ ಬುಡಕಟ್ಟು ಜನ.

ವರ್ಗ 'ಬಿ'–

೪. ಭಾರತೀಯ ಕ್ರೈಸ್ತರು.

೫. ಸಿಖ್ಖರು.

ವರ್ಗ 'ಸಿ'

೬. ಮುಸ್ಲಿಮರು.

೭. ಅನುಸೂಚಿತ ಜಾತಿಗಳು.

೬. ಆಂಗ್ಲೋ ಇಂಡಿಯನ್ನರು : ಆಂಗ್ಲೋ ಇಂಡಿಯನ್ನರ ಸಮುದಾಯದ ಜನಸಂಖ್ಯೆ, ರಾಜ್ಯಗಳನ್ನು ಹೊರತು ಪಡಿಸಿ ಒಂದು ಲಕ್ಷಕ್ಕಿಂತ ಸ್ವಲ್ಪ ಅಂದರೆ ಶೇ. ೦.೦೪. ಆಂಗ್ಲೋ ಇಂಡಿಯನ್ನರ ಪರವಾಗಿ ಶ್ರೀ ಆಂಥನಿ ಜನಗಣತಿ ಅಂಕಿಗಳು ನಿಖರವಲ್ಲ ಎಂದು ಒತ್ತಿ ಹೇಳಿದರು. ಆದರೆ ಜನಗಣತಿಯಲ್ಲಿ ಕೊಟ್ಟಿರುವುದಕ್ಕಿಂತ ಬಹುದೊಡ್ಡ ಅಂಕಿ ಕೊಡುವುದಾದರೂ ಈ ಸಮುದಾಯದ ಗಾತ್ರ ಅತಿಸಣ್ಣದು ಮತ್ತು ಕಟ್ಟುನಿಟ್ಟಾಗಿ ಜನಸಂಖ್ಯಾ ಆಧಾರದ ಮೇರೆಗೆ ಅದರೊಂದಿಗೆ ವ್ಯವಹರಿಸುವುದು ಎಂದರೆ ಅದಕ್ಕೆ ಪ್ರಾತಿನಿಧ್ಯ ಕೊಡುವುದೇ ಇಲ್ಲ ಎಂದು ಅರ್ಥ. ಸಮಿತಿಯಲ್ಲಿ ಆಂಗ್ಲೋ ಇಂಡಿಯನ್ನರ ಪ್ರತಿನಿಧಿಗಳು ಶಾಸನಸಭೆಗಳಲ್ಲಿ ಮೂಲತಃ ಕೆಳಗೆಕಂಡಂತೆ ಪ್ರಾತಿನಿಧ್ಯ ಹೊಂದಿರಬೇಕೆಂದು ಕೇಳಿದರು:

| | |
|---|---|
| ಲೋಕಸಭೆ | ೩ |
| ಪಶ್ಚಿಮ ಬಂಗಾಳ | ೩ |
| ಬಾಂಬೆ | ೨ |
| ಮದ್ರಾಸ್ | ೨ |
| ಸಿ.ಪಿ. ಮತ್ತು ಬೇರಾರ್ | ೧ |
| ಬಿಹಾರ | ೧ |
| ಉತ್ತರ ಪ್ರದೇಶ | ೧ |

ತರುವಾಯ ಅವರು ಲೋಕಸಭೆಯಲ್ಲಿ ಎರಡು ಸ್ಥಾನಗಳು ಮತ್ತು ಸದ್ಯ ಪ್ರಾತಿನಿಧ್ಯ ಹೊಂದಿರುವ ಪ್ರಾಂತ್ಯದಲ್ಲಿ ತಲಾ ಒಂದು ಅಂದರೆ ಒಟ್ಟು ಲಕ್ಕೆ ಖಾತರಿ ಕೊಡಲೇಬೇಕೆಂದು ಕೇಳಿದರು. ಬಹಳ ಗಣನೀಯ ಚರ್ಚೆ ಅನಂತರ ಅಂದರೆ ಆ ಅವಧಿಯಲ್ಲಿ ಆಂಗ್ಲೋ ಇಂಡಿಯನ್ ಸಮುದಾಯದ ಪ್ರತಿನಿಧಿಗಳು ತಮ್ಮ ಅಭಿಪ್ರಾಯಗಳಿಗೆ ಪೂರ್ಣ ಒತ್ತುಕೊಟ್ಟರು. ಸಮಿತಿಯ ಕೆಳಗಿನ ಸೂತ್ರವನ್ನು ಸರ್ವಾನುಮತದಿಂದ ಒಪ್ಪಿತು; ಅದೆಂದರೆ: ಆಂಗ್ಲೋ ಇಂಡಿಯನ್ನರಿಗೆ ಸ್ಥಾನಗಳ ಮೀಸಲಾತಿ ಇರುವುದಿಲ್ಲ. ಆದರೆ ಒಕ್ಕೂಟದ ರಾಷ್ಟ್ರಪತಿ ಹಾಗೂ ಪ್ರಾಂತ್ಯಗಳ ರಾಜ್ಯಪಾಲರು ಕೇಂದ್ರದಲ್ಲಿ ಮತ್ತು ಪ್ರಾಂತ್ಯಗಳಲ್ಲಿ ಕ್ರಮವಾಗಿ ಕೆಳಮನೆಗೆ ಆಂಗ್ಲೋ ಇಂಡಿಯನ್ ಸಮುದಾಯದ ಪ್ರತಿನಿಧಿಗಳನ್ನು ನೇಮಕ ಮಾಡಲು ಅಧಿಕಾರ ಹೊಂದಿರುತ್ತಾರೆ. ಸಾರ್ವತ್ರಿಕ ಚುನಾವಣೆಯ ಫಲವಾಗಿ ಶಾಸನಸಭೆಗಳಲ್ಲಿ ಪ್ರಾತಿನಿಧ್ಯ ಪಡೆಯಲು ಅವರು ವಿಫಲರಾದಾಗ ಈ ಸೂತ್ರವನ್ನು ಪಾಲಿಸಬಹುದು. ನಾವು ಸಮಿತಿಯಲ್ಲಿದ ಆಂಗ್ಲೋ ಇಂಡಿಯನ್ ಪ್ರತಿನಿಧಿಗಳನ್ನು, ಅವರು ಸಮಿತಿಯ ಮೇಲೆ ಅವರ ಪ್ರಸ್ತಾವಗಳನ್ನು ಅಂದರೆ ಯಾವುದು ಒಂದು ಸಾಮಾನ್ಯ ಪ್ರತಿಪಾದನೆಯಾಗಿ ನಿಚ್ಚಳ ಬಹುಮತದಿಂದ ತಿರಸ್ಕಾರಕೊಳ್ಳಗಾದ ವಿಶೇಷ ಹೇರಿದ್ದರೆ ಇತರ ಸೌಲಭ್ಯದ ತತ್ತ್ವವನ್ನು ಅಲ್ಪಸಂಖ್ಯಾತರನ್ನು

ಅವರ ಸಂಖ್ಯೆಗಳಿಗೆ ಅನುಪಾತ ಮೀರಿ ಪ್ರಾತಿನಿಧ್ಯಕ್ಕೆ ಕೇಳಲು ಪ್ರೋತ್ಸಾಹಿಸುವಂತೆಯೂ ಮಾಡುತ್ತಿದ್ದವೋ ಅದನ್ನು ಮಾಡದುದಕ್ಕಾಗಿ ಅಭಿನಂದಿಸಲು ಇಚ್ಛಿಸುತ್ತೇನೆ. ನಮ್ಮಿಂದ ಶಿಫಾರಸಾದ ಸೂತ್ರದ ಕಾರ್ಯಾಚರಣೆಯಿಂದ ನಾವು ಆಂಗ್ಲೋ ಇಂಡಿಯನ್ನರು ಅವರ ಸಮುದಾಯದಲ್ಲಿ ವಿಶೇಷ ಹಿತಾಸಕ್ತಿಗಳನ್ನು ಶಾಸನಸಭೆಗಳಲ್ಲಿ ಪ್ರತಿನಿಧಿಸಲು ತಕ್ಕಷ್ಟು ಅವಕಾಶಗಳನ್ನು ಕೊಡಲಾಗಿದೆ ಎಂದು ತಾವೇ ಮನಕಾಣುವ ಭರವಸೆ ತಾಳಿರುತ್ತೇವೆ.

೭. ಪಾರಸಿಗಳು: ಅಲ್ಪಸಂಖ್ಯಾತರ ಉಪಸಮಿತಿಯಲ್ಲಿ ಸರ್ ಹೋಮಿ ಮೋದಿಯವರು, ಪಾರಸಿ ಸಮುದಾಯ ಮತ್ತು ಕೊಡುಗೆಯ ಮಹತ್ತ್ವದ ದೃಷ್ಟಿಯಲ್ಲಿ ಅದು ದೇಶದ ರಾಜಕೀಯ ಮತ್ತು ಆರ್ಥಿಕ ಉನ್ನತಿಗೆ ಮುಂದಾಗಿದೆ ಎಂದು ತಿಳಿಸಿರುವರು. ಪಾರಸಿಗಳು ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ತಕ್ಕಷ್ಟು ಪ್ರಾತಿನಿಧ್ಯ ಹೊಂದಬೇಕು. ಉಪಸಮಿತಿಯ ಈ ಹಕ್ಕನ್ನು ಅಂಗೀಕರಿಸಬೇಕೆಂಬ ಅಭಿಪ್ರಾಯದ ಹೊಂದಿದ್ದಿತು, ಹೇಗೇ ಆಗಲಿ, ಅವರಿಗೆ ಹಲವು ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯದ ದೃಷ್ಟಿಯಿಂದ ಪಾರಸಿಗಳಂತಹ ಒಂದು ಉನ್ನತ ಸಮುದಾಯಕ್ಕೆ ಯಾವುದೇ ಸಂದರ್ಭದಲ್ಲಿ ತಕ್ಕಷ್ಟು ಪ್ರಾತಿನಿಧ್ಯ ಕೊಡಲಾಗುವುದು ಮತ್ತು ನಿರ್ದಿಷ್ಟ ಮೀಸಲಾತಿಯ ಅಗತ್ಯವಿರುವುದಿಲ್ಲ. ಸರ್ ಹೋಮಿ ಈ ವಿಷಯ ಗಮನಿಸಲು ಕಾಲಾವಕಾಶ ಕೇಳಿರುವರು.

ಈ ವಿಷಯ ಸಲಹಾ ಸಮಿತಿಯ ಮುಂದೆ ಬಂದಾಗ, ಸರ್ ಹೋಮಿಯವರು ವರ್ಗ 'ಎ'ನಲ್ಲಿ ಇತರ ಅಲ್ಪಸಂಖ್ಯಾತರಂತೆ ಅದೇ ಆಧಾರದ ಮೇಲೆ ಒಂದು ಗುರುತಿಸಲಾದ ಅಲ್ಪಸಂಖ್ಯಾತರಾಗಿ ವಿಶೇಷ ಪರಿಗಣನೆಗೆ ಬಾಧ್ಯರೆಂದು ಸಮಿತಿಯು ಪಾರಸಿ ಸಮುದಾಯವನ್ನು ಈಗಾಗಲೇ ಅಂಗೀಕರಿಸಿದ್ದರೂ ತಾವು ಸಮುದಾಯವು ಹಿಂದೆ ಕಾಪಾಡಿಕೊಂಡು ಬಂದ ಸಂಪ್ರದಾಯಗಳನ್ನು ಅನುಸರಿಸಲು ನಿರ್ಧರಿಸುವರೆಂದೂ ಮತ್ತು ಶಾಸನಬದ್ಧ ಮೀಸಲಾತಿಗೆ ಹಕ್ಕು ಹಿಂತೆಗೆದುಕೊಳ್ಳಲು ಹೇಳಿದರು. ಪಾರಸಿಗಳು ಗುರುತಿಸಲಾದ ಅಲ್ಪಸಂಖ್ಯಾತರ ಪಟ್ಟಿಯ ಮೇಲೆ ಉಳಿದಿರುತ್ತಾರೆ ಎಂದು ಅವರು ಭಾವಿಸಿದರು. ಮತ್ತು ಅಲ್ಪಸಂಖ್ಯಾತರ ವಿಶೇಷ ಪ್ರಾತಿನಿಧ್ಯಕ್ಕೆ ಮೊದಲ ಸಂದರ್ಭದಲ್ಲಿ ನಿಗದಿ ಪಡಿಸಿದ ಅವಧಿಯಲ್ಲಿ ಒಂದು ವೇಳೆ ಪಾರಸಿ ಸಮುದಾಯ ಸೂಕ್ತ ಪ್ರಾತಿನಿಧ್ಯ ಗಳಿಸಲಿಲ್ಲವೆಂದಾದರೆ ಅಲ್ಪಸಂಖ್ಯಾತರ ಪ್ರತ್ಯೇಕ ಪ್ರಾತಿನಿಧ್ಯದ ಸಂವಿಧಾನದ ಒಂದು ವೈಶಿಷ್ಟ್ಯವಾಗಿ ಮುಂದುವರಿದಲ್ಲಿ ಅದರ ಹಕ್ಕು ಬೇಡಿಕೆಯನ್ನು ಪುನಃ ಗಮನಿಸಲಾಗುತ್ತದೆ ಮತ್ತು ತಕ್ಕಷ್ಟು ಪ್ರಾತಿನಿಧ್ಯ ಒದಗಿಸಲಾಗುತ್ತದೆ ಎಂದು ವಿನಂತಿಸಿರುವರು.

೮. ಅಸ್ಸಾಮಿನಲ್ಲಿ ಬಯಲು ಪ್ರದೇಶದ ಬುಡಕಟ್ಟು ಜನ : ಈ ಬುಡಕಟ್ಟು ಜನರ ವಿಷಯವನ್ನು, ಹೊರತುಪಡಿಸಿದ ಮತ್ತು ಭಾಗಶಃ ಹೊರತುಪಡಿಸಿದ ಪ್ರದೇಶಗಳ ಉಪಸಮಿತಿ ವರದಿ ಸ್ವೀಕರಿಸಿದ ಅನಂತರ ಪ್ರಸ್ತಾವಿಸಲಾಗುವುದು.

೯. ಭಾರತೀಯ ಕ್ರೈಸ್ತರು : ಭಾರತೀಯ ಕ್ರೈಸ್ತರ ಪ್ರತಿನಿಧಿಗಳು, ಅವರ ಸಮುದಾಯಕ್ಕೆ ಸಂಬಂಧಿಸಿದಂತೆ ರಾಷ್ಟ್ರ ನಿರ್ಮಾಣದ ದಾರಿಗೆ ಅಡ್ಡ ನಿಲ್ಲಲು ಅಪೇಕ್ಷಿಸಿಲ್ಲ. ಅವರು ಕೇಂದ್ರ ಶಾಸನಸಭೆ ಹಾಗೂ ಮದ್ರಾಸ್ ಮತ್ತು ಬಾಂಬೆಗಳ ಪ್ರಾಂತೀಯ ಶಾಸನಸಭೆಗಳಲ್ಲಿ ಅವರ ಜನಸಂಖ್ಯೆಗೆ ಅನುಪಾತದಲ್ಲಿ ಮೀಸಲಾತಿ ಒಪ್ಪಲು ಇಷ್ಟ ಪಡುತ್ತಿದ್ದರು. ಇತರ ಪ್ರಾಂತ್ಯಗಳಲ್ಲಿ ಅವರು ಸಾರ್ವತ್ರಿಕ ಸ್ಥಾನದಿಂದ ಚುನಾವಣೆಗೆ ನಿಲ್ಲಲು ಸ್ವಾತಂತ್ರ್ಯ ಹೊಂದುವರು. ಯಾವುದೇ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ಕೊಡುವಲ್ಲಿ ಅವರು ವಿರುದ್ಧವಾಗಿದ್ದರು. ಆದರೆ ವರ್ಗಗಳು 'ಬಿ' ಮತ್ತು 'ಸಿ'ನಲ್ಲಿ ಯಾವುದೇ ಅಲ್ಪಸಂಖ್ಯಾತರಿಗೆ ಹೆಚ್ಚಿನ ಸೌಲಭ್ಯ ಕೊಟ್ಟಲ್ಲಿ ಅವರು ಅಂಥದೇ ಹೆಚ್ಚಿನ ಸೌಲಭ್ಯ ಬೇಡಿಕೆ ಸಲ್ಲಿಸುವರೆಂದು ಖಚಿತವಾಗಿ ತಿಳಿಸಿದರು. ಯಾವುದೇ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ಅಂಗೀಕರಿಸಿಲ್ಲವೆಂದರೆ ಭಾರತೀಯ ಕ್ರೈಸ್ತರು ಕೇಂದ್ರ ಶಾಸನಸಭೆ ಮತ್ತು ಮದ್ರಾಸ್ ಹಾಗೂ ಬಾಂಬೆಗಳಲ್ಲಿ ಜನಸಂಖ್ಯೆ ಆಧಾರದ ಮೇರೆಗೆ ಕೆಲವು ಸ್ಥಾನಗಳು ಮೀಸಲಾತಿ ಅವರಿಗೆ ಕೊಡುವುದಾದಲ್ಲಿ ತಮ್ಮ ಜನರನ್ನು ಸಾಮಾನ್ಯ ಸಮುದಾಯಕ್ಕೆ ಒಳಪಡಿಸಲು ಸಿದ್ಧರಿರುವರು.

೧೦. ಸಿಖ್ಖರು: ಪ್ರಸ್ತುತ, ಸಿಖ್ಖರು ಸ್ಥಿತಿಯ ಅನಿಶ್ಚಿತತೆಯ ಕಾರಣ ಪಂಜಾಬಿನಲ್ಲಿ ಗಡಿ ಆಯೋಗದ ಪುರಸ್ಕಾರ ನೀಡುವುದುಳಿದು ಸಮಿತಿಯು ಸದ್ಯ ಸಿಖ್ಖರ ಸಮುದಾಯಕ್ಕೆ ರಕ್ಷಣೆಗಳ ಇಡೀ ಪ್ರಶ್ನೆಯನ್ನು ಅಮಾನತ್ತಿನಲ್ಲಿಡಲು ನಿರ್ಧರಿಸಿದೆ.

೧೧. ವರ್ಗ 'ಸಿ': ಮುಸ್ಲಿಮರು ಮತ್ತು ಅನುಸೂಚಿತ ಜಾತಿಗಳು : ಮುಸ್ಲಿಮರು ಅಥವಾ ಅನುಸೂಚಿತ ಜಾತಿಗಳ ವಿಷಯದಲ್ಲಿ ಸಾಮಾನ್ಯ ಸೂತ್ರದಿಂದ ಹೊರಗಿರಲು ಸಮಿತಿಯು ಅದಕ್ಕೆ ತಕ್ಕ ಕಾರಣಗಳಿಲ್ಲ ಎಂಬ ತೀರ್ಮಾನಕ್ಕೆ ಬಂದಿತು. ಅದರಂತೆ ಈ ಸಮುದಾಯಗಳಿಗೆ ಅವರ ಜನಸಂಖ್ಯೆಯ ಅನುಪಾತದಲ್ಲಿ ಸ್ಥಾನಗಳನ್ನು ಮೀಸಲಿರಿಸಬೇಕೆಂದು ಮತ್ತು ಈ ಸ್ಥಾನಗಳಿಗೆ ಜಂಟಿ ಮತದಾರರ ಸಮುದಾಯಗಳ ಮೂಲಕ ಸ್ಪರ್ಧಿಸುವುದು ಸರಿ ಎಂದೂ ಶಿಫಾರಸು ಮಾಡಲಾಗಿದೆ.

೧೨. ಅಲ್ಪಸಂಖ್ಯಾತ ಸಮುದಾಯದ ಸದಸ್ಯನೊಬ್ಬ ಒಂದು ಮೀಸಲಿರಿಸಿದ ಸ್ಥಾನಕ್ಕೆ ಸ್ಪರ್ಧಿಸುವಲ್ಲಿ ಚುನಾಯಿತನಾಗಿರುವನು ಎಂದು ಘೋಷಿಸುವ ಮುನ್ನ ತನ್ನ ಸಮುದಾಯದ ಕನಿಷ್ಠ ಸಂಖ್ಯೆಯ ಮತಗಳನ್ನು ಪಡೆದಿರಬೇಕು ಎಂಬ ಒಂದು ಪ್ರಸ್ತಾವವನ್ನು ಸಮಿತಿಯಲ್ಲಿ ಮಾಡಲಾಯಿತು. ಸಂಚಿತ ಮತದಾನಕ್ಕೆ ಅನುಮತಿ ನೀಡಬೇಕು ಎಂದು ಕೂಡಾ ಸಲಹೆ ಮಾಡಲಾಯಿತು. ಸಮಿತಿಯು ಒಂದು ಸಮುದಾಯದಲ್ಲಿ ಸಂಚಿತ ಮತದಾನ ಮತ್ತು ಕನಿಷ್ಠ ಶೇಕಡಾವಾರು ಮತದಾನದ ಸಂಯೋಜನೆ ಪ್ರತ್ಯೇಕ ಮತದಾರರ ಸಮುದಾಯಗಳ ಎಲ್ಲ ಕೆಡುಕು ಪರಿಣಾಮಗಳನ್ನು ಹೊಂದಿರುತ್ತದೆ ಮತ್ತು ಈ ಪ್ರಸ್ತಾವಗಳಲ್ಲಿ ಯಾವುದನ್ನೂ ಒಪ್ಪಬಾರದು ಎಂಬ ಅಭಿಪ್ರಾಯ ಪಡಲಾಯಿತು.

## ಸಂಪುಟಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ

೧೩. ಸಮಿತಿಯ ಕೆಲವು ಸದಸ್ಯರು ಅಲ್ಪಸಂಖ್ಯಾತರು ಅವರ ಜನಸಂಖ್ಯೆಗೆ ಅನುಪಾತದಲ್ಲಿ ಸಂಪುಟಗಳಲ್ಲಿ ಸ್ಥಾನಗಳನ್ನು ಮೀಸಲು ಹೊಂದಿರಬೇಕು ಎಂದು ನಿಗದಿ ಪಡಿಸಿರುವ ಒಂದು ನಿಬಂಧನೆ ಇರಬೇಕು ಎಂದು ಪ್ರಸ್ತಾವಿಸಿದರು. ಸಮಿತಿಯು ಯಾವುದೇ ಹಿಂಜರಿಕೆ ಇಲ್ಲದೆ, ಈ ಸ್ವರೂಪದ ಸಾಂವಿಧಾನಿಕ ನಿಬಂಧನೆ ಗಂಭೀರವಾದ ಕಷ್ಟಗಳು ಉದ್ಭವಿಸಲೆಡೆಮಾಡುತ್ತದೆ ಎಂಬ ತೀರ್ಮಾನಕ್ಕೆ ಬಂದಿತು. ಅದೇ ಸಮಯಕ್ಕೆ ಸಮಿತಿಯು ಕಾರ್ಯಸಾಧ್ಯವಾಗುವಷ್ಟು ಸಂಪುಟಗಳಲ್ಲಿ ಪ್ರಮುಖ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರನ್ನು ಸೇರಿಸುವ ಅಪೇಕ್ಷತೆ ಕುರಿತಂತೆ ಸಂವಿಧಾನವು ನಿರ್ದಿಷ್ಟವಾಗಿ ಒಕ್ಕೂಟದ ರಾಷ್ಟ್ರಪತಿಗಳು ಮತ್ತು ಪ್ರಾಂತ್ಯಗಳ ರಾಜ್ಯಪಾಲರ ಗಮನ ಸೆಳೆಯಬೇಕು ಎಂದು ಭಾವಿಸಿತು. ನಾವು ಅಂತೆಯೇ ೧೯೩೫ರ ಅಧಿನಿಯಮದ ಅಡಿ ರಾಜ್ಯಪಾಲರಿಗೆ ನೀಡಲಾದ ಸೂಚನೆಗಳ ಲಿಖಿತ ಪತ್ರದ ಏಳನೆಯ ಕಂಡಿಕೆಯ ಮಾದರಿಯಲ್ಲಿ ಸಂವಿಧಾನಕ್ಕೆ ಒಂದು ಅನುಸೂಚಿಯಲ್ಲಿ ಒಂದು ಒಡಂಬಡಿಕೆಯನ್ನು ಒದಗಿಸಬೇಕು ಎಂದು ಶಿಫಾರಸು ಮಾಡಿ ಅದನ್ನು ಕೆಳಗೆ ಕೊಡಲಾಗಿದೆ.

> VII. ಸಚಿವರ ಮಂಡಳಿಗೆ ನೇಮಕಗಳನ್ನು ಮಾಡುವಲ್ಲಿ, ರಾಜ್ಯಪಾಲರು ಕೆಳಕಂಡ ರೀತಿಯಲ್ಲಿ ಸಚಿವರನ್ನು ಆಯ್ಕೆ ಮಾಡಲು ಅತ್ಯುತ್ತಮ ಪ್ರಯತ್ನಗಳನ್ನು ಮಾಡಬೇಕು. ಅಂದರೆ ಯಾರು ಸಾಮೂಹಿಕವಾಗಿ ಶಾಸನಸಭೆಯ ವಿಶ್ವಾಸವನ್ನು ನಿಯಂತ್ರಿಸಬಲ್ಲ ಅತ್ಯುತ್ತಮ ಸ್ಥಿತಿಯಲ್ಲಿರುತ್ತಾರೋ ಅಂಥಾ ವ್ಯಕ್ತಿಗಳನ್ನು (ಕಾರ್ಯ ಸಾಧ್ಯವಾದಷ್ಟೂ ಪ್ರಮುಖ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರು ಸೇರಿದಂತೆ) ಯಾರು ತಮ್ಮ ತೀರ್ಮಾನದಲ್ಲಿ ಶಾಸನಸಭೆಯಲ್ಲಿ ಒಂದು ಸ್ಥಿರ ಬಹುಮತವನ್ನು ಗಳಿಸಬಲ್ಲರೆಂದು ಹೆಚ್ಚು ತೋರುವುದೋ ಆ ವ್ಯಕ್ತಿಯೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡಬೇಕು. ಹಾಗೆ ವರ್ತಿಸುವಲ್ಲಿ ಅವರು ತಮ್ಮ ಸಚಿವರ ನಡುವೆ ಜಂಟಿ ಜವಾಬ್ದಾರಿಯ ಪ್ರಜ್ಞೆ ಬೆಳೆಸುವ ಅಗತ್ಯವನ್ನು ಸ್ಥಿರವಾಗಿ ಮನಸಿನಲ್ಲಿಟ್ಟುಕೊಂಡಿರಬೇಕು."

## ಸೇವೆಗಳಲ್ಲಿ ಪ್ರಾತಿನಿಧ್ಯ

೧೪. ಅಲ್ಪಸಂಖ್ಯಾತರ ಜನಸಂಖ್ಯೆ ಅನುಪಾತದಲ್ಲಿ, ಸರ್ಕಾರಿ ಸೇವೆಗಳಲ್ಲಿ, ಅವರಿಗೆ ಪ್ರಾತಿನಿಧ್ಯದ

ಸಾಂವಿಧಾನಿಕ ಭರವಸೆಯು ಇರಬೇಕು ಎಂಬ ಒಂದು ಪ್ರಸ್ತಾವವನ್ನು ನಮಗೆ ಮಾಡಲಾಗಿದೆ. ಅಂತಹ ಒಂದು ಭರವಸೆ ಯಾವುದೇ ಇತರ ಸಂವಿಧಾನದಲ್ಲಿ ಇರುವ ಬಗ್ಗೆ ನಮಗೆ ತಿಳಿದಿಲ್ಲ. ಮತ್ತು ಅರ್ಹತೆಗಳಂತೆ ನಾವು ಒಂದು ಸಾಮಾನ್ಯ ಪ್ರಸ್ತಾವವಾಗಿ ಯಾವುದೇ ಭರವಸೆ ಅಪಾಯಕಾರಿಯಾದ ಹೊಸಕಲ್ಪನೆ ಎಂದು ಪರಿಗಣಿಸುತ್ತೇವೆ. ಅದೇ ಸಮಯಕ್ಕೆ ಆಡಳಿತದಲ್ಲಿ ದಕ್ಷತೆಯ ಅಗತ್ಯದೊಂದಿಗೆ ನಿರಂತರವಾಗಿ ಸರ್ಕಾರಿ ಸೇವೆಗಳಿಗೆ ನೇಮಕಗಳನ್ನು ಮಾಡುವಲ್ಲಿ ಅಲ್ಪಸಂಖ್ಯಾತರ ಹಕ್ಕು ಬೇಡಿಕೆಗಳಿಗೆ ಮಾನ್ಯತೆ ನೀಡುವುದು ರಾಜ್ಯಕ್ಕೆ ಆವಶ್ಯಕ ಎಂಬುದು ನಮಗೆ ಸ್ಪಷ್ಟ. ಆದುದರಿಂದ ನಾವು ಸಂಪುಟಗಳಿಗೆ ನೇಮಕ ಮಾಡುವಂತೆ ಸಾರ್ವಜನಿಕ ಸೇವೆಗಳಲ್ಲಿ ಆಡಳಿತದ ದಕ್ಷತೆಯೊಂದಿಗೆ ನಿರಂತರ ನೇಮಕಗಳನ್ನು ಮಾಡುವಲ್ಲಿ ಎಲ್ಲ ಅಲ್ಪಸಂಖ್ಯಾತರ ಹಕ್ಕು ಬೇಡಿಕೆಗಳನ್ನು ಸಂವಿಧಾನ ಯಾವುದಾದರೂ ಭಾಗದಲ್ಲಿ ಅಥವಾ ಅನುಸೂಚಿಯಲ್ಲಿ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳಿಗೆ ಶಿಫಾರಸು ಮಾಡುತ್ತೇವೆ.

ನಮ್ಮ ಸಮಿತಿಯ ಆಂಗ್ಲೋ ಇಂಡಿಯನ್ ಸದಸ್ಯರು, ನಮಗೆ ಒಂದು ಮನವಿ ಸಲ್ಲಿಸಿ ಕೆಲವು ಸೇವೆಗಳಲ್ಲಿ ತಮ್ಮ ಸ್ಥಿತಿ ಮತ್ತು ಅವರ ಹಾಲಿ ಶೈಕ್ಷಣಿಕ ಸೌಲಭ್ಯಗಳನ್ನು ಕುರಿತಂತೆ ತಮ್ಮ ಸಮುದಾಯದ ಆರ್ಥಿಕತೆಯ ಸಂಪೂರ್ಣ ಪರಾವಲಂಬನೆಯ ಕಾರಣ ಅವರ ವಿಷಯದಲ್ಲಿ ವಿಶೇಷ ಗಮನ ಹರಿಸಬೇಕೆಂದು ತಿಳಿಸಿರುತ್ತಾರೆ. ಈ ಪ್ರಶ್ನೆ ಕುರಿತಂತೆ ಪರಿಶೋಧನೆಗೆ ನಾವು ಒಂದು ಉಪಸಮಿತಿ ನೇಮಕ ಮಾಡಿ ನಮಗೆ ವರದಿ ಮಾಡಲು ಹೇಳಿದ್ದೇವೆ.

೧೫. ಸಮಿತಿಯಲ್ಲಿ, ಅಲ್ಪಸಂಖ್ಯಾತರ ಪ್ರತಿನಿಧಿಗಳು, ಸಂವಿಧಾನದಲ್ಲಿ ಹಾಗೂ ಕಾರ್ಯಕಾರಿ ಆದೇಶಗಳ ಮೂಲಕ, ಅಲ್ಪಸಂಖ್ಯಾತರಿಗೆ ಒದಗಿಸಲಾದ ಭರವಸೆ ಮತ್ತು ರಕ್ಷಣೆಗಳನ್ನು ಖಾತ್ರಿ ಮಾಡಿಕೊಳ್ಳಲು ಸ್ವಾಭಾವಿಕವಾಗಿ ಆಡಳಿತಾತ್ಮಕ ವ್ಯವಸ್ಥೆಗೆ ಪ್ರಾಮುಖ್ಯ ಕೊಟ್ಟಿರುವರು. ಆ ಎಲ್ಲವನ್ನು ಅನುಷ್ಠಾನಕ್ಕೆ ತರಲಾಗಿವೆ. ಗಣನೀಯ ಚರ್ಚೆಯ ಅನಂತರ ನಾವು ಕೇಂದ್ರಕ್ಕೂ ಮತ್ತು ಪ್ರತಿಯೊಂದು ಪ್ರಾಂತ್ಯಕ್ಕೂ ಒಬ್ಬ ವಿಶೇಷ ಅಲ್ಪಸಂಖ್ಯಾತ ಅಧಿಕಾರಿಯನ್ನು ನೇಮಕ ಮಾಡುವುದು ಅತ್ಯುತ್ತಮ ಎಂಬ ತೀರ್ಮಾನಕ್ಕೆ ಬಂದಿದ್ದೇವೆ. ಈ ಅಧಿಕಾರಿಯ ಕರ್ತವ್ಯ ಹಕ್ಕುಗಳು ಮತ್ತು ರಕ್ಷಣೆಗಳನ್ನು ಉಲ್ಲಂಘಿಸಿದ ಸಂದರ್ಭಗಳಿದ್ದರೆ ವಿಚಾರಣೆ ನಡೆಸಿ ಯುಕ್ತ ಶಾಸನಸಭೆಗೆ ಒಂದು ವರದಿ ಸಲ್ಲಿಸುವುದೇ ಆಗಿರುತ್ತದೆ.

೧೬. ನಾವು ನಮ್ಮ ಮುಂದಿಡಲಾದ ಪ್ರಸ್ತಾವಗಳ ದಾಳಿಗೆ ನಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸಲು ಬದ್ಧರೆಂದು ಭಾವಿಸಿದ್ದೇವೆ. ಏಕೆಂದರೆ ಭಾಗಶಃ ಸಂಪುಟಗಳ ಸ್ಥಾನಗಳ ಮೀಸಲಾತಿ ವಿಷಯದಲ್ಲಿ ಕಂಡಂತೆ ನಾವು ದೃಢವಾದ ಒಂದು ಸಾಂವಿಧಾನಿಕ ನಿಬಂಧನೆಗಳಿದ್ದರೆ ಸಂಸದೀಯ ಪ್ರಜಾಪ್ರಭುತ್ವವನ್ನು ಕಾರ್ಯರೂಪಕ್ಕೆ ತರಲಾಗದಂತೆ ಮಾಡುತ್ತಿತ್ತು ಮತ್ತು ಭಾಗಶಃ ಮತದಾರರ ಏರ್ಪಾಟುಗಳ ವಿಷಯದಲ್ಲಿ ಕಂಡಂತೆ ನಾವು ಒಂದು ಆರೋಗ್ಯಕರ ರಾಷ್ಟ್ರೀಯ ಜೀವನದ ಅಭಿವೃದ್ಧಿಯೊಂದಿಗೆ ಅಲ್ಪಸಂಖ್ಯಾತರ ವಿಶೇಷ ಹಕ್ಕು ಬೇಡಿಕೆಗಳನ್ನು ಹೊಂದಾಣಿಕೆ ಮಾಡಲು ಅದು ಆವಶ್ಯಕ ಎಂದು ಪರಿಗಣಿಸಿದೆವು. ಹೇಗೆ ಆಗಲಿ, ಅಲ್ಪಸಂಖ್ಯಾತರ ಇಡೀ ಸಮಸ್ಯೆಗೆ ನಮ್ಮ ಸಾಮಾನ್ಯ ವಿಧಾನ ಹೇಗೆಂದರೆ, ತಾವು ಅಲ್ಪಸಂಖ್ಯಾತರೆಂಬ ಕಾರಣಕ್ಕಾಗಿ ದಮನಕ್ಕೆ ಒಳಗಾಗಿದ್ದೇವೆ ಎಂಬ ಭಾವನೆ ತಾಳದಂತೆ ರಾಜ್ಯ ಆಡಳಿತ ನಡೆಸಬೇಕು ಮತ್ತು ಪ್ರತಿಯಾಗಿ ಅವರು ರಾಷ್ಟ್ರೀಯ ಜೀವನದಲ್ಲಿ ಯಾವುದೇ ಇತರ ಸಮುದಾಯದಂತೆಯೇ ಪಾಲ್ಗೊಳ್ಳಲು ಗೌರವಾನ್ವಿತ ಪಾತ್ರ ಹೊಂದಿರುವುದಾಗಿ ಭಾವಿಸಬೇಕು. ವಿಶಿಷ್ಟವಾಗಿ, ನಾವು ಹಿಂದುಳಿದಿರುವ ಅಲ್ಪಸಂಖ್ಯಾತರನ್ನು ಎಲ್ಲ ಸಮುದಾಯದ ಮಟ್ಟಕ್ಕೆ ತರಲು ವಿಶೇಷ ಕ್ರಮ ತೆಗೆದುಕೊಳ್ಳುವುದು ರಾಜ್ಯದ ಒಂದು ಮೂಲಭೂತ ಕರ್ತವ್ಯ ಎಂದು ಭಾವಿಸಿದ್ದೇವೆ. ಅಂತೆಯೇ ನಾವು ಹಿಂದುಳಿದ ವರ್ಗಗಳ ಸಾಮಾಜಿಕವಾದ ಮತ್ತು ಶೈಕ್ಷಣಿಕವಾದ ಸ್ಥಿತಿಗಳನ್ನು ಅನ್ವೇಷಿಸಲು ಮತ್ತು ಅವರು ಯಾವ ತೊಡಕುಗಳಡಿ ಕೆಲಸ ಮಾಡುವರೆಂದು ಅಧ್ಯಯನ ಮಾಡಲು ಒಂದು ಶಾಸನಬದ್ಧ ಆಯೋಗವನ್ನು ಸಜ್ಜುಗೊಳಿಸಬೇಕು ಮತ್ತು ಸಂದರ್ಭಾನುಸಾರ

ಒಕ್ಕೂಟ ಅಥವಾ ಘಟಕ ಸರ್ಕಾರಕ್ಕೆ ಅವರ ತೊಡಕುಗಳನ್ನು ನಿವಾರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ಕೊಡಬೇಕಾದ ಆರ್ಥಿಕ ಅನುದಾನಗಳು ಹಾಗೂ ಅಂತಹ ಅನುದಾನಗಳಿಗೆ ನಿಗದಿ ಪಡಿಸಬೇಕಾದ ನಿಬಂಧನೆಗಳನ್ನು ಶಿಫಾರಸು ಮಾಡಬೇಕು ಎಂದು ಸಲಹೆ ಮಾಡುತ್ತೇವೆ.

೧೭. ನಮ್ಮ ಶಿಫಾರಸುಗಳ ಒಂದು ಸಾರಾಂಶವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ತಮ್ಮ ಹೃತ್ಪೂರ್ವಕ,
ವಲ್ಲಭಭಾಯಿ ಪಟೇಲ್
ಅಧ್ಯಕ್ಷ

೮ನೇ ಆಗಸ್ಟ್ ೧೯೪೭

## ಅನುಬಂಧ ಎ
## ಶಾಸನಸಭೆಗಳಲ್ಲಿ ಪ್ರಾತಿನಿಧ್ಯ

೧. ಮತದಾರರ ಸಮುದಾಯಗಳು : ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಎಲ್ಲ ಚುನಾವಣೆಗಳನ್ನು ಜಂಟಿಮತದಾರರ ಸಮುದಾಯಗಳ ಆಧಾರದ ಮೇಲೆ ನಡೆಸಲಾಗುತ್ತದೆ–

ಒಂದು ಸಾಮಾನ್ಯ ನಿಯಮವಾಗಿ, ಅವರ ಜನಸಂಖ್ಯೆಯ ಆಧಾರದ ಮೇರೆಗೆ ವಿವಿಧ ಶಾಸನಸಭೆಗಳಲ್ಲಿ ಅನುಸೂಚಿಯಲ್ಲಿ ತೋರಿಸಲಾದ ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ ಇರತಕ್ಕದ್ದು. ಮತ್ತು ಅಂತಹ ಮೀಸಲಾತಿಯು ೧೦ ವರ್ಷಗಳು ಇರತಕ್ಕದ್ದು. ಅವಧಿಯ ಅಂತ್ಯದಲ್ಲಿ ಸ್ಥಿತಿಯನ್ನು ಪುನಃ ಗಮನಿಸಲಾಗುತ್ತದೆ.

## ಅನುಸೂಚಿ

ವರ್ಗ: ಎ.– ರಾಜ್ಯಗಳನ್ನು ಬಿಟ್ಟು ಭಾರತೀಯ ಪ್ರಭುತ್ವದಲ್ಲಿ ಶೇ. ½ ಕ್ಕಿಂತ ಕಡಿಮೆ ಜನಸಂಖ್ಯೆ

೧. ಆಂಗ್ಲೋ ಇಂಡಿಯನ್ನರು.

೨. ಪಾರಸಿಗಳು.

೩. ಅಸ್ಸಾಂನಲ್ಲಿ ಬಯಲು ಪ್ರದೇಶದ ಬುಡಕಟ್ಟು ಜನ.

ಬಿ– ಶೇ. ೧½ಗಿಂತ ಹೆಚ್ಚಿಲ್ಲದ ಜನಸಂಖ್ಯೆ.

೪. ಭಾರತೀಯ ಕ್ರೈಸ್ತರು.

೫. ಸಿಖ್ಖರು.

ಸಿ– ಶೇ. ೧½ಗಿಂತ ಹೆಚ್ಚಿನ ಜನಸಂಖ್ಯೆ.

೬. ಮುಸ್ಲಿಮರು.

೭. ಅನುಸೂಚಿತ ಜಾತಿಗಳು.

೨. ಆಂಗ್ಲೋ ಇಂಡಿಯನ್ನರು.– (ಎ) ಆಂಗ್ಲೋ ಇಂಡಿಯನ್ನರಿಗೆ ಸ್ಥಾನಗಳ ಮೀಸಲಾತಿ ಇರುವುದಿಲ್ಲ. ಆದರೆ ಆಂಗ್ಲೋ ಇಂಡಿಯನ್ನರು ಸಾರ್ವತ್ರಿಕ ಚುನಾವಣೆಯ ಫಲವಾಗಿ ಶಾಸನಸಭೆಗಳಲ್ಲಿ ತಕ್ಕಷ್ಟು ಪ್ರಾತಿನಿಧ್ಯ ಪಡೆಯಲು ವಿಫಲರಾಗಿದ್ದರೆ ಒಕ್ಕೂಟದ ರಾಷ್ಟ್ರಪತಿಗಳು ಮತ್ತು ಪ್ರಾಂತ್ಯಗಳ ರಾಜ್ಯಪಾಲರು ಕ್ರಮವಾಗಿ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ನಮ್ಮ ಪ್ರತಿನಿಧಿಗಳನ್ನು ನೇಮಕ ಮಾಡಲು ಅಧಿಕಾರ ಹೊಂದಿರುತ್ತಾರೆ.

ಪಾರಸಿಗಳು. (ಬಿ) ಪಾರಸಿ ಸಮುದಾಯದ ಪರವಾಗಿ ಯಾವ ಶಾಸನಬದ್ಧ ಮೀಸಲಾತಿ ಇರುವುದಿಲ್ಲ. ಆದರೆ ಅವರು ಗುರುತಿಸಲಾದ ಅಲ್ಪಸಂಖ್ಯಾತರ ಪಟ್ಟಿಯ ಮೇಲೆ ಉಳಿಯಲು ಮುಂದುವರಿಯುವರು. ಮೇಲಿನ ಕಂಡಿಕೆ ೧ಕ್ಕೆ ನಿಬಂಧನೆ ೨ರಲ್ಲಿ ನಿಗದಿ ಪಡಿಸಿದ ಅವಧಿಯಲ್ಲಿ ಚುನಾವಣೆಗಳ ಫಲವಾಗಿ ಪಾರಸಿ ಸಮುದಾಯ ಸೂಕ್ತ ಪ್ರಾತಿನಿಧ್ಯ ಪಡೆಯದಿದ್ದರೆ, ಮೀಸಲಿರಿಸಿದ ಸ್ಥಾನಗಳಿಗೆ ಅವರ ಹಕ್ಕುಗಳ ಬಗ್ಗೆ ಪುನಃ ಗಮನಿಸಲಾಗುತ್ತದೆ ಮತ್ತು ತಕ್ಕಷ್ಟು ಪ್ರಾತಿನಿಧ್ಯವನ್ನು ಸಂವಿಧಾನದ ಒಂದು ವೈಶಿಷ್ಟ್ಯವಾಗಿ ಪ್ರತ್ಯೇಕ ಪ್ರಾತಿನಿಧ್ಯ ಮುಂದುವರಿದರೆ ಒದಗಿಸಲಾಗುತ್ತದೆ.

ಟಿಪ್ಪಣಿ : ಮೇಲಿನ ಶಿಫಾರಸುಗಳು ಪಾರಸಿ ಸಮುದಾಯದ ಪ್ರತಿನಿಧಿಗಳು ತೆಗೆದುಕೊಂಡ ಅಭಿಪ್ರಾಯವನ್ನು ಸೂಚಿಸುತ್ತವೆ.

೩. ಭಾರತೀಯ ಕ್ರೈಸ್ತರು.– (ಎ) ಕೇಂದ್ರ ಶಾಸನಸಭೆ ಮತ್ತು ಮದ್ರಾಸ್ ಹಾಗೂ ಬಾಂಬೆಯ ಪ್ರಾಂತೀಯ ಶಾಸನಸಭೆಗಳಲ್ಲಿ ಅವರ ಜನಸಂಖ್ಯೆಗೆ ಅನುಪಾತದಲ್ಲಿ ಭಾರತೀಯ ಕ್ರೈಸ್ತರಿಗೆ ಮೀಸಲಿರಿಸಿದ ಪ್ರಾತಿನಿಧ್ಯ ಇರುತ್ತದೆ. ಇತರ ಪ್ರಾಂತ್ಯಗಳಲ್ಲಿ ಅವರು ಸಾರ್ವತ್ರಿಕ ಸ್ಥಾನಗಳಿಂದ ಚುನಾವಣೆ ನಿಲ್ಲಲು ಹಕ್ಕು ಹೊಂದಿರುತ್ತಾರೆ.

ಸಿಖ್ಖರು – (ಬಿ) ಸಿಖ್ಖರಿಗೆ ಅಲ್ಪಸಂಖ್ಯಾತ ಹಕ್ಕುಗಳ ಪ್ರಶ್ನೆಯನ್ನು ಪ್ರತ್ಯೇಕವಾಗಿ ಗಮನಿಸಲಾಗುತ್ತದೆ.

ಮುಸ್ಲಿಮರು ಮತ್ತು ಅನುಸೂಚಿತ ಜಾತಿಗಳು.– (ಸಿ) ಅವರ ಜನಸಂಖ್ಯೆ ಆಧಾರದ ಮೇರೆಗೆ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ಮುಸ್ಲಿಮರು ಮತ್ತು ಅನುಸೂಚಿತ ಜಾತಿಗಳಿಗೆ ಸ್ಥಾನಗಳ ಮೀಸಲಾತಿ ಇರತಕ್ಕದ್ದು.

೪. ಅಲ್ಪಸಂಖ್ಯಾತರಿಗೆ ಹೆಚ್ಚುವರಿ ಹಕ್ಕು.– ಮೀಸಲಿರಿಸಿದ ಸ್ಥಾನಗಳುಳ್ಳ ಅಲ್ಪಸಂಖ್ಯಾತ ಸಮುದಾಯವೊಂದರ ಸದಸ್ಯರು ಮೀಸಲಿರಿಸದ ಸ್ಥಾನಗಳಿಗೂ ಸ್ಪರ್ಧಿಸಲು ಹಕ್ಕು ಹೊಂದಿರುವರು.

೫. ಹೆಚ್ಚಿನ ಸೌಲಭ್ಯಗಳಿಲ್ಲ.– ಯಾರಿಗೆ ಪ್ರಾತಿನಿಧ್ಯ ಮೀಸಲಿರಿಸಲಾಗಿದೆಯೊ ಆ ಅಲ್ಪಸಂಖ್ಯಾತರಿಗೆ ಅವರ ಜನಸಂಖ್ಯೆ ಅನುಪಾತದ ಮೇಲೆ ಸ್ಥಾನಗಳನ್ನು ಹಂಚಲಾಗುತ್ತದೆ ಮತ್ತು ಯಾವುದೇ ಸಮುದಾಯಕ್ಕೆ ಯಾವ ಹೆಚ್ಚಿನ ಸೌಲಭ್ಯ ಇರುವುದಿಲ್ಲ.

೬. ತನ್ನ ಸಮುದಾಯದ ಕನಿಷ್ಠ ಸಂಖ್ಯೆ ಮತಗಳಿಗೆ ಯಾವ ನಿಬಂಧನೆ ಇಲ್ಲ. – ಒಬ್ಬ ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಯು ಆತ ಮೀಸಲಿರಿಸಿದ ಸ್ಥಾನಕ್ಕೆ ಚುನಾವಣೆಗೆ ನಿಂತು ಚುನಾಯಿತನಾದನೆಂದು ಘೋಷಿಸುವ ಮೊದಲು ತನ್ನ ಸಮುದಾಯದ ಕನಿಷ್ಠ ಸಂಖ್ಯೆಯ ಮತಗಳನ್ನು ಪಡೆದಿರಬೇಕೆಂಬ ಯಾವ ನಿರ್ಬಂಧವೂ ಇರುವುದಿಲ್ಲ.

೭. ಮತದಾನ ವಿಧಾನ.– ಬಹುಸಂಖ್ಯೆಯ ಚುನಾವಣಾ ಕ್ಷೇತ್ರಗಳಿರಬಹುದು ಆದರೆ ಸಂಚಿತ ಮತದಾನಕ್ಕೆ ಅನುಮತಿ ಇಲ್ಲ.

ಸಂಪುಟಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ

೮. ಅಲ್ಪಸಂಖ್ಯಾತರಿಗೆ ಮೀಸಲಾತಿ ಇಲ್ಲ–(ಎ) ಸಂಪುಟಗಳಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನಗಳ ಶಾಸನಬದ್ಧ ಮೀಸಲಾತಿ ಇರುವುದಿಲ್ಲ. ಆದರೆ ೧೯೩೫ರ ಭಾರತ ಸರ್ಕಾರದ ಅಧಿನಿಯಮದಡಿ ರಾಜ್ಯಪಾಲರಿಗೆ ನೀಡಲಾದ ಸೂಚನೆಗಳ ಲಿಖಿತ ಪತ್ರದ ಕಂಡಿಕೆ ೭ರ ಮಾದರಿಯಲ್ಲಿ ಒಂದು ಒಡಂಬಡಿಕೆಯನ್ನು ಸಂವಿಧಾನ ಪರಿಶಿಷ್ಟವೊಂದರಲ್ಲಿ ಒದಗಿಸಲಾಗುತ್ತದೆ.

VII. ತಮ್ಮ ಸಚಿವರ ಮಂಡಲಿಗೆ ನೇಮಕಗಳನ್ನು ಮಾಡುವಲ್ಲಿ ರಾಜ್ಯಪಾಲರು ಕೆಳಗಿನ ರೀತಿಯಲ್ಲಿ ತಮ್ಮ ಸಚಿವರನ್ನು ಆಯ್ಕೆ ಮಾಡಲು ಅತ್ಯುತ್ತಮ ಪ್ರಯತ್ನಗಳನ್ನು ಮಾಡಬೇಕು. ಅಂದರೆ ಯಾರು ಸಾಮೂಹಿಕವಾಗಿ ಶಾಸನಸಭೆಯ ವಿಶ್ವಾಸವನ್ನು ನಿಯಂತ್ರಿಸಬಲ್ಲ ಅತ್ಯುತ್ತಮ ಸ್ಥಿತಿಯಲ್ಲಿರುತ್ತಾರೆಯೋ ಅಂಥಾ ವ್ಯಕ್ತಿಗಳನ್ನು (ಕಾರ್ಯ ಸಾಧ್ಯವಾದಷ್ಟೂ, ಪ್ರಮುಖ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರೂ ಸೇರಿದಂತೆ) ಯಾರು ತಮ್ಮ ತೀರ್ಮಾನದಲ್ಲಿ, ಶಾಸನಸಭೆಯ ಒಂದು ಸ್ಥಿರ ಬಹುಮತವನ್ನು ನಿಯಂತ್ರಿಸಬಲ್ಲರೆಂದು ಹೆಚ್ಚು ತೋರುವುದೋ ಆ ವ್ಯಕ್ತಿಯೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡಬೇಕು. ಹಾಗೆ ವರ್ತಿಸುವಲ್ಲಿ ಅವರು ತಮ್ಮ ಸಚಿವರ ನಡುವೆ ಜಂಟಿ ಜವಾಬ್ದಾರಿಯ ಪ್ರಜ್ಞೆ ಬೆಳೆಸುವಂತೆ ಅಗತ್ಯವನ್ನು ಸ್ಥಿರವಾಗಿ ಮನಸಿನಲ್ಲಿಟ್ಟುಕೊಂಡಿರಬೇಕು.

ಸೇವೆಗಳಲ್ಲಿ ಸೇರ್ಪಡೆ

೯. ಎಲ್ಲ ಅಲ್ಪಸಂಖ್ಯಾತರಿಗೂ ಯುಕ್ತ ಪಾಲು ಭರವಸೆ ಇದೆ: ಅಖಿಲ ಭಾರತ ಮತ್ತು ಪ್ರಾಂತೀಯ ಸೇವೆಗಳಲ್ಲಿ ಆಡಳಿತದ ದಕ್ಷತೆಯ ಪರಿಗಣನೆಯೊಂದಿಗೆ ನಿರಂತರವಾಗಿ ನೇಮಕಗಳನ್ನು ಮಾಡುವಲ್ಲಿ ಎಲ್ಲ ಅಲ್ಪಸಂಖ್ಯಾತರನ್ನು ಗಮನದಲ್ಲಿಡಲಾಗುವುದು.

(ಟಿಪ್ಪಣಿ : ಇದಕ್ಕೆ ಪರಿಣಾಮವಾಗಿ ಸಂವಿಧಾನ ಅಥವಾ ಒಂದು ಅನುಸೂಚಿಯಲ್ಲಿ ಸೂಕ್ತ ಉಪಬಂಧವನ್ನು ಅಳವಡಿಸತಕ್ಕದ್ದು.)

೧೦. ಆಂಗ್ಲೋ ಇಂಡಿಯನ್ ಸಮುದಾಯದ ಸ್ಥಿತಿ.– ಕೆಲವು ಸೇವೆಗಳಲ್ಲಿ ಅವರ ಸ್ಥಿತಿ ಕುರಿತು ಮತ್ತು ಅವರ ಹಾಲಿ ಶೈಕ್ಷಣಿಕ ಸೌಲಭ್ಯಗಳನ್ನು ಕುರಿತು ಆಂಗ್ಲೋ ಇಂಡಿಯನ್ ಸಮುದಾಯದ ಆರ್ಥಿಕತೆಯ

ಸಂಪೂರ್ಣ ಪರಾವಲಂಬನೆಯ ಕಾರಣ ಕೆಳಗಿನ ಸದಸ್ಯರನ್ನು ಒಳಗೊಂಡ ಒಂದು ಉಪಸಮಿತಿಯನ್ನು ವರದಿ ಸಲ್ಲಿಸಲು ನೇಮಕ ಮಾಡಲಾಗಿದೆ.

೧. ಪಂಡಿತ್ ಜಿ. ಬಿ. ಪಂತ್

೨. ಶ್ರೀ ಕೆ.ಎಮ್. ಮುನ್ಷಿ

೩. ಶ್ರೀಮತಿ ಹನ್ಸ ಮೆಹ್ತಾ

೪. ಶ್ರೀ ಎಸ್.ಎಚ್. ಪ್ರೇಟರ್, ಮತ್ತು

೫. ಶ್ರೀ ಎಫ್.ಆರ್. ಆಂಥನಿ

ರಕ್ಷಣೆಗಳ ಕಾರ್ಯನೀತಿ

೧೧. ನೇಮಕಗೊಳ್ಳಬೇಕಾದ ಅಧಿಕಾರಿ.-- ಕೇಂದ್ರದಲ್ಲಿ ರಾಷ್ಟ್ರಪತಿಗಳಿಂದ ಮತ್ತು ಪ್ರಾಂತ್ಯಗಳಲ್ಲಿ ರಾಜ್ಯಪಾಲರುಗಳಿಂದ ಒಬ್ಬ ಅಧಿಕಾರಿಯನ್ನು ಕ್ರಮವಾಗಿ ಒಕ್ಕೂಟ ಮತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ಅಲ್ಪಸಂಖ್ಯಾತರಿಗೆ ಒದಗಿಸಿರುವ ರಕ್ಷಣೆಗಳ ಕಾರ್ಯನೀತಿ ಕುರಿತು ವರದಿ ಮಾಡಲು ನೇಮಕ ಮಾಡತಕ್ಕದ್ದು.

೧೨. ಹಿಂದುಳಿದ ವರ್ಗಗಳಿಗೆ ಶಾಸನಬದ್ಧ ಆಯೋಗ.– ಹಿಂದುಳಿದ ವರ್ಗಗಳಿಗೆ ಸಾಮಾಜಿಕವಾದ ಮತ್ತು ಶೈಕ್ಷಣಿಕವಾದ ಸ್ಥಿತಿಗಳನ್ನು ಅನ್ವೇಷಿಸಲು ಮತ್ತು ಅವರು ಯಾವ ತೊಡಕುಗಳಡಿ ಕೆಲಸ ಮಾಡುವರೆಂದು ಅಧ್ಯಯನ ಮಾಡಲು ಒಂದು ಶಾಸನಬದ್ಧ ಆಯೋಗವನ್ನು ಸಜ್ಜುಗೊಳಿಸಲು ಅವಕಾಶ ಕಲ್ಪಿಸಬೇಕು ಮತ್ತು ಸಂದರ್ಭಾನುಸಾರ ಒಕ್ಕೂಟ ಅಥವಾ ಘಟಕ ಸರ್ಕಾರಕ್ಕೆ ಅವರ ತೊಡಕುಗಳನ್ನು ನಿವಾರಿಸಲು ಮತ್ತು ಕೊಡಬೇಕಾದ ಅನುದಾನಗಳು ಹಾಗೂ ಅಂತಹ ಅನುದಾನಗಳಿಗೆ ನಿಗದಿ ಪಡಿಸಬೇಕಾದ ನಿಬಂಧನೆಗಳನ್ನು ಶಿಫಾರಸು ಮಾಡಬೇಕು.

## ಅನುಬಂಧ 'ಬಿ'

ಸಂಖ್ಯೆ ಸಿಎ /೬೦/ ಕಾಮ್/೪೭

ಕೌನ್ಸಿಲ್ ಹೌಸ್

ನವದೆಹಲಿ, ೨೫ನೇ ಆಗಸ್ಟ್ ೧೯೪೭

ಇಂದ

ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್

ಅಧ್ಯಕ್ಷರು, ಅಲ್ಪಸಂಖ್ಯಾತ, ಸಲಹಾ ಸಮಿತಿ

ಮೂಲಭೂತ ಹಕ್ಕುಗಳು, ಇತ್ಯಾದಿ

ಗೆ,

ಮಾನ್ಯ ಸಭಾಧ್ಯಕ್ಷರು,

ಭಾರತದ ಸಂವಿಧಾನ ರಚನಾಸಭೆ

ಮಾನ್ಯರೆ,

ದಿನಾಂಕ ೮ನೇ ಆಗಸ್ಟ್‌ರ ನನ್ನ ಪತ್ರ ಸಂಖ್ಯೆ ಸಿಎ/೨೪/ಕಾಮ್. ೪೭ರ ಕಂಡಿಕೆ ೧೪ನ್ನು ಉಲ್ಲೇಖಿಸುವ ಹಾಗೂ ಕೆಲವು ಸೇವೆಗಳಲ್ಲಿ ಆಂಗ್ಲೋ ಇಂಡಿಯನ್ನರ ಸ್ಥಾನ ಮತ್ತು ಅವರಿಗೆ ವಿಶೇಷ ಶೈಕ್ಷಣಿಕ ಸೌಲಭ್ಯಗಳ

ಅನುದಾನ ಕುರಿತು ಪೂರಕ ವರದಿಯನ್ನು ಸಲ್ಲಿಸುವ ಗೌರವ ನನ್ನದಾಗಿದೆ. ಈ ವರದಿಯು ನಮ್ಮಿಂದ ನೇಮಕಗೊಂಡ ಒಂದು ಉಪಸಮಿತಿಯ ಶೋಧಗಳ ಪರಿಗಣನೆಯನ್ನು ಆಧರಿಸಿದುದಾಗಿದೆ.

೨.(ಎ) ಕೆಲವು ಸೇವೆಗಳಲ್ಲಿ ಆಂಗ್ಲೋ ಇಂಡಿಯನ್ನರ ಸ್ಥಿತಿ ಐತಿಹಾಸಿಕ ಸಂದರ್ಭಗಳ ಫಲವಾಗಿ ಈ ಸಮುದಾಯದ ಇಡೀ ಆರ್ಥಿಕತೆ ಪ್ರಸ್ತುತ ರೈಲ್ವೆ, ಅಂಚೆ ಮತ್ತು ತಂತಿ ಹಾಗೂ ಸುಂಕ ಇಲಾಖೆಗಳಲ್ಲಿ ಉದ್ಯೋಗ ಕಂಡುಕೊಳ್ಳುವುದರ ಮೇಲೆ ಅವಲಂಬಿಸಿದೆ ಎಂದು ನಾವು ಕಂಡಿದ್ದೇವೆ. ಬಾಂಬೆಯಲ್ಲಿ ಆಂಗ್ಲೋ ಇಂಡಿಯನ್ ಶಿಕ್ಷಣದ ಪ್ರಾಂತೀಯ ಮಂಡಲಿಯಿಂದ ಇತ್ತೀಚೆಗೆ ನಡೆದ ಸಮೀಕ್ಷೆಯ ಮೇರೆಗೆ ಅಲ್ಲಿ ಸಮುದಾಯದ ಶೇಕಡ ೭೬ರಷ್ಟು ಈ ನೇಮಕಾತಿಗಳ ಮೇಲೆ ಅವಲಂಬಿಸಿದೆ ಎಂದು ತೋರಿಸಿದೆ. ಭಾರತದಾದ್ಯಂತ ಬಹುಮಟ್ಟಿಗೆ ಇದೇ ಸ್ಥಿತಿ ಎಂದು ನಾವು ನಂಬಿದ್ದೇವೆ; ಈ ಮೂರು ಇಲಾಖೆಗಳಲ್ಲಿ ಸದ್ಯ ಉದ್ಯೋಗ ಮಾಡುತ್ತಿರುವ ಆಂಗ್ಲೋ ಇಂಡಿಯನ್ನರ ಸಂಖ್ಯೆ ಸುಮಾರು ೧೫೦೦೦, ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿ ಅವರಿಗೆ ಕೊಡಲಾಗಿರುವ ವಿಶೇಷ ಮೀಸಲಾತಿ ಹೇಗೇ ಆಗಲಿ ಈ ಇಲಾಖೆಗಳ ಹುದ್ದೆಗಳ ಎಲ್ಲ ಪ್ರವರ್ಗಗಳಿಗೆ ವಿಸ್ತರಿಸುವುದಿಲ್ಲ. ಆದರೆ ಅವರು ಬಹುಕಾಲ ಸಾಹಚರ್ಯೆಗಳಲ್ಲಿದ್ದವುಗಳಲ್ಲಿ ಮಾತ್ರವಷ್ಟೆ. ಈ ದೃಷ್ಟಿಯಿಂದ ನಾವು ಮುಂಬರುವ ವರ್ಷಗಳಿಗೆ ಈ ವಿಷಯವಾಗಿ ಹಾಲಿ ರಕ್ಷಣೆಗಳನ್ನು ಯಾವುದಾದರೂ ರೂಪದಲ್ಲಿ ಮುಂದುವರಿಸದಿದ್ದರೆ, ಸಮುದಾಯವು ಸಹಿಸಿಕೊಳ್ಳಲಾಗದಷ್ಟು ತತ್‌ಕ್ಷಣದ ಆರ್ಥಿಕ ಪೀಡನೆಗೀಡಾಗುತ್ತದೆ ಎಂದು ತಿಳಿದಿದ್ದೇವೆ. ಆದುದರಿಂದ ನಾವು ಈ ಕೆಳಗಿನ ಶಿಫಾರಸುಗಳು ಮಾಡುತ್ತೇವೆ.

(i) ಒಕ್ಕೂಟದ ಸಂವಿಧಾನವು ಕಾರ್ಯಾಚರಣೆಗೆ ಬಂದ ಅನಂತರದ ಎರಡು ವರ್ಷಗಳ ಕಾಲ ರೈಲ್ವೆ, ಅಂಚೆ ಮತ್ತು ತಂತಿ ಹಾಗೂ ಸುಂಕ ಇಲಾಖೆಗಳಲ್ಲಿ ಸದ್ಯ ಇರುವ ಆಂಗ್ಲೋ ಇಂಡಿಯನ್ನರ ಸೇರ್ಪಡೆ ಆಧಾರವನ್ನು ಬದಲಾಯಿಸದೆ ಉಳಿಯುವಂತೆ ಮುಂದುವರಿಸಬೇಕು. ತರುವಾಯ, ಪ್ರತಿ ಎರಡು ವರ್ಷಗಳ ಅಂತರದಲ್ಲಿ ಮೀಸಲಿರಿಸಿದ ಖಾಲಿ ಜಾಗಗಳನ್ನು ಪ್ರತಿ ಬಾರಿ ಶೇಕಡಾ ೧೦ರಷ್ಟು ಇಳಿಸತಕ್ಕದ್ದು. ಹೇಗೆ ಆಗಲಿ ಇದು ಅವರು ಇತರ ಸಮುದಾಯಗಳೊಂದಿಗಿನ ಮುಕ್ತಸ್ಪರ್ಧೆಯಲ್ಲಿ ವೈಯಕ್ತಿಕ ಅರ್ಹತೆ ಮೇರೆಗೆ ಹುದ್ದೆಗಳು ಗಳಿಸಲು ಸಮರ್ಥರಿದ್ದಾರೆ. ಸದ್ಯ ಮೀಸಲಿರಿಸಿದ ನೇಮಕಾತಿಗಳ ನಿಗದಿತ ಭಾಗಕ್ಕೂ ಮೀರಿ ಅವರು ಹೊಂದಿರುವ ಮೀಸಲಿರಿಸಿದ ಹುದ್ದೆಗಳ ಪ್ರವರ್ಗಗಳಲ್ಲಿ ಆಂಗ್ಲೋ ಇಂಡಿಯನ್ನರ ಸೇರ್ಪಡೆಗೆ ಅಡ್ಡಿ ಪಡಿಸುವುದಿಲ್ಲ. ಅದು ಇನ್ನಾವ ವಿಧದಲ್ಲೂ ಈ ಇಲಾಖೆಗಳಲ್ಲಿ ಅರ್ಹತೆ ಮೇರೆಗೆ ಹುದ್ದೆಗಳಿಗೆ ಅಥವಾ ಅವರಿಗೆ ಒಂದು ಮೀಸಲಿರಿಸಿದ ಪಾಲು ಕೊಟ್ಟಿಲ್ಲದ ಯಾವುದೇ ಇತರ ಇಲಾಖೆಗಳಲ್ಲಿ ಸೇರ್ಪಡೆಗೆ ಬಾಧೆ ತರುವುದಿಲ್ಲ.

(ii) ಒಕ್ಕೂಟದ ಸಂವಿಧಾನವು ಕಾರ್ಯಾಚರಣೆಗೆ ಬಂದ ದಿನದಿಂದ ೧೦ ವರ್ಷಗಳ ಅವಧಿಯ ಅನಂತರ ಅಂತಹ ಎಲ್ಲ ಮೀಸಲಾತಿಗಳು ಕೊನೆಗೊಳ್ಳುತ್ತವೆ.

(iii) ಈ ಸೇವೆಗಳಲ್ಲಿ ಯಾವುದೇ ಸಮುದಾಯಕ್ಕೆ ೧೦ ವರ್ಷಗಳು ಕಳೆದ ಅನಂತರ ಮೀಸಲಾತಿ ಇರುವುದಿಲ್ಲ.

(ಬಿ) ಆಂಗ್ಲೋ ಇಂಡಿಯನ್ನರಿಗೆ ವಿಶೇಷ ಶೈಕ್ಷಣಿಕ ಸೌಲಭ್ಯಗಳು

ಭಾರತದಲ್ಲಿ ಸುಮಾರು ೫೦೦ ಆಂಗ್ಲೋ ಇಂಡಿಯನ್ ಶಾಲೆಗಳಿವೆ. ಈ ಶಾಲೆಗಳಿಗೆ ಒಟ್ಟು ಸರ್ಕಾರದ ಅನುದಾನ ಸುಮಾರು ೪೫ ಲಕ್ಷ ರೂಪಾಯಿಗಳು. ಅದು ಶಾಲೆಗಳು ಮಾಡುವ ಒಟ್ಟು ಖರ್ಚಿನ ಸರಿಸುಮಾರು ಶೇಕಡಾ ೨೪ರಷ್ಟು ಇರುತ್ತದೆ. ಅನುದಾನದಲ್ಲಿ ಇದ್ದಕ್ಕಿದ್ದಂತೆ ಇಳಿಸುವುದರಿಂದ ಅದು ಈ ಶಾಲೆಗಳ ಆರ್ಥಿಕತೆಯನ್ನು ಗಂಭೀರವಾಗಿ ಅಸ್ತವ್ಯಸ್ತಗೊಳಿಸುತ್ತದೆ ಮತ್ತು ಏನಿದ್ದರೂ ಅವರನ್ನು ಕ್ರಮೇಣ ದೇಶದಲ್ಲಿ ಈಗ ಇರತಕ್ಕ ಬದಲಾದ ಸ್ಥಿತಿಗಳಿಗೆ ಹೊಂದಿಕೊಳ್ಳಲು ಸಾಕಷ್ಟು ವೇಳೆ ಮತ್ತು ಅವಕಾಶ ಕೊಟ್ಟ ಅನಂತರ ಇತರ ಅಂಥದೇ ಶೈಕ್ಷಣಿಕ ಸಂಸ್ಥೆಗಳೊಂದಿಗೆ ತರುವುದು ಮಾತ್ರ ತೃಪ್ತಿಕರ ಎಂದು ನಾವು ತಿಳಿಯುತ್ತೇವೆ. ಹಾಗೂ ಈ ರೀತಿಯಲ್ಲಿ ಈ ಸಂಸ್ಥೆಗಳು ಮೌಲಿಕ ಶೈಕ್ಷಣಿಕ ಆಸ್ತಿಯಾಗಿ ಬರಿಯ ಆಂಗ್ಲೋ ಇಂಡಿಯನ್

ಸಮುದಾಯಕ್ಕೆ ಅಲ್ಲದೆ ಇಡೀ ರಾಷ್ಟ್ರದ ಬೆಳೆಯುತ್ತಿರುವ ಶೈಕ್ಷಣಿಕ ಅಗತ್ಯಗಳಿಗೆ ನೆರವಾಗುತ್ತವೆ. ಅಂತೆಯೇ–

(i) ಒಕ್ಕೂಟದ ಸಂವಿಧಾನವು ಕಾರ್ಯಾಚರಣೆಗೆ ಬಂದ ಅನಂತರ ಮೂರುವರ್ಷಗಳು, ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಆಂಗ್ಲೋ ಇಂಡಿಯನ್ ಶಿಕ್ಷಣಕ್ಕೆ ನೀಡುತ್ತಿರುವ ಸದ್ಯದ ಅನುದಾನಗಳು ಬದಲಾಗದೆ ಮುಂದುವರಿಯಬೇಕು

(ii) ಮೊದಲ ಮೂರು ವರ್ಷಗಳು ಮುಗಿದ ಅನಂತರ, ಅನುದಾನಗಳನ್ನು ಶೇಕಡಾ ೧೦ರಷ್ಟು ಇಳಿಸಬಹುದು ಮತ್ತು ೬ನೇ ವರ್ಷದ ನಂತರ ಮತ್ತೆ ಶೇಕಡ ೧೦ರಷ್ಟು ಇಳಿಸಬಹುದು ಮತ್ತು ಪುನಃ ಶೇಕಡ ೧೦ರಷ್ಟು ೯ನೇ ವರ್ಷದ ಅನಂತರ ಇಳಿಸಬಹುದು. ೧೦ ವರ್ಷಗಳ ಅಂತ್ಯದಲ್ಲಿ ಆಂಗ್ಲೋ ಇಂಡಿಯನ್ ಶಾಲೆಗಳಿಗೆ ವಿಶೇಷ ರಿಯಾಯಿತಿಗಳು ಕೊನೆಗೊಳ್ಳುತ್ತವೆ.

(iii) ಈ ೧೦ ವರ್ಷಗಳ ಅವಧಿಯಲ್ಲಿ ಅಂತಹ ಎಲ್ಲ ರಾಜ್ಯ ಸಹಾಯದ ಆಂಗ್ಲೋ ಇಂಡಿಯನ್ ಶಾಲೆಗಳಲ್ಲಿ ಶೇಕಡ ೪೦ರಷ್ಟು ಖಾಲಿ ಜಾಗಗಳು ಇತರ ಸಮುದಾಯಗಳ ಸದಸ್ಯರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು ಎಂದು ಶಿಫಾರಸು ಮಾಡುತ್ತೇವೆ.

ಈ ವರದಿಯಲ್ಲಿ 'ಆಂಗ್ಲೋ–ಇಂಡಿಯನ್' ಶಬ್ದವು ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿ ಕೊಡಲಾದ ಅರ್ಥವನ್ನು ಹೊಂದಿರುತ್ತದೆ.

ತಮ್ಮ ವಿಶ್ವಾಸಿ,

**ವಲ್ಲಭಭಾಯಿ ಪಟೇಲ್**